ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫ್ಯಾಷನ್ ಶೋ
ಅಮೃತಸರದಲ್ಲಿ ನಡೆದ ಫ್ಯಾಷನ್ ಶೋನಲ್ಲಿ ನಟಿ ಕರಿಷ್ಮಾ ಕಪೂರ್ ಪಾಲ್ಗೊಂಡಿದ್ದರು





ದಿನೇ ದಿನೇ ಹದಗೆಟ್ಟ ಕಾರ್ಮಿಕರ ಆರೋಗ್ಯ: ಸುರಂಗದ ಒಳಗೆ ಸಿಲುಕಿದವರ ಕುಟುಂಬ ಸದಸ್ಯರ ಅಳಲು

ಕಾರ್ಯಾಚರಣೆ ಸ್ಥಗಿತ: ಮಡುಗಟ್ಟಿದ ಆತಂಕ

ಉತ್ತರಕಾಶಿ (ಉತ್ತರಾಖಂಡ) (ಪಿಟಿಐ): ಅವಶೇಷದ ಅಡಿಯಲ್ಲಿ ರಂಧ್ರ ಕೊರೆಯುವ ಬೈರಿಗೆ ಯಂತ್ರದಲ್ಲಿ ಕಾಣಿಸಿಕೊಂಡಿರುವ ತಾಂತ್ರಿಕ ಸಮಸ್ಯೆಯಿಂದಾಗಿ ಉತ್ತರಾಖಂಡ ರಾಜ್ಯದ ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿರುವ ಕಾರ್ಮಿಕರ ರಕ್ಷಣಾ ಕಾರ್ಯಾಚರಣೆಯು ಶುಕ್ರವಾರ ಮಧ್ಯಾಹ್ನದಿಂದ ಸ್ಥಗಿತಗೊಂಡಿದೆ.

ಮತ್ತೊಂದೆಡೆ ದಿನೇ ದಿನೇ ಕಾರ್ಮಿಕರ ಆರೋಗ್ಯ ಹದಗೆಡುತ್ತಿದ್ದು, ಸಂತ್ರಸ್ತ ಕುಟುಂಬಗಳ ಸದಸ್ಯರಲ್ಲಿ ಆತಂಕ ಮಡುಗಟ್ಟಿದೆ.

ಸಹೋದರ ಗಬ್ಬರ್ ಸಿಂಗ್ ಸುರಂಗದೊಳಗೆ ಸಿಲುಕಿರುವ ಸುದ್ದಿ ತಿಳಿದು ಉತ್ತರಾಖಂಡದ ಕೋಟ್‌ದ್ವಾರದಿಂದ ಸ್ಥಳಕ್ಕೆ ಬಂದಿರುವ ಮಹಾರಾಜ್ ಸಿಂಗ್, 'ಕಾರ್ಯಾಚರಣೆ ಬಗ್ಗೆ ವಿಶ್ವಾಸ ಕಳೆದುಕೊಳ್ಳುತ್ತಿದ್ದೇನೆ' ಎಂದು ಹೇಳುವಾಗ ಅವರ ಕಣ್ಣಾಲಿಗಳಲ್ಲಿ ನೀರು ಜಿನುಗಿತು.

'ಸಹೋದರನ ಧ್ವನಿ ಕ್ಷೀಣಿಸಿದೆ. ಆತನ ಮಾತು ನನ್ನ ಕಿವಿಗೂ ಗಟ್ಟಿಯಾಗಿ ಕೇಳಿಸುತ್ತಿಲ್ಲ. ಹಾಗಾಗಿ, ಅವನೊಟ್ಟಿಗೆ ಸರಿಯಾಗಿ ಮಾತನಾಡಲು ಆಗುತ್ತಿಲ್ಲ. ಈಗ ಕಾರ್ಯಾಚರಣೆಯೂ ಸ್ಥಗಿತಗೊಂಡಿದೆ. ಇದರಿಂದ ಸುರಂಗದಲ್ಲಿ ಸಿಲುಕಿದವರಿಗೆ ಆಹಾರ ಮತ್ತು ಕುಡಿಯುವ ನೀರಿನ ಕೊರತೆಯಾಗಿದೆ. ನಾವು ತಾಳ್ಮೆ ಕಳೆದುಕೊಳ್ಳುವ ಹಂತಕ್ಕೆ ತಲುಪಿದ್ದೇವೆ. ಇದಕ್ಕಿಂತ ಇನ್ನೇನು ಹೇಳಲು ಸಾಧ್ಯ' ಎಂದು ಪ್ರಶ್ನಿಸಿದರು.

'ಸುರಂಗದೊಳಗೆ ಸಿಲುಕಿದವರನ್ನು ಸುರಕ್ಷಿತವಾಗಿ ರಕ್ಷಣೆ ಮಾಡುವುದಾಗಿ ಒಂದು ವಾರದಿಂದಲೂ ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ, ಫಲಿತಾಂಶ ಮಾತ್ರ ಶೂನ್ಯ' ಎಂದು ಹರಿದ್ವಾರದಿಂದ ಇಲ್ಲಿಗೆ ಬಂದಿರುವ ಶರ್ಮಾ ನೋವು ತೋಡಿಕೊಂಡರು. ಅವರ ಸಹೋದರ ಸುಶೀಲ್ ಶರ್ಮಾ ಸುರಂಗದೊಳಗೆ ಸಿಲುಕಿದ್ದಾರೆ.



ಉತ್ತರಾಖಂಡ ರಾಜ್ಯದ ಸಿಲ್ಕ್ಯಾರಾ ಸುರಂಗದ ಬಳಿ ದುಃಖತಪ್ತರಾಗಿ ಕುಳಿತ ಕಾರ್ಮಿಕರ ಕುಟುಂಬದ ಸದಸ್ಯರು –ಪಿಟಿಐ ಚಿತ್ರ

ಕಾರ್ಯಾಚರಣೆ ಸ್ಥಗಿತ ಏಕೆ?: ಯಂತ್ರದ ಸಹಾಯದಿಂದ ಅವಶೇಷದ ಅಡಿಯಲ್ಲಿ ರಂಧ್ರ ಕೊರೆದ ಬಳಿಕ ಕೊಳವೆಗಳನ್ನು ಒಂದರೊಳಗೊಂದು ಸೇರಿಸಲಾಗುತ್ತದೆ. ಈ ಕೊಳವೆಯ ಒಳಗಿನಿಂದ ಕಾರ್ಮಿಕರು ತೆವಳುತ್ತಾ ಹೊರಬರಬೇಕಿದೆ. ಆದರೆ, ರಂಧ್ರ ಕೊರೆಯಲು ಬಳಸಿಕೊಳ್ಳುತ್ತಿದ್ದ ಅಮೆರಿಕ ನಿರ್ಮಿತ ಯಂತ್ರದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿರುವುದು ಕಾರ್ಯಾಚರಣೆಯು ಮತ್ತಷ್ಟು ವಿಳಂಬವಾಗಲು ಕಾರಣವಾಗಿದೆ.

ಹಾಗಾಗಿ, ಮಧ್ಯಪ್ರದೇಶದ ಇಂದೋರ್‌ನಿಂದ ಶನಿವಾರ ವಿಮಾನದ ಮೂಲಕ ಮತ್ತೊಂದು ದೊಡ್ಡ ಬೈರಿಗೆ ಯಂತ್ರದ ಮೂರು ಬಿಡಿಭಾಗಗಳನ್ನು ಸ್ಥಳಕ್ಕೆ ತರಿಸಲಾಗಿದೆ. ಇವುಗಳ ಜೋಡಣೆ ಕಾರ್ಯ ಪೂರ್ಣಗೊಂಡ ಬಳಿಕ ಮತ್ತೆ ಕಾರ್ಯಾಚರಣೆ ಆರಂಭಿಸಲಾಗುವುದು ಎಂದು ಸ್ಥಳದಲ್ಲಿ ಬೀಡುಬಿಟ್ಟಿರುವ ಅಧಿಕಾರಿಗಳು ತಿಳಿಸಿದ್ದಾರೆ.

ಅವಶೇಷದ ಅಡಿಯಲ್ಲಿ ಸುಮಾರು 60 ಮೀಟರ್ ದೂರದಷ್ಟು ರಂಧ್ರ ಕೊರೆಯಲು ನಿರ್ಧರಿಸಲಾಗಿದೆ. ಈ ಪೈಕಿ ಶುಕ್ರವಾರ ಮಧ್ಯಾಹ್ನ 24 ಮೀಟರ್ ದೂರದಷ್ಟು ರಂಧ್ರ ಕೊರೆಯಲಾಗಿತ್ತು.

'ಐದನೇ ಕೊಳವೆ ಅಳವಡಿಸುವ ವೇಳೆ ಸುರಂಗದ ಒಳಗೆ ಬಿರುಕು ಕಾಣಿಸಿಕೊಂಡ ದೊಡ್ಡ ಸದ್ದು ಕೇಳಿಸಿತು. ಇದರಿಂದ ಕಾರ್ಯಾಚರಣೆ ನಿರತ ಕಾರ್ಮಿಕರು ಗಾಬರಿಗೊಂಡರು. ಸುರಂಗದೊಳಗೆ ಮತ್ತೆ ಭೂಕುಸಿತ ಸಂಭವಿಸುವ ಸಾಧ್ಯತೆ ಇರುವ ಬಗ್ಗೆ ಪರಿಣತರು ಎಚ್ಚರಿಕೆ ನೀಡಿದ್ದರಿಂದ ಕಾರ್ಯಾಚರಣೆಯು ಸ್ಥಗಿತಗೊಂಡಿದೆ' ಎಂದು ರಾಷ್ಟ್ರೀಯ ಹೆದ್ದಾರಿಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ (ಎನ್‌ಎಚ್‌ಐಡಿಸಿಎಲ್) ತಿಳಿಸಿದೆ.

ಕೇಂದ್ರ ತಂಡ ಭೇಟಿ: ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮಹಮೂದ್ ಅಹಮದ್, ಪ್ರಧಾನ ಮಂತ್ರಿ ಕಚೇರಿಯ ಉಪ ಕಾರ್ಯದರ್ಶಿ ಮಂಗೇಶ್ ಗಿಲ್ಡಿಯಾಲ್, ಭೂವಿಜ್ಞಾನಿ ವರುಣ್ ಅಧಿಕಾರಿ, ಎಂಜಿನಿಯರಿಂಗ್ ತಜ್ಞ ಅರ್ಮಾಂಡೋ ಕ್ಯಾಪೆಲ್ಲನ್ ಅವರನ್ನು ಒಳಗೊಂಡ ಕೇಂದ್ರ ತಂಡವು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿತು.

ಲಂಬವಾಗಿ ರಂಧ್ರ ಕೊರೆಯಲು ಸಿದ್ಧತೆ

ಸಿಲ್ಕ್ಯಾರಾ ಸುರಂಗಕ್ಕೆ ಹೊಂದಿಕೊಂಡಿರುವ ಬೆಟ್ಟಗುಡ್ಡಗಳ ಹಿಂದೆ ಮುಸ್ಸಂಜೆಯಲ್ಲಿ ನೇಸರ ಸರಿದು ಹೋಗುವುದರೊಂದಿಗೆ ಶನಿವಾರವೂ ಮುಕ್ತಾಯಗೊಂಡಿತು. ಆದರೆ, ಸ್ಥಳದಲ್ಲಿಯೇ ಮೊಕ್ಕಾಂ ಹೂಡಿರುವ ಅಧಿಕಾರಿಗಳು ಕಾರ್ಯಾಚರಣೆಗಾಗಿ ಗಡಿ ರಸ್ತೆ ಸಂಸ್ಥೆಯ (ಬಿಆರ್‌ಒ) ಮೊರೆ ಹೋಗಿದ್ದು, ಭಾನುವಾರದಂದು ಸೂರ್ಯನ ಉದಯಕ್ಕಾಗಿ ಎದುರು ನೋಡುತ್ತಿದ್ದಾರೆ.

ಸುರಂಗದ ಮೇಲಿನ ಬೆಟ್ಟದ ಮೇಲ್ಭಾಗದಿಂದ ಲಂಬಾಕಾರದಲ್ಲಿ ರಂಧ್ರ ಕೊರೆಯಲು ಸಿದ್ಧತೆ ನಡೆಸಿದ್ದಾರೆ. ಈ ಪರ್ಯಾಯ ರಕ್ಷಣಾ ಮಾರ್ಗ ರೂಪಿಸಲು ಬಿಆರ್‌ಒ ಸಜ್ಜಾಗಿದೆ. 'ಸುರಂಗ ಮೇಲ್ಭಾಗದ ಯಾವ ಸ್ಥಳದಲ್ಲಿ ರಂಧ್ರ ಕೊರೆಯಬೇಕು ಎಂಬುದನ್ನು ಗುರುತಿಸಲಾಗಿದೆ. 1,000ದಿಂದ 1,100 ಮೀಟರ್‌ವರೆಗೆ ರಂಧ್ರ ಕೊರೆಯಲಾಗುವುದು. ಇದಕ್ಕೆ ಎಷ್ಟು ಸಮಯಬೇಕಿದೆ ಎಂದು ಅಂದಾಜಿಸಿದ್ದೇವೆ. ಭಾನುವಾರ ಮಧ್ಯಾಹ್ನದ ವೇಳೆಗೆ ಈ ಮಾರ್ಗವು ಸಿದ್ಧವಾಗುವ ವಿಶ್ವಾಸವಿದೆ' ಎಂದು ಬಿಆರ್‌ಒ ಮೇಜರ್ ನಮನ್ ನರುಲಾ ಸುದ್ದಿಗಾರರಿಗೆ ತಿಳಿಸಿದರು.

ಸುರಂಗದೊಳಗೆ 41 ಕಾರ್ಮಿಕರು

ಈ ಸುರಂಗವು ನವೆಂಬರ್ 12ರಂದು ಕುಸಿದು ಬಿದ್ದಿದ್ದು, 40 ಕಾರ್ಮಿಕರು ಸಿಲುಕಿದ್ದಾರೆ ಎಂದು ಎನ್‌ಎಚ್‌ಐಡಿಸಿಎಲ್ ಹಾಗೂ ಸುರಂಗ ನಿರ್ಮಾಣದ ಹೊಣೆ ಹೊತ್ತಿರುವ ನವಯುಗ ಎಂಜಿನಿಯರಿಂಗ್ ಕಂಪನಿಯ ಅಧಿಕಾರಿಗಳು ಮಾಹಿತಿ ನೀಡಿದ್ದರು.

ಬಿಹಾರದ ಮುಜಾಫರ್‌ಪುರ ಜಿಲ್ಲೆಯ ದೀಪಕ್ ಕುಮಾರ್ ಎಂಬ ಕಾರ್ಮಿಕ ಕೂಡ ಸಿಲುಕಿದ್ದಾರೆ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ. ಹಾಗಾಗಿ, ಸುರಂಗದ ಒಳಗೆ ಸಿಲುಕಿರುವ ಕಾರ್ಮಿಕರ ಸಂಖ್ಯೆ 41 ಎಂದು ತಿಳಿದುಬಂದಿದೆ.

ಸುದ್ದಿ 2 ನಿಮಿಷ

ನಿರ್ಮಲಾ ಭೇಟಿಗೆ ಸಮಯ ಕೋರಿದ ಕೃಷ್ಣ ಬೈರೇಗೌಡ

ಬೆಂಗಳೂರು: ರಾಜ್ಯದ 223 ಬರ ಪೀಡಿತ ತಾಲ್ಲೂಕುಗಳಿಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ (ಎನ್‌ಡಿಆರ್‌ಎಫ್) ನೆರವು ಕೋರಿ ಸಲ್ಲಿಸಿರುವ ಮನವಿ ಕುರಿತು ಚರ್ಚಿಸಲು ಭೇಟಿಗೆ ಕಾಲಾವಕಾಶ ನೀಡುವಂತೆ ಕೋರಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿದ್ದಾರೆ.

'ಮುಂಗಾರು ಹಂಗಾಮಿನಲ್ಲಿ ಕರ್ನಾಟಕದಲ್ಲಿ ಬರದಿಂದ ಆಗಿರುವ ಹಾನಿ ಕುರಿತು ಚರ್ಚಿಸಲು ನಿಮ್ಮನ್ನು ಭೇಟಿ ಮಾಡಲು ನಾನು ಮತ್ತು ವಿಪತ್ತು ನಿರ್ವಹಣೆಗೆ ಸಂಬಂಧಿಸಿದ ಸಂಪುಟ ಉಪ ಸಮಿತಿ ಸದಸ್ಯರಾಗಿರುವ ಇತರ ಸಚಿವರು ಬಯಸಿದ್ದೇವೆ. ಭೇಟಿಗೆ ಆದಷ್ಟು ಬೇಗ ಕಾಲಾವಕಾಶ ಕಲ್ಪಿಸಿ' ಎಂದು ಶನಿವಾರ ಬರೆದಿರುವ ಪತ್ರದಲ್ಲಿ ಮನವಿ ಮಾಡಿದ್ದಾರೆ.



ಮಳೆ ಕೊರತೆಯಿಂದ ರಾಜ್ಯದ 223 ತಾಲ್ಲೂಕುಗಳಲ್ಲಿ ಬೆಳೆಹಾನಿ ಸಂಭವಿಸಿದೆ. ಎನ್‌ಡಿಆರ್‌ಎಫ್ ಅಡಿಯಲ್ಲಿ ₹18,171.4 ಕೋಟಿ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದ ಅಧಿಕಾರಿಗಳ ತಂಡವು ಬರಪೀಡಿತ ಪ್ರದೇಶಗಳಲ್ಲಿ ಅಧ್ಯಯನವನ್ನೂ ನಡೆಸಿದೆ. ಆದರೆ, ಕೇಂದ್ರವು ನೆರವಿನ ಮೊತ್ತ ಬಿಡುಗಡೆಯಲ್ಲಿ ವಿಳಂಬ ಮಾಡುತ್ತಿರುವುದರಿಂದ ಬರ ಪರಿಹಾರ ಕಾರ್ಯಕ್ಕೆ ತೀವ್ರ ಅಡಚಣೆ ಉಂಟಾಗಿದೆ ಎಂದಿದ್ದಾರೆ.

2015ರ ಕೃಷಿ ಗಣತಿ ಅಂಕಿಅಂಶಗಳ ಪ್ರಕಾರ ರಾಜ್ಯದಲ್ಲಿ 62 ಲಕ್ಷ ಮಂದಿ ಸಣ್ಣ ಮತ್ತು ಮಧ್ಯಮ ರೈತರಿದ್ದಾರೆ. ಈಗ 2020ರ ಬರ ನಿರ್ವಹಣೆ ಕೈಪಿಡಿಯ ಅನುಸಾರ ಪರಿಹಾರ ನಿಗದಿ ಮಾಡುವುದು ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆ ನಡೆಸಬೇಕಿದೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ: 20 ವರ್ಷ ಜೈಲು

ಹಾವೇರಿ: ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿ ಸಂಜೀವ ಗುಡ್ಡಪ್ಪ ಮೈಲಾರ ಎಂಬವನಿಗೆ 20 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಮತ್ತು ₹75 ಸಾವಿರ ದಂಡ ವಿಧಿಸಿ ಹಾವೇರಿ ವಿಶೇಷ ಸೆಷನ್ಸ್ ನ್ಯಾಯಾಲಯ (ಎಫ್‌ಟಿಎಸ್‌ಸಿ-1)ದ ನ್ಯಾಯಾಧೀಶ ನಿಂಗೌಡ ಪಾಟೀಲ ಆದೇಶ ನೀಡಿದ್ದಾರೆ.

ಹಾನಗಲ್ ತಾಲ್ಲೂಕು ಸುರಳೇಶ್ವರ ಗ್ರಾಮದ ಸಂಜೀವ ಗುಡ್ಡಪ್ಪ ಮೈಲಾರ 2020ರ ಫೆಬ್ರುವರಿಯಲ್ಲಿ ಬಾಲಕಿಯನ್ನು ಅಪಹರಿಸಿ, ಲೈಂಗಿಕ ದೌರ್ಜನ್ಯ ಎಸಗಿದ್ದ. ನಂತರ ಜೀವ ಬೆದರಿಕೆ ಒಡ್ಡಿದ ಬಗ್ಗೆ ಹಾನಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸಿಪಿಐ ಶಿವಶಂಕರ ಆರ್.ಗಣಾಚಾರಿ ಅವರು ಪ್ರಕರಣದ ತನಿಖೆ ನಡೆಸಿ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ದಂಡದ ಹಣದಲ್ಲಿ ನೊಂದ ಬಾಲಕಿಗೆ ₹50 ಸಾವಿರ ಪರಿಹಾರ ಮತ್ತು ನೊಂದವರ ಪರಿಹಾರ ನಿಧಿ ಯೋಜನೆಯಡಿ ಇರುವ ಪರಿಹಾರ ನಿಧಿಯಿಂದ ರಾಜ್ಯ ಸರ್ಕಾರವು ₹4 ಲಕ್ಷ ಪರಿಹಾರ ನೀಡಬೇಕೆಂದು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ವಿಜಯಕುಮಾರ ಎಸ್. ಪಾಟೀಲ್ ವಾದ ಮಂಡಿಸಿದರು.

ಡೀಪ್‌ಫೇಕ್: ಶೀಘ್ರ ಜಾಲತಾಣಗಳ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಐ.ಟಿ ಕಾಯ್ದೆ ಸೆಕ್ಷನ್ 79ರ ಅನ್ವಯ ಮೂರನೇ ವ್ಯಕ್ತಿಯ ಮಾಹಿತಿ, ದತ್ತಾಂಶ ಅಥವಾ ಸಂವಹನ ಲಿಂಕ್‌ಗೆ ಮಧ್ಯವರ್ತಿಯು ಜವಾಬ್ದಾರನಲ್ಲ. ಹಾಗಾಗಿ, ಸಾಮಾಜಿಕ ಜಾಲತಾಣಗಳಲ್ಲಿ ಇರುವ ಡೀಪ್‌ಫೇಕ್ ವಿಡಿಯೊಗಳನ್ನು ತೆಗೆದುಹಾಕಲು ಮುಂದಾಗಬೇಕು. ಶೀಘ್ರವೇ, ಈ ನಿಟ್ಟಿನಲ್ಲಿ ಜಾಲತಾಣ ವೇದಿಕೆಗಳ ಸಭೆಯನ್ನೂ ಕರೆಯಲು ನಿರ್ಧರಿಸಲಾಗಿದೆ' ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಡೀಪ್‌ಫೇಕ್ ವಿವಾದಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಕೇಂದ್ರ ಸರ್ಕಾರವು ಮೆಟಾ, ಗೂಗಲ್ ಸೇರಿದಂತೆ ಸಾಮಾಜಿಕ ಜಾಲತಾಣಗಳ ವೇದಿಕೆಗಳಿಗೆ ನೋಟಿಸ್ ನೀಡಿತ್ತು. ಇದಕ್ಕೆ ವೇದಿಕೆಗಳು ಸೂಕ್ತವಾಗಿ ಸ್ಪಂದಿಸಿವೆ. ಇದಕ್ಕೆ ಪ್ರತಿಕ್ರಿಯಿಸಿರುವ ಸಚಿವ ಅಶ್ವಿನಿ, 'ಕಂಪನಿಗಳು ಇಂತಹ ಕಂಟೆಂಟ್ ತೆರವಿಗೆ ಸಂಬಂಧಿಸಿದಂತೆ ಮತ್ತಷ್ಟು ಪರಿಣಾಮಕಾರಿಯಾಗಿ ಕ್ರಮ ತೆಗೆದುಕೊಳ್ಳಬೇಕಿದೆ' ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಜಾಲತಾಣದಲ್ಲಿ ಇರುವ ಡೀಪ್‌ಫೇಕ್ ವಿಡಿಯೊಗಳ ತೆರವು ಹಾಗೂ ಇಂತಹ ವಿಡಿಯೊಗಳನ್ನು ಹರಿಬಿಡುವುದನ್ನು ಕಟ್ಟುನಿಟ್ಟಾಗಿ ತಡೆಯಬೇಕಿದೆ. ಮೂರ್ನಾಲ್ಕು ದಿನಗಳ ಒಳಗೆ ಸಭೆ ಕರೆದು ಚರ್ಚಿಸಲಾಗುವುದು' ಎಂದು ಹೇಳಿದರು.

ಜಾಲತಾಣಗಳಲ್ಲಿ ಖ್ಯಾತ ನಟಿಯರನ್ನು ಗುರಿಯಾಗಿಟ್ಟುಕೊಂಡು ಅವರ ತಿರುಚಿದ ಫೋಟೊಗಳು ಮತ್ತು ವಿಡಿಯೊಗಳನ್ನು ಹರಿಬಿಡಲಾಗುತ್ತಿದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಿಂದ ಸೃಷ್ಟಿಸಲ್ಪಟ್ಟ ಇಂತಹ ವಿಡಿಯೊಗಳಿಂದ ಅವರು ಮಾನಸಿಕವಾಗಿ ನೋವು ಅನುಭವಿಸುವಂತಾಗಿದೆ.

ಪ್ರಧಾನಿ ನರೇಂದ್ರ ಮೋದಿ ಕೂಡ ಡೀಪ್ ಫೇಕ್ ವಿಡಿಯೊ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರು.

ಓಪನ್‌ಎಐ ಸಿಇಒ ಸ್ಯಾಮ್ ಅಲ್ಟ್‌ಮನ್ ವಜಾ

ವಾಷಿಂಗ್ಟನ್ (ಎಎಫ್‌ಪಿ): ಓಪನ್‌ಎಐ ಕಂಪನಿಯ ಸಿಇಒ ಸ್ಯಾಮ್ ಆಲ್ಟ್‌ಮನ್ ಅವರನ್ನು ಕಂಪನಿಯಿಂದ ವಜಾ ಮಾಡಲಾಗಿದೆ. ಅವರ ಸ್ಥಾನಕ್ಕೆ ಮಧ್ಯಂತರ ಅವಧಿಗೆ ಕಂಪನಿಯ ಮುಖ್ಯ ತಾಂತ್ರಿಕ ಅಧಿಕಾರಿ (ಸಿಟಿಒ) ಆಗಿದ್ದ ಮಿರಾ ಮುರಾಟಿ ಅವರನ್ನು ನೇಮಿಸಲಾಗಿದೆ.

ವರ್ಷದ ಹಿಂದೆ ಚಾಟ್ ಜಿಪಿಟಿ ಬಿಡುಗಡೆ ಮಾಡುವ ಮೂಲಕ ತಂತ್ರಜ್ಞಾನ ಯುಗದಲ್ಲಿ ಕೃತಕ ಬುದ್ಧಿಮತ್ತೆಯ ಕಡೆಗೆ ಹೆಚ್ಚಿನ ಆಸಕ್ತಿ ಮೂಡಿಸಿದ್ದರು. ಸ್ಯಾಮ್ ಅವರನ್ನು ಸಿಇಒ ಸ್ಥಾನದಿಂದ ಕಿತ್ತಹಾಕಿರುವುದು ತಂತ್ರಜ್ಞಾನ ಯುಗದಲ್ಲಿ ಅಚ್ಚರಿ ಮೂಡಿಸಿದೆ.

ಸಂಸದನ ಮಗನ ವಿರುದ್ಧ ಪ್ರಕರಣ: ಮೈಸೂರಿಗೆ ವರ್ಗ

ಬೆಂಗಳೂರು: 'ಮದುವೆಯಾಗುವುದಾಗಿ ಹೇಳಿ ದೈಹಿಕ ಸಂಪರ್ಕ ಹೊಂದಿ ಮಹಿಳೆಯೊಬ್ಬರನ್ನು ವಂಚಿಸಿದ್ದಾರೆ' ಎಂಬ ಆರೋಪದಡಿ ಬಳ್ಳಾರಿ ಕ್ಷೇತ್ರದ ಬಿಜೆಪಿ ಸಂಸದ ದೇವೇಂದ್ರಪ್ಪ ಅವರ ಪುತ್ರ ವೈ. ರಂಗನಾಥ್ ವಿರುದ್ಧ ಬೆಂಗಳೂರಿನ ಬಸವನಗುಡಿ ಮಹಿಳಾ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣವನ್ನು ಮೈಸೂರಿಗೆ ವರ್ಗಾಯಿಸುವ ಪ್ರಕ್ರಿಯೆ ಆರಂಭವಾಗಿದೆ.

'ಮಹಿಳೆ ನೀಡಿದ್ದ ದೂರು ಆಧರಿಸಿ ರಂಗನಾಥ್ ವಿರುದ್ಧ ನ. 6ರಂದು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ದೂರಿನ ಸಂಗತಿಗಳನ್ನು ಗಮನಿಸಿದಾಗ, ಮೈಸೂರಿನಲ್ಲಿ ಕೃತ್ಯ ನಡೆದಿರುವುದು ಗಮನಕ್ಕೆ ಬಂದಿದೆ. ಕೃತ್ಯ ನಡೆದ ಸ್ಥಳದ ಆಧಾರದಲ್ಲಿ ಪ್ರಕರಣವನ್ನು ಮೈಸೂರಿನ ವಿಜಯನಗರ ಠಾಣೆಗೆ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಂಗನಾಥ್ ನೀಡಿದ ದೂರು ಆಧರಿಸಿ ಮಹಿಳೆ ವಿರುದ್ಧವೂ ಮೈಸೂರಿನ ವಿಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಎರಡೂ ಪ್ರಕರಣಗಳನ್ನೂ ವಿಜಯನಗರ ಪೊಲೀಸರು ತನಿಖೆ ನಡೆಸಲಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಜೆಟಿಡಿಗೆ ಗಾಳ: ಡಿಕೆಶಿ ತಂತ್ರಗಾರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಲೋಕಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಕನಿಷ್ಠ 20 ಸೀಟುಗಳನ್ನು ಗೆಲ್ಲಬೇಕೆಂಬ ಗುರಿಯೊಂದಿಗೆ ಪಕ್ಷ ಬಲಪಡಿಸಲು ಮುಂದಾಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಹಳೇ ಮೈಸೂರು ಭಾಗದ ಜೆಡಿಎಸ್ ನಾಯಕರ 'ಆಪರೇಷನ್ ಹಸ್ತ'ಕ್ಕೆ ತೆರೆಮರೆಯಲ್ಲಿ ಭಾರಿ ತಂತ್ರಗಾರಿಕೆಯಲ್ಲಿ ತೊಡಗಿದ್ದಾರೆ.

ಜೆಡಿಎಸ್ ಪ್ರಾಬಲ್ಯದ ಭಾಗಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಬಲಪಡಿಸಲು ಮತ್ತು ಎದುರಾಳಿಗಳೇ ಇಲ್ಲದಂತೆ ನೋಡಿಕೊಳ್ಳಲು ಜೆಡಿಎಸ್‌ನ ಪ್ರಭಾವಿ ನಾಯಕ, ಶಾಸಕ ಜಿ.ಟಿ. ದೇವೇಗೌಡ ಸೇರಿ ಆ ಪಕ್ಷದ ಶಾಸಕರನ್ನು ಸೆಳೆಯಲು ಶಿವಕುಮಾರ್ ಯತ್ನಿಸುತ್ತಿದ್ದಾರೆ.

ಜಿ.ಟಿ. ದೇವೇಗೌಡ ಅವರನ್ನು ಭೇಟಿಯಾಗಿ ಗೌಪ್ಯವಾಗಿ ಮಾತುಕತೆ ನಡೆಸಿರುವ ಡಿ.ಕೆ. ಶಿವಕುಮಾರ್, ಪಕ್ಷಕ್ಕೆ ಬರುವಂತೆ ಆಹ್ವಾನ ನೀಡಿದ್ದಾರೆ. ಶಿವಕುಮಾರ್ ಅವರ ಈ ಭೇಟಿಯ ಹಿಂದೆ ಬಹುದೊಡ್ಡ ರಾಜಕೀಯ ತಂತ್ರಗಾರಿಕೆ ಇದೆ ಎಂದು ವಿಶ್ಲೇಷಿಸಲಾಗಿದೆ. ಆದರೆ, ಶಿವಕುಮಾರ್ ಅವರ ಆಹ್ವಾನವನ್ನು ಜಿ.ಟಿ. ದೇವೇಗೌಡರು ನಯವಾಗಿ ತಿರಸ್ಕರಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಜಿ.ಟಿ. ದೇವೇಗೌಡ, 'ಸದಾಶಿವನಗರದ ಮನೆಗೆ ಅವರೇ (ಡಿ.ಕೆ. ಶಿವಕುಮಾರ್) ಬಂದಿದ್ದರು. ಭೇಟಿ ವೇಳೆ ಎಸ್ .ಟಿ. ಸೋಮಶೇಖರ್, ಪುಲಿಕೇಶಿನಗರ ಮತ್ತು ನೆಲಮಂಗಲ ಕ್ಷೇತ್ರದ ಶಾಸಕರೂ ಇದ್ದರು. ಈ ಹಿಂದೆ ಪಕ್ಷಕ್ಕೆ ಕರೆದರೂ ಯಾಕೆ ಬರಲಿಲ್ಲ ಎಂದು ಕೇಳಿದರು. ಅದೃಷ್ಟ ಇರುವವರಿಗೆ ಅಧಿಕಾರ ಸಿಗುತ್ತದೆ. ಅದೃಷ್ಟ ಇಲ್ಲದೇ ಇದ್ದರೆ ಇಲ್ಲ ಎಂದು ಅವರಿಗೆ ಹೇಳಿದೆ' ಎಂದರು.

'ನಾನು ಕಾಂಗ್ರೆಸ್‌ಗೆ ಹೋಗುವ ಪರಿಸ್ಥಿತಿ ಇಲ್ಲ. ಜೆಡಿಎಸ್‌ನ ಎಲ್ಲ 19 ಶಾಸಕರೂ ಒಟ್ಟಾಗಿ ಇದ್ದೇವೆ. ಯಾವುದೇ ರೀತಿಯಲ್ಲಿ ಪಕ್ಷವನ್ನು ಒಡೆಯುವ ಕೆಲಸ ಮಾಡುವುದಿಲ್ಲ' ಎಂದೂ ಅವರು ಹೇಳಿದರು.

ಜಿ.ಟಿ. ದೇವೇಗೌಡ ಅವರನ್ನು ಭೇಟಿ ಮಾಡಿದ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಡಿ.ಕೆ. ಶಿವಕುಮಾರ್, 'ಎಲ್ಲಾ ಪಕ್ಷದ ಶಾಸಕರು ಕೆಲಸದ ವಿಚಾರವಾಗಿ ನನ್ನನ್ನು ಭೇಟಿ ಮಾಡುತ್ತಾರೆ. ನನಗೆ ಅನೇಕ ಸ್ನೇಹಿತರಿದ್ದಾರೆ. ಅವರ ಜೊತೆ ಊಟ, ಚರ್ಚೆ ಮಾಡುತ್ತೇವೆ' ಎಂದರು.

'ನಾವು ಬರಮಾಡಿಕೊಳ್ಳುತ್ತೇವೆ'

ಜಿ.ಟಿ. ದೇವೇಗೌಡರು ಕಾಂಗ್ರೆಸ್ ಸೇರಲು ಆಸಕ್ತಿ ತೋರಿದರೆ ನಾವು ಖಂಡಿತವಾಗಿಯೂ ಬರಮಾಡಿಕೊಳ್ಳುತ್ತೇವೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ದೇವೇಗೌಡ ಅವರನ್ನು ಶಿವಕುಮಾರ್ ಭೇಟಿ ಮಾಡಿರುವ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ, 'ಅವರು (ಜಿ.ಟಿ. ದೇವೇಗೌಡ) ಆಸಕ್ತಿ ತೋರಿಸಿದರೆ ನಾವು ಕರೆಯುತ್ತೇವೆ' ಎಂದರು.

'ಸೌಜನ್ಯದ ಭೇಟಿ ವೇಳೆ ಮಾತನಾಡಿರುತ್ತೇವೆ. ಅಲ್ಲಿ ಏನು ಮಾತನಾಡಿರುತ್ತೇವೆ ಎಂದು ನಿಮಗೆ (ಮಾಧ್ಯಮದವರು) ಗೊತ್ತಿರುವುದಿಲ್ಲ. ಕಾರ್ಯಕ್ರಮಕ್ಕೆ ಕರೆಯಲು ಸೋಮಣ್ಣ ಬಂದಿದ್ದರು. ಅದನ್ನೇ ಪಕ್ಷ ಸೇರಲು ಮಾತುಕತೆಗೆ ಬಂದಿದ್ದಾರೆ ಅಂದರೆ ಹೇಗೆ' ಎಂದು ಪ್ರಶ್ನಿಸಿದರು.

ಮಾಧವರಾಜ್‌ಗೆ ಮನೋಹರ್ ಪರಿಕ್ಕರ್ ಯುವ ವಿಜ್ಞಾನಿ ಪ್ರಶಸ್ತಿ

ಪಣಜಿ (ಪಿಟಿಐ): ಗೋವಾ ರಾಜ್ಯ ಸರ್ಕಾರ ನೀಡುವ ಮನೋಹರ್ ಪರಿಕ್ಕರ್ ಯುವ ವಿಜ್ಞಾನಿ ಪ್ರಶಸ್ತಿಗೆ ಇಸ್ರೊದ ಯು.ಆರ್. ರಾವ್ ಉಪಗ್ರಹ ಕೇಂದ್ರದ ಬಾಹ್ಯಾಕಾಶ ವಿಜ್ಞಾನಿ ಡಾ.ಮಾಧವರಾಜ್ ಎಸ್. ಭಾಜನರಾಗಿದ್ದಾರೆ.

ಪ್ರಶಸ್ತಿ ಸ್ಥಾಪನೆಯಾದ ಬಳಿಕ ಪ್ರಥಮ ಬಾರಿಗೆ ಅದನ್ನು ಸ್ವೀಕರಿಸುತ್ತಿರುವ ಹೆಗ್ಗಳಿಕೆಗೆ ಮಾಧವರಾಜ್ ಪಾತ್ರರಾಗಿದ್ದಾರೆ. ಚಂದ್ರಯಾನ–3 ಯೋಜನೆಯ ಅವರೋಹಣ ಪಥವನ್ನು ವಿನ್ಯಾಸಗೊಳಿಸಿದ ಹಿರಿಮೆಯನ್ನು ಅವರು ಹೊಂದಿದ್ದಾರೆ.

ಡಾ.ಅನಿಲ್ ಕಾಕೋಡ್ಕರ್ ನೇತೃತ್ವದ ಸಮಿತಿಯು ಈ ಆಯ್ಕೆ ಮಾಡಿದೆ.

ಪ್ರಶಸ್ತಿಯು ₹5 ಲಕ್ಷ ನಗದು ಹಾಗೂ ಪ್ರಮಾಣ ಪತ್ರವನ್ನು ಒಳಗೊಂಡಿದೆ. ಡಿಸೆಂಬರ್ 13ರಂದು ನಡೆಯಲಿರುವ ಮನೋಹರ್ ಪರಿಕ್ಕರ್ ವಿಜ್ಞಾನ ಮಹೋತ್ಸವದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ಗೋವಾದ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ತಿಳಿಸಿದ್ದಾರೆ.

ಎಲ್ಲರೂ ಗೌರವಿಸುವುದು ಸ್ಪೀಕರ್ ಪೀಠ: ಖಾದರ್

ಪ್ರಜಾವಾಣಿ ವಾರ್ತೆ

ಮಂಗಳೂರು: 'ನಾನು ಎಲ್ಲರಿಗೂ ಸೇರಿರುವ ವಿಧಾನಸಭಾಧ್ಯಕ್ಷ. ಈ ಸ್ಥಾನವನ್ನು ಯಾವುದೇ ರಾಜಕೀಯ, ಜಾತಿ, ಧರ್ಮದ ಆಧಾರದಲ್ಲಿ ನೋಡುವಂತಿಲ್ಲ. ಎಲ್ಲವನ್ನೂ ಮೀರಿ ನೋಡಬೇಕಾದ ಸಂವಿಧಾನಬದ್ಧ ಸ್ಥಾನವಿದು. ಎಲ್ಲರೂ ಗೌರವ ಕೊಡುವುದು ನನಗಲ್ಲ. ಸಂವಿಧಾನ ಪೀಠಕ್ಕೆ, ಸಭಾಧ್ಯಕ್ಷ ಸ್ಥಾನಕ್ಕೆ' ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ಇಲ್ಲಿ ಜೊತೆ ಶನಿವಾರ ಮಾತನಾಡಿದ ಅವರು, 'ಮುಸ್ಲಿಂ ಸ್ಪೀಕರ್‌ಗೆ ಬಿಜೆಪಿ ಶಾಸಕರು ನಮಸ್ಕರಿಸುವಂತೆ ಮಾಡಿದ್ದೇವೆ' ಎಂಬುದಾಗಿ ಸಚಿವ ಜಮೀರ್ ಅಹಮದ್ ನೀಡಿದ್ದಾರೆ ಎನ್ನಲಾದ ಹೇಳಿಕೆ ಕುರಿತು ಪ್ರತಿಕ್ರಿಯಿಸಿದರು.

'ಸಭಾಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಳ್ಳುವವರು ಅದರ ಗೌರವವನ್ನು ಉಳಿಸಬೇಕು. ಜಮೀರ್ ಅವರ ಹೇಳಿಕೆಗೆ ನಾನು ಏನೂ ಹೇಳಲು ಬಯಸುವುದಿಲ್ಲ. ಜಾತಿಯ ಆಧಾರದಲ್ಲಿ ನನ್ನನ್ನು ಈ ಪೀಠದಲ್ಲಿ ಕುಳ್ಳಿರಿಸಿಲ್ಲ. ಅರ್ಹತೆಗೆ ಅನುಗುಣವಾಗಿ ಸ್ಥಾನವನ್ನು ನೀಡಿದ್ದಾರೆ. ಎಲ್ಲರಿಗೆ ಗೌರವ ನೀಡಿ, ಈ ಜವಾಬ್ದಾರಿಯನ್ನು ನಿರ್ವಹಿಸುತ್ತೇನೆ' ಎಂದರು.

ಜಮೀರ್ ರಾಜೀನಾಮೆಗೆ ನಳಿನ್ ಆಗ್ರಹ: ವಿವಾದಿತ ಹೇಳಿಕೆ ನೀಡಿರುವ ಜಮೀರ್ ಅಹಮದ್ ಖಾನ್ ರಾಜೀನಾಮೆ ನೀಡಬೇಕು ಎಂದು ಸಂಸದ ನಳಿನ್ ಕುಮಾರ್ ಕಟೀಲ್ ಇಲ್ಲಿ ಆಗ್ರಹಿಸಿದರು.

'ಸ್ಪೀಕರ್ ಸ್ಥಾನ ಜಾತಿ, ಧರ್ಮದ ಹೊರತಾಗಿ ಇರುವ ಹುದ್ದೆ. ಆ ಸ್ಥಾನವನ್ನು ಮತೀಯ ದೃಷ್ಟಿಯಿಂದ ನೋಡಿರುವ ಜಮೀರ್ ಅದರ ಗೌರವ ಕಡಿಮೆಯಾಗುವಂತೆ ಮಾತನಾಡಿದ್ದಾರೆ. ಮತಿಭ್ರಾಂತಿಯಿಂದ ಜಮೀರ್ ಮಾತನಾಡಿದ್ದಾರೆ' ಎಂದರು.

ಜಮೀರ್ ವಿರುದ್ಧ ಹೋರಾಟಕ್ಕೆ ಬಿಜೆಪಿ ತಯಾರಿ

ಬೆಂಗಳೂರು: 'ಮುಸ್ಲಿಂ ಸಮುದಾಯದ ಸ್ಪೀಕರ್ ಎದುರು ಬಿಜೆಪಿಯ ದೊಡ್ಡ ದೊಡ್ಡ ನಾಯಕರು ನಮಸ್ಕರಿಸುವಂತೆ ಕಾಂಗ್ರೆಸ್ ಮಾಡಿದೆ' ಎಂಬ ಹೇಳಿಕೆ ನೀಡಿರುವ ವಸತಿ ಸಚಿವ ಜಮೀರ್ ಅಹಮದ್ ಖಾನ್ ವಿರುದ್ಧ ವಿಧಾನಮಂಡಲದ ಬೆಳಗಾವಿ ಅಧಿವೇಶನದಲ್ಲಿ ಹೋರಾಟ ನಡೆಸಲು ಬಿಜೆಪಿ ತಯಾರಿ ಆರಂಭಿಸಿದೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಪಕ್ಷದ ಶಾಸಕರಾದ ಬಸವರಾಜ ಬೊಮ್ಮಾಯಿ ಮತ್ತು ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರನ್ನು ಶನಿವಾರ ಭೇಟಿಮಾಡಿದ್ದ ಸಂದರ್ಭದಲ್ಲಿ ಈ ಕುರಿತು ಚರ್ಚಿಸಿದ್ದಾರೆ. ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಭೇಟಿ ವೇಳೆಯಲ್ಲೂ ಈ ಕುರಿತು ಪ್ರಸ್ತಾಪಿಸಿದ್ದಾರೆ.

ಪ್ರಜಾವಾಣಿ
#CHEERFORINDIA!
ವಿಜೇತರಿಗೆ ಅಭಿನಂದನೆಗಳು !
ಭಾರತ ತಂಡಕ್ಕ ಶುಭ ಕೋರಿದ ನಿಮ್ಮೆಲ್ಲರ ಹರ್ಷೋದ್ಗಾರಗಳು ಜೋರಾಗಿ ಸದ್ದು ಮಾಡಿವೆ.

ಮಂಜುನಾಥ್
ಟೀಮ್ ಇಂಡಿಯಾ! ಪ್ರತಿ ಶಾಟ್ ಸಿಕ್ಸರ್ ಆಗಿರಲಿ ಮತ್ತು ಪ್ರತಿ ಎಸೆತವೂ ವಿಕೆಟ್ ಆಗಿರಲಿ.

ಎಸ್ ಕೆ ಕುಮಾರ್
ದೇವರು ಭಾರತವನ್ನು ಆಶೀರ್ವದಿಸಲಿ. ಗೆಲುವು ನಿಮ್ಮದಾಗಲಿ!

ರೋಹನ್ ರಾಜ್ ಎಂ.ಬಿ
ಜೈ ಹೋ ಇಂಡಿಯಾ. ಈ ಬಾರಿಯ ಕಪ್ ನಮ್ಮದು. ಒಳ್ಳೆಯದಾಗಲಿ.

ಮಂಜು ಕುಲಕರ್ಣಿ
ಗೆಲುವು ಆಗಲಿ ಜಗಕೆ ಶಾಶ್ವತ. ಪ್ರತಿಯೊಬ್ಬ ಆಟಗಾರನ ಶ್ರಮ ಫೈನಲ್ ಹಾದಿ ಆಯ್ತು ಸುಗಮ. ಆಸ್ಟ್ರೇಲಿಯಾ ತಂಡದ ವಿರುದ್ಧ ಗೆಲ್ಲಿ ಭಾರತದ ಹೆಸರು ಕೂಗಲಿ ಗಲ್ಲಿಗಲ್ಲಿ. ದಾಖಲೆಗಳ ಬರೆಯುವ ನಮ್ಮ ದೇಶ 2023 ರ ವರ್ಲ್ಡ್ ಕಪ್ ಭಾರತದ ವಶ

ಶ್ರೀನಿವಾಸ್ ವೈ.ಜಿ
ನಮ್ಮ ಭಾರತೀಯ ಕ್ರಿಕೆಟ್ ತಂಡವು 2023 ರ ಐಸಿಸಿ ಪುರುಷರ ವಿಶ್ವಕಪ್ ಗೆಲ್ಲಬೇಕೆಂದು ನಾನು ಬಯಸುತ್ತೇನೆ!

ನವಾಜ್ ಮೆಹದಿ
ಖೇಲೇಗಾ ಇಂಡಿಯಾ ಜೀತೇಗ ಭಾರತ!!!

ಡಾ.ಶಶಿಕುಮಾರ್
"ನಮ್ಮ ಭಾರತ ವಿಜಯೀ ಭಾರತ"

ರಶ್ಮಿ ಮತ್ತು ಮಂಜುನಾಥ್
ಓ ನನ್ನ ಹೆಮ್ಮೆಯ, ಭಾರತ! ಆ ಬೌಂಡರಿಗಳನ್ನು ಸಿಡಿಸಿ , ಆ ವಿಕೆಟ್‌ಗಳನ್ನು ಉರುಳಿಸಿ. ಅಭಿಮಾನಿಗಳ ಅಬ್ಬರ ಕ್ರೀಡಾಂಗಣದಲ್ಲಿ ಪ್ರತಿಧ್ವನಿಸಲಿ. ವಿಜಯವು ಕಾಯುತ್ತಿದೆ, ಅದನ್ನು ನಿಮ್ಮದಾಗಿಸಿಕೊಳ್ಳಿ!

ಚಾಂದ್ ಬಾಷಾ ಆರ್
ವಿಜಯೀಭವ ಟೀಂ ಇಂಡಿಯಾ!!!

ಕೃಷ್ಣ ಮತ್ತು ಸೃಷ್ಟಿ
ನಾವೆಲ್ಲರೂ ಒಂದೇ ನಾವು ಭಾರತ ಮಾತೆ ಗೆ ಚಿರಋಣಿ ನಾವು ಭಾರತಕ್ಕೆ ಪ್ರೋತ್ಸಾಹ ನೀಡುತ್ತೇವೆ ಜೈ ಭಾರತ ಮಾತ

ಚಂದ್ರಕಲಾ
ಈಗ ನಮ್ಮನ್ನು ನಾವು ಸಾಬೀತುಪಡಿಸಲು ಬಹುನಿರೀಕ್ಷಿತ ಸಮಯ ಬಂದಿದೆ ಮತ್ತು ಭಾರತವು ಅಂತಿಮವಾಗಿ ಅತ್ಯುತ್ತಮವಾದದ್ದನ್ನು ನಿರೀಕ್ಷಿಸುತ್ತದೆ.

ಅಭಿಷೇಕ್ ಬಿಲ್ಕರ್ಗೆ
ದ್ದು ಬಾ ಓ ನನ್ನ ಭಾರತ ನನ್ನ ಭಾರತ ದಶಕಗಳ ನಂತರ ವರ್ಲ್ಡ್ ಕಪ್ ಫೈನಲ್ ತಲುಪಿತ್ತು 141 ಕೋಟಿ ಜನರ ಆಸೆಯನ್ನು ಈಡೇರಿಸುತ್ತದೆ ಎಂದು ನನ್ನಲ್ಲಿ ಆತ್ಮವಿಶ್ವಾಸವಿದೆ ಗೆದ್ದು ಬಾ ಭಾರತ ಐ ಲವ್ ಯು ಇಂಡಿಯಾ

ಭಾರತ ತಂಡವನ್ನು ಹುರಿದುಂಬಿಸಲು ನಮ್ಮೊಂದಿಗೆ ಕೈಜೋಡಿಸಿದ ಎಲ್ಲರಿಗೂ ಧನ್ಯವಾದಗಳು.
ಈಗ ಇದ ಉತ್ಸಾಹವನ್ನು ಮುಂದುವರೆಸೋಣ, ಕಪ್ ಅನ್ನು ಮನೆಗೆ ತರೋಣ !

ಬಿ ಎಂ ಎನ್ ಬಾಬು
ಭಾರತ ಕ್ರಿಕೆಟ್ ತಂಡವು 1983 ರ ವಿಶ್ವಕಪ್ ಇತಿಹಾಸವನ್ನು ಪುನರಾವರ್ತಿಸಲಿ ಎಂದು ನಾನು ಬಯಸುತ್ತೇನೆ

ಎಚ್ ಬಿ ಪಾಟೀಲ್
ಅಜೇಯದೊಂದಿಗೆ ದಾಪುಗಾಲಿಡುತ್ತಿರುವ ತಂಡ ಭಾನುವಾರ ಖಂಡಿತವಾಗಿಯೂ ಪ್ರಶಸ್ತಿ ಮುಡಿಗೇರಿಸಿಕೊಳ್ಳಲಿದೆ. ದೇಶದ ಜನರ ಪ್ರಾರ್ಥನೆ ಕೂಡಾ ಕಪ್ ಗೆಲ್ಲಬೇಕೆಂಬುದಾಗಿದೆ. ಭಾರತ ತಂಡಕ್ಕೆ ಶುಭವಾಗಲಿ.

ಮನೋಜ್ ಕುಮಾರ್
ತ್ಯುತ್ತಮ ಅಜೇಯ ಆಟವನ್ನು ಆಡಿ 2023ರ ವಿಶ್ವಕಪ್ ಎತ್ತಿ ಹಿಡಿದು ಕ್ರಿಕೆಟ್ ಇತಿಹಾಸ ದಲ್ಲಿ ಚರಿತ್ರೆ ಬರೆಯಲಿ

ಯೋಗೀಶ್ ಎಚ್.ಆರ್ಗೆ
ದ್ದು ಬಾ ಇಂಡಿಯಾ. 1947 ರಲ್ಲಿ ಬ್ರಿಟಿಷರನ್ನು ಭಾರತದಿಂದ ತೊಲಗಿಸಿದಂತೆ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ಪಡೆಯನ್ನು ಸೋಲಿಸಿ ಭಾರತ ಬಿಟ್ಟು ತೊಲಗಿಸಿ ನಿಮ್ಮ ಗೆಲುವಿನ ಸಂಭ್ರಮಕ್ಕಾಗಿ ಕಾಯುತ್ತಿರುವ ಕಾಯುತ್ತಿರುವ ಅಭಿಮಾನಿ

Follow Us




ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

'ಡೀಪ್‌ಫೇಕ್' ಎನ್ನುವುದು ನಮ್ಮ ಬದುಕಿನ ಹಲವೆಡೆ ಹೇಗೆಲ್ಲ ಬೆರೆತುಹೋಗಿದೆ ಎನ್ನುವುದೇ ಗಾಬರಿ ಹುಟ್ಟಿಸುತ್ತದೆ.



ಹರಳು, ಚಿನ್ನಾಭರಣ ರಫ್ತು ಇಳಿಕೆ 10

ಗಾಜಾ: ಹಮಾಸ್ ಕಾರ್ಯಾಚರಣೆ ಕೇಂದ್ರ, ಸುರಂಗ ಮಾರ್ಗಗಳಿಗೆ ಶೋಧ ತೀವ್ರ 9

ಎಸ್ಸಾಂ: 98 ಪ್ರದೇಶದಲ್ಲಿ ಆನ್‌ಲೈನ್ ಸೇವೆ ಸ್ಥಗಿತ 10

ಆಸ್ಪತ್ರೆ ತೊರೆಯುತ್ತಿರುವ ರೋಗಿಗಳು, ವೈದ್ಯರು 9

ದೇವಸ್ಥಾನದ ಆದಾಯ ಸಮರ್ಪಕವಾಗಿ ಬಳಸಿಕೊಳ್ಳದ ಮುಜರಾಯಿ ಇಲಾಖೆ

ಭಕ್ತರಿಗಿಲ್ಲ ಮೂಲಸೌಕರ್ಯದ 'ಪ್ರಸಾದ'

• ಪ್ರಮೋದ

ಆದಾಯ-ವಿವರ		
	₹ 329.91 ಕೋಟಿ 2021–22ನೇ ಸಾಲಿನಲ್ಲಿ 'ಎ' ಗ್ರೇಡ್ ದೇವಸ್ಥಾನಗಳ ಆದಾಯ	₹ 14.31 ಕೋಟಿ 2021–22ನೇ ಸಾಲಿನಲ್ಲಿ 'ಬಿ' ಗ್ರೇಡ್ ದೇವಸ್ಥಾನಗಳ ಆದಾಯ
	₹ 675.55 ಕೋಟಿ 2022–23ನೇ ಸಾಲಿನಲ್ಲಿ 'ಎ' ಗ್ರೇಡ್ ದೇವಸ್ಥಾನಗಳ ಆದಾಯ	₹ 33.31 ಕೋಟಿ 2022–23ನೇ ಸಾಲಿನಲ್ಲಿ 'ಬಿ' ಗ್ರೇಡ್ ದೇವಸ್ಥಾನಗಳ ಆದಾಯ

ಕೊಪ್ಪಳ: 'ನದಿಯಲ್ಲಿ ಸ್ನಾನ ಮಾಡಿ ದೇವರ ದರ್ಶನ ಪಡೆದರೆ ಪುಣ್ಯ ಬರುತ್ತದೆ ಎಂದು ಹಿರಿಯರು ಹೇಳುತ್ತಾರೆ. ಆದರೆ, ಇಲ್ಲಿನ ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಿದರೆ ಚರ್ಮರೋಗಗಳು ಅಂಟಿಕೊಳ್ಳುತ್ತವೆ. ಮೈ ತುರಿಕೆಯಾಗುತ್ತದೆ. ಸರಿಯಾಗಿ ಸ್ನಾನಘಟ್ಟ ನಿರ್ಮಿಸಿದ್ದರೆ ದೇವಸ್ಥಾನದ ಸುತ್ತಲಿನ ವಾತಾವರಣವಾದರೂ ಸ್ವಚ್ಛವಾಗಿರುತ್ತಿತ್ತು...'

ಕರ್ನಾಟಕ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದಿಂದ ಲಕ್ಷಾಂತರ ಭಕ್ತರನ್ನು ಹೊಂದಿರುವ ಜಿಲ್ಲೆಯ ಹುಲಿಗಿಯ ಹುಲಿಗೆಮ್ಮ ದೇವಿ ದೇವಸ್ಥಾನಕ್ಕೆ ಬಂದಿದ್ದ ವಿಜಯಪುರದ ಭಕ್ತ ಮಲ್ಲಪ್ಪ ಗುಡಿಹಳ್ಳಿ ಅವರ ಬೇಸರದ ಮಾತುಗಳು ಇವು.

ವಾರ್ಷಿಕವಾಗಿ ₹15 ಕೋಟಿ ಆದಾಯ ಗಳಿಸುವ, ಬ್ಯಾಂಕ್‌ನಲ್ಲಿ ₹54 ಕೋಟಿ ನಿಶ್ಚಿತ ಠೇವಣಿ (ಎಫ್‌.ಡಿ.) ಹೊಂದಿರುವ ಈ ದೇವಸ್ಥಾನದ ಸುತ್ತ ಮೂಲಸೌಕರ್ಯಗಳು ಮರೀಚಿಕೆಯಾಗಿವೆ. ನದಿಯಲ್ಲಿ ಬಳೆ, ಸ್ನಾನಮಾಡಿ ಬಿಟ್ಟು ಹೋದ ರಾಶಿ ಸೀರೆ, ಪ್ಲಾಸ್ಟಿಕ್ ಬಾಟಲ್, ಚಪ್ಪಲಿ ತುಂಬಿಕೊಂಡಿವೆ.

ಒಳನೋಟ

ನೀರು ಹಸಿರು ಬಣ್ಣಕ್ಕೆ ತಿರುಗಿದೆ. ದಂಡೆಯಲ್ಲಿ ನಿರ್ಮಿಸಿರುವ ತಗಡಿನ ಶೆಡ್ಡುಗಳೇ ಮಹಿಳೆಯರಿಗೆ ಬಟ್ಟೆ ಬದಲಿಸಲು ಆಸರೆಯಾಗಿವೆ.

ಗಂಗಾವತಿ ತಾಲ್ಲೂಕಿನ ಅಂಜನಾದ್ರಿಯ ದರ್ಶನಕ್ಕೆ 575 ಮೆಟ್ಟಿಲುಗಳನ್ನು ಹತ್ತಬೇಕು. ಬೆಟ್ಟ ಹತ್ತುವ ಜಾಗದಲ್ಲಿ ಮೂಲಸೌಕರ್ಯಗಳಿಲ್ಲ. ಹಿಂದಿನ ಬಿಜೆಪಿ ಸರ್ಕಾರ ಅಂಜನಾದ್ರಿಯಲ್ಲಿ ಮೂಲ ಸೌಕರ್ಯ ಕಲ್ಪಿಸಲು ₹120 ಕೋಟಿ ಬಿಡುಗಡೆ ಮಾಡಿದೆ ಎಂದು ಹೇಳಿತ್ತು. ಆದರೆ, ಕೆಲಸಗಳಿಗೆ ಚಾಲನೆ ದೊರೆತಿಲ್ಲ.

'ಇತ್ತೀಚೆಗೆ ಬೆಟ್ಟ ಹತ್ತುವಾಗ ಕಲಘಟಗಿಯ ಯುವಕನೊಬ್ಬ ಮೃತಪಟ್ಟ. ಅಂಜನಾದ್ರಿಯಲ್ಲಿಯೇ ಚಿಕಿತ್ಸಾ ಸೌಲಭ್ಯ ಕಲ್ಪಿಸಿ ಬೆಟ್ಟಕ್ಕೆ ಹತ್ತುವ ಮಾರ್ಗದಲ್ಲಿ ಶುದ್ಧ ಕುಡಿಯುವ ನೀರಿನ ಅನುಕೂಲ ಒದಗಿಸಿದ್ದರೆ ಆ ಯುವಕನ ಜೀವ ಉಳಿಯುತ್ತಿತ್ತೇನೋ. ಭಕ್ತರಿಂದಲೇ ವಾರ್ಷಿಕ ಕೋಟ್ಯಂತರ ರೂಪಾಯಿ ಆದಾಯ ಗಳಿಸುವ ದೇವಸ್ಥಾನಗಳು ಅವರ ಸುರಕ್ಷತೆಗೆ ಹಣ ಖರ್ಚು ಮಾಡಲು ಹಿಂದೇಟು ಹಾಕಿದರೆ ಹೇಗೆ' ಎಂದು ಹುಬ್ಬಳ್ಳಿಯಿಂದ ಬಂದಿದ್ದ ಅಮರೇಶ ಮೆಣಸಿನಕಾಯಿ ಪ್ರಶ್ನಿಸಿದರು.

8ನೇ ಪುಟ ನೋಡಿ



ಭಕ್ತರ ಸಂಖ್ಯೆ ಹೆಚ್ಚಿದ್ದಾಗ ಮಹದೇಶ್ವರಬೆಟ್ಟದ ರಂಗಮಂದಿರವೇ ಭಕ್ತಾದಿಗಳ ವಿಶ್ರಾಂತಿ, ವಾಸ್ತವ್ಯದ ತಾಣವಾಗಿ ಬದಲಾಗುತ್ತದೆ

ಮುಜರಾಯಿ ಹಣ ಮಸೀದಿಗೆ ಬಳಸಲ್ಲ



ಮುಜರಾಯಿ ದೇವಸ್ಥಾನಗಳ ಆದಾಯವನ್ನು ದೇವಸ್ಥಾನ ಮತ್ತು ಅದಕ್ಕೆ ಸಂಬಂಧಿಸಿದ ಪ್ರದೇಶಗಳ ಅಭಿವೃದ್ಧಿಯನ್ನು ಹೊರತುಪಡಿಸಿ ಮತ್ಯಾವುದೇ ಉದ್ದೇಶಕ್ಕೆ ಬಳಸುವಂತಿಲ್ಲ. ಬಳಸುತ್ತಲೂ ಇಲ್ಲ. ಆದರೂ ಕೆಲವರು ವೋಟಿನ ಗಿಮಿಕ್‌ಗಾಗಿ ಅಪಪ್ರಚಾರ ಮಾಡುತ್ತಾ ಇರುತ್ತಾರೆ. ಕೋಮು ಭಾವನೆ ಕೆರಳಿಸಲು ಮಸೀದಿ, ಚರ್ಚ್ ಅಭಿವೃದ್ಧಿಗೆ ಬಳಸಲಾಗುತ್ತದೆ ಎಂದು ಹೇಳುವವರು ಅದರ ದಾಖಲೆಗಳನ್ನು ನೀಡುವುದಿಲ್ಲ. ಯಾಕೆಂದರೆ, ಅವೆಲ್ಲ ಸುಳ್ಳು ಆರೋಪಗಳು.

ರಾಮಲಿಂಗಾರೆಡ್ಡಿ, ಮುಜರಾಯಿ ಸಚಿವ

ಭಾರತ– ಆಸ್ಟ್ರೇಲಿಯಾ ಫೈನಲ್ ಇಂದು

ಯಾರಿಗೆ ವಿಶ್ವಕಿರೀಟ?

ಕ್ರಿಕೆಟ್ ವಿಶ್ವಕಪ್ ಭಾರತ 2023

ಅಹಮದಾಬಾದ್: ಏಕದಿನ ಕ್ರಿಕೆಟ್‌ನ ವಿಶ್ವವಿಜೇತರನ್ನು ನಿರ್ಧರಿಸಲು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ಸಜ್ಜುಗೊಂಡಿದೆ. ಟೂರ್ನಿಯಲ್ಲಿ ಅಜೇಯವಾಗುಳಿದಿರುವ ಭಾರತ ತಂಡ ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಐದು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ವಿರುದ್ಧ ಸೆಣಸಲಿದೆ. ಕೋಟ್ಯಂತರ ಅಭಿಮಾನಿಗಳ ಹಾರೈಕೆಯೊಂದಿಗೆ ಆಡಲಿರುವ ರೋಹಿತ್ ಶರ್ಮಾ ಬಳಗ ಮೂರನೇ ಟ್ರೋಫಿಯತ್ತ ಕಣ್ಣಿಟ್ಟಿದೆ.

ಬಲಾಬಲ

	ಏಕದಿನ ಕ್ರಿಕೆಟ್	ಏಕದಿನ ವಿಶ್ವಕಪ್
ಪಂದ್ಯ	150	13
ಭಾರತ ಜಯ	57	5
ಆಸ್ಟ್ರೇಲಿಯಾ ಜಯ	83	8
ಫಲಿತಾಂಶವಿಲ್ಲ	10	

ಪ್ರಮುಖ ಆಟಗಾರರು

ಭಾರತ		ಆಸ್ಟ್ರೇಲಿಯಾ	
ಕೊಹ್ಲಿ	711 ರನ್	ವಾರ್ನರ್	528 ರನ್
ರೋಹಿತ್	550 ರನ್	ಮಾರ್ಷ್	426 ರನ್
ಶಮಿ	23 ವಿಕೆಟ್	ಜಂಪಾ	22 ವಿಕೆಟ್
ಬೂಮ್ರಾ	18 ವಿಕೆಟ್	ಹ್ಯಾಜಲ್‌ವುಡ್	14 ವಿಕೆಟ್



ರೋಹಿತ್ ಶರ್ಮಾ ಪ್ಯಾಟ್ ಕಮಿನ್ಸ್

ಪ್ರಶಸ್ತಿ ಮೊತ್ತ
₹33 ಕೋಟಿ ಚಾಂಪಿಯನ್
₹16 ಕೋಟಿ ರನ್ನರ್ಸ್ ಅಪ್

ಭಾರತ

ಸಾಮರ್ಥ್ಯ
- ಬಲಿಷ್ಠ ಬ್ಯಾಟಿಂಗ್ ಲೈನ್ ಅಪ್. ಎಂಟನೇ ಕ್ರಮಾಂಕದವರೆಗೂ ರನ್ ಗಳಿಸುವ ಆಟಗಾರರಿದ್ದಾರೆ
- ಬೌಲಿಂಗ್ ವಿಭಾಗದಲ್ಲಿ ಸಮತೋಲನವಿದೆ. ಮೂವರು ವೇಗಿ, ಇಬ್ಬರು ಪರಿಣತ ಸ್ಪಿನ್ನರ್‌ಗಳು ಇದ್ದಾರೆ

ದೌರ್ಬಲ್ಯ
- ಇತರೆ ರನ್‌ಗಳನ್ನು ಹೆಚ್ಚು ಬಿಟ್ಟುಕೊಟ್ಟಿದ್ದಾರೆ
- ಕೆಲವು ಫೀಲ್ಡರ್‌ಗಳು ನಿರಂತರವಾಗಿ ಕ್ಯಾಚ್ ಕೈಚೆಲ್ಲಿದ್ದಾರೆ. ಭಾರತ ತಂಡದವರು ಇಲ್ಲಿಯವರೆಗೆ ಒಟ್ಟು ಆರು ಕ್ಯಾಚ್‌ಗಳನ್ನು ಬಿಟ್ಟಿದ್ದಾರೆ

ಆಸ್ಟ್ರೇಲಿಯಾ

ಸಾಮರ್ಥ್ಯ
- ಆರಂಭಿಕ ಬ್ಯಾಟರ್‌ಗಳೇ ತಂಡದ ದೊಡ್ಡ ಶಕ್ತಿ. ಡೇವಿಡ್ ವಾರ್ನರ್–ಟ್ರಾವಿಸ್ ಹೆಡ್ ಸ್ಫೋಟಕ ಆರಂಭ ನೀಡಬಲ್ಲವರಾಗಿದ್ದಾರೆ
- ಈ ತಂಡದಲ್ಲಿ ಹೆಚ್ಚು ಬೌಲಿಂಗ್ ಆಲ್‌ರೌಂಡರ್‌ಗಳು ಇದ್ದಾರೆ. ಸ್ಪಿನ್ನರ್ ಆ್ಯಡಂ ಜಂಪಾ ಉತ್ತಮ ಫಾರ್ಮ್‌ನಲ್ಲಿದ್ದಾರೆ

ದೌರ್ಬಲ್ಯ
- ತಂಡದಲ್ಲಿ ಪೂರ್ಣಾವಧಿ ಸ್ಪಿನ್ನರ್ ಒಬ್ಬರೇ ಇದ್ದಾರೆ
- ಫೀಲ್ಡಿಂಗ್‌ನಲ್ಲಿ ಇದುವರೆಗೆ 12 ಕ್ಯಾಚ್‌ಗಳನ್ನು ಕೈಚೆಲ್ಲಿದ್ದಾರೆ

ಪಂದ್ಯ ಆರಂಭ: ಮಧ್ಯಾಹ್ನ 2 ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್ ಪುಟ: 11

ಯಾರೀ ವಿವೇಕಾನಂದ: ವಿಪಕ್ಷ ಅಸ್ತ್ರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಗ, ಮಾಜಿ ಶಾಸಕ ಡಾ. ಯತೀಂದ್ರ ಮಾತನಾಡುತ್ತಿರುವ ವಿಡಿಯೊದಲ್ಲಿ ಉಲ್ಲೇಖಿಸಿರುವ 'ವಿವೇಕಾನಂದ' ಹೆಸರಿನ ಸುತ್ತ ವಾಕ್ಸಮರ ತಾರಕಕ್ಕೇರಿದೆ. ಶುಕ್ರವಾರ (ನ. 17) ರಾತ್ರಿ ಹೊರಬಿದ್ದ ಪೊಲೀಸ್ ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ ಪಟ್ಟಿಯಲ್ಲಿ 'ವಿವೇಕಾನಂದ' ಎಂಬ ಹೆಸರಿರುವುದನ್ನು ಪ್ರಸ್ತಾಪಿಸಿರುವ ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದರೆ, 'ಈ ವಿವೇಕಾನಂದನೇ ಬೇರೆ, ಆ ವಿವೇಕಾನಂದನೇ ಬೇರೆ' ಎಂದು ಸಿದ್ದರಾಮಯ್ಯ ಸ್ಪಷ್ಟನೆ ನೀಡಿದ್ದಾರೆ

ಸಾಕ್ಷ್ಯ ಸಿಕ್ಕಿದೆ, ಪಲಾಯನ ಅಸಾಧ್ಯ: ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಯತೀಂದ್ರ ಜತೆಗಿನ ಸಂಭಾಷಣೆ ಸರ್ಕಾರಿ ಶಾಲೆಗಳ ಸಿಎಸ್‌ಆರ್ ನಿಧಿಗೆ ಸಂಬಂಧಿಸಿದ್ದು ಎಂದು ತೇಪೆ ಹಚ್ಚಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತೊಮ್ಮೆ ಸಾಕ್ಷ್ಯ ಸಮೇತ ಸಿಕ್ಕಿಬಿದ್ದಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ದೂರಿದ್ದಾರೆ. ಈ ಕುರಿತು 'ಎಕ್ಸ್‌'ನಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, 'ಸಿದ್ದರಾಮಯ್ಯ–ಯತೀಂದ್ರ ಅವರ ಸಂಭಾಷಣೆಯಲ್ಲಿ ಪ್ರಸ್ತಾಪಗೊಂಡಿದ್ದ ಹೆಸರು, ಶುಕ್ರವಾರ ರಾತ್ರಿ ಹೊರಬಿದ್ದ ಪೊಲೀಸ್ ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ ಪಟ್ಟಿಯ ನಾಲ್ಕನೇ ಹೆಸರಾಗಿರುವ ವಿವೇಕಾನಂದ. ಗುಪ್ತವಾರ್ತೆಯಿಂದ ಮೈಸೂರು ವಿ.ವಿ.ಪುರಂಗೆ ವರ್ಗಾವಣೆಯಾಗಿದ್ದಾರೆ' ಎಂದಿದ್ದಾರೆ.

6ನೇ ಪುಟ ನೋಡಿ

'ಹಲೋ ಅಪ್ಪಾ...' ಅಭಿಯಾನ

ಸಿದ್ದರಾಮಯ್ಯ ಮತ್ತು ಯತೀಂದ್ರ ಅವರ ಮೊಬೈಲ್ ಸಂಭಾಷಣೆಯನ್ನು ಆಧರಿಸಿ ಬಿಜೆಪಿ ಕಾರ್ಯಕರ್ತರು ಸಾಮಾಜಿಕ ಮಾಧ್ಯಮಗಳಲ್ಲಿ 'ಹತ್ತು ನಿಮಿಷದಲ್ಲಿ ವರ್ಗಾವಣೆ ಬೇಕೆ? ಹಲೋ ಅಪ್ಪಾ ಆ್ಯಪ್ ಡೌನ್‌ಲೋಡ್ ಮಾಡಿ...' ಎಂಬ ಅಭಿಯಾನ ಆರಂಭಿಸಿದ್ದಾರೆ.

'ಹತ್ತು ನಿಮಿಷದಲ್ಲಿ ವರ್ಗಾವಣೆ ಬೇಕಾ? ಅದೂ ಒಂದು ಕಾಲ್‌ನಲ್ಲೇ, ಹಾಗಿದ್ರೆ ಈಗಲೇ ನಿಮ್ಮ ಮೊಬೈಲ್‌ನಲ್ಲಿ ಹಲೋ ಅಪ್ಪಾ ಆ್ಯಪ್ ಡೌನ್‌ಲೋಡ್ ಮಾಡಿ' ಎಂಬ ಒಕ್ಕಣೆಯೊಂದಿಗೆ ಯತೀಂದ್ರ ಭಾವಚಿತ್ರ ಬಳಸಿರುವ ಪೋಸ್ಟರ್ ಅನ್ನು 'ಎಕ್ಸ್‌'ನಲ್ಲಿ ಹಂಚಿಕೊಳ್ಳುತ್ತಿದ್ದಾರೆ.

ಯತೀಂದ್ರ ಉಲ್ಲೇಖಿಸಿದ ಅಧಿಕಾರಿ ಬಿಇಒ: ಸಿ.ಎಂ



ಮೈಸೂರು: 'ವಿಡಿಯೊದಲ್ಲಿ ಚರ್ಚೆ ಆಗಿರುವುದು ಮೈಸೂರು ಕ್ಷೇತ್ರ ಶಿಕ್ಷಣಾಧಿಕಾರಿ ವಿವೇಕಾನಂದರ ಹೆಸರೇ ಹೊರತು ಪೊಲೀಸ್ ಅಧಿಕಾರಿಯದ್ದಲ್ಲ. ಪೊಲೀಸ್ ವರ್ಗಾವಣೆ ಬಗ್ಗೆ ಚಾಮರಾಜ ಕ್ಷೇತ್ರದ ಶಾಸಕರನ್ನೇ ಕೇಳಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ವರ್ಗಾವಣೆ ಕುರಿತ ಆರೋಪಗಳಿಗೆ ವಿಧಾನಸಭೆ ಸದನದಲ್ಲಿ ತಕ್ಕ ಉತ್ತರ ನೀಡುತ್ತೇವೆ. ಕುಮಾರಸ್ವಾಮಿ ಈ ಹಿಂದೆ ಪೆನ್ ಡ್ರೈವ್ ತೋರಿಸುತ್ತೇನೆ ಎಂದಿದ್ದರು'.

6ನೇ ಪುಟ ನೋಡಿ

₹5 ಲಕ್ಷ ಲಂಚ ಎಇಇ ಬಂಧನ



ಶಿವಪ್ಪ

ವಿಜಯಪುರ: ಕಾಮಗಾರಿ ಬಿಲ್ ಪಾವತಿ ಸಂಬಂಧ ಗುತ್ತಿಗೆದಾರನಿಂದ ₹5 ಲಕ್ಷ ಲಂಚ ಪಡೆದ ಆರೋಪದ ಮೇಲೆ ಆಲಮಟ್ಟಿ ಕೃಷ್ಣಾ ಮೇಲ್ದಂಡೆ ಯೋಜನೆಯ (ಯುಕೆಪಿ) ಪುನರ್ವಸತಿ, ಪುನರ್ ನಿರ್ಮಾಣ ವಿಭಾಗದ ಪ್ರಭಾರ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಶಿವಪ್ಪ ಎಸ್. ಮಂಜಿನಾಳ ಮತ್ತು ಅವರ ಕಾರು ಚಾಲಕ ಬಸನಗೌಡ ಗೌಡರ ಎಂಬವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಯುಕೆಪಿ ಕಾಮಗಾರಿಗೆ ಸಂಬಂಧಿಸಿದಂತೆ ಒಟ್ಟು ₹5.38 ಕೋಟಿ ಬಿಲ್‌ನಲ್ಲಿ ಕೊನೆಯ ಕಂತು ₹32 ಲಕ್ಷದ ಬಿಲ್ ಪಾಸ್ ಮಾಡಲು ಮಂಜಿನಾಳ ₹16 ಲಕ್ಷ ಲಂಚ ಕೇಳಿದ್ದರು. ಕೊನೆಗೆ ₹5 ಲಕ್ಷಕ್ಕೆ ಒಪ್ಪಿದ್ದರು. ಗುತ್ತಿಗೆದಾರ ತಾಳಿಕೋಟೆಯ ಅಭಿಷೇಕ ಡೋಣೂರ ನೀಡಿದ ₹5 ಲಕ್ಷ ಪಡೆದು, ಆಲಮಟ್ಟಿಯಲ್ಲಿರುವ ತಮ್ಮ ಕೊಠಡಿಗೆ ಹೋದಾಗ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ







ಈ ಅಂತರರಾಷ್ಟ್ರೀಯ ಶಾಲೆಯು ಕಲಿಕೆಯನ್ನು ಮರುವ್ಯಾಖ್ಯಾನಿಸಲು ಮತ್ತು ವಿದ್ಯಾರ್ಥಿಗಳನ್ನು ಸಬಲಗೊಳಿಸಲು, ಕೈಗಾರಿಕೆಗಳಾದ್ಯಂತ ಹೆಸರಾಂತ ವ್ಯಕ್ತಿಗಳೊಂದಿಗೆ ವಿಶೇಷ ಮಾಸ್ಟರ್‌ಕ್ಲಾಸ್‌ಗಳನ್ನು ನಡೆಸುತ್ತಿದೆ



ಆರ್ಕಿಡ್ಸ್ ದಿ ಇಂಟರ್ನ್ಯಾಷನಲ್ ಸ್ಕೂಲ್, ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಯನ್ನು ಪೋಷಿಸಲು ಸಮರ್ಪಿತವಾಗಿರುವ ಶಾಲೆಯಾಗಿದೆ, ಇದು ತನ್ನ ವಿದ್ಯಾರ್ಥಿಗಳಿಗೆ ವಿಶೇಷ ಸರಣಿಯ ಮಾಸ್ಟರ್ ಕ್ಲಾಸ್ ಗಳ ಮೂಲಕ ಕಲಿಕೆಯನ್ನು ಮರುವ್ಯಾಖ್ಯಾನಿಸುವ ಧ್ಯೇಯದಲ್ಲಿದೆ. ಪ್ರಸ್ತುತವಾಗಿ ನಡೆಯುತ್ತಿರುವ 'ಪವರ್ ಅಪ್ ವಿತ್ ಲೆಜೆಂಡ್ಸ್' ಸರಣಿಯ ಭಾಗವಾಗಿ, ಈ ಮಾಸ್ಟರ್ ಕ್ಲಾಸ್ ಗಳನ್ನು ಆರ್ಕಿಡ್ಸ್ ಕ್ಯಾಂಪಸ್ ಗಳಲ್ಲಿ, ಕ್ರೀಡೆಯಲ್ಲಿ ಪ್ರಸಿದ್ಧರಾದ ಮತ್ತು ಉದ್ಯಮ ತಜ್ಞರಾದ **ಬೈಚುಂಗ್ ಭುಟಿಯಾ, ಮೇರಿ ಕೋಮ್, ಶಿಖರ್ ಧವನ್ ಅವರ ಡಾ ಒನ್ ಸ್ಪೋರ್ಟ್ಸ್ ಅಕಾಡೆಮಿ, ಗೀತಾ ಫೋಗಟ್, ಶಿವ್ ಅರೂರ್ ಮತ್ತು ತನು ಶ್ರೀ ಸಿಂಗ್**

ಆರ್ಕಿಡ್ಸ್, ಆ ಮೂಲಕ ಜೀವನಪರ್ಯಂತ ಕಲಿಕೆಯ ಕೌಶಲ್ಯಗಳನ್ನು ಬೆಳೆಸುತ್ತಿದೆ. ಸೋನೆಪತ್ ಮತ್ತು ರೋಹ್ಟಕ್ ನಲ್ಲಿ ಡಾ ಒನ್ ಸ್ಪೋರ್ಟ್ಸ್ ಅಕಾಡೆಮಿಯನ್ನು ಮುನ್ನಡೆಸುವ ಖ್ಯಾತ ಕ್ರಿಕೆಟಿಗ ಶಿಖರ್ ಧವನ್, ನಂತರದ ಸ್ಥಾನದಲ್ಲಿರುವ ಕೋಲ್ಕತ್ತಾದಲ್ಲಿನ ಭಾರತದ ಏಸ್ ಫುಟ್ಬಾಲ್ ಆಟಗಾರ ಬೈಚುಂಗ್ ಭುಟಿಯಾ, ರೋಹ್ಟಕ್ ನಲ್ಲಿ ಭಾರತದ ಮೊದಲ ಚಿನ್ನದ ಪದಕ ಪಡೆದ ಕುಸ್ತಿಪಟು ಗೀತಾ ಫೋಗಟ್, ಗುರುಗ್ರಾಮದ ಪ್ರಸಿದ್ಧ ಲೇಖಕರಾದ ಶಿವ್ ಅರೂರ್ ಮತ್ತು ತನು ಶ್ರೀ ಸಿಂಗ್ ಅವರಂತಹ ಪ್ರಸಿದ್ಧ ಕ್ರೀಡಾಪಟುಗಳೊಂದಿಗೆ ಈ ಮಾಸ್ಟರ್ ಕ್ಲಾಸ್ ಗಳು ಪ್ರಾರಂಭವಾದವು.

ಮಾಸ್ಟರ್ ಕ್ಲಾಸ್ ಗೆ ಮುಂಚಿತವಾಗಿ ಸೋನಿಪತ್, ರೋಹ್ಟಕ್ ಮತ್ತು ಕೋಲ್ಕತ್ತಾದಲ್ಲಿ ನಡೆದ ಮೂರು ದಿನಗಳ ತರಬೇತಿ ಶಿಬಿರಗಳು ಆರ್ಕಿಡ್ಸ್‌ನ ಯುವ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಶಿಸ್ತು, ಕೂಡುಗೆಲಸ, ದೃಢನಿಶ್ಚಯ ಮತ್ತು ಅಥ್ಲೆಟಿಕ್ಸ್ ಸಂಸ್ಕೃತಿಯನ್ನು ಬೆಳೆಸಿತು. ಶಿಬಿರದಲ್ಲಿ, ವಿದ್ಯಾರ್ಥಿಗಳು ರಚನಾತ್ಮಕ ತರಬೇತಿ ವಿಧಾನಗಳ ಮೂಲಕ ತಮ್ಮ ಕೌಶಲ್ಯಗಳನ್ನುಅಭಿವೃದ್ಧಿಪಡಿಸವಿನ್ಯಾಸಗೊಳಿಸಲಾದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು, ಅರಿವನ್ನು ಪಡೆದರು ಮತ್ತು ಆಟಕ್ಕೆ ಅಗತ್ಯವಿರುವ ಕಠಿಣ ಮತ್ತು ಮೃದು ಕೌಶಲ್ಯಗಳನ್ನು ಕರಗತ ಮಾಡಿಕೊಂಡರು. ಅನುಭವ ಮತ್ತು ಪರಿಣತಿಯ ಸಂಪತ್ತನ್ನು ಹೊಂದಿರುವ ಆರ್ಕಿಡ್ಸ್ ಕ್ಯಾಂಪಸ್ ನಲ್ಲಿ ಈ ಕ್ರೀಡಾ ಮಹಾನೀಯರ ಉಪಸ್ಥಿತಿಯು ಮಾಸ್ಟರ್ ಕ್ಲಾಸ್ ಮೂಲಕ ಯುವ ಆಕಾಂಕ್ಷಿಗಳಿಗೆ ಅಮೂಲ್ಯವಾದ ಅರಿವನ್ನು ನೀಡಿತು, ಇದು ವಿದ್ಯಾರ್ಥಿಗಳ ಕ್ರೀಡಾ ಪ್ರಯಾಣದಲ್ಲಿ ಗಮನಾರ್ಹ ಛಾಪನ್ನು ಮೂಡಿಸಿದೆ.

ಆರ್ಕಿಡ್ಸ್, ಯಾವಾಗಲೂ ಸಮಗ್ರ ಶಿಕ್ಷಣದ ಬಲವಾದ ಬೆಂಬಲಿಗರಾಗಿದ್ದು, ವಿದ್ಯಾರ್ಥಿಗಳಿಗೆ ಸಮೃದ್ಧ ಅನುಭವಗಳನ್ನು ಒದಗಿಸಲು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ. ಈ ಮಾಸ್ಟರ್ ಕ್ಲಾಸ್ ಗಳು ಮತ್ತು ತರಬೇತಿ ಶಿಬಿರಗಳ ಮೂಲಕ, ಆರ್ಕಿಡ್ಸ್ ಹೊಸ ತಲೆಮಾರಿನ ನುರಿತ ಆಟಗಾರರನ್ನು ಬೆಳೆಸುವ ಗುರಿಯನ್ನು ಹೊಂದಿದೆ, ಅವರು ಮೈದಾನದಲ್ಲಿ ಉತ್ತಮ ಸಾಧನೆ ಮಾಡುವುದಲ್ಲದೆ, ತಮ್ಮ ಜೀವನದ ಅನೇಕ ಸಂದರ್ಭಗಳಲ್ಲಿ ಕ್ರೀಡಾ ಮನೋಭಾವವನ್ನು ಮತ್ತು ಕೂಡುಗೆಲಸವನ್ನು ಮಾಡುವ ಚೇತನವನ್ನು ಹೊಂದಿರುತ್ತಾರೆ. ಗುಣಲಕ್ಷಣಗಳೊಂದಿಗೆ



ವಿದ್ಯಾರ್ಥಿಗಳನ್ನು ಸಬಲೀಕರಣಗೊಳಿಸಲು ಚಿಂತನಶೀಲವಾಗಿ ವಿನ್ಯಾಸಗೊಳಿಸಲಾಗಿದೆ. ಸಮಗ್ರ ಶಿಕ್ಷಣಕ್ಕೆ ಆರ್ಕಿಡ್ಸ್‌ನ ಅಚಲ ಬದ್ಧತೆಯು ಈ ಮಾಸ್ಟರ್ ಕ್ಲಾಸ್ ಗಳು ಮತ್ತು ಕ್ರೀಡಾ ತರಬೇತಿ ಶಿಬಿರಗಳಲ್ಲಿ ಸ್ಪಷ್ಟವಾಗಿ ಪ್ರತಿಬಿಂಬಿತವಾಗಿದೆ, ಅಲ್ಲಿ ಅವರು ಶೈಕ್ಷಣಿಕ ಉತ್ಕೃಷ್ಟತೆಯ ಜೊತೆಗೆ ದೈಹಿಕ ಸಾಮರ್ಥ್ಯಕ್ಕೆ ಬಲವಾದ ಒತ್ತು ನೀಡುತ್ತಾರೆ.



ಆರ್ಕಿಡ್ಸ್ ಇಂಟರ್ನ್ಯಾಷನಲ್ ಸ್ಕೂಲ್ ಸ್ಮಾರ್ಟ್ ತರಗತಿಗಳು, ಮರುರೂಪಿಸಿದ ಶೈಕ್ಷಣಿಕ ತತ್ವಶಾಸ್ತ್ರ ಉನ್ನತ ದರ್ಜೆಯ ಮೂಲಸೌಕರ್ಯ ಮತ್ತು ತಂತ್ರಜ್ಞಾನ–ಸಂಯೋಜಿತ ಪಠ್ಯಕ್ರಮದೊಂದಿಗೆ ಮುಂಬರುವ ಪೀಳಿಗೆಗೆ ಶಿಕ್ಷಣವನ್ನು ಮರುವ್ಯಾಖ್ಯಾನಿಸುವ ಧ್ಯೇಯದಲ್ಲಿದೆ. ರೊಬೊಟಿಕ್ಸ್, ಕೋಡಿಂಗ್‌ನಂತಹ ಹೊಸ ಯುಗದ ತಂತ್ರಜ್ಞಾನಗಳು ಮನುಕುಲಕ್ಕೆ ಏನನ್ನು ನೀಡಬಹುದು ಎಂಬ ಹೊಸ ಯುಗದ ತಂತ್ರಜ್ಞಾನಗಳು ಮನುಕುಲಕ್ಕೆ ಏನನ್ನು ನೀಡಬಹುದು ಎಂಬ ಸಾಧ್ಯತೆಗಳ ಬಗ್ಗೆ ವಿದ್ಯಾರ್ಥಿಗಳನ್ನು ಬಹಿರಂಗಪಡಿಸಲು ಶಾಲೆಯು ಗಮನಹರಿಸಿದೆ. ಸಾಧ್ಯತೆಗಳ ಬಗ್ಗೆ ವಿದ್ಯಾರ್ಥಿಗಳನ್ನು ಬಹಿರಂಗಪಡಿಸಲು ಶಾಲೆಯು ಗಮನಹರಿಸಿದೆ.

ADVERTORIAL

ಬಿಬಿಎಂಪಿ: 'ಪುನೀತ್ ರಾಜಕುಮಾರ್ ಪ್ರಶಸ್ತಿ' ಪ್ರದಾನ ಕಾರ್ಯಕ್ರಮ

'ಮಣ್ಣಿಗೆ ಗೌರವ ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾವು ಮಣ್ಣಾಗಿ ಹೋಗುವ ಈ ನಾಡಿನ ಮಣ್ಣಿಗೆ ಗೌರವ ಕೊಡಬೇಕು' ಎಂದು ನಟ ರಮೇಶ್ ಅರವಿಂದ್ ಹೇಳಿದರು.

ಬಿಬಿಎಂಪಿ ನೌಕರರ ಕನ್ನಡ ಸಂಘದ ವತಿಯಿಂದ ಶನಿವಾರ ನಡೆದ ಕರ್ನಾಟಕ ರಾಜ್ಯೋತ್ಸವ ಹಾಗೂ ಪುನೀತ್ ರಾಜಕುಮಾರ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಾಧನೆ ಮಾಡುವುದು ಬಹಳ ಕಷ್ಟ, ವಿವೇಕ, ವಿನಯತೆ ಬೆಳಸಿಕೊಂಡಾಗ ಇತಿಹಾಸ ಸೃಷ್ಟಿಸಲು ಸಾಧ್ಯ. ಜಗತ್ತಿನ ಎಲ್ಲ ಕಡೆಗಳಲ್ಲಿ ಗೌರವ ಸಿಗುವಂಥ ಸಾಧನೆಯನ್ನು ಕನ್ನಡಿಗರು ಮಾಡಿರುವುದು ನಮ್ಮ ಹೆಮ್ಮೆ' ಎಂದು ತಿಳಿಸಿದರು.

'ಬೆಂಗಳೂರಿನಲ್ಲಿ ನಿತ್ಯ ನಾವು ಸಂಚರಿಸುವ ರಸ್ತೆ, ನಡೆದಾಡುವ ಉದ್ಯಾನ, ನಡೆಸುವ ಜೀವನ ಉತ್ತಮವಾಗಿರಲು ಬಿಬಿಎಂಪಿಯ ಸಹಕಾರ ಕಾರಣ' ಎಂದು ಶ್ಲಾಘಿಸಿದರು.

ಬಿಬಿಎಂಪಿ ಆಡಳಿತಗಾರ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಹಿನ್ನೆಲೆ ಗಾಯಕಿ ಅನುರಾಧ ಭಟ್ ಅವರಿಂದ ಸಂಗೀತ ಸಂಜೆ, ಎಂ.ಎಸ್. ಮ್ಯೂಸಿಕಲ್ಸ್ ಇವೆಂಟ್ಸ್ ಮತ್ತು ಶಿವಂ ನೃತ್ಯ ಶಾಲೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.



ಬಿಬಿಎಂಪಿ ನೌಕರರ ಕನ್ನಡ ಸಂಘದ ವತಿಯಿಂದ ಶನಿವಾರ ನಡೆದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಪುನೀತ್ ರಾಜಕುಮಾರ್ ಪ್ರಶಸ್ತಿ ಪ್ರದಾನ ಮಾಡಲಾಯಿತು

ನೇಪಾಳದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವದ ಲಾಂಛನ ಬಿಡುಗಡೆ ಮಾಡಲಾಯಿತು.

ನಟಿ ಭವ್ಯಾ, ಮಾಜಿ ಮೇಯರ್ ಜೆ. ಹುಚ್ಚಪ್ಪ, ವಿಶೇಷ ಆಯುಕ್ತರಾದ ಕೆ.ವಿ. ತ್ರಿಲೋಕ್ ಚಂದ್ರ, ಮೌನೀಶ್ ಮೌದ್ಗಿಲ್, ಹರೀಶ್ ಕೆ., ಪ್ರಧಾನ ಎಂಜಿನಿಯರ್ ಪ್ರಹ್ಲಾದ್, ಉಪ ಆಯುಕ್ತ ಮಂಜುನಾಥ್ ಸ್ವಾಮಿ, ಜಂಟಿ ಆಯುಕ್ತರಾದ ಪಲ್ಲವಿ ಕೆ.ಆರ್., ಪಾಲಿಕೆ ಕನ್ನಡ ಸಂಘದ ಅಧ್ಯಕ್ಷ ಸಾಯಿಶಂಕರ್, ಪ್ರಧಾನ ಕಾರ್ಯದರ್ಶಿ ಎ.ಅಮೃತ್ ರಾಜ್, ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ರಮೇಶ್ ಸಂಗಾ ಇದ್ದರು.


ಪಾದಚಾರಿ ಮಾರ್ಗ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಪೂರ್ವ, ದಕ್ಷಿಣ ಹಾಗೂ ಪಶ್ಚಿಮ ವಲಯ ವ್ಯಾಪ್ತಿಯ ಪಾದಚಾರಿ ಮಾರ್ಗದಲ್ಲಿನ ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರಿದಿದೆ.

ಪೂರ್ವ ವಲಯದ ಇಂದಿರಾನಗರ 100 ಅಡಿ ರಸ್ತೆ ಮತ್ತು ಸಿಎಂಎಚ್ ರಸ್ತೆಯಲ್ಲಿ ಯೋಜನಾ ವಿಭಾಗದಿಂದ ಕೈಗೊಂಡಿರುವ ವೈಟ್ ಟಾಪಿಂಗ್ ರಸ್ತೆಯ ಪಾದಚಾರಿ ಮಾರ್ಗಗಳಲ್ಲಿ ಒತ್ತುವರಿ ತೆರವುಗೊಳಿಸಲಾಯಿತು. ಕೆಲವೆಡೆ ಹೋಟೆಲ್, ಕಾರ್ ಶೋರೂಮ್ ಮುಂಭಾಗ ಪಾದಚಾರಿ ಮಾರ್ಗಕ್ಕೆ ಹೊಂದಿಕೊಂಡಂತೆ ನಿರ್ಮಿಸಲಾದ ಕಾಂಕ್ರೀಟ್ ರ‍್ಯಾಂಪ್ ತೆರವುಗೊಳಿಸಲಾಗಿದೆ. ಆಸ್ಪತ್ರೆಯ ಮುಂಭಾಗ ಸ್ಟೀಲ್ ರ‍್ಯಾಂಪ್ ಅಳವಡಿಸಿದ್ದು, ಅದನ್ನು ಅವಶ್ಯಕತೆಯಿರುವಾಗ ಮಾತ್ರ ಅಳವಡಿಸಿಕೊಳ್ಳಲು ಸೂಚನೆ ನೀಡಲಾಗಿದೆ.

ಪುಲಕೇಶಿನಗರದ ಬೋರ್ ಬ್ಯಾಂಕ್ ರಸ್ತೆಯ ಪಾದಚಾರಿ ಮಾರ್ಗದಲ್ಲಿದ್ದ ಹಳೆಯ ವಾಹನಗಳನ್ನುತೆರವುಗೊಳಿಸಲು ಸೂಚನೆ ನೀಡಿಲಾಗಿದೆ. ರಸ್ತೆ ಬದಿಯ ಭಗ್ನಾವಶೇಷಗಳನ್ನು ತೆರವುಗೊಳಿಸಲಾಯಿತು ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.



ಅವೆನ್ಯೂ ರಸ್ತೆ ಮೈಸೂರು ಬ್ಯಾಂಕ್ ಬಳಿಯ ಪಾದಚಾರಿ ಮಾರ್ಗದಲ್ಲಿದ್ದ ಪುಸ್ತಕ ವ್ಯಾಪಾರಿಗಳನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು

ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಚಿಕ್ಕಪೇಟೆಯ ಸಿದ್ದಯ್ಯ ರಸ್ತೆ ಪಾದಚಾರಿ ಮಾರ್ಗದಲ್ಲಿದ್ದ ಅನುಪಯುಕ್ತ ವಸ್ತುಗಳನ್ನು ತೆರವುಗೊಳಿಸಿ ಪಾದಚಾರಿಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಮುಂದಿನ ದಿನಗಳಲ್ಲಿ ಪಾದಚಾರಿ ಮಾರ್ಗ ಒತ್ತುವರಿ ಮಾಡಿಕೊಂಡರೆ ದಂಡ ವಿಧಿಸಲಾಗುವುದು ಮಳಿಗೆ ಮಾಲೀಕರಿಗೆ ಎಂದು ಎಚ್ಚರಿಕೆ ನೀಡಲಾಗಿದೆ.

ಬಸವನಗುಡಿಯ ವಿದ್ಯಾಪೀಠ ವಾರ್ಡ್‌ನ ಸಿಟಿ ಬೆಡ್ ರಸ್ತೆಯಲ್ಲಿ ಪಾದಚಾರಿ ಮಾರ್ಗದಲ್ಲಿನ ತಳ್ಳುವ ಗಾಡಿ ಮಾರಾಟಗಾರರಿಗೆ ಬೇರಡೆ ತೆರಳಲು ಸೂಚಿಸಲಾಗಿದೆ. ಬುಟ್ಟಿಗಳು ಹಾಗೂ ಟೇಬಲ್‌ಗಳನ್ನು ಜಪ್ತಿ ಮಾಡಲಾಗಿದೆ.

ಪಶ್ಚಿಮ ವಲಯದ ಗಾಂಧಿನಗರದ ಅವೆನ್ಯೂ ರಸ್ತೆ ಮೈಸೂರು ಬ್ಯಾಂಕ್ ಬಳಿಯ ಕೃಷ್ಣ ಬಿಲ್ಡಿಂಗ್ ಮುಂಭಾಗ ಪಾದಚಾರಿ ಮಾರ್ಗವನ್ನು ಸಂಪೂರ್ಣವಾಗಿ ಒತ್ತುವರಿ ಮಾಡಿಕೊಂಡಿರುವ ಪುಸ್ತಕಗಳು ಸೇರಿದಂತೆ ಇನ್ನಿತರ ವ್ಯಾಪಾರಿಗಳನ್ನು ತೆರವು ಮಾಡಲಾಗಿದೆ.

ಮುಂದೆ ಯಾವುದೇ ಕಾರಣಕ್ಕೂ ಪಾದಚಾರಿ ಮಾರ್ಗ ಒತ್ತುವರಿ ಮಾಡಿಕೊಳ್ಳದಂತೆ ಸೂಚನೆ ನೀಡಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ದತ್ತಿ ಪ್ರಶಸ್ತಿ: ಕಾದಂಬರಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಶ್ರೀ ಪ್ರತಿಷ್ಠಾನದಲ್ಲಿ ಎಸ್.ವಿ. ಶ್ರೀನಿವಾಸರಾವ್ ಅವರು ಸ್ಥಾಪಿಸಿರುವ ಸಾರಂಗಿ ವೆಂಕಟರಾಮಯ್ಯ–ಪುಟ್ಟಚ್ಚಮ್ಮ ದತ್ತಿನಿಧಿ 2022ನೇ ಸಾಲಿನ ಪ್ರಶಸ್ತಿಗೆ ಕಾದಂಬರಿಗಳನ್ನು ಆಹ್ವಾನಿಸಲಾಗಿದೆ.

2022ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ಕಾದಂಬರಿ ಸಲ್ಲಿಸಬಹುದಾಗಿದೆ. ಕಾದಂಬರಿಯ 3 ಪ್ರತಿಗಳನ್ನು ಪ್ರತಿಷ್ಠಾನದ ಕಚೇರಿಗೆ ಡಿ.11ರ ಸಂಜೆ 5ರ ಒಳಗೆ ತಲುಪಿಸಬಹುದು ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

ಪ್ರಶಸ್ತಿಯು ₹3 ಸಾವಿರ ನಗದು, ಅಭಿನಂದನಾ ಪತ್ರ ಒಳಗೊಂಡಿರುತ್ತದೆ. ಈ ಸ್ಪರ್ಧೆಯು ಉದಯೋನ್ಮುಖ ಸಾಹಿತಿಗಳಿಗೆ ಮಾತ್ರ ಸೀಮಿತವಾಗಿದ್ದು, ಗರಿಷ್ಠ 2 ಕೃತಿಗಳನ್ನು ಮಾತ್ರ ಪ್ರಕಟಿಸಿರಬೇಕು. ಪ್ರಥಮ ಕೃತಿಗೆ ಆದ್ಯತೆ ನೀಡಲಾಗುವುದು ಎಂದಿದ್ದಾರೆ.

'ರೆಡ್ಡಿಜನ ಸಂಘಕ್ಕೆ ಒಮ್ಮೆಯೂ ಚುನಾವಣೆ ನಡೆದಿಲ್ಲ'

ಬೆಂಗಳೂರು: 'ರೆಡ್ಡಿಜನ ಸಂಘ ಇನ್ನೆರಡು ವರ್ಷಗಳಲ್ಲಿ ಶತಮಾನೋತ್ಸವ ಆಚರಿಸಿಕೊಳ್ಳಲಿದೆ. ಸಂಘಕ್ಕೆ ಈ ವರೆಗೆ ಚುನಾವಣೆಯಿಲ್ಲದೇ ನಿರ್ದೇಶಕರನ್ನು ಆಯ್ಕೆ ಮಾಡುತ್ತಾ ಬಂದಿರುವುದು ಸಾಧನೆ. ಇದು ರೆಡ್ಡಿ ಜನಾಂಗದ ಒಗ್ಗಟ್ಟಿನ ಪ್ರತೀಕ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ. ಸಂಘದಿಂದ ಜೆ.ಸಿ.ರಸ್ತೆ ಯಲ್ಲಿ ನಿರ್ಮಿಸಲಾದ 'ನಾಗಪ್ಪ ಸ್ಮಾರಕ ಭವನ' ಉದ್ಘಾಟಿಸಿ ಅವರು ಮಾತನಾಡಿದರು.

ನಿಧನ



ಶ್ರೀಮತಿ ಎಂ. ಭಾಗ್ಯಮ್ಮನವರು

(ಲೇಟ್ ಶ್ರೀ ಪಿ.ವಿ.ಕೃಷ್ಣಪ್ಪನವರು, ಮಾಜಿ ತಾಲ್ಲೂಕು ಬೋರ್ಡ್ ಅಧ್ಯಕ್ಷರು, ಇವರ ಧರ್ಮಪತ್ನಿ)
ಅಮೃತಹಳ್ಳಿ, ಬೆಂಗಳೂರು–560092
ಜನನ: 22–4–1937 ನಿಧನ: 18–11–2023

ಇವರು ದಿನಾಂಕ: 18.11.2023ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 19.11.2023ರಂದು ಭಾನುವಾರ ಮಧ್ಯಾಹ್ನ 1.30 ಗಂಟೆಗೆ ಅಮೃತಹಳ್ಳಿಯಲ್ಲಿರುವ ತಮ್ಮ ಸ್ವಂತ ಜಾಗದಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು ಪಿ.ವಿ.ಮಂಜುನಾಥ ಬಾಬು (ಮಾಜಿ ಬಿಬಿಎಂಪಿ ಸದಸ್ಯರು), ಪತ್ನಿ, ಮಕ್ಕಳು ಮತ್ತು ಪಟೇಲ್ ವೀರಪ್ಪನವರ ಕುಟುಂಬ ವರ್ಗದವರು.

CAUVERY

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 39, 2ನೇ ಮಹಡಿ, ಯುನೈಟೆಡ್ ಮ್ಯಾನ್‌ಷನ್, ಎಂ.ಜಿ. ರಸ್ತೆ, ಬೆಂಗಳೂರು–01. ದೂ: 080–71204445/71204446
ಇ–ಮೇಲ್: md@cauveryhandicrafts.net
ವೆಬ್‌ಸೈಟ್: www.cauverycrafts.com

ಸಂಖ್ಯೆ: ಕೆಎಸ್‌ಹೆಚ್‌ಡಿಸಿ/ಎಂಕೆಟಿಜಿ/2023–24/ಕರೆ–2 ದಿನಾಂಕ: 18.11.2023

ಎಸ್‌ಒಎ ಆಧಾರದ ಮೇಲೆ ಶ್ರೀಗಂಧದ ಎಣ್ಣೆ ಸರಬರಾಜಿಗಾಗಿ ಆಸಕ್ತಿ ವ್ಯಕ್ತಪಡಿಸುವಿಕೆ (ಇಒಐ)

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಹೆಚ್‌ಡಿಸಿಎಲ್), ಕರ್ನಾಟಕ ಸರ್ಕಾರದ ಒಂದು ಉದ್ಯಮ, ಇವರು ಅನುಮೋದನೆ ಆಧಾರದ ಮೇಲೆ (ಎಸ್‌ಒಎ) ಮಾರಾಟಕ್ಕಾಗಿ ಶೀಶೆಯಲ್ಲಿ ತುಂಬಿಸಿದ ಪರಿಶುದ್ಧ ಶ್ರೀಗಂಧದ ಎಣ್ಣೆ ಸರಬರಾಜಿಗಾಗಿ ಕರ್ನಾಟಕ ಅರಣ್ಯ ಇಲಾಖೆಯಿಂದ ಸಿಂಧುವಾದ ಪರವಾನಗಿ ಹೊಂದಿರುವ ಆಸಕ್ತಿಯುಳ್ಳ ತಯಾರಕರುಗಳು/ ಡಿಸ್ಟಿಲರ್‌ಗಳು/ವೆಂಡರ್‌ಗಳಿಂದ ಮೊಹರಾದ ಲಕೋಟೆಯಲ್ಲಿ ಆಸಕ್ತಿ ವ್ಯಕ್ತಪಡಿಸುವಿಕೆ (ಇಒಐ)ಯನ್ನು ಆಹ್ವಾನಿಸಿರುವರು. ನಿಯಮಗಳು ಮತ್ತು ನಿಬಂಧನೆಗಳ ವಿವರಗಳ ಜೊತೆಗೆ ಶ್ರೀಗಂಧದ ಎಣ್ಣೆ ಸರಬರಾಜಿಗಾಗಿ ಅರ್ಜಿಯನ್ನು **ರೂ.200/–** ಪಾವತಿ ಮಾಡಿ ಕೆಎಸ್‌ಹೆಚ್‌ಡಿಸಿಎಲ್‌ನ ನೋಂದಾಯಿತ ಕಚೇರಿ, 2ನೇ ಮಹಡಿ, ಯುನೈಟೆಡ್ ಮ್ಯಾನ್‌ಷನ್, ಎಂ.ಜಿ. ರಸ್ತೆ, ಬೆಂಗಳೂರು–560001 ಇಲ್ಲಿಂದ **ಬೆಳಿಗ್ಗೆ 10.00 ರಿಂದ ಸಂಜೆ 5.00 ಗಂಟೆ ವರೆಗೆ** ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು. ಕ್ರಮವಾಗಿ ಭರ್ತಿಮಾಡಿದ ಅರ್ಜಿಯನ್ನು ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ **24.11.2023 ರಂದು ಸಂಜೆ 4.00 ಗಂಟೆಗೆ** ಅಥವಾ ಅದಕ್ಕಿಂತ ಮುಂಚಿತವಾಗಿ. ನಿಗದಿತ ದಿನಾಂಕ ಮತ್ತು ಸಮಯದ ನಂತರ ಬರುವ ಅರ್ಜಿಗಳನ್ನು ಅಂಗೀಕರಿಸುವುದಿಲ್ಲ. ನಿಗಮವು ಯಾವುದೇ ಕಾರಣ ನೀಡದೆ ಯಾವುದೇ / ಎಲ್ಲಾ ಅರ್ಜಿಗಳನ್ನು ಅಂಗೀಕರಿಸುವ / ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುವುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಮಾರ್ಕೆಟಿಂಗ್)

'ಬಿ.ಎಲ್‌.ಆರ್ ಹಬ್ಬ'ಕ್ಕೆ ಬಿಬಿಎಂಪಿ ಸಹಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನ್‌ಬಾಕ್ಸಿಂಗ್ ಬೆಂಗಳೂರು ಫೌಂಡೇಷನ್' ವತಿಯಿಂದ ಡಿಸೆಂಬರ್‌ನಲ್ಲಿ ನಡೆಯಲಿರುವ 'ಬಿಎಲ್‌ಆರ್ ಹಬ್ಬ'ಕ್ಕೆ ಆಯಾ ವಲಯ ವ್ಯಾಪ್ತಿಯಲ್ಲಿ ಎಲ್ಲ ರೀತಿಯ ಸಹಕಾರ ನೀಡಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

'ಬೆಂಗಳೂರು ಹಬ್ಬ' ಆಚರಣೆಗೆ ಪಾಲಿಕೆ ಸಹಕಾರ ನೀಡುವ ಸಂಬಂಧ ಪಾಲಿಕೆ ಕೇಂದ್ರ ಕಚೇರಿಯಲ್ಲಿ ಶನಿವಾರ ನಡೆದ ವರ್ಚುವಲ್ ಸಭೆಯಲ್ಲಿ ಮಾತನಾಡಿ, ಸರ್ಕಾರದ ಘನತೆ ಹಾಗೂ ಬೆಂಗಳೂರಿನ ಬ್ರ್ಯಾಂಡ್ ಅನ್ನು ಹೆಚ್ಚಿಸುವ ಸಲುವಾಗಿ ಹಬ್ಬ ಆಚರಿಸಲಾಗುತ್ತಿದೆ ಎಂದರು.

2024ರಿಂದ ಆಯಾ ಋತುವಿಗೆ ತಕ್ಕಂತೆ ಹಬ್ಬಗಳನ್ನು ಆಚರಿಸಲಾಗುತ್ತದೆ. ಬೆಂಗಳೂರು ಹಬ್ಬಕ್ಕೆ ಪ್ರಮುಖ ಸ್ಥಳ, ಜಂಕ್ಷನ್‌ಗಳು, ಮೇಲ್ಸೇತುವೆ, ಉದ್ಯಾನಗಳು, ಮಾರುಕಟ್ಟೆಗಳನ್ನು ಗುರುತಿಸಿ ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕು. ಪಾರಂಪರಿಕ ಕಟ್ಟಡಗಳು ಹಾಗೂ ಪ್ರಮುಖ ಸರ್ಕಾರಿ ಕಚೇರಿಗಳ ಮೇಲೆ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಮಾಡಲು ಸೂಚಿಸಿದರು.

'ಬೆಂಗಳೂರು ಹಬ್ಬ'ದ ನಿರ್ದೇಶಕ ರವಿಚಂದರ್ ಮಾತನಾಡಿ, 'ಅನ್ ಬಾಕ್ಸಿಂಗ್ ಬೆಂಗಳೂರು ಫೌಂಡೇಷನ್ ವತಿಯಿಂದ ಡಿ.1ರಿಂದ 11ರವರೆಗೆ 'ಅನ್ ಬಾಕ್ಸಿಂಗ್ ಬಿ.ಎಲ್.ಆರ್ ಹಬ್ಬ' ಆಚರಿಸಲಾಗುತ್ತಿದೆ. 12 ವರ್ಗಗಳಾಗಿ ವಿಂಗಡಿಸಿ, 45 ಮಾದರಿಗಳಲ್ಲಿ ಆಚರಣೆ ಮಾಡಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

ಓಪನ್ ಸ್ಟ್ರೀಟ್ ಮೇಳ: ನಗರದಲ್ಲಿ 6 ರಸ್ತೆಗಳಲ್ಲಿ ಡಿ. 9 ಹಾಗೂ 10ರಂದು 'ಓಪನ್ ಸ್ಟ್ರೀಟ್ ಮೇಳ' ಆಯೋಜಿಸಲಾಗಿದೆ. ಮಳಿಗೆಗಳು, ಸ್ಟ್ರೀಟ್ ಆರ್ಟಿಸ್ಟ್, ಅಲಂಕಾರ, ಬಂಟಿಂಗ್ ಮತ್ತು ಲೈಟಿಂಗ್ ಸೇರಿದಂತೆ ನಾಗರಿಕರನ್ನು ಸೆಳೆಯಲು ಆಕರ್ಷಕ ಚಟುವಟಿಕೆಗಳಿರುತ್ತವೆ.

ದಿ ಬಿಗ್ ಫೀಡ್ ಫೆಸ್ಟಿವಲ್: ಬೆಂಗಳೂರು ಅರಮನೆಯ ಮೈದಾನದಲ್ಲಿ ಡಿ. 9 ಹಾಗೂ 10 ರಂದು 'ಬಿಗ್ ಫೀಡ್ ಫೆಸ್ಟಿವಲ್' ಹಮ್ಮಿಕೊಳ್ಳಲಾಗಿದೆ. ಆಹಾರ ಮಳಿಗೆ, ಸಂಗೀತ ಕಾರ್ಯಕ್ರಮ, ವ್ಯಾಪಾರಿ ಮಳಿಗೆಗಳು ಹಾಗೂ ಇತರೆ ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ ಎಂದು ರವಿಚಂದರ್ ಮಾಹಿತಿ ನೀಡಿದರು.

ಬೆಂಗಳೂರು ಹಬ್ಬದ ವಿವರಣೆ ವೆಬ್‌ಸೈಟ್‌ನಲ್ಲಿ https://habba.unboxingblr.com/ ಲಭ್ಯವಿದೆ ಎಂದು ತಿಳಿಸಿದರು.



ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ 6ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ವಿತರಿಸಲಾಯಿತು. 39 ವಿದ್ಯಾರ್ಥಿಗಳಿಗೆ ಚಿನ್ನದ ಪದಕ, 85 ವಿದ್ವಾಂಸರಿಗೆ ಡಾಕ್ಟರೇಟ್ ಪದವಿ ಹಾಗೂ ವಿವಿಧ ವಿಭಾಗಗಳ 3,684 ವಿದ್ಯಾರ್ಥಿಗಳಿಗೆ ಪದವಿ ಮತ್ತು ಸ್ನಾತಕೋತ್ತರ ಪದವಿ ಪ್ರಮಾಣ ಪತ್ರ ವಿತರಿಸಲಾಯಿತು. ಆ್ಯಕ್ಸೆಂಚರ್ ಸೆಕ್ಯುರಿಟಿ ಸೈಬರ್ ಸ್ಟ್ರಾಟರ್ಜಿ ಲೀಡ್ ಗ್ರೋತ್ ಮಾರ್ಕೆಟ್‌ನ ವ್ಯವಸ್ಥಾಪಕ ನಿರ್ದೇಶಕ ರಜತ್ ದೇವ್ ಸಹದೇವ್, ಇಸ್ರೊ ಬಾಹ್ಯಾಕಾಶ ಮೂಲಸೌಕರ್ಯ ಕಾರ್ಯಕ್ರಮದ ನಿರ್ದೇಶಕ ಜಸ್ವಿಂದರ್ ಸಿಂಗ್ ಖೋರಾಲ್ ಮತ್ತು ವಿಶ್ವವಿದ್ಯಾಲಯದ ಅಧ್ಯಕ್ಷ, ಕುಲಪತಿ ನಿಸ್ಸಾರ್ ಅಹಮದ್ ಇದ್ದರು.


ನಗರದಲ್ಲಿ ಇಂದು

ಕೆನರಾ ಬ್ಯಾಂಕ್ ಮ್ಯಾರಾಥಾನ್: ಸ್ಥಳ: ಕಂಠೀರವ ಕ್ರೀಡಾಂಗಣ, ಬೆಳಿಗ್ಗೆ 5.30

ಕರ್ನಾಟಕ ರಾಜ್ಯೋತ್ಸವ: ಉದ್ಘಾಟನೆ: ಎಲ್.ಎ. ರವಿಸುಬ್ರಮಣ್ಯ, ಅಧ್ಯಕ್ಷತೆ: ಸ್ವಾಮಿಗೌಡ, ಅತಿಥಿ: ಎಲ್.ಎನ್. ಮುಕುಂದರಾಜ್, ಬಹುಮಾನ ವಿತರಣೆ: ಮಂಜುನಾಥ ಭಾರತಿ ಸ್ವಾಮೀಜಿ, ಸನ್ಮಾನಿತರು: ರೋಹಿಣಿ ಮೋಹನ್, ಸಂಜಿತ್ ಜೆ, ಆಯೋಜನೆ: ಸ್ನೇಹರಂಗ, ಸ್ಥಳ: ಹರಿಹರೇಶ್ವರ ದೇವಾಲಯ, ತಿಮ್ಮೇಶ್ ಪ್ರಭು ಉದ್ಯಾನ, ಹನುಮಂತನಗರ, ಬೆಳಿಗ್ಗೆ 7.30

'ಚಿಣ್ಣರ ಚಪ್ಪರ' ಮಕ್ಕಳ ಸಮ್ಮೇಳನ: ಅತಿಥಿಗಳು: ಪ್ರಣವ್ ಪಿ. ಭಾರಧ್ವಾಜ್, ಅಮೋಘ ಕೃಷ್ಣ, ಅಧ್ಯಕ್ಷತೆ: ಗೋಕುಲ ಸಹೃದಯ, ಆಯೋಜನೆ: ಅಕ್ಷರ ಚಪ್ಪರ, ಸ್ಥಳ: ಕಸ್ತೂರಬಾ ಸಭಾಂಗಣ, ಗಾಂಧಿಭವನ, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 9ರಿಂದ

'ಮೇಧಾನಮನಮ್' ಸಂಸ್ಕೃತೋತ್ಸವಃ: ಅತಿಥಿಗಳು: ಗುರುರಾಜ ಕರಜಗಿ, ಸುಚೇಂದ್ರ ಪ್ರಸಾದ್, ಎಂ.ಎಸ್. ನರಸಿಂಹಮೂರ್ತಿ, ಬಿ.ಆರ್. ಶೇಷಾದ್ರಿ ಅಯ್ಯಂಗಾರ್, ಕೆ.ಜೆ. ಕಾಮತ್, ಮಹೇಂದ್ರ ಮುನ್ನೋತ್, ರಾಮಚಂದ್ರ ಜಿ. ಭಟ್ಟ ಕೋಟೆಮನೆ, ಉಮಾಕಾಂತ ಭಟ್ಟ, ವಿ. ಶ್ರೀಶಾನಂದ, ಹರಿಪ್ರಕಾಶ್ ಕೋಣೆಮನೆ, ಕೆ.ಪಿ. ನಾಗೇಶ್, ಆಯೋಜನೆ: ಮೈತ್ರೀ ಸಂಸ್ಕೃತ–ಸಂಸ್ಕೃತಿ ಪ್ರತಿಷ್ಠಾನಮ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿ ಕಾವಲ್, ಮಲ್ಲೇಶ್ವರ, ಬೆಳಿಗ್ಗೆ 9.30ರಿಂದ



ಗುರುರಾಜ ಕರಜಗಿ

ವಿ.ಟಿ. ರಾಮಕೃಷ್ಣಯ್ಯ ಅವರ 'ಸಮಯ ಪ್ರಜ್ಞೆ' ಪುಸ್ತಕ ಕರ್ನಾಟಕ ರಾಜ್ಯೋತ್ಸವ: ಉದ್ಘಾಟನೆ: ಡಿ.ಎಸ್. ವೀರಯ್ಯ, ಬಿ.ಎಂ. ಪಟೇಲ್ ಪಾಂಡು, ಪುಸ್ತಕದ ಕುರಿತು: ಎಸ್. ರಾಮಲಿಂಗೇಶ್ವರ, ಅತಿಥಿಗಳು: ಗೋವಿಂದಹಳ್ಳಿ ಕೃಷ್ಣೇಗೌಡ, ಅಧ್ಯಕ್ಷತೆ: ಶರಶ್ಚಂದ್ರ ರಾನಡೆ, ಪ್ರಶಸ್ತಿ ಪುರಸ್ಕೃತರು: ಕುಬೇರಾಚಾರಿ ಬಿ.ಸಿ., ಆಯೋಜನೆ: ಕುವೆಂಪು ಸಿರಿಗನ್ನಡ ವೇದಿಕೆ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 9.45

ಕಮಲಾ ಹಂಪನಾ ದತ್ತಿ ಉಪನ್ಯಾಸ, ಪ್ರಶಸ್ತಿ ಪ್ರದಾನ: ಉದ್ಘಾಟನೆ: ಧರಣೀದೇವಿ ಮಾಲಗತ್ತಿ, ಉಪನ್ಯಾಸ: ಪದ್ಮಾ ಶೇಖರ್, ಪ್ರಶಸ್ತಿ ಪುರಸ್ಕೃತರು: ಮಾಹೆರ್ ಮನ್ಸೂರ್, ದು. ಸರಸ್ವತಿ, ಉಪಸ್ಥಿತಿ: ಕಮಲಾ ಹಂಪನಾ, ಅಧ್ಯಕ್ಷತೆ: ಎಚ್.ಎಲ್. ಪುಷ್ಪ, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10



ಕಮಲಾ ಹಂಪನಾ

'ಸಹಸ್ರಾರ್ಜುನ ಮಹಾರಾಜ'ರ ಜಯಂತಿ: ಸಹಸ್ರಾರ್ಜುನ ಮಹಾರಾಜ ಭಾವಚಿತ್ರದ ಮೆರವಣಿಗೆ: ಅಂಬಾ ಭವಾನಿ ಸೇವಾ ಕೇಂದ್ರ, ವಿದ್ಯಾರಣ್ಯ ಟೋಲ್‌ಗೇಟ್‌ನಿಂದ ಬಂಟ್ಸ್ ಸಂಘ, ವಿಜಯನಗರ, ಅಧ್ಯಕ್ಷತೆ: ಸ್ವಾಮಿಸಾ ಎಲ್. ಖೋಡೆ, ಉದ್ಘಾಟನೆ: ಎಂ. ಕೃಷ್ಣಪ್ಪ, ಪ್ರಿಯಾಕೃಷ್ಣ, ವಿ. ಸತ್ಯನಾರಾಯಣ, ಧ್ವಜಾರೋಹಣ: ಪಿ.ಸಿ. ಮೋಹನ್, ಶ್ರೀನಿವಾಸ್ ಶ್ರೀಹರಿ ಖೋಡೆ, ದಿನೇಶ್ ಆರ್. ಗುಂಡೂರಾವ್, ಅತಿಥಿಗಳು: ಎಚ್. ರವೀಂದ್ರ, ವಿ.ವಿ. ಸತ್ಯನಾರಾಯಣ, ಎಸ್. ಅನಂತ್, ಸತೀಶ್ ಈ. ವಾಗೆಲೆ, ಎಸ್.ಎನ್. ಶ್ರೀನಿವಾಸಮೂರ್ತಿ, ಬ್ರಿಜ್‌ಮೋಹನ್ ಎಸ್. ಖೋಡೆ, ಡಿ.ಎಚ್. ನಾರಾಯಣಸಾ, ಅಮಿತ್ ಅಮರ್‌ನಾಥ್, ಆಯೋಜನೆ: ರಾಜರಾಜೇಶ್ವರಿ ಸಹಸ್ರಾರ್ಜುನ ಮಹಾರಾಜ ಜಯಂತಿ ಸಮಿತಿ, ಸ್ಥಳ: ಬಂಟ್ಸ್ ಸಂಘ, ವಿಜಯನಗರ, ಬೆಳಿಗ್ಗೆ 9ರಿಂದ

'ಸುಖಾಂಕ್ಷ@10 ಮಕ್ಕಳ ಹಬ್ಬ': ಉದ್ಘಾಟನೆ: ಎಂ. ಗೋಪಾಲಯ್ಯ, ಸ್ಮರಣ ಸಂಚಿಕೆ ಬಿಡುಗಡೆ: ಅಹಿಂಸಾ ಚೇತನ್, ಅಧ್ಯಕ್ಷತೆ: ವನಿತಾ ವಾಸು, ಅತಿಥಿಗಳು: ಟಿ.ಎನ್. ರಾಧಾಕೃಷ್ಣ, ರಂಗಣ್ಣ, ರಂಗಮ್ಮ ಹೊದೇಕಲ್, ಆಯೋಜನೆ: ಸುಖಾಂಕ್ಷ ಚಾರಿಟಬಲ್ ಟ್ರಸ್ಟ್, ಸ್ಥಳ: ಪಾಂಚಜನ್ಯ ವಿದ್ಯಾಸಂಸ್ಥೆ, ಎ.ಡಿ. ಹಳ್ಳಿ ಬಸವೇಶ್ವರನಗರ, ಬೆಳಿಗ್ಗೆ 10ರಿಂದ

'ಸಹಿ ಸಂಗ್ರಹ ಚಳವಳಿ' ಉದ್ಘಾಟನಾ ಸಮಾರಂಭ: ಆಯೋಜನೆ: ಕರ್ನಾಟಕ ವರ್ಕರ್ಸ್ ಯೂನಿಯನ್, ಸ್ಥಳ: ಡಿ ಮಾರ್ಟ್ ಹಿಂಭಾಗ, ಶನಿಮಹಾತ್ಮ ದೇವಸ್ಥಾನದ ಬಳಿ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಬೆಳಿಗ್ಗೆ 10


ರಾಜಶೇಖರ ಜೋಗಿನ್ಮನೆ ಅವರ 'ಕೇಳು ಧನಂಜಯ' 'ಬಿಂಗಿ', ಇಗ್ಗಪ್ಪಣ್ಣನ ವಿಗ್ರಹಾನ್ವೇಷಣೆ' ಪುಸ್ತಕಗಳ ಬಿಡುಗಡೆ: ಅತಿಥಿಗಳು: ಮಲ್ಲೇಪುರಂ ಜಿ. ವೆಂಕಟೇಶ, ಅಬ್ದುಲ್ ರಶೀದ್, ರವೀಂದ್ರ ಭಟ್ಟ, ರಾಧಾಕೃಷ್ಣ ಕೌಂಡಿನ್ಯ, ಆಯೋಜನೆ: ಸಮನ್ವಿತ, ಸ್ಥಳ: ಸುಚಿತ್ರಾ ಸಭಾಂಗಣ, ಬನಶಂಕರಿ, ಬೆಳಿಗ್ಗೆ 10ರಿಂದ

ರಾಜೇಂದ್ರ ಬಿ. ಶೆಟ್ಟಿ ಅವರ ಮೂರು ಪುಸ್ತಕ ಬಿಡುಗಡೆ: ಅತಿಥಿಗಳು: ಡಿ. ಮಲ್ಲಾರೆಡ್ಡಿ, ನಾ. ದಾಮೋದರ ಶೆಟ್ಟಿ, ಎಚ್. ಡುಂಡಿರಾಜ್, ಎಂ. ಬೈರೇಗೌಡ, ಎನ್. ರಾಮನಾಥ್, ಎಸ್. ಸುಜಯ್, ಜಿ. ಪಿ. ರಾಮಣ್ಣ, ಆಯೋಜನೆ: ಪ್ರಗತಿ ಗ್ರಾಫಿಕ್ಸ್, ಶ್ರೀನಿವಾಸ ಪುಸ್ತಕ ಪ್ರಕಾಶನ, ಸ್ಥಳ: ಸಿ. ಅಶ್ವತ್ಥ ಕಲಾಭವನ, ಎನ್. ಆರ್. ಕಾಲೊನಿ, ಬೆಳಿಗ್ಗೆ 10

'ಕರ್ನಾಟಕ ಕಲಾ ಸಂಭ್ರಮ': ಅತಿಥಿಗಳು: ಅನಿರುದ್ಧ, ಆಯೋಜನೆ: ಆರ್ಟ್ ಮ್ಯಾಟರ್ಸ್, ಫ್ರೀ ಸ್ಪೇಸ್ ಫೋರಂ, ಸ್ಥಳ: ರಂಗೋಲಿ ಮೆಟ್ರೊ ಕಲಾಕೇಂದ್ರ, ಎಂ.ಜಿ. ರಸ್ತೆ, ಬೆಳಿಗ್ಗೆ 10ರಿಂದ

ಮಕ್ಕಳ ದಿನಾಚರಣೆ: ಅತಿಥಿ: ದಿನೇಶ್ ಗುಂಡೂರಾವ್, ಆಯೋಜನೆ ಮತ್ತು ಸ್ಥಳ: ಸೇಂಟ್ ತೆರೆಸಾ ಗರ್ಲ್ಸ್ ಹೈಸ್ಕೂಲ್, ಚಾಮರಾಜಪೇಟೆ, ಬೆಳಿಗ್ಗೆ 10

ಬಲಿಯೇಂದ್ರ ಪರ್ಬ, ಬಲಿಯೇಂದ್ರ ಪ್ರಶಸ್ತಿ ಪುರಸ್ಕಾರ ಪ್ರದಾನ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅತಿಥಿಗಳು: ಅಶೋಕ್ ಕುಮಾರ್ ರೈ, ಗುರುಕಿರಣ್, ವೇದ ಕುಮಾರ್, ಸುಂದರ ರಾಜ್ ರೈ, ಬಾ. ರಾಮಚಂದ್ರ ಉಪಾಧ್ಯ, ಗಣೇಶ್ ರಾವ್, ಬಲಿಯೇಂದ್ರ ಪುರಸ್ಕೃತರು: ರೀನಾ ಸುವರ್ಣ, ಜಯಪ್ರಕಾಶ್ ಶೆಟ್ಟಿ, ವಿಜಯಕುಮಾರ್ ಕುಲಶೇಖರ್, ಅಧ್ಯಕ್ಷತೆ: ಜಲಜ ಶೇಖರ್, 'ಗೆಜ್ಜೆಗಿರಿ ಕ್ಷೇತ್ರ ಮಹಾತ್ಮೆ' ಯಕ್ಷಗಾನ ಪ್ರದರ್ಶನ, ಆಯೋಜನೆ: ತುಳುವೆರೆಂಕುಲು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10



ಗುರುಕಿರಣ್

'ದಶಮಾನೋತ್ಸವದ ಹೊಸ್ತಿಲಲ್ಲಿ–ಒಂದೆಡೆ': ಉದ್ಘಾಟನೆ: ಅಬೇದಾ ಬೇಗಂ, ಶೈನಾಜ್ ಬೇಗಂ, 'ಭಾರತದ ಸಂವಿಧಾನ ಹಾಗೂ ಲಿಂಗತ್ವ ಮತ್ತು ಲೈಂಗಿಕತೆ ಅಲ್ಪಸಂಖ್ಯಾತರ ರಾಜಕೀಯ ಪ್ರಾತಿನಿಧ್ಯ' ವಿಚಾರಸಂಕಿರಣ: ಎಂ.ಎಸ್. ಆಶಾದೇವಿ, ಅತಿಥಿಗಳು: ಎಚ್.ಎನ್. ನಾಗಮೋಹನದಾಸ್, ಪುರುಷೋತ್ತಮ ಬಿಳಿಮಲೆ, ಆಯೋಜನೆ: ಒಂದೆಡೆ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10ರಿಂದ



ಎಚ್.ಎನ್. ನಾಗಮೋಹನದಾಸ್

'ಕಾವ್ಯ ಸಂಜೆ ದಶಮಾನೋತ್ಸವ ಸಂಭ್ರಮ, ಕಾವ್ಯ ಹಬ್ಬ–2023': ಉದ್ಘಾಟನೆ: ಬಾನು ಮುಷ್ತಾಕ್, ಅತಿಥಿಗಳು: ಕೆ. ಸಚ್ಚಿದಾನಂದನ್, ಉಪಸ್ಥಿತಿ: ಬಿ.ಎಲ್. ಶಂಕರ್, ನಾಗರಾಜಮೂರ್ತಿ ಜಾನ್ ಜೇವಿಯರ್, ದಾದಾಪೀರ್ ಜೈಮನ್, ಮೂಡ್ನಾಕೂಡು ಚಿನ್ನಸ್ವಾಮಿ, ಆಯೋಜನೆ: ಕಾವ್ಯ ಸಂಜೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10ರಿಂದ

'ಹಳದಿ ಕೆಂಪು ಹಾಡಿನ ಸಂಜೆ': ಗಾಯನ: ಆನಂದ ಮಾದಲಗೆರೆ, ಎಚ್. ಎರ್ರಿಸ್ವಾಮಿ, ಅನುರಾಗ್ ಗದ್ದಿ, ಮಲ್ಲೇಶ್ ಪ್ರಭು, ಮಂಜುಳಾ ಚಿಂಚಲಿ, ಬಿ.ಎನ್. ಗಣೇಶ್, ಸುರೇಶ್, ಸುಶೀಲ, ಪ್ರಣವ ಸ್ವರೂಪ ಪಾರೆ, ಶ್ರವಂತಿ, ಕೀ–ಬೋರ್ಡ್: ಮೈಸೂರ ಸತ್ಯ, ಪ್ರಶಾಂತ್ ಗುಂಡು, ತಬಲ: ಪದ್ಮನಾಭ್, ರಿದಂ ಪ್ಯಾಡ್: ರಾಜಕಮಲ್, ಆಯೋಜನೆ: ಮಂದಾರ ಗಾಯನ ಚೇತನ ಟ್ರಸ್ಟ್, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ ಆವರಣ, ಜೆ.ಸಿ. ರಸ್ತೆ, ಸಂಜೆ 4

'ಗಮಕ ಕಲಾರಾಧನೆ' ಉದ್ಘಾಟನೆ: ರೇವಣ್ಣ, ಅಧ್ಯಕ್ಷತೆ: ಕಮಲಮ್ಮ, ಉಪಸ್ಥಿತಿ: ಎಂ.ಆರ್. ಸತ್ಯನಾರಾಯಣ್, ಎಲ್. ಮಂಜುನಾಥಸ್ವಾಮಿ, ವೆಂಕಟೇಶ್ ನಾಯ್ಡು, ಕೆ.ಎನ್. ಸ್ವಾಮಿ, ಟಿ.ಎನ್. ನಂದಕಿಶೋರ್, ಆಯೋಜನೆ: ವಿದ್ಯಾಗಣಪತಿ ಗಮಕ ಶಿಕ್ಷಣಾಲಯ, ಸ್ಥಳ: ಕುಮಾರವ್ಯಾಸ ಮಂಟಪ, ಸ್ಪಂದನ ಆಸ್ಪತ್ರೆ ಎದುರು, ರಾಜಾಜಿನಗರ, ಸಂಜೆ 4.30

ಪೂರ್ಣಿಮಾ ಸುರೇಶ್ ಅವರ 'ರಂಗ ರಂಗೋಲಿ' ಪುಸ್ತಕ ಬಿಡುಗಡೆ: ಟಿ.ಎಸ್. ನಾಗಾಭರಣ, ಪುಸ್ತಕ ಪರಿಚಯ: ಪದ್ಮಿನಿ ನಾಗರಾಜು, ಅತಿಥಿ: ಎನ್. ಎಸ್. ಶ್ರೀಧರಮೂರ್ತಿ, ಉಪಸ್ಥಿತಿ: ಆರ್. ದೊಡ್ಡೇಗೌಡ, ಆಯೋಜನೆ: ಅಮೋಘ, ಸಪ್ನ ಬುಕ್ ಹೌಸ್, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 11



ಟಿ.ಎಸ್. ನಾಗಾಭರಣ

ವಿಮಲ ಎಸ್. ಅವರ 'ಅಂತರಾಳ', 'ಕುವೆಂಪು ಸಾಹಿತ್ಯ ದರ್ಶನ, ಜಯಶ್ರೀ ರಾಜು ಅವರ 'ಕೊರಡು ಕೊನರುವುದಯ್ಯಾ' ಪುಸ್ತಕಗಳ ಬಿಡುಗಡೆ: ಟಿ.ಎಸ್. ನಾಗಾಭರಣ, ಅತಿಥಿಗಳು: ಎಚ್.ಎಸ್. ಗಣೇಶ ಭಟ್ಟ, ಪುಸ್ತಕಗಳ ಪರಿಚಯ: ಮೀನಾಕ್ಷಿ ಮನೋಹರ, ವತ್ಸಲಾ ಮೋಹನ್, ನೊಣವಿನಕೆರೆ ರಾಮಕೃಷ್ಣಯ್ಯ, ಆಯೋಜನೆ: ಋತುಸೌರಭ ಫೌಂಡೇಶನ್, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್. ಆರ್. ಕಾಲೊನಿ, ಸಂಜೆ 4.30

'ಸೀತಾ ವಿಯೋಗ' ಯಕ್ಷಗಾನ ಪ್ರದರ್ಶನ: ಭಾಗವತರು: ಕೊಳಗಿ ಕೇಶವ ಹೆಗಡೆ, ಮೃದಂಗ: ನಾರಾಯಣ ಹೆಬ್ಬಾರ್, ಅರ್ಥದಾರಿಗಳು: ಜಿ.ಎಲ್. ಹೆಗಡೆ, ಮೋಹನ ಭಾಸ್ಕರ್ ಹೆಗಡೆ, ಅಜಿತ್ ಕಾರಂತ, ಹರೀಶ್ ಕೇರ, ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ, ಸಂಜೆ 6

ಯುವ ಮತದಾರರ ನೋಂದಣಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ 'ಯುವ ಮತದಾರರ ನೋಂದಣಿ' ಕಾರ್ಯಕ್ರಮವನ್ನು ಶನಿವಾರ ಆಯೋಜಿಸಲಾಗಿತ್ತು.

ಬಿಬಿಎಂಪಿ ಚುನಾವಣಾ ವಿಭಾಗದ ವಿಶೇಷ ಆಯುಕ್ತ ಆರ್. ರಾಮಚಂದ್ರನ್ ಅವರು ಕಾರ್ಯಕ್ರಮ ಉದ್ಘಾಟಿಸಿ, 18 ವರ್ಷ ತುಂಬಿದ ಎಲ್ಲ ಯುವ ಜನಾಂಗ ಮತದಾರರ ಪಟ್ಟಿಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು ಎಂದರು.

ಮತದಾರರ ಪಟ್ಟಿಯ ಸಂಕ್ಷಿಪ್ತ ಪರಿಷ್ಕರಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಮತದಾರರ ಜಾಗೃತಿ ವೇದಿಕೆ ಮತ್ತು ಚುನಾವಣಾ ಸಾಕ್ಷರತಾ ಕ್ಲಬ್‌ಗಳನ್ನೂ ಉದ್ಘಾಟಿಸಿದರು.

ಬಿಎಂಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ. ಪದ್ಮ, ಚುನಾವಣಾ ಸಾಕ್ಷರತಾ ಕ್ಲಬ್ ನ ಸಂಚಾಲಕಿ ಡಾ. ಕೆ ವೀಣಾ, ಸಂಯೋಜಕಿ ಶ್ರೀಮತಿ ಬಿ. ಭಾನು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಿಶೇಷ ಅಭಿಯಾನದ ಸ್ಥಳಗಳಿಗೆ ಭೇಟಿ: ನಗರದಲ್ಲಿ ಮತದಾರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ವಿಶೇಷ ಅಭಿಯಾನ ನಡೆಯುತ್ತಿದ್ದ ಸ್ಥಳಗಳಿಗೆ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಎಷ್ಟು ಮಂದಿ ಭೇಟಿ ನೀಡಿದ್ದಾರೆ, ಎಷ್ಟು ಮಂದಿ ನೋಂದಣಿ ಮಾಡಿಕೊಂಡಿದ್ದಾರೆ ಎಂಬುದನ್ನು ಬೂತ್ ಮಟ್ಟದ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ನ.19 ಮತ್ತು ಡಿ.2 ಮತ್ತು ಡಿ.3ರಂದು ವಿಶೇಷ ಅಭಿಯಾನ ನಡೆಯಲಿದೆ.

ಅರ್ಜಿ ಆಹ್ವಾನ

ಬೆಂಗಳೂರು: 'ಉನ್ನತಿ' ಸಂಸ್ಥೆಯಿಂದ ನಿರುದ್ಯೋಗಿ ಯುವಕರನ್ನು ಉದ್ಯೋಗಸ್ಥರನ್ನಾಗಿಸಲು 35 ದಿನಗಳ ಉಚಿತ ಉದ್ಯೋಗ ಕೌಶಲ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮ ಸಹಯೋಗದಲ್ಲಿ ಆಯೋಜಿಸುವ ಈ ಕಾರ್ಯಕ್ರಮದಲ್ಲಿ ಆಸಕ್ತ 18–25 ವರ್ಷದೊಳಗಿನ ಯುವಕರು ಅರ್ಜಿ ಸಲ್ಲಿಸಬಹುದು. ಇಂಗ್ಲಿಷ್ ಸಂವಹನ, ಮೌಲ್ಯಾಧಾರಿತ ಜೀವನ, ಕಂಪ್ಯೂಟರ್ ಪ್ರಾಥಮಿಕ ತರಬೇತಿ ನೀಡಲಾಗುವುದು. ಈ ಕಾರ್ಯಕ್ರಮವು ಡಿಸೆಂಬರ್ 4ರಂದು ಪ್ರಾರಂಭವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ 080–25384642.

ಇಸ್ರೊ ಘಟಕ ಏಪ್ರಿಲ್‌ನಲ್ಲಿ ಕಾರ್ಯಾರಂಭ

ಪ್ರಜಾವಾಣಿ ವಾರ್ತೆ

ತುಮಕೂರು: ಇಸ್ರೊ ಸಂಸ್ಥೆಯ ಬಹುನಿರೀಕ್ಷಿತ ಉತ್ಪಾದನಾ ಚಟುವಟಿಕೆಗಳು ನಗರದಲ್ಲಿ ಮುಂದಿನ ಏಪ್ರಿಲ್ ವೇಳೆಗೆ ಆರಂಭವಾಗಲಿದೆ. ಮೊದಲ ಹಂತದಲ್ಲಿ ಉಪಗ್ರಹಗಳ ಉಡಾವಣೆಗೆ ಬಳಸುವ ಪ್ರೊಪುಲೆಂಟ್ ಟ್ಯಾಂಕರ್‌ಗಳ ಉತ್ಪಾದನಾ ಕಾರ್ಯ ಆರಂಭವಾಗಲಿದೆ.

ಚಂದ್ರಯಾನ–3ರ ಯಶಸ್ಸಿಗೆ ಕಾರಣಕರ್ತರಾದ ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಅವರನ್ನು ಬೆಂಗಳೂರಿನ ಅಂತರಿಕ್ಷ ಭವನದಲ್ಲಿ ಈಚೆಗೆ ಭೇಟಿಯಾಗಿ ಅಭಿನಂದಿಸಿದ ಸಂದರ್ಭದಲ್ಲಿ ಈ ಮಾಹಿತಿ ಹಂಚಿಕೊಂಡರು ಎಂದು ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಎಸ್.ಪಿ.ಮುದ್ದಹನುಮೇಗೌಡ ತಿಳಿಸಿದರು.

ಈ ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ ಎಚ್ಎಂಟಿ ಕಾರ್ಖಾನೆ ಮುಚ್ಚಿದ ನಂತರ 120 ಎಕರೆ ಜಾಗವನ್ನು ಇಸ್ರೊ ಸಂಸ್ಥೆಗೆ ನೀಡಲಾಗಿತ್ತು. ಸಂಸದನಾಗಿದ್ದಾಗ 2019, ಫೆ.9ರಂದು ಅಂದಿನ ಇಸ್ರೊ ಅಧ್ಯಕ್ಷರ ಜತೆಯಲ್ಲಿ ಘಟಕಕ್ಕೆ ಭೂಮಿ ಪೂಜೆ ನೆರವೇರಿಸಲಾಗಿತ್ತು. 120 ಎಕರೆಯಲ್ಲಿ ಸ್ವಲ್ಪ ಜಾಗ ಮಾತ್ರ ಬಳಸಿಕೊಂಡು ಪ್ರೊಪುಲೆಂಟ್ ಟ್ಯಾಂಕರ್‌ಗಳ ಉತ್ಪಾದನಾ ಘಟಕ ನಿರ್ಮಾಣ ಮಾಡಲಾಗಿದೆ ಎಂದರು.

ADMISSION - 2023-24
Guide for Vacant Seats through KEA
if reduction of NEET Percentile by Govt.
B.H.M.S
B.A.M.S
BPT MPT D.PHARMA
GNM P.B.B.Sc(N) M.SC(N)
CONTACT
K.T.G AMC & ANURADHA
HOMEOPATHY COLLEGES,BENGALURU
9845051023
9880453539







ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Banashankari

COLDWELL BANKER #1 REAL ESTATE AGENCY IN BANGALORE
Exceptional BDA corner plots for both commercial and residential ventures in BANASHANKARI, JAYANAGAR, ANJANAPURA, SIR M VISHVESHWARAIAH LAYOUT, KEMPEGOWDA LAYOUT, RR NAGAR, and UTTRAHALLI. Your perfect opportunity for prime real estate is here.
Act fast and secure your corner of success.
99165 92400

BANASHANKARI 6TH Stage, Vishweswaraiah BDA/A Katha 20x30, 30x40, 40x60,50x80. Buying/ Selling. Immediate Settlement. SHIVARAJU: 9845390290, 7676547557.

BSK-6TH STAGE 7th Block 50x80 Site For Sale in Good Location Near Proposal BDA Complex (Agents Excuse) Call:9845555666

FOR SALE 30x40 WEST FACE 1ST BLOCK 40x60 9th BLOCK NORTH FACE. CALL: MANOJ 9731410616

BDA ALLOTTED W/F 30x40 site for sale Banashankari 6 stage 9 block, near Chinmaya School, adjacent park, over looking Konasandra. Rs 6,800/ sqft. Brokers excuse. 9900151290

AVAILABLE BDA Sites Banashankari 6th-Stage, 6th Block, 30x40, E/F, 60ft Road Genuine Buyers: 9663393533, 9945492464

SALE BSK 6th stage 9 Block 30x40 East Facing 66 lakh Also 40x60 west Facing 4th Block 1.72Cr Negotiable. 9945373839, 9620041313

Anjanapura

SALE BDA Anjanapura 8th Block 40x60 west Facing Near BDA complex 40Feet Road 9620041313/ 9945373839

Arkavathi Layout

ARKAVATHI LAYOUT Site For Sale 55x100 Both-Sides Road Adjacent to BDA Layout In Good Location Call: 86602-20048 76769-00174

BTM Layout

BTM 4TH Stage 40x60 WF 14000/- 6th Stage 50x60 WF Commercial 12000/- A Katha: 9449655947

Bommasandra

JP_LAKE VIEW BMRDA APPROVED 40x60 site for sale. East facing. Ready to Build/ Rentals. Near Bommasandra metro station. Price:3200/-sq.ft Contact: 7676829026

Bannerghatta Road

BANNERAGATTA ROAD Nandanavana Layout 50x80 East West Facing Road 2500/- Negotiable. Contact Krishnappa: 9449655947

Electronic City

NEAR BEGUR Close To Electronic City Nobel Residency Layout 60x72 A-Katha NF 7500/- Negotiable: 9449655947

Gnanabharathi

DIRECT OWNER 30x50 Jnanabharathi BDA 2nd Block, 30X40 Railway Layout 1st Stage. Near Ring-road. 9886634578

Jakkur

SITE SALE 40x60 East, MCEHS Layout, Top location, price 12,000/- PSFT, Serious Buyers Call 9686699154. [Judicial layout 80x120]

Kumaraswamy Layout

25X30 EAST Facing BDA Site Sale Kumaraswamy Layout Near Police Station, Clear Titles. Contact:- 9342197377

Nelamangala

CNR Infocity
READY TO BUILD PLOTS FOR EVERY DREAM HOME
BMRDA Approved Sites available @ NEELAMANGALA
CALL +91 8722227780 +91 8660981179

BMRDA/ NPA 30x50 West Facing Site 60ft Road, Near NH-4 Highway and Mangalore Highway: 8310681025

COMMERCIAL PLOT 40x60 West HUNNIGARE 100ft Main Road, Near Dr Puneeth Rajkumar BDA Villa, 4800/- Call: 9035010595/ 9035055919

J P Nagar

SALE BDA JP Nagar 9th phase 3rd Block East facing 60 feet 40x60 good location 1.5Km metro station 9945373839/ 9620041313

JP-NAGAR 9TH Phase 50x80 WF 10000/-, 4th Phase 4950 SqFt South West Facing 20000/-: 9449655947

Kanakapura Road

NARAYANA NAGAR 1st Block 50x80 S/F 3rd Block 30x40 W/F Near Metro Station: 9964627255/ 9845511170

BDA SITE Sale 2400sqft 2Min drive from Vajrahalli Metro, 10 Min. to Jayanagar Shopping Complex, VajramuniNagar, Contact: NarasimhaMurthy: 9449350101

SITES FOR Sale Marvella Homz, Huttari BMRDA Approved, Behind Brigade Meadows, 2Kms from Kanakapura Road, Few Sites Available. 9108905129

Kempegowda Layout

50x80 SITE for sale at Nada Prabhu Kempegowda layout 5th block, P- sector, 5565 west facing, beside 300 feet. Call: 6362874644.

KEMPEGOWDA LAYOUT, BDA SITE FOR SALE 20X30 30X40, 40X60, 50X80 CONTACT KUMAR: 9945119449

Nagarabhavi

"NAGARABHAVI 'D'GROUP-LAYOUT 30x40 West facing 40 feet Road BDA-Khatha Site for-sale 13200/-per sqft Negotiable. 9164089633/ 9663226688"

"PURE RESIDENTIAL property,2400 Sqft East-facing @MPM-Layout, Nagarbhavi, Near-to Ring Road,40ft Road, BDA katha, Genuine Buyers Contact: 9886809049"

North

60X40 SITE SALE Premium Location 100 Meter Golden`Palms Resort,Alur Cricket Stadium, Near-to Unibic Factory Husukur`Road Alur Banglore 2300/-Sqft Slightly Negotiable 9632330007 9986420007

Hosur Road

HOSUR ROAD Surya City Phase 1 Adjacent To Electronic City 3090 SqFt 7500/- WF: 9449655947

Sadashiva Nagar

SALE SADASHIVANAGAR 60x90 East Facing Site And 7-BHK Luxurious Bungalow, Genuine Buyers Only Contact: 9900001973

Rajajinagar

RAJAJINAGAR 5TH Block, 22.5x46 Old Building, Nagarabhavi South- West Corner 1780 Sft Near Vijaya Eye Clinic, Telecom Layout Attached 46x60 West Face: 9448046042/ 9342552400

Rajarajeshwari Nagar

R.R.NAGAR IDEALHOMES 40x60, 50x80, 72X96, 90X105 BEML 30X45, 40x60, 50x80- Houses, Banashankari 6th- 30x40, 40x60, 50x80. 94484-83699

Sanjaynagar

"SANJAYNAGAR, DR.RAJGOPAL Road, Rajmahal-Vilas 2nd Stage, Prime Commercial Site 40x60 only genuine buyers "Sri Ganesh Estates" 9845286505

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

BDA SITE FOR SALE VISHWESHWARAIAH LAYOUT 1ST BLOCK 30X40 GOOD LOCATION CONTACT: 8217392686/ 9980433004

BDA SITE SALE VISHWESHWARAIAH LAYOUT 2ND BLOCK 40X60 EAST FACING 60 FEET ROAD 8217392686/ 9980433004

"BDA APPROVED 30x40 East-facing site sale near Amma Ashrama ready to build 10 minutes drive-to Metro. 9611538786"

VISHWESWARIAH LAYOUT 4th Block BDA Commercial 50x80 80ft Road, 6th Block BDA 30x40, 7500/-: 9964971895

DIRECT OWNER 30x40, 40x60 Vishveswaraiah Layout 1st Block, Behind 100ft Road, Beautiful Location. SREENIDHI. 9742681666

BDA VISHWESHWAR Layout, 4th Block 30x40 N/F, Vishweshwaraya Layout, 1st Block, 20x30, E/F. 9980239748/ 8792207829.

"28X40S/W CORNER BDA Site-Sale Kanaka Shree Layout 40 feet Road [Vishveshwaraiah Layout]- 9845143579"

SALE 30X40 VISHVESWARAIAH LAYOUT 4th Block South facing owner 82 lakh Negotiable 9945373839, 9620041313

"VISHVESHWARAIAH LAYOUT 50x80 East 60 feet Road 100% Vastu,30x40 East 40 feet Road. 7022218837"

Yeshwanthpur

YESHWANTPUR PREMIUM Site For Sale Near Modern Bread Factory 12000sqft NE Facing 7500/Sft Negotiable: 9740992222

Mysore

1250 SOUTH east facing plot is for sale in SBM officer's enclave, HONNASIRI Gardens, Mysuru. Contact No. 8861261899

House

Banashankari

SALE 20X30, 30X40 Thripex House's BSK 6th Stage, J.P.Nagar 8th Phase, Anjanapura Fully Furnished Granit Flooring Call:8722777999 9449812176

Indiranagar

SALE. HAL 3rd stage 32X40 site measuring with 1350 Sqft duplex house Rs. 3 Crore. Buyers call #8762018445. [BROKERS EXCUSE]

Jayanagar

KORAMANGALA VENKATADRI LYT 1200sft with 12`Houses 2.80cr Jayanagar 9th Block 48x30`E/F 3.10cr and`55x30`west Rental`income 2Lac commercial 5.70cr Call:9945310899

SALE OLD-HOUSE 1590sft North Face Jayanagar East 22000/-sft full White JPN`8th 40x60`West Face Royal-County full`White 12000 final Call:9900329373

Kengeri

HOUSE SALE 25x40, BDA WEST FACING, 25 SQUARE, 1BHK AND 4BHK HOUSE AT KENGERI SATELLITE TOWN, NEAR KENGERI METRO STATION, Rs.1.50 CRORE. NAGALINGA 7019009272, 9743378744 SHIVAKUMAR 9845875555.

Kumaraswamy Layout

NEW DUPLEX House for Sale BDA 4 BHK 900 sqft nearby 15F Bus-stop. 9343307910

Kanakapura Road

NARAYAN NAGAR 1st Block, South East corner 30x40 Duplex house 2,25,00,000/- full Cheque payment (Buyers only) call -9845307497

Richmond Town

NEAR RICHMOND ROAD & GARUDA MALL 5Br BUNGLOW, SA 2950 Sft, BUILT 5000 Sft EF, 9845022510

Flat

Basavanagudi

BASAVANAGUDI KR Road, 3-BHK, N/F Flat for Sale: 1470/S.Ft. A Khat. 1.2 Crore. Gururaj- 9738643338

Chandra Layout

CANARA BANK Colony, 3 BHK Flat sale, 1635 sqft. Furnished, Carpark, behind Village Hyper Bazar, Chandra Layout. 9890345737.

J P Nagar

FLAT FOR Sale at J.P.Nagar 7th Phase, Elita Promenade Apartment Ground Floor 1130Sq.ft. 9945427003

Kumaraswamy Layout

3-BHK E/F A-Khata Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

Kanakapura Road

3-BHK-FLAT SALE 1575-Sqft N/F Full Interiors 70Lakhs Off KANAKAPURA ROAD KONANKUNTE Near Junior Delhi Public School- 9343727162

Malleshwaram

SALE FLAT Just renovated as new 3 b/r 1960sft semi finished ground floor with 1300 Pvt Garden door facing south WhatsApp Bharadwaj estates 9845019934

Rajarajeshwari Nagar

RR NAGAR 3BHK Flat For Sale 1782sft single floor, East Facing Near BEML Complex, price:1.25cr Negotiable Contact: 9972318124,9845301269

Uttarahalli

3/4 BHK New Luxurious Flats Sale, Italian Marble, Cauvery, Security, Car-parking, 70L/90L, 9844394444, 9945224058.

Agricultural Land

Ramanagar

AGRICULTURAL FARM Land Sale 7 Kms from RAMANAGAR 3 Acres 50Lakhs P.Acre Clear Title- 7019881566

Commercial Building

Dabaspet

29GUNTA (EAST) LAND State Highway Attached 16Kms from Dabaspet, 66Kms from Bangalore SUITABLE: Petrol Bunks, Warehouse 4,40,000/- Per Gunta: 9845411113

J C Road

COMMERCIAL BUILDING Sale: 700Sft x 3 Floors 2100 Sft, Off Lalbagh Road, Bangalore-27. Call: 98865-87648

Commercial Land

Kengeri

KENGERI SALE 3.6 acres land/ plots in Kenchanapura 15.5 Crores, slightly negotiable, school purpose. 9741157424.

Mysore

MYSORE RING Road Near GRS fantasy Park 1-acre Commercial Converted`Land For Sale 3000/sft Contact Sunil: 9845201710

Commercial

Bannerghatta Road

COMMERCIAL BANNERGHATTA Road, Hulimavu, Krishna Layout near Meenakshi Mall and Metro station, 75x110 A'Katha site 7,08,00,000/- Negotiable -9980761200

Double Road

COMMERCIAL SPACE FOR Sale, 400Sq.ft 1stFloor,MoneyPoint, KH Double Road, Opp ShantiNagar BusStand. Excellent for Offices/CallCentres. Call 9844184151/ 9739718446

Mysore Road

MYSORE ROAD Kumbalgodu Prime Industrial Hub 13200 sqft Commercial Shed, 3 Side Road, Corner property available for RENT (Rs 25/- per sqft) or for SALE (Cost 4.5 cr). Contact : owner 9844027560.

General

North

TDR FOR-SALE. RD registration done, with high court WPorder. Clear titles. 25 Crore value. Kumar: 9886371998

REAL ESTATE BUYING

Sites

Anjanapura

WANTED BDA sites Anjanapura, Banashankari 6th stage, Vishweshwaraiah Layout, JPNagar 8 and 9th phase and any BDA katha & Mysore MUDA sites any measurement, Immediate settlement Genuine sellers, Contact: 9902038118: 9449060605: 7338328728.

Kanakapura Road

KANAKAPURA ROAD Wanted Site 30x40,40x60 Narayana Nagar, BCMC Layout Gubblala Anjanapura. Contact: 9380647082, Agents Excuse.

Multiple Locations

ANJANAPURA-ARKAVATHI, Banashankari 6th Stage, Vishweshwaraiah Layout, Kempegowda Layout, Any BDA Sites Wanted Contact: SAPTHAGIRI. 9900268073, 9448068073.

Sadashiva Nagar

URGENT REQUIREMENT: Plot or Property Facing North/East required for purchase in Sadashivanagar, Bangalore. Genuine sellers call:-9844055002

Vishweshwariah Layout

WANTED 50x80 Residential Site Vishweshwaraiah Layout 8th Block. Direct Owner meeting required. Contact: 9342833999

RENTAL PROPERTIES

Accommodation Wanted

Commercial

REQUIRED WAREHOUSE 3500 TO 4000 SQ.FT RCC FOR RENT IN PEENYA, YESHWANTHPUR
Products Catering to Footwear / Synthetic Leather / Shoes Finishing Chemicals / Adhesives Materials / PU System/ Other Footwear Components Etc.,
REQUIRED RESIDENTIAL 900 TO 1000 SQ.FT 2BHK Residential apartment for rent with lift in Yeshwanthpur area, Near by CBSE Schools
Contact: Ms. Sasikala 98848 48972 98849 10936

Accommodation Available

Commercial

THANISANDRA MAIN ROAD Opposite Reliance`Mart, Bangalore. Available Rent-30x40sft House-1st`Floor Suitable,Lab/ Any Office, Ground Laptop/Mobile Shop. 8073553577 9741069998.

2 BHK House, and 100 Sqft. Office or Godown, Lift Available, 1st Cross, Cubbonpet, Bangalore. Contact: 7483167633, 9019795043

Flats

AVAILABLE APARTMENT 3 BHK furnished spacious flat Mysore road for lease rupees 25L PH 9738223432

Industrial And Factory

AVAILABLE INDUSTRIAL Shed for Rent 95000 sqft at Soukya Road, Whitefield, Commercial 1750sqft x3 Floors, K.R.Road, Banashankari. Contact: 9341234288/ 9663224353/ 9845417487.

Guest House

INDIRANAGAR 80 Feet Road fully furnished- A/C, Suitable: Guest house, 2 Halls, 2 Servant Rooms, Carpark. Rent Rs.2 Lakhs/ p.m. Contact: 9901778787/ 9343728200.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

WE FIX LEAKING ROOF,TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY,CIVIL WORKS. Call:9448572697

EDUCATIONAL

Tuitions

NOW AT Your Door Step Best Home Tuitions By T.S.Shivashankar, PHD USA Maths and Physics Expert living in Mahalaxmi Layout 40 plus years of International Experience: 9743095715 Any Maths Physics Chemistry French Hindi English Civil Aero nautical Mechanical Electrical & Electronics All Subjects At All and Different Levels 1st To 12th Standard CBSE, ICSE, B.Tech, BSc, IIT JEE (Main & Advance) Big Push For Maths with Instant Results Educated In USA Brazil Canada England France Germany Holland Greece & Russia, Many Times Also Educated in Kendriya Vidyalaya I.I.T Kanpur Twice 1981 12th Standard Pass out from K.V.I.T.T. Kanpur Fluent in English Hindi Kannada French Portuguese Father Dr. T.K Srikantaiah Former Professor Aero nautical Engg Department IIT Kanpur PHD Structural Engg Waterloo University Ontario Canada All Major Areas of Bangalore Metro Routes from Mahalaxmi Layout.

JOB OPPORTUNITIES

Teachers/ Professors

JANATHA EDUCATION SOCIETY (R) Est. 1972
Dr.Rajkumar Road, 2nd Stage, Rajajinagar, Bengaluru-55
VIVEKANANDA P U COLLEGE-KUMBALAGODU
PRINCIPAL : Masters with Ph.D & 5-10 years of teaching with administrative experience with Good knowledge in motivational skill, visionary leadership with a creative flair.
ESTATE OFFICER : Post Graduation Degree in any discipline, 3-5 years' of experience in educational institutions & Good knowledge in liaison works along with Revenue, BWSSB, BBMP, Police Station and other statutory bodies.
Eligible candidates may send their BIODATA along with 2 passport size photos to the Hon. Secretary to reach him within 7 days or email : jobs@jes-edu.in | 6366733434 080-23377952
H.C. Balakrishna, Hon. President — H.G. Balagopal, Hon. Secretary

'IMPACT COLLEGE of Engineering and Applied Sciences invites applications from candidates eligible for the following positions for BE-CSE/AIML/ DSc/ Cyber and ECE (updated in the emerging areas). 1.Professor 2.Associate Professor 3.Assistant Professor 4.Lab Instructors/ Foreman/ Assistants. Apply now https://impact.ac.in/ job-openings or Walkin between 10:00 am to 03:00 pm to IMPACT Campus, Kodigehalli, Sahakarnagar, Bangalore-560092. 080-23334101. [AICTE rules apply for eligibility andcompensation]'

515 ABW HIGH SCHOOL
Cambridge Road Cross Halasuru, Bangalore-08
REQUIRES
TGT MATHEMATICS on Contract Basis
Kindly Visit: https://515armyschool.co.in/recruitment
OR
Contact : 080-25307559

URGENTLY WANTED Social Teachers for Higher classes, CBSE school, Bagepalli, Drop Resumes 9844421155 Good Salary

Graphic Designers

MCB CORP Require WEB DESIGNERS, DEVELOPERS for the office at Jayanagar with profound design skills. Email:- wintreat@gmail.com Ph: 7022643567

Walk-in

V.E.T. FIRST GRADE COLLEGE
14th Main, 2nd Phase, J.P.Nagar, Bangalore - 560 078.
Ph : 080-26586808 / 25684760
e-mail : vetfgc@rediffmail.com
WALK-IN-INTERVIEW
Librarian
M.Lib/M.Li.Sc with Good Communication Skills & Computer knowledge, with 2 to 3 years of experience.
Office Staff
Any Degree with Good Communication Skills, Computer & administrative knowledge
On Wednesday the 22nd November 2023 Between 10.00 am and 1.00 pm

Multiple Vacancy

ಸಂಬಂಧ ಆಪರೇಷನ್ ಮ್ಯಾನೇಜರ್ ಮತ್ತು ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ಮಹಿಳಾ ಅಭ್ಯರ್ಥಿಗಳಿಗೆ ಆದ್ಯತೆ. ಸಂದರ್ಶನಕ್ಕೆ ಬೆಳಿಗ್ಗೆ ಬರುವಾಗ ಬಯೋಡೇಟಾ ... ಪ್ರಶ್ನೆಗಳ ಪ್ರಕಾರ ...
ಪದವೀಧರರು 3 ರಿಂದ 4 ವರ್ಷಗಳ ಎಕ್ಸ್‌ಪೀ. ಸಂಬಂಧಿತ ಕೆಲಸದಲ್ಲಿ ಕೆಲಸ ಮಾಡಿರಬೇಕು.
life line
APPLY mukundsagar2023@gmail.com 88844 59780

Marketing & Sales

MCB CORP Require PR and HR Head, Business Development Executives with excellent (English) Communication skills. Email:- wintreat@gmail.com Ph: 7022643567.

MALE sales executives Sal: 15k to 50k Cont +91 9346202112 Email- staffingcharminar@gmail.com www.charminarbrush.com Hegade Nagar Bangalore.

Office Boys/ Peon

MCB CORP Require OFFICE ASSISTANTS with good English and Computer skills Office Boys Drivers. Details to Email:- wintreat@gmail.com Ph: 7022643567.

Part-Time Jobs

TOP MNC Com. Licensed By Central Govt. Retired/ VRS Persons 2nd Career Opporty Age Above 45 Years 35K To 40K: 7019215243/ 9886641282

Wanted

WANTED COLLECTIONS & Recovery Officers for PayTM Associate. DRA Certified Agents Preferred. Contact: 9886021470/ 9886645766

Security & Detectives

WANTED SECURITY Field Officer / Marketing Officer / Security Guards Contact: 9986569896 / 8951205667

General

BENGALURU TRAVELS, V&V Group Wanted Immediately Experienced ASSISTANT TRAVELS MANAGER, TELECALLERS and CAR DRIVERS. Good Salary. Call: 99000-54469/ 99000-54461

MEN WOMEN Garments Shoes Accessories Export Surplus Discount Business B2B-B2C Retail. Requires Experienced BUSINESS HEAD To Handle Procurement And Sales Independently WhatsApp-6366936485

REQUIRED FOR Jewellery Showroom @Basaveshwara Nagar Sales staff & Designer Male/Female Fresher/ Experienced WhatsApp resume @9019158585

THE AURO SCHOOL
Kanakapura Main Road, Edamadu Village.
INVITES APPLICATIONS
The Auro School is an Integral Education School with CBSE Curriculum. Qualified Candidates aspiring to be creative, innovative and believe in holistic approach are preferred. Transportation available for staff from JP Nagar 1st Phase, Bangalore.
PRINCIPAL: Post Graduation + B.Ed. with 8 to 10 years teaching experience in any core subject. 5 years exp. as CBSE School Principal preferred - Age: Below 45 years.
VICE-PRINCIPAL: Post Graduation + B.Ed. with 5 to 8 yrs. teaching exp. 4 years as VP/Sr. Coordinator with CBSE School preferred - Age: Below 40 years.
PRE-PRIMARY TEACHERS: NTT / IMTT – Exp.: 0-5 yrs. Age: Below 35 yrs.
PRIMARY & MIDDLE TEACHERS: Graduation / Post-Graduation with relevant teacher training as per CBSE norms, 1- 5 yrs. exp. – Posts: English, Kannada, Hindi, Sanskrit, French, Mathematics, EVS, Science, Social Science, Computers, Yoga, Physical Education, Art & Craft, Music, and Dance - Age: Below 35 yrs.
ADMISSION OFFICER: Graduation / Post Graduation, 5 to 8 yrs. school experience.
OFFICE ASSISTANT: Graduation / Post Graduation, 3 to 5 yrs. CBSE school experience.
RECEPTIONIST: Graduation, 3 to 5 yrs. exp. In CBSE school with computer knowledge.
LIBRARIAN: B.Lib. / M.Lib. ; 5 to 8 yrs. exp.
Candidates with good communication skill and computer knowledge to forward their resume with latest PP size photo to Email mentioned within 10 days of this advert.
Email: admin@theauroschool.org ; Ph: 74112 03566 / 74112 03766
Website: www.theauroschool.org

MANAGERS, SUPERVISORS, SALESMAN, ACCOUNTANT Experienced In Export Surplus And Discount Sales Exhibition Counters- All Over Bangalore WhatsApp- 6366936485

TOURS & TRAVEL

Travel

30X24, 3BHK, 'A' Katha Independent duplex House for Sale with Shop, Carparking 1,45,00000/-. Sapthagiri Layout near Tata promot,Banashankari 3rd Stage, Bangalore. Contact: 9900915699, 9448976021

BUSINESS

Business to Business

Business

ANY CENTRAL/ New Delhi work done with high level Contacts. Quick Service. Vamshadhara Project Services: 9342247637.

Business Offers

Finance

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

Business Centre

START YOUR own business and get daily/ regular income. Become an channel partner. Talk to us. 9448340164/ 8088987146

LAND FOR SALE (ANEKAL)
73.12 Guntas of general property with clear titles of land, situated at Surajakkanahalli Village, near Electronic City and Jigani Industrial Area, Anekal Bannerghatta Ring Road, attached to Residential Area is available for Sale.
CONTACT: 87623 81993

I, YASEEN Pasha S/o Riyaz Ahamed, aged about 40years, residing at Mahalakshmi Layout, Near St.Anne's School beside Kolar City. Have changed my Minor Daughter's name from Ifra Iram to Ifra Fathima vide affidavit dated 17.11.2023 before Notary Venkateshappa Kolar. Henceforth she shall be called as Ifra Fathima only.

CHANGE OF NAME

I, PRIYA ANUROOP PADMANABHAN Residing at 403, Wing-C, Block-1, Shipitha Splendor Annex, Chinnappa Lyt, Mahadevapura, Bengaluru-560048 have changed my name to PRIYA ANUROOP vide affidavit dated 18.11.2023 before Notary Anandkumar. J Bengaluru. Henceforth I shall be known as PRIYA ANUROOP only.

MATRIMONIAL

Brides Wanted

Muslim

SUNNI MUSLIM Boy 1990 Born/ 5'11 /MBBS MD (Doctor) abroad Based family is settled in Bangalore is looking for a beautiful girl (080-69144008)

MUSLIM BOY 1975 Born Well settled Businessman (Affluent Family) is looking a suitable match (080-69072088)

Marwari

MARWARI BOY 1995 Born (Agarwal) 5'11 Having own Business (Only Son) Well Sound Family is looking for a match CNB (080-69103017)

Grooms Wanted

Kannada

SUITABLE MATCH for beautiful girl, 27, 5'4, B.E. of Bangalore based Affluent modern family with values (080-69072058)

Muslim

BANGALORE BASED Baig family sunni muslim engineer girl 29/5.3' B.E,MBA working as manager with MNC in bangalore.Looking for a suitable well educated broad minded groom. whatsup 9513906784

Punjabi

PUNJABI BEAUTIFUL Girl 1997 Born 5'5 Handling Family business is looking for a suitable match (080-69103017)

PERSONAL

Change of Name

I, NASRIN THAJ, Residing at 539, 3rd Cross, Noor Nagar, Near Elahi Masjid, Kolar 563101, have changed my name to NASREEN TAJ Vide Affidavit dated 18.11.2023 sworn before advocate and notary K.H. Venkatappa, Chickaballapur.

I, SYED MAHAMOOD AHMED, Residing At Ward No.19, Dharmachatra Road, Chickaballapur, have changed my name to SYED MAHAMOOD Vide Affidavit dated 11.11.2023 sworn before advocate and notary K.H. Venkatappa, Chickaballapur.

JAYAPRAKASH HOLAGUNDI B-206, Sovereign Shantinivasa Apartment, Sarjapura main road, Yamare, Bengaluru-562 125 have changed my minor son name from SATVIK PRAKASH HOLAGUNDI to RATHANRAAJ BHARGAV

CHANGE OF NAME

I, AYESHA AYUB KHAN, D/o Shaikh Mohammed Abdul Hussain & W/o Ayub Khan, R/at E-327, Brigade Northridge 3rd Floor, Kogilu Road, Bengaluru-64, have changed my name to SWETLANA MOHAMMED RIZWANA SHAIKH vide affidavit dt.18/11/2023 before Notary Sivakumara M.N. Bengaluru

I, VADLAKUNTA NAGA JYOTHI Residing at Ward No 10, N.R. Extension, Near Ramamandira Road, Chintamani 563125, have changed my name to NAGAJYOTHI KANCHI NAGARAJ Vide Affidavit dated 16.11.2023 sworn before advocate and notary K.H. Venkatappa, Chickaballapur.

JAYAPRAKASH HOLAGUNDI B-206, Sovereign Shantinivasa Apartment, Sarjapura main road, Yamare, Bengaluru-562 125 have changed my minor daughter name from SUDEEPTI HOLAGUNDI to JHANVICA BHARGAV

Lost

DOCUMENTS LOST

I, Siddharth A. Rao, 43, and my wife, Pooja Siddharth Rao aged about 38years, wish to inform that we have misplaced the original gift deed of our flat Salarpuria Satva, marked as BI 1754/2020-21, This loss has been duly reported to the police, filed under serial no. 813088 and lost report no. 0813088/2023. For any queries or information, we can be reached at 9902025107.

AUTOMOTIVE

2 / 3 Wheelers Selling


Mobikes

DUKE 200 for sale run 2200 kms 2020 model 2 lacs negotiable contact 9845251554

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಕೇಂದ್ರದ ದಾಳವಾಗಿ ರಾಜ್ಯಪಾಲರ ಬಳಕೆ: ತಮಿಳುನಾಡು ಸಿ.ಎಂ ಸ್ಟಾಲಿನ್ ಟೀಕೆ

10 ಮಸೂದೆಗೆ ಮತ್ತೆ ಒಪ್ಪಿಗೆ



ಎಂ.ಕೆ. ಸ್ಟಾಲಿನ್

ಚೆನ್ನೈ (ಪಿಟಿಐ): ರಾಜ್ಯಪಾಲರಿಂದ ವಾಪಸ್ ಬಂದಿದ್ದ 10ಮಸೂದೆಗಳನ್ನು ತಮಿಳುನಾಡಿನ ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ಶನಿವಾರ ಮತ್ತೊಮ್ಮೆ ಅಂಗೀಕರಿಸಲಾಯಿತು.

ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆಯೇ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು, ಸದನದಲ್ಲಿ ಮಸೂದೆಗಳ ಮರು ಅಂಗೀಕಾರಕ್ಕೆ ಸಂಬಂಧಿಸಿದ ನಿರ್ಣಯ ಮಂಡಿಸಿದರು.

ಈ ವೇಳೆ ಮಾತನಾಡಿದ ಅವರು, 'ಯಾವುದೇ ಕಾರಣ ನೀಡದೆ ರಾಜ್ಯಪಾಲರು ಮಸೂದೆಗಳನ್ನು ವಾಪಸ್ ಕಳುಹಿಸಿದ್ದಾರೆ. 'ನಾನು ಒಪ್ಪಿಗೆ ನೀಡುವುದಕ್ಕೆ ತಡೆಹಿಡಿದಿದ್ದೇನೆ' ಎಂದಷ್ಟೇ ಟಿಪ್ಪಣಿಯಲ್ಲಿ ನಮೂದಿಸಿದ್ದಾರೆ' ಎಂದು ಹೇಳಿದರು.

ಸಂವಿಧಾನದ ವಿಧಿ 200ರ ಅನ್ವಯ ಮಸೂದೆಗಳನ್ನು ಮತ್ತೆ ಸದನದಲ್ಲಿ ಮಂಡಿಸಿ ಮರು ಅಂಗೀಕಾರ ನೀಡಬಹುದು. ಇದಾದ ಬಳಿಕ ಮತ್ತೆ ರಾಜ್ಯಪಾಲರ ಒಪ್ಪಿಗೆಗೆ ಕಳುಹಿಸಿದರೆ ಅವುಗಳಿಗೆ ಸಹಿ ಹಾಕುವುದನ್ನು ತಡೆಹಿಡಿಯುವಂತಿಲ್ಲ. ಇದನ್ನು ಸದನವು ಅವಲೋಕಿಸಿದೆ ಎಂದರು.

ತಮಿಳುನಾಡು ವಿಧಾನಸಭೆಯ ನಿಯಮ 143ರ ಅನ್ವಯ ಮಸೂದೆಗಳನ್ನು ಸದನದಲ್ಲಿ ಮಂಡಿಸಿ ಮರು ಅಂಗೀಕಾರ ಪಡೆಯಲು ಅವಕಾಶವಿದೆ. ಇದರಡಿ ನಿರ್ಣಯ ಮಂಡಿಸಲಾಗಿದೆ ಎಂದು ಹೇಳಿದರು.

'ಸರ್ಕಾರದ ಯೋಜನೆಗಳಿಗೆ ಅಡ್ಡಗಾಲು ಹಾಕುವುದೇ ರಾಜ್ಯಪಾಲರ ಧೋರಣೆಯಾಗಿದೆ. ಬಿಜೆಪಿಯೇತರ ರಾಜ್ಯಗಳಲ್ಲಿ ರಾಜ್ಯಪಾಲರನ್ನು ಇಂತಹ ಕೆಲಸಗಳಿಗೆ ಕೇಂದ್ರ ಸರ್ಕಾರವು ದಾಳವಾಗಿ ಬಳಸಿಕೊಳ್ಳುತ್ತಿದೆ' ಎಂದು ಹರಿಹಾಯ್ದರು.

'ಶಾಸನ ರಚಿಸುವ ಸದನದ ಅಧಿಕಾರವನ್ನು ಸ್ಥಗಿತಗೊಳಿಸುವುದು ಜನತಂತ್ರ ವ್ಯವಸ್ಥೆಗೆ ಧಕ್ಕೆ ಉಂಟು ಮಾಡುತ್ತದೆ. ಚುನಾಯಿತ ಸರ್ಕಾರವು ಸದನದಲ್ಲಿ ಅಂಗೀಕರಿಸಿದ ಮಸೂದೆಗಳಿಗೆ ಒಪ್ಪಿಗೆ ನೀಡುವುದು ರಾಜ್ಯಪಾಲರ ಕರ್ತವ್ಯವಾಗಿದೆ' ಎಂದು ಪ್ರತಿಪಾದಿಸಿದರು.

'ಒಂದು ವೇಳೆ ಅಂಕಿತ ಹಾಕದಿದ್ದರೆ ಸರ್ಕಾರದಿಂದ ಕಾನೂನು ಅಥವಾ ಆಡಳಿತಾತ್ಮಕ ಸ್ಪಷ್ಟೀಕರಣ ಪಡೆಯಬಹುದು. ಸರ್ಕಾರವೂ ಸ್ಪಷ್ಟೀಕರಣ ನೀಡಲು ಸಿದ್ಧವಿರುತ್ತದೆ. ಈ ಹಿಂದೆಯೂ ರಾಜ್ಯಪಾಲರಿಗೆ ಇಂತಹ ಸ್ಪಷ್ಟೀಕರಣ ನೀಡಿರುವ ನಿದರ್ಶನವಿದೆ' ಎಂದು ಹೇಳಿದರು.

ಸರ್ಕಾರದ ನಡೆ ಖಂಡಿಸಿ ವಿರೋಧ ಪಕ್ಷಗಳಾದ ಎಐಎಡಿಎಂಕೆ ಹಾಗೂ ಬಿಜೆಪಿ ಶಾಸಕರು ಪ್ರತ್ಯೇಕವಾಗಿ ಸಭಾತ್ಯಾಗ ಮಾಡಿದರು.

ಹಿನ್ನೆಲೆ: ಕಾನೂನು, ಕೃಷಿ, ಉನ್ನತ ಶಿಕ್ಷಣ ಸೇರಿದಂತೆ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಈ ಮಸೂದೆಗಳಿಗೆ ರಾಜ್ಯಪಾಲ ಆರ್.ಎನ್. ರವಿ ಅವರು ಒಪ್ಪಿಗೆ ನೀಡಿರಲಿಲ್ಲ.

ರಾಜ್ಯಪಾಲರ ವಿಳಂಬ ಧೋರಣೆ ಪ್ರಶ್ನಿಸಿ ಡಿಎಂಕೆ ಸರ್ಕಾರವು ಸುಪ್ರೀಂ ಕೋರ್ಟ್‌ನ ಮೊರೆ ಹೋಗಿದೆ.

ರಾಜ್ಯಪಾಲರ ಈ ಧೋರಣೆಯ ಬಗ್ಗೆ ಸುಪ್ರೀಂ ಕೋರ್ಟ್ ಚಾಟಿ ಬೀಸಿತ್ತು. ಇದರ ಬೆನ್ನಲ್ಲೇ ನವೆಂಬರ್ 13ರಂದು ಈ ಮಸೂದೆಗಳನ್ನು ಸರ್ಕಾರಕ್ಕೆ ವಾಪಸ್ ಕಳುಹಿಸಲಾಗಿತ್ತು.

> **ರಾಜ್ಯಪಾಲರದು ಭ್ರಮಾತ್ಮಕ ಹಾಗೂ ವಿಲಕ್ಷಣ ವ್ಯಕ್ತಿತ್ವ. ಹಾಗಾಗಿಯೇ, ಮಸೂದೆಗಳಿಗೆ ಒಪ್ಪಿಗೆ ನೀಡಿಲ್ಲ. ವಾಪಸ್ ಕಳುಹಿಸಿ, ತಮಿಳುನಾಡಿನ ಜನರು ಹಾಗೂ ಸದನಕ್ಕೆ ಅವಮಾನ ಮಾಡಿದ್ದಾರೆ**
> **ಎಂ.ಕೆ. ಸ್ಟಾಲಿನ್,** ಮುಖ್ಯಮಂತ್ರಿ

> **ಮಸೂದೆಗಳಿಗೆ ಮತ್ತೊಮ್ಮೆ ಒಪ್ಪಿಗೆ ನೀಡುವ ಅಧಿಕಾರ ಸದನಕ್ಕಿದೆ. ಮತ್ತೆ ರಾಜಭವನಕ್ಕೆ ಮಸೂದೆಗಳನ್ನು ಕಳುಹಿಸಿಕೊಡಲಾಗುವುದು**
> **ಎಂ. ಅಪ್ಪಾವು,** ವಿಧಾನಸಭಾ ಅಧ್ಯಕ್ಷ, ತಮಿಳುನಾಡು

ವಿವಿಧ ಸಂಸ್ಥೆಗಳ ವಿರುದ್ಧ ಪ್ರಕರಣ ದಾಖಲಿಸಿದ ಉತ್ತರಪ್ರದೇಶ ಸರ್ಕಾರ

ಹಲಾಲ್ ಪ್ರಮಾಣೀಕೃತ ಉತ್ಪನ್ನಗಳ ನಿಷೇಧ

ಪ್ರಜಾವಾಣಿ ವಾರ್ತೆ/ ಪಿಟಿಐ

ಲಖನೌ: ಹಲಾಲ್ ಪ್ರಮಾಣೀಕೃತ ಉತ್ಪನ್ನಗಳ ಮಾರಾಟಕ್ಕೆ ಉತ್ತರಪ್ರದೇಶ ಸರ್ಕಾರ ಶನಿವಾರ ನಿಷೇಧ ಹೇರಿದೆ.

ಖಾದ್ಯ ಮತ್ತು ಸೌಂದರ್ಯವರ್ಧಕ ವಸ್ತುಗಳ ಮಾರಾಟಕ್ಕಾಗಿ ನಕಲಿ ಹಲಾಲ್ ಪ್ರಮಾಣಪತ್ರಗಳನ್ನು ನೀಡುವ ಮೂಲಕ ನಿರ್ದಿಷ್ಟ ಸಮುದಾಯದ ಗ್ರಾಹಕರ ಧಾರ್ಮಿಕ ಭಾವನೆಗಳನ್ನು ದುರ್ಬಳಕೆ ಮಾಡಿಕೊಂಡಿರುವ ಆರೋಪದಲ್ಲಿ ವಿವಿಧ ಸಂಸ್ಥೆಗಳ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡ ಬಳಿಕ ಸರ್ಕಾರ ಈ ನಿರ್ಧಾರ ಕೈಗೊಂಡಿದೆ.

ಈ ನಿಷೇಧವು ಔಷಧ ಸೇರಿದಂತೆ ಹಲಾಲ್ ಪ್ರಮಾಣೀಕೃತ ಉತ್ಪನ್ನಗಳ ಉತ್ಪಾದನೆ, ಸಂಗ್ರಹಣೆ ಮತ್ತು ಮಾರಾಟಕ್ಕೆ ಅನ್ವಯವಾಗಲಿದೆ. ರಫ್ತು ಮಾಡುವ ಉತ್ಪನ್ನಗಳಿಗೆ ವಿನಾಯಿತಿ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಲಖನೌನ ಐಶ್‌ಭಾಗ್ ನಿವಾಸಿ ಶೈಲೇಂದ್ರ ಕುಮಾರ್ ಶರ್ಮಾ ಎಂಬುವವರು ನೀಡಿರುವ ದೂರಿನ ಆಧಾರದಲ್ಲಿ ಚೆನ್ನೈನ ಹಲಾಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ದೆಹಲಿಯ ಜಮಿಯತ್ ಉಲೆಮಾ-ಇ-ಹಿಂದ್ ಹಲಾಲ್ ಟ್ರಸ್ಟ್, ಮುಂಬೈನ ಹಲಾಲ್ ಕೌನ್ಸಿಲ್ ಆಫ್ ಇಂಡಿಯಾ, ಮಹಾರಾಷ್ಟ್ರದ ಜಮಿಯತ್ ಉಲೆಮ ಸಂಸ್ಥೆಗಳ ವಿರುದ್ಧ ಹಜರತ್‌ಗಂಜ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ವಿವರಿಸಿವೆ.

ಈ ಸಂಸ್ಥೆಗಳು ಹಣಕ್ಕಾಗಿ ವಿವಿಧ ಕಂಪನಿಗಳಿಗೆ ನಕಲಿ ಹಲಾಲ್ ಪ್ರಮಾಣ ಪತ್ರಗಳನ್ನು ನೀಡುತ್ತಿವೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ ಎಂದಿವೆ. ಈ ಸಂಸ್ಥೆಗಳಿಗೆ ಇಂತಹ ಪ್ರಮಾಣಪತ್ರ ನೀಡುವ ಯಾವುದೇ ಅಧಿಕಾರವಿಲ್ಲ ಎಂದೂ ಹೇಳಿವೆ.

ಆರೋಪಗಳನ್ನು ಅಲ್ಲಗಳೆದಿರುವ ಜಮಿಯತ್ ಉಲೆಮ-ಇ-ಹಿಂದ್ ಹಲಾಲ್ ಟ್ರಸ್ಟ್, ತಪ್ಪು ಮಾಹಿತಿ ಪ್ರಚಾರ ಮಾಡಿರುವುದರ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗುವುದಾಗಿ ಹೇಳಿದೆ.

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಧಿಸೂಚನೆಯಂತೆ ನಾವು ಸರ್ಕಾರದ ನಿಯಮಗಳನ್ನು ಪಾಲಿಸಿದ್ದೇವೆ. ಹಲಾಲ್ ಉತ್ಪನ್ನಗಳು ಅಗತ್ಯವಿಲ್ಲದ ಗ್ರಾಹಕರಿಗೆ ಅದನ್ನು ನಿರಾಕರಿಸುವ ಸ್ವಾತಂತ್ರ್ಯವಿದೆ ಎಂದು ತಿಳಿಸಿದೆ.

ಶಾಂತಿ ಮಾತುಕತೆಗೆ ನಿಯೋಗದ ಒತ್ತಾಯ

ಮಣಿಪುರ ಸಂಘರ್ಷ

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಶಾಂತಿ ಮತ್ತು ಸಹಜ ಸ್ಥಿತಿಯನ್ನು ಮರು ಸ್ಥಾಪಿಸುವ ನಿಟ್ಟಿನಲ್ಲಿ ಮೈತೇಯಿ ಮತ್ತು ಕುಕಿ ಸಮುದಾಯಗಳ ಮುಖಂಡರ ಜೊತೆ ಮಾತುಕತೆ ನಡೆಸಬೇಕು ಎಂದು ಮಣಿಪುರದ 10 ರಾಜಕೀಯ ಪಕ್ಷಗಳ ನಿಯೋಗವು ರಾಜ್ಯಪಾಲೆ ಅನುಸೂಯಾ ಉಯಿಕೆ ಅವರನ್ನು ಒತ್ತಾಯಿಸಿದೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಒ ಐಬೊಬಿ ಸಿಂಗ್ ನೇತೃತ್ವದ ಈ ನಿಯೋಗವು ಈ ಸಂಬಂಧ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದ್ದು, ಕೇಂದ್ರ ಸರ್ಕಾರ, ಅದರಲ್ಲೂ ವಿಶೇಷವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಸ್ಥಿಕೆ ವಹಿಸದೆ ಇದ್ದರೆ ರಾಜ್ಯದಲ್ಲಿ ಶಾಂತಿ ಮರುಕಳಿಸದು ಎಂದು ತಿಳಿಸಿದೆ.

ರಾಜ್ಯದಲ್ಲಿರುವ ಎರಡೂ ಸಮುದಾಯಗಳ ಜೊತೆ ಶೀಘ್ರದಲ್ಲೇ ಶಾಂತಿ ಮಾತುಕತೆ ನಡೆಸಬೇಕು. ಈ ಮೂಲಕ ರಾಜ್ಯದಲ್ಲಿನ ಬಿಕ್ಕಟ್ಟನ್ನು ಬಗೆಹರಿಸಬಹುದು ಎಂದು ನಿಯೋಗವು ತಿಳಿಸಿದೆ ಎಂದು ರಾಜಭವನ ಬಿಡುಗಡೆ ಮಾಡಿರುವಹೇಳಿಕೆಯಲ್ಲಿತಿಳಿಸಲಾಗಿದೆ.

ಈ ಎರಡೂ ಸಮುದಾಯಗಳ ಸಭೆ ನಡೆಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ರಾಜ್ಯಪಾಲರು ತಿಳಿಸಬೇಕು ಎಂದು ಒತ್ತಾಯಿಸಿದ ನಿಯೋಗವು, ಮಣಿಪುರದಲ್ಲೇ ಪ್ರಧಾನಿ ಅವರೊಂದಿಗೆ ಸರ್ವಪಕ್ಷಗಳ ಸಭೆಗೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದೆ. ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವಿನ ಸಂಘರ್ಷದಿಂದಾಗಿ ಮಣಿಪುರದಲ್ಲಿ ಕೆಲವು ತಿಂಗಳಿನಿಂದ ಉದ್ವಿಗ್ನ ಸ್ಥಿತಿ ಉಂಟಾಗಿದೆ.



ಸಿಐಎಎಲ್: ನವಮನ್ವಂತರದತ್ತ ಕೊಂಡೊಯ್ದ ಐಎಎಸ್ ಸುಹಾಸ್

ಕೇರಳದಲ್ಲಿ ಅಚ್ಚ ಕನ್ನಡಿಗನ ನೆಚ್ಚಿನ ಆಡಳಿತ

ದೇವರ ನಾಡು ಎಂದೇ ಕರೆಯಲ್ಪಡುವ ಕೇರಳದಲ್ಲಿ ಸ್ಥಳೀಯ ಭಾಷೆ ಅರಿವಿರದ ಹಾಗೂ ಹೊರ ರಾಜ್ಯದಿಂದ ಬಂದ ಅಧಿಕಾರಿಗಳಿಗೆ ಪ್ರಾತಿನಿಧ್ಯ ದೊರಕುವುದು ಸುಲಭ ಸಾಧ್ಯವಲ್ಲ. ಅಭಿವೃದ್ಧಿ ವಿಷಯದಲ್ಲಿ ಮೇಲ್ಪಂಕ್ತಿಯ ಈ ರಾಜ್ಯದ ಸಾಮಾಜಿಕ ಮತ್ತು ಆಡಳಿತ ವಲಯದಲ್ಲಂತೂ ಯಾವುದೇ ನವೀನ ಆಲೋಚನೆಗಳನ್ನು ಮತ್ತು ಯೋಜನೆಗಳನ್ನು ಕಾರ್ಯಗತ ಗೊಳಿಸುವುದಂತೂ ಕನಸಿನ ಮಾತು.

ಅಂತಹ ಕ್ಲಿಷ್ಟ ವಾತಾವರಣದ ನಾಡಿನಲ್ಲಿ ಅಪ್ಪಟ ಕನ್ನಡಿಗ, ಯುವ ಐಎಎಸ್ ಅಧಿಕಾರಿ ಎಸ್. ಸುಹಾಸ್ ಅವರಿಗೆ ಸೇವೆ ಸಲ್ಲಿಸುವ ಅವಕಾಶ ದೊರೆತಿರುವುದು ಆಶ್ಚರ್ಯಕರ ಸಂಗತಿ. ಕೇರಳದ ಆಡಳಿತ ವ್ಯವಸ್ಥೆಯ ಆಳಕ್ಕಿಳಿದು ಅಮೋಘ ಯಶಸ್ಸನ್ನು ಕಂಡಿರುವ ಆ ವಿಶಿಷ್ಟ ವ್ಯಕ್ತಿಯ ಬಗ್ಗೆ ತಿಳಿದುಕೊಳ್ಳೋಣ.

ಹೆಸರು ಎಸ್. ಸುಹಾಸ್, ಮಂಡ್ಯ ಜಿಲ್ಲೆಯವರು. ತಾನು ಹುಟ್ಟಿ, ಬೆಳೆದ ನಾಡಿನ ಸಂಸ್ಕೃತಿ ಮತ್ತು ಪರಂಪರೆ ಬಗ್ಗೆ ಅಪಾರ ಗೌರವ ಹಾಗೂ ಹೆಮ್ಮೆ ಹೊಂದಿರುವ ಸುಹಾಸ್, ಭಾರತೀಯ ಆಡಳಿತ ಸೇವೆಯಲ್ಲಿ ಕಾರ್ಯ ನಿರ್ವಹಿಸಲು ಪಾದಾರ್ಪಣೆ ಮಾಡಿದ ಮೊಟ್ಟ ಮೊದಲ ರಾಜ್ಯ ಕೇರಳ.

ಸುಹಾಸ್ ಅವರು ಜವಾಬ್ದಾರಿ ವಹಿಸಿಕೊಂಡ ಆರಂಭ ದಿನದಿಂದಲೇ ನೂತನ ತಾಂತ್ರಿಕ ಆವಿಷ್ಕಾರಗಳನ್ನು ಅಳವಡಿಸಿದ್ದಲ್ಲದೇ ಆಡಳಿತಾತ್ಮಕ ವಿಧಾನಗಳನ್ನು ಪರಿಷ್ಕರಿಸಿದರು. ಇಷ್ಟಕ್ಕೆ ಸೀಮಿತಗೊಳ್ಳದ ಅವರು ವಾಯುಯಾನ ಮತ್ತು ವಿಮಾನ ನಿಲ್ದಾಣ ಕಾರ್ಯಾಚರಣೆ ವಲಯದಲ್ಲೂ ಪ್ರಗತಿಯ ದ್ಯೋತಕವಾಗಿ ಹೊರಹೊಮ್ಮಿದರು. ಕೇವಲ ಆಡಳಿತಾತ್ಮಕ ಸಂಗತಿಗಳಲ್ಲಿ ಮಾತ್ರ ನವೀನ ವಿಧಾನಗಳನ್ನು ಅನುಸರಿಸದೆ, ಈ ಪ್ರದೇಶದಲ್ಲಿ ವಾಯುಯಾನ ಮತ್ತು ವಿಮಾನ ನಿಲ್ದಾಣ ನಿರ್ವಹಣೆಯ ಗುಣಮಟ್ಟವನ್ನು ಹೆಚ್ಚಿಸುವಲ್ಲೂ ಶ್ರಮಿಸಿದರು.

ಮಂಡ್ಯದ ಪ್ರತಿಷ್ಠಿತ ಕುಟುಂಬ

ಮಂಡ್ಯ ಜಿಲ್ಲೆಯ ಗೌರವಾನ್ವಿತ ಕುಟುಂಬ ಸುಹಾಸ್ ಅವರದು. ತಂದೆ ಸಿ.ಕೆ. ಶಿವಣ್ಣ, ಭಾರತೀಯ ಅರಣ್ಯ ಸೇವೆಯ (ಐಎಫ್‌ಎಸ್) ನಿವೃತ್ತ ಅಧಿಕಾರಿ. ಜಿಲ್ಲೆಯ ಪ್ರಗತಿಪರ ಕೃಷಿ ಕುಟುಂಬದಲ್ಲಿ ಬೆಳೆದ ಸುಹಾಸ್, ಚಿಕ್ಕರಾಸಿನಕೆರೆಯ ಕಾಳಭೈರವೇಶ್ವರ ದೇವಸ್ಥಾನದೊಂದಿಗೆ ಆಳವಾದ ಸಂಪರ್ಕ ಹೊಂದಿದ್ದಾರೆ. ಆಧ್ಯಾತ್ಮಿಕತೆ ಮತ್ತು ಸಂಸ್ಕಾರವನ್ನು ಮೈಗೂಡಿಸಿಕೊಂಡಿರುವ ಅವರು ಕುಟುಂಬದ ಮೌಲ್ಯಗಳನ್ನು ಸಾಧನೆ ಮೂಲಕ ಎತ್ತಿಹಿಡಿದಿದ್ದಾರೆ. ಮಂಡ್ಯ ಜನತೆಗೆ ಸ್ಫೂರ್ತಿದಾಯಕರಾಗಿರುವ ಸುಹಾಸ್, ಒಬ್ಬ ನೈಜ ಐಎಎಸ್ ಅಧಿಕಾರಿಯಾದರೂ ಸಾಂಸ್ಕೃತಿಕ ಪರಂಪರೆ ಮತ್ತು ಪ್ರಗತಿಪರ ಮೌಲ್ಯಗಳ ಸಾಕಾರಮೂರ್ತಿ ಎನಿಸಿದ್ದಾರೆ.

ಐಟಿ To ಐಎಎಸ್: ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದ ಸುಹಾಸ್, ಐಟಿ ವೃತ್ತಿಜೀವನದಲ್ಲಿ ಯಶಸ್ವಿ ಕಂಡರೂ ಆಡಳಿತಾತ್ಮಕ ಸೇವಾ ಕ್ಷೇತ್ರದಲ್ಲಿ ಹೆಚ್ಚಿನ ಒಲವು ಹೊಂದಿದ್ದರು. ಕಾರಣ, ಅವರಿಗೆ ಜನರ ಮೇಲಿರುವ ಕಾಳಜಿ. ಅಲ್ಲದೆ ನೇರವಾಗಿ ಅವರ ಬದುಕಿನ ಮೇಲೆ ಸ್ಪಷ್ಟ ಪ್ರಭಾವ ಬೀರಬಹುದೆಂಬ ಕಾಳಜಿ ಕೂಡ.



ಕೊಚ್ಚಿನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ವಿಹಂಗಮ ನೋಟ

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಅತ್ಯಂತ ಕಠಿಣ ಸ್ಪರ್ಧಾತ್ಮಕ ಪರೀಕ್ಷೆಗಳೊಂದಾದ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಮೊದಲ ಪ್ರಯತ್ನದಲ್ಲೇ ತೇರ್ಗಡೆ ಹೊಂದಿದರು. ಐಎಎಸ್ ಪರೀಕ್ಷೆಯಲ್ಲಿ ಉತ್ತಮ ರ್‍ಯಾಂಕ್ ಗಳಿಸಿದ್ದರಿಂದ ಕೇರಳ ಕೇಡರ್‌ಗೆ ನೇಮಕಗೊಂಡರು.

'ಅತ್ಯುತ್ತಮ ಯೋಜನಾ ಅಧಿಕಾರಿ': ಎರ್ನಾಕುಲಂನ ಅಸಿಸ್ಟೆಂಟ್ ಕಲೆಕ್ಟರ್ ಆಗಿ ಶುರುವಾದ ಸುಹಾಸ್ ಅವರ ಆಡಳಿತಾತ್ಮಕ ಪಯಣದಲ್ಲಿ ಬಹಳ ಬೇಗ ಯಶಸ್ಸನ್ನು ಕಂಡರು. ಆಡಳಿತದಲ್ಲಿ ತಂತ್ರಜ್ಞಾನವನ್ನು ಬಳಸಿಕೊಳ್ಳುವಲ್ಲಿ ಹೆಚ್ಚು ಒತ್ತು ನೀಡುವ ಮೂಲಕ ಪರಿಣಾಮಕಾರಿ ಆಡಳಿತ ಸೇವೆಯಲ್ಲಿ ತಮ್ಮ ಛಾಪನ್ನು ಮೂಡಿಸಿದರು. ಆಡಳಿತದಲ್ಲಿ ಸುಹಾಸ್ ಅವರ ಅತ್ಯುತ್ತಮ ಕೊಡುಗೆಯನ್ನು ಗುರುತಿಸಿದ ಕೇರಳ ಸರ್ಕಾರ 'ಕೊಚ್ಚಿ ಸ್ಮಾರ್ಟ್ ಸಿಟಿ' ಉಪಕ್ರಮಕ್ಕಾಗಿ ನೀಡುವ ಪ್ರತಿಷ್ಠಿತ 'ಅತ್ಯುತ್ತಮ ಯೋಜನಾ ಅಧಿಕಾರಿ'ಪ್ರಶಸ್ತಿ ನೀಡಿ ಗೌರವಿಸಿತು.

ಶೂನ್ಯ ಡ್ರಾಪ್‌ಔಟ್ ವಯನಾಡ್

ಆಲಪ್ಪುಳ, ವಯನಾಡು ಮತ್ತು ಎರ್ನಾಕುಲಂ ಜಿಲ್ಲೆಗಳ ಕಲೆಕ್ಟರ್ ಆಗಿ ಸೇವೆ ಸಲ್ಲಿಸಿದ ಸುಹಾಸ್, ವಯನಾಡು ಜಿಲ್ಲೆಯ ಬುಡಕಟ್ಟು ಜನಾಂಗದಲ್ಲಿ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಶಾಲೆ ಬಿಟ್ಟ ವಿದ್ಯಾರ್ಥಿಗಳ ಸಂಖ್ಯೆಯನ್ನು ಶೂನ್ಯವಾಗಿಸುವ ಉದ್ದೇಶದಿಂದ 'ಶೂನ್ಯ ಡ್ರಾಪ್‌ಔಟ್ ವಯನಾಡ್' ಕಾರ್ಯಕ್ರಮ ಪ್ರಾರಂಭಿಸಿದರು. ಇತರ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಜೊತೆಯಲ್ಲಿಯೇ ಶಾಲೆಬಿಟ್ಟ ವಿದ್ಯಾರ್ಥಿಗಳನ್ನು ವೈಯಕ್ತಿಕವಾಗಿ ಕೊಚ್ಚಿ ಮೆಟ್ರೊ ರೈಲಿನಲ್ಲಿ ಕರೆದೊಯ್ಯುವ ಮೂಲಕ ಪ್ರತಿಶತ 75 ರಷ್ಟು ಬುಡಕಟ್ಟು ಮಕ್ಕಳನ್ನು ಶಿಕ್ಷಣ ವ್ಯವಸ್ಥೆಗೆ ಮರು ಸಂಘಟಿಸಿದರು.

ಆಲಪ್ಪುಳದ ಜಿಲ್ಲಾ ಕಲೆಕ್ಟರ್ ಆಗಿದ್ದ ಅವಧಿಯಲ್ಲಿ ಜಿಲ್ಲೆಯ ಸರ್ಕಾರಿ ಶಾಲೆಯೊಂದಕ್ಕೆ ಭೇಟಿ ನೀಡಿ ಶಾಲೆಗಳಲ್ಲಿ ಗುಣಮಟ್ಟದ ಮಧ್ಯಾಹ್ನದ ಊಟ (ಮಿಡ್–ಡೇ ಮೀಲ್)ದ ಅವಶ್ಯಕತೆ ಬಗ್ಗೆ ಮನವರಿಕೆ ಮಾಡಿಕೊಟ್ಟು ಜನರ ಮನಗೆದ್ದರು. ಇದಲ್ಲದೆ, ಆಲಪ್ಪುಳದಲ್ಲಿ ಪ್ರವಾಸೋದ್ಯಮದ ಅಭೂತಪೂರ್ವ ಯಶಸ್ಸಿಗೆ ರೂಪಿಸಿದ್ದ ಕಾರ್ಯತಂತ್ರ ಹಾಗೂ ಪ್ರಯತ್ನಗಳ ಬಗ್ಗೆಯೂ ವಿವರಿಸಿದರು.



ಕೊಚ್ಚಿನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿಂತಿರುವ ವಿಮಾನಗಳು

'ಕ್ಲೀನ್ ಎರ್ನಾಕುಲಂ'

ಎರ್ನಾಕುಲಂನ ಜಿಲ್ಲಾಧಿಕಾರಿಯಾಗಿ ಸುಹಾಸ್ ಅವರು ಬಹಳಷ್ಟು ಸವಾಲುಗಳನ್ನು ಎದುರಿಸಬೇಕಾಯಿತು. ಕರಾವಳಿ ಸವೆತ, ವಿನಾಶಕಾರಿ ಸಮುದ್ರ ಅಲೆಗಳ ಹೊಡೆತ. ಇದರ ಜತೆಯಲ್ಲಿ ಕೋವಿಡ್–19 ಸಾಂಕ್ರಾಮಿಕ ಎದುರಿಸಬೇಕಾದ ಪರಿಸ್ಥಿತಿ ಒದಗಿಬಂದಿತ್ತು. ಆದರೂ, ಸಾರ್ವಜನಿಕರ ಕಲ್ಯಾಣದ ಬಗ್ಗೆ ಇದ್ದ ಕಾಳಜಿ ಮಾತ್ರ ಕೊಂಚವೂ ಕಡಿಮೆಯಾಗಲಿಲ್ಲ.'ಅಪರೇಷನ್ ಬ್ರೇಕ್‌ಥ್ರೂ' ಜಾರಿಗೆ ತಂದು, ನೀರಿನ ಅಡಚಣೆಯ ವಿರುದ್ಧ ಹೋರಾಡಿದರು. 'ಕ್ಲೀನ್ ಎರ್ನಾಕುಲಂ' ಜಾರಿಗೆ ತರುವ ಮೂಲಕ ಯಶಸ್ವಿಯಾಗಿ ತ್ಯಾಜ್ಯ ನಿರ್ವಹಣೆ ಮಾಡಿ ಚಾಣಾಕ್ಷ ನಾಯಕತ್ವವನ್ನು ಪ್ರದರ್ಶಿಸಿದ್ದರು. ಕೋವಿಡ್ ಸಾಂಕ್ರಾಮಿಕ ಕಾಲದಲ್ಲಿ ಜಿಲ್ಲೆಯಲ್ಲಿ 'ಆಕ್ಸಿಜನ್ ವಾರ್ ರೂಂ' ಹಾಗೂ 'ರೋಗಿ ಲಿಫ್ಟ್ ಕೇರ್' ಉಪಕ್ರಮ ಅಳವಡಿಸಿ ಸಮಸ್ಯೆಗೆ ಪರಿಹಾರ ಕಂಡುಹಿಡಿದರು. ಇದು ರಾಷ್ಟ್ರ ಮಟ್ಟದಲ್ಲಿ ಗುರುತಿಸಲ್ಪಟ್ಟಿತು. ಸಾಂಕ್ರಾಮಿಕ ರೋಗದ ವಿರುದ್ಧದ ಹೋರಾಟದಲ್ಲಿ ಎರ್ನಾಕುಲಂ ಜಿಲ್ಲೆಯನ್ನುಇಡೀ ದೇಶಕ್ಕೆ ಮಾದರಿ ಮಾಡಿದರು. ಜಿಲ್ಲೆಯ ಜನರ ರಕ್ಷಣೆಗಾಗಿ ರೂಪಿಸಿದ್ದ ಎಲ್ಲ ಯೋಜನೆಗಳು ಇವರ ಅವಧಿಯಲ್ಲಿ ಯಶಸ್ವಿಯಾಗಿ ಕಾರ್ಯರೂಪಕ್ಕೆ ತಂದರು.

ಯಶಸ್ಸಿನ ಮನ್ವಂತರದತ್ತ ಸಿಐಎಎಲ್

ವಿನಾಶಕಾರಿ ಪ್ರವಾಹ ಪರಿಸ್ಥಿತಿ ಮತ್ತು ಕೋವಿಡ್–19 ಸಾಂಕ್ರಾಮಿಕವನ್ನು ಪರಿಣಾಮ ಎದುರಿಸಿ ಆಗಷ್ಟೇ ಹೊರಬಂದಿದ್ದ ಸುಹಾಸ್ ಅವರು ಕೊಚ್ಚಿನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ (ಸಿಐಎಎಲ್)ದ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಳ್ಳಬೇಕಾಗಿ ಬಂತು. ಅಭಿವೃದ್ಧಿ ಕುಂಠಿತ ಸ್ಥಿತಿಯಲ್ಲಿದ್ದ ಸಿಐಎಎಲ್, ಎಲ್ಲ ರಂಗಗಳಲ್ಲೂ ಗಣನೀಯ ನಷ್ಟ ಅನುಭವಿಸುತ್ತಿದ್ದ ಕಾಲ ಅದು. ಅಂತಹ ದಿನಗಳಲ್ಲಿ ಮಹತ್ವದ ಜವಾಬ್ದಾರಿ ವಹಿಸಿಕೊಂಡು ಕಂಪನಿಗೆ ಗಮನಾರ್ಹ ತಿರುವು ತಂದುಕೊಟ್ಟ ಸುಹಾಸ್, ಸರಣಿ ರೂಪದಲ್ಲಿ ಪರಿಣಮಕಾರಿ ನೀತಿಗಳನ್ನು ಜಾರಿಗೆ ತಂದು ಕಂಪನಿಗೆ ಸ್ಥಿರತೆ ತಂದರು. ಅಷ್ಟು ಮಾತ್ರವಲ್ಲದೇ ಯಶಸ್ಸಿನ ಮನ್ವಂತರದತ್ತ ಸಿಐಎಎಲ್ ಅನ್ನುಕೊಂಡೊಯ್ದರು.

'ಏರ್‌ಪೋರ್ಟ್ ಸರ್ವೀಸ್ ಕ್ವಾಲಿಟಿ ಪ್ರಶಸ್ತಿ–2022': ಕೋವಿಡ್–19 ನಿಂದಾಗಿ ವಿಮಾನ ಪ್ರಯಾಣಿಕರ ಚಲನೆ ಸಂಪೂರ್ಣ ಸ್ಥಗಿತಗೊಂಡು, ಸಿಐಎಎಲ್‌ನ ಎಲ್ಲ ರಂಗಗಳಲ್ಲೂ ಕುಸಿತ ಕಂಡುಬಂದಿತ್ತು. ಆದರೂ ಎದೆಗುಂದದೆ ಸುಹಾಸ್ ಅವರು 2021–22ರ ಸಾಂಕ್ರಾಮಿಕ ವರ್ಷದಲ್ಲಿ ಸುರಕ್ಷಿತ, ಸುಭದ್ರ ಮತ್ತು ಪ್ರಯಾಣಿಕ ಸ್ನೇಹಿ ಕಾರ್ಯಾಚರಣೆಗಳನ್ನು ಖಚಿತಪಡಿಸುವ 'ಮಿಷನ್ ಸೇಫ್‌ಗಾರ್ಡಿಂಗ್' ಕಾರ್ಯಕ್ರಮ ಜಾರಿಗೆ ತಂದರು. ಈ ಕಾರ್ಯಕ್ರಮ ಅನುಷ್ಠಾನದಿಂದ ಸಿಐಎಎಲ್ ಪುನರಾಗಮ ಸ್ಥಿತಿಗೆ ಬಂದಿದ್ದು ಮಾತ್ರವಲ್ಲದೆ, ಈ ಉಪಕ್ರಮ ಅನುಷ್ಠಾನ ಸಿಐಎಎಲ್‌ಗೆ ಪ್ರತಿಷ್ಠಿತ 'ಏರ್‌ಪೋರ್ಟ್ ಸರ್ವೀಸ್ ಕ್ವಾಲಿಟಿ ಪ್ರಶಸ್ತಿ–2022'ತಂದುಕೊಟ್ಟಿತು.

1000 ಕೋಟಿ ಕ್ಲಬ್ ಸೇರುವ ನಿರೀಕ್ಷೆ: 2020–21ರ ಸಾಲಿನಲ್ಲಿ ₹85 ಕೋಟಿ ನಷ್ಟ ಅನುಭವಿಸಿದ್ದ ಸಿಐಎಎಲ್, ಸುಹಾಸ್ ಅವರ ಕಾರ್ಯತಂತ್ರದ ಯೋಜನೆ, ತಂಡದ ಸಮರ್ಪಣೆ ಹಾಗೂ ಪ್ರಾಮಾಣಿಕ ಪ್ರಯತ್ನದಿಂದ ಕಂಪೆನಿ ಆರ್ಥಿಕ ಸ್ಥಿತಿ ಉತ್ತಮಗೊಂಡಿತು. 2021–22ರ ಹಣಕಾಸು ವರ್ಷದಲ್ಲಿ ಸಿಐಎಎಲ್ ₹37 ಕೋಟಿ ಲಾಭ ಗಳಿಸಿ ದಾಖಲೆ ನಿರ್ಮಿಸಿತು. ಕೋವಿಡ್–19 ನಂತರ ಲಾಭ ಗಳಿಸಿದ ಭಾರತದ ಏಕೈಕ ವಿಮಾನ ನಿಲ್ದಾಣ ಎಂಬ ಖ್ಯಾತಿಗೂ ಪಾತ್ರವಾಯಿತು. ಕಳೆದ ವಿತ್ತೀಯ ವರ್ಷದಲ್ಲಿ ₹521.50 ಕೋಟಿ ಕಾರ್ಯನಿರ್ವಹಣಾ ಲಾಭ ಗಳಿಸಿ, ₹267 ಕೋಟಿ ನಿವ್ವಳ ಲಾಭ ದಾಖಲಿಸಿ ಇತಿಹಾಸ ಸೃಷ್ಟಿಸಿತು. ಪ್ರಸಕ್ತ ಹಣಕಾಸು ವರ್ಷದಲ್ಲಿ ಗಮನಾರ್ಹ ಯಶಸ್ಸು ಸಾಧಿಸುವ ಮೂಲಕ 1000 ಕೋಟಿ ಕ್ಲಬ್ ಸೇರುವ ನಿರೀಕ್ಷೆ ಗುರಿ ಇಟ್ಟುಕೊಂಡಿದೆ. ಒಟ್ಟಾರೆ, ಸಿಐಎಎಲ್ ಅನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವತ್ತ ಚಿತ್ತ ಹರಿಸಿರುವ ಮ್ಯಾನೇಜಿಂಗ್ ಡೈರೆಕ್ಟರ್ ಸುಹಾಸ್ ಅವರಿಗೆ ಎಲ್ಲರ ಸಹಕಾರವಿರುವುದು ಸಂತಸದ ಸಂಗತಿ.

ಕೊಚ್ಚಿನ್: ಅತ್ಯುತ್ತಮ ಏರ್‌ಪೋರ್ಟ್‌ಗಳಲ್ಲಿ ಒಂದಾಗಲಿದೆ



ಸಿಐಎಎಲ್, ವ್ಯವಸ್ಥಾಪಕ ನಿರ್ದೇಶಕ ಎಸ್. ಸುಹಾಸ್

2023ರ ಅಕ್ಟೋಬರ್ 2ರಂದು ಸಿಐಎಎಲ್ 7 ಮೆಗಾ ಯೋಜನೆಗಳನ್ನು ಅನಾವರಣಗೊಳಿಸಿ ಮೂಲಸೌಕರ್ಯ ಅಭಿವೃದ್ಧಿಯ ಹೊಸ ಶಕೆಯನ್ನು ಮುಂದುವರಿಸಿದೆ. ಸರಕು ಸಾಗಣೆ, ಪ್ರಯಾಣಿಕರ ದಟ್ಟಣೆ ಬೆಳವಣಿಗೆ, ಬೃಹತ್ ಆಮದು ಟರ್ಮಿನಲ್, ಅಂತರರಾಷ್ಟ್ರೀಯ ಟರ್ಮಿನಲ್‌ನ 1ನೇ ಹಂತದ ವಿಸ್ತರಣೆ ಕಾಮಗಾರಿ, ಆಧುನೀಕರಿಸಿದ ಏರ್‌ಪೋರ್ಟ್‌ನ ಸುರಕ್ಷತಾ ಸೇವೆಗಳಲ್ಲಿ ಹೆಚ್ಚಳ, ಡಿಜಿಯಾತ್ರಾ ತಂತ್ರಜ್ಞಾನ ಅಳವಡಿಕೆ. ಗಾಲ್ಫ್ ಪ್ರವಾಸೋದ್ಯಮ ಯೋಜನೆ, ಪರಿಧಿಯ ಒಳನುಗ್ಗುವಿಕೆ ಪತ್ತೆ (PIDS) ಅನುಷ್ಠಾನ, ಭಾರತದ ಅತಿ ದೊಡ್ಡ ಏರೋ ಲಾಂಚ್ ನಿರ್ಮಾಣ ಕಾಮಗಾರಿ ('0484' ಎಂದು ನಾಮಕರಣ). ಈ ಎಲ್ಲ ಯೋಜನೆಗಳು ಸಿಐಎಎಲ್ ಅನ್ನು ಅಭಿವೃದ್ಧಿಯ ಪಥದತ್ತ ಕೊಂಡೊಯ್ಯಲಿರುವುದು ಮಾತ್ರವಲ್ಲದೆ, ಭಾರತದ ಅತ್ಯುತ್ತಮ ಏರ್‌ಪೋರ್ಟ್‌ಗಳಲ್ಲಿ ಒಂದಾಗಿಸಲಿದೆ ಎಂದು ವ್ಯವಸ್ಥಾಪಕ ನಿರ್ದೇಶಕ ಎಸ್. ಸುಹಾಸ್ ನುಡಿದಿದ್ದಾರೆ.

ಕಳೆದ 18 ತಿಂಗಳಲ್ಲಿ ಸಿಐಎಎಲ್ ಮೂರು ಬೃಹತ್ ಯೋಜನೆಗಳನ್ನು ಗೊತ್ತುಪಡಿಸಿದೆ. ಕಣ್ಣೂರಿನ ಪಯ್ಯನೂರಿನಲ್ಲಿ 12 ಮೆಗಾ ವ್ಯಾಟ್ ಸೋಲಾರ್ ಪ್ಲಾಂಟ್, ಅರಿಪ್ಪರಾದಲ್ಲಿ 4.5 ಮೆಗಾ ವ್ಯಾಟ್ ರನ್–ಆಫ್–ದಿ–ರಿವರ್ ಪ್ರಾಜೆಕ್ಟ್ ಮತ್ತು ಕೋಜಿಕ್ಕೋಡ್‌ನಲ್ಲಿ ಬಿಸಿನೆಸ್ ಜೆಟ್ ಟರ್ಮಿನಲ್ (ಪ್ರಥಮ ಚಾರ್ಟಡ್ ಫ್ಲೈಯಿಂಗ್ ಯೋಜನೆ). ಇದರೊಟ್ಟಿಗೆ ಕಂಪೆನಿ 163 ಯೋಜನೆಗಳನ್ನು ಹಾಕಿಕೊಂಡಿದ್ದು, ಅವುಗಳಲ್ಲಿ 9 ಅತಿ ಮುಖ್ಯ ಯೋಜನೆಗಳಾಗಿವೆ.

ಆದಾಯ ಮೂಲದತ್ತ ಗಮನ: ವಾಯುಯಾನ ಹೊರತುಪಡಿಸಿ ನಾನಾ ರೀತಿ ಸುಸ್ಥಿರ ಆದಾಯದ ಮೂಲದತ್ತ ಗಮನಹರಿಸಿರುವ ಸಿಐಎಎಲ್ 5 ಸ್ಟಾರ್ ಹೋಟೆಲ್‌ಗಳ ನಿರ್ಮಾಣ ಯೋಜನೆ ಹಾಕಿಕೊಂಡಿದೆ. ಅದನ್ನು IHCL-TAJ ಸಮೂಹ ಕೈಗೆತ್ತಿಕೊಂಡಿದೆ. ಜೊತೆಯಲ್ಲಿ ಐಷಾರಾಮಿ ಸಾರಿಗೆ ಸೌಕರ್ಯಗಳು ಒದಗಿಸುವ ಕಾರ್ಯವೂ ನಿರ್ಮಾಣ ಹಂತದಲ್ಲಿದೆ. ಹೊಸ ಅಂತಾರಾಷ್ಟ್ರೀಯ ಮಾರ್ಗಗಳನ್ನು ಪರಿಚಯಿಸುವ ಹಾಗೂ ವಿವಿಧ ಸ್ಥಳಗಳಿಗೆ ಸಂಪರ್ಕಗಳನ್ನು ಕಲ್ಪಿಸುವ ಮೂಲಕ ವಿಮಾನ ಪ್ರಯಾಣದ ಆಯ್ಕೆಗಳನ್ನು ವಿಸ್ತರಿಸಲು ಸಿಐಎಎಲ್ ಪ್ರಯತ್ನಿಸುತ್ತಿದೆ. ಅದರ ಭಾಗವಾಗಿ ಕೊಚ್ಚಿನ್‌ನಿಂದ ವಿಯೆಟ್ ಜೆಟ್ ಮೂಲಕ ವಿಯಾಟ್ನಾಂಗೆ ನೇರ ವಿಮಾನ ಪ್ರಾರಂಭಿಸಲಿರುವ ಕೇರಳದ ಮೊದಲ ವಿಮಾನ ನಿಲ್ದಾಣ ಸಿಐಎಎಲ್ ಆಗಲಿದೆ. ಇದು ಎರಡು ದೇಶಗಳ ನಡುವೆ ಪ್ರವಾಸೋದ್ಯಮ ಮತ್ತು ವ್ಯಾಪಾರವನ್ನು ಉತ್ತೇಜಿಸುವ ಮಹತ್ವದ ಕ್ರಮವಾಗಲಿದೆ. ಭವಿಷ್ಯದಲ್ಲಿ ಯುರೋಪ್ ರಾಷ್ಟ್ರಗಳಿಗೂ ನೇರ ಸಂಪರ್ಕ ಸಾಧಿಸುವ ಇಚ್ಛೆ ಇದೆ. ಈಗಾಗಲೇ ಬಿಸಿನೆಸ್ ಜೆಟ್ ಟರ್ಮಿನಲ್ 500ಕ್ಕೂ ಹೆಚ್ಚು ಜೆಟ್‌ಗಳ ಕಾರ್ಯಾಚರಣೆ ನಡೆಸುತ್ತಿದ್ದು, ಮುಂದಿನ ವರ್ಷದಲ್ಲಿ ಸರಾಸರಿ 1000 ಜೆಟ್ ಹಾಗೂ ಪ್ರತಿದಿನ 5 ಲ್ಯಾಂಡಿಂಗ್‌ಗಳ ನಿರೀಕ್ಷೆ ಇಟ್ಟುಕೊಂಡಿದ್ದೇವೆ ಎಂದಿದ್ದಾರೆ.

ಕುಮಾರಸ್ವಾಮಿಗೆ ಅಧಿಕಾರ ಬಿಟ್ಟು ಬದುಕಲು ಸಾಧ್ಯವಾಗುತ್ತಿಲ್ಲ: ಕೃಷಿ ಸಚಿವ ಎನ್‌. ಚಲುವರಾಯಸ್ವಾಮಿ ಆರೋಪ

ಎಚ್‌ಡಿಕೆಗೆ ಪ್ರಧಾನಿ, ಮಾಜಿ ಪ್ರಧಾನಿ ಶ್ರೀರಕ್ಷೆ

ಪ್ರಜಾವಾಣಿ ವಾರ್ತೆ


ಚಲುವರಾಯಸ್ವಾಮಿ

ಮಂಡ್ಯ: 'ಪ್ರಧಾನಿ, ಮಾಜಿ ಪ್ರಧಾನಿಯ ಶ್ರೀರಕ್ಷೆ ಇದೆ ಎಂಬ ಕಾರಣಕ್ಕೆ ಎಚ್‌.ಡಿ.ಕುಮಾರಸ್ವಾಮಿ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಇಲ್ಲಸಲ್ಲದ ಮಾತುಗಳನ್ನಾಡಿ ರಾಜ್ಯ ಸರ್ಕಾರದ ಕೆಲಸಗಳ ವೇಗ ಕಡಿಮೆ ಮಾಡಲು ಯತ್ನಿಸುತ್ತಿದ್ದಾರೆ' ಎಂದು ಕೃಷಿ ಸಚಿವ ಎನ್‌.ಚಲುವರಾಯಸ್ವಾಮಿ ಶನಿವಾರ ಆರೋಪಿಸಿದರು.

'ಕುಮಾರಸ್ವಾಮಿ ಅವರಿಗೆ ಅಧಿಕಾರ ಬಿಟ್ಟು ಬದುಕಲು ಸಾಧ್ಯವಾಗುತ್ತಿಲ್ಲ. ಅಧಿಕಾರ ಕೊಟ್ಟರೆ ಅದನ್ನು ನಿಭಾಯಿಸುವುದಕ್ಕೆ ಬರುವುದಿಲ್ಲ. ಎರಡು ಬಾರಿ ಮುಖ್ಯಮಂತ್ರಿಯಾದರೂ ಅವಧಿ ಪೂರ್ಣಗೊಳಿಸಲಿಲ್ಲ. ಕುಮಾರಸ್ವಾಮಿ ಅವರು ಆರೋಗ್ಯದಿಂದ, ನೆಮ್ಮದಿಯಿಂದ ಇರಬೇಕು ಎನ್ನುವುದೇ ನನ್ನ ಪ್ರಾರ್ಥನೆಯಾಗಿದೆ. ಚಲುವರಾಯಸ್ವಾಮಿ ನಿವೃತ್ತಿ ತೆಗೆದುಕೊಂಡರೆ ನೆಮ್ಮದಿಯಿಂದ ಇರುತ್ತಾರಾ ಕೇಳಿ' ಎಂದು ವ್ಯಂಗ್ಯವಾಡಿದರು.

'ಲುಲು ಮಾಲ್ ಬಗ್ಗೆ ಕುಮಾರಸ್ವಾಮಿ ಸುಳ್ಳುಗಳನ್ನೇ ಹೇಳುತ್ತಿದ್ದಾರೆ. 10–15 ವರ್ಷಗಳ ಹಿಂದೆ ಖರೀದಿಸಿದ ಜಾಗದಲ್ಲಿ ಡಿ.ಕೆ. ಶಿವಕುಮಾರ್ ಮಾಲ್ ನಿರ್ಮಾಣ ಮಾಡಿದ್ದಾರೆ. ತಪ್ಪಾಗಿದ್ದರೆ ತನಿಖೆಯಾಗಲಿ. ನನ್ನ ಆಸ್ತಿ ಬಗ್ಗೆಯೂ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ನಾನು ಹಣ ಕೊಟ್ಟು ಆಸ್ತಿ ಖರೀದಿ ಮಾಡಿದ್ದು ಚುನಾವಣೆ ವೇಳೆ ಅದರ ಮಾಹಿತಿ ತೋರಿಸಿದ್ದೇನೆ. ಬಿಡದಿ ಬಳಿ ಕುಮಾರಸ್ವಾಮಿ ಅವರ ಆಸ್ತಿ ಒತ್ತುವರಿಯಾಗಿದೆಯಂತೆ, ಈ ಕುರಿತು ಕೋರ್ಟ್‌ ನೋಟಿಸ್ ನೀಡಿದೆ. ಈ ವಿಚಾರದಲ್ಲಿ ನಾವು ವೈಯಕ್ತಿಕವಾಗಿ ಆರೋಪ ಮಾಡುವುದಿಲ್ಲ' ಎಂದರು.

'ಜಾತಿ ಆಧಾರದ ಮೇಲೆ ಬಿಜೆಪಿ ಅಧ್ಯಕ್ಷ, ವಿಧಾನಸಭೆ ವಿರೋಧ ಪಕ್ಷದ ನಾಯಕರನ್ನು ಆಯ್ಕೆ ಮಾಡಲಾಗಿದೆ. ಜಾತ್ಯತೀತ ಪಕ್ಷವಿದ್ದರೆ ಅದು ಕಾಂಗ್ರೆಸ್ ಮಾತ್ರ. ಕಾಂಗ್ರೆಸ್‌ನಲ್ಲಿ ಎಲ್ಲ ಸಮುದಾಯಗಳಿಗೂ ಮಂತ್ರಿ ಸ್ಥಾನ ನೀಡಲಾಗಿದೆ. ಅಧಿಕಾರಕ್ಕಾಗಿ ಒಕ್ಕಲಿಗರು ಹಾಗೂ ಲಿಂಗಾಯತರನ್ನು ಮಾತ್ರ ಪರಿಗಣಿಸುವುದು ಸರಿಯೇ' ಎಂದು ಪ್ರಶ್ನಿಸಿದರು.

'ಇನ್‌ಸ್ಪೆಕ್ಟರ್ ವಿವೇಕಾನಂದ ಅವರನ್ನು ಡಾ.ಯತೀಂದ್ರ ವರ್ಗಾವಣೆ ಮಾಡಿಸಿಕೊಂಡರೆ ಅದರಲ್ಲಿ ತಪ್ಪೇನಿದೆ? ಯತೀಂದ್ರ ಅವರು ವರುಣ ಕ್ಷೇತ್ರದ ಸಮಿತಿಯೊಂದರಲ್ಲಿ ಇದ್ದಾರೆ. ಹೀಗಾಗಿ ಅಧಿಕಾರಿಯೊಬ್ಬರನ್ನು ಹಾಕಿಸಿಕೊಳ್ಳುವುದರಲ್ಲಿ ಯಾವ ತಪ್ಪೂ ಇಲ್ಲ' ಎಂದು ಸಮರ್ಥಿಸಿಕೊಂಡರು.

'ಏಕವಚನದಲ್ಲಿ ದೂಷಣೆ ಸಲ್ಲ'


ಜಿ.ಟಿ. ದೇವೇಗೌಡ

ಮಂಗಳೂರು: 'ಯಾರೂ ವೈಯಕ್ತಿಕವಾಗಿ ಆರೋಪ ಮಾಡುವುದು, ಏಕವಚನ ಬಳಸಿ ದೂಷಣೆ ಮಾಡುವುದು ಸರಿಯಲ್ಲ. ಈ ರೀತಿ ಮಾತನಾಡುವವರನ್ನು ಜನರು ಗೌರವಿಸುವುದಿಲ್ಲ; ಬದಲಾಗಿ ಅವರ ಘನತೆ ಕಡಿಮೆಯಾಗುತ್ತದೆ' ಎಂದು ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಪ್ರತಿಕ್ರಿಯಿಸಿದರು.

ಶನಿವಾರ ಇಲ್ಲಿ ನಡೆದ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಭಾಗವಹಿಸಿದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಡಿ.ಕೆ. ಶಿವಕುಮಾರ್ ಅವರೇ ನೀವು ಉಪಮುಖ್ಯಮಂತ್ರಿಯಾಗಿ ಸರ್ಕಾರ ನಡೆಸುತ್ತಿದ್ದೀರಿ, ನೀವಾಗಲಿ, ಮುಖ್ಯಮಂತ್ರಿಯಾಗಲಿ, ಏಕವಚನದ ಪದ ಬಳಸಬೇಡಿ. ವೈಯಕ್ತಿಕವಾಗಿ ಮಾತನಾಡಬೇಡಿ. ಅಸಮಾಧಾನ ಇದ್ದರೆ ಪಕ್ಷದ (ಜೆಡಿಎಸ್) ಬಗ್ಗೆ ಮಾತನಾಡಿ. ಈ ಮಾತನ್ನು ಕುಮಾರಸ್ವಾಮಿ ಅವರಿಗೂ ನಾನು ಹೇಳಿದ್ದೇನೆ. ಸರ್ಕಾರ ಎಡವಿದಲ್ಲಿ, ಆ ಬಗ್ಗೆ ಮಾತಾಡೋಣ' ಎಂದರು.

'ನಾವು ಕೆಟ್ಟ ಪದ ಬಳಸಿದರೆ, ಯುವಜನರಿಗೆ ನಾವೇ ಆ ಬಗ್ಗೆ ಮಾರ್ಗದರ್ಶನ ಮಾಡಿದ ಹಾಗೆ ಆಗುತ್ತದೆ. ಹಿರಿಯರು ಯುವಜನರಿಗೆ ಮಾದರಿಯಾಗಬೇಕು. ಟೀಕೆ–ಟಿಪ್ಪಣಿಗಳು ಅರ್ಥಪೂರ್ಣವಾಗಿರಬೇಕು' ಎಂದರು.

ರೆಸಾರ್ಟ್‌ನಲ್ಲಿ ಕುಮಾರಸ್ವಾಮಿ ವಾಸ್ತವ್ಯ: ರಾಜಕೀಯ ಚರ್ಚೆ


ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿರುವ ಎಚ್‌.ಡಿ.ಕುಮಾರಸ್ವಾಮಿ ಜತೆ ಸ್ಥಳೀಯ ಜೆಡಿಎಸ್ ಮುಖಂಡರು

ಚಿಕ್ಕಮಗಳೂರು: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ ಕುಮಾರಸ್ವಾಮಿ ಹಾಗೂ ಜೆಡಿಎಸ್‌ನ ಕೆಲ ಶಾಸಕರು ತಾಲ್ಲೂಕಿನ ಹೊಸಪೇಟೆ ಸಮೀಪದ ಹನಿ ಡ್ಯೂ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿದ್ದು, ಇತ್ತೀಚಿನ ರಾಜಕೀಯ ಬೆಳವಣಿಗೆಗಳ ಕುರಿತು ಮಾತುಕತೆ ನಡೆಸಿದರು.

ವಿಧಾನ ಪರಿಷತ್ತಿನ ಸದಸ್ಯ ಎಸ್‌.ಎಲ್‌.ಭೋಜೇಗೌಡ ಅವರ ಪುತ್ರಿಯ ನಿಶ್ಚಿತಾರ್ಥಕ್ಕೆ ಬಂದಿರುವ ಜೆಡಿಎಸ್ ಶಾಸಕರು ಮತ್ತು ಮುಖಂಡರ ದಂಡು ರೆಸಾರ್ಟ್‌ನಲ್ಲಿ ಬೀಡು ಬಿಟ್ಟಿದೆ. ಶುಕ್ರವಾರ ಸಂಜೆಯೇ ಬಂದ ಎಚ್‌.ಡಿ. ಕುಮಾರಸ್ವಾಮಿ, ಶನಿವಾರ ದಿನವಿಡೀ ವಿಶ್ರಾಂತಿ ಪಡೆದರು.

ಮಧ್ಯಾಹ್ನದ ಬಳಿಕ ಹಾಸನ ಶಾಸಕ ಎಚ್‌.ಎಸ್‌. ಸ್ವರೂಪ್, ವಿಧಾನ ಪರಿಷತ್ತಿನ ಸದಸ್ಯ ಇಂಚರ ಗೋವಿಂದರಾಜ್, ಅನಿತಾ ಕುಮಾರಸ್ವಾಮಿ, ಅಶ್ವಿನ್ ಕುಮಾರ್, ಪುಟ್ಟರಾಜ್, ಬಂಡೆಪ್ಪ ಕಾಶೆಂಪುರ, ಕೃಷ್ಣಾರೆಡ್ಡಿ ಸೇರಿ ಹಲವರು ಬಂದಿಳಿದರು.

ಸಂಜೆ ರೆಸಾರ್ಟ್‌ನಲ್ಲಿ ವಿಶೇಷ ಔತಣ ಏರ್ಪಡಿಸಲಾಗಿತ್ತು. ಈ ವೇಳೆ ಸಭೆ ನಡೆಸಿ ಕೆಲ ರಾಜಕೀಯ ವಿಷಯಗಳ ಬಗ್ಗೆ ಚರ್ಚೆ ನಡೆಸಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಇದಕ್ಕೂ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಮಾಜಿ ಶಾಸಕ ಕೃಷ್ಣಾರೆಡ್ಡಿ, 'ಎಲ್ಲಾ ಮುಖಂಡರ ಜತೆ ಸಭೆ ನಡೆಸಲಾಗುವುದು. ಜಿ.ಟಿ. ದೇವೇಗೌಡ ಹಾಗೂ ಡಿ.ಕೆ. ಶಿವಕುಮಾರ್ ಮಾತುಕತೆ ನಡೆಸಿರುವ ಬಗ್ಗೆ ಅಪಾರ್ಥ ಬೇಡ. ಡಿ.ಕೆ. ಶಿವಕುಮಾರ್ ಉಪ ಮುಖ್ಯಮಂತ್ರಿ. ಹಾಗಾಗಿ ನಮ್ಮ ಶಾಸಕರು ಅವರ ಮನೆಗೆ ಹೋಗಿದ್ದಾರೆ. ಮನೆಗೆ ಹೋದ ಕೂಡಲೇ ಪಕ್ಷ ತೊರೆಯುತ್ತಾರೆ ಎಂದುಕೊಳ್ಳುವುದು ತಪ್ಪು' ಎಂದರು.

ಮಾಜಿ ಶಾಸಕ ಸಿ.ಎಸ್ ಪುಟ್ಟರಾಜು ಮಾತನಾಡಿ, 'ಜೆಡಿಎಸ್‌ನ ಯಾವ ಶಾಸಕನೂ ಪಕ್ಷ ಬಿಡುವುದಿಲ್ಲ. ನಾವೆಲ್ಲ ಒಗ್ಗಟ್ಟಿನಿಂದ ಇದ್ದೇವೆ. ಗಾಳಿ ಸುದ್ದಿ ಹರಡುವ ಕೆಲಸ ನಡೆಯುತ್ತಿದೆ. ನಮ್ಮ ನಾಯಕರ ಬಗ್ಗೆ ಗೌರವ ಇದೆ. ಯಾರೂ ಪಕ್ಷ ತೊರೆಯುವುದಿಲ್ಲ' ಎಂದರು.

ಸುದ್ದಿ 2 ನಿಮಿಷ

ಒಳಸಂಚಿನಿಂದ ಯತ್ನಾಳಗೆ ತಪ್ಪಿದ ಅವಕಾಶ: ಸ್ವಾಮೀಜಿ ಆರೋಪ

ವಿಜಯಪುರ: 'ಪಂಚಮಸಾಲಿ ಮೀಸಲಾತಿ ಹೋರಾಟಕ್ಕೆ ಸಹಕಾರ ನೀಡದವರ ಒಳಸಂಚು, ಕುತಂತ್ರದಿಂದ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ವಿರೋಧ ಪಕ್ಷದ ನಾಯಕನ ಸ್ಥಾನ ಕೈತಪ್ಪಿದೆ' ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಆರೋಪಿಸಿದರು.

'ಯತ್ನಾಳ ಅವರೇ ವಿರೋಧ ಪಕ್ಷದ ನಾಯಕರಾಗುವರು ಎಂದು ಬಹುತೇಕ ಮಂದಿ ನಿರೀಕ್ಷಿಸಿದ್ದರು. ಸಮಾಜವೂ ಆ ಸ್ಥಾನ ಕೇಳಿರಲಿಲ್ಲ. ಅವರಷ್ಟು ಜನಪ್ರಿಯ ನಾಯಕ ಬಿಜೆಪಿಯಲ್ಲಿ ಯಾರೂ ಇರಲಿಲ್ಲ' ಎಂದು ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಯತ್ನಾಳ ಅವರಿಗೆ ಆಗಿರುವ ಅನ್ಯಾಯದಿಂದ ಸಮಾಜದಲ್ಲಿ ಅಲ್ಲದೇ ಉತ್ತರ ಕರ್ನಾಟಕ ಭಾಗದಲ್ಲಿ ಅಸಮಾಧಾನ ಮೂಡಿದೆ. ಉತ್ತರ ಕರ್ನಾಟಕದ ಲಿಂಗಾಯತ ನಾಯಕರನ್ನು ಅದರಲ್ಲೂ ಪಂಚಮಸಾಲಿ ಮೀಸಲಾತಿ ಹೋರಾಟದ ಮುಂಚೂಣಿಯಲ್ಲಿ ಇದ್ದರವನ್ನು ಬಿಜೆಪಿ, ಕಾಂಗ್ರೆಸ್ ಕಡೆಗಣಿಸುತ್ತಿದೆ' ಎಂದರು.

ಸರ್ಕಾರಕ್ಕೆ ಗಡುವು: 'ಬೆಳಗಾವಿಯಲ್ಲಿ ವಿಧಾನ ಮಂಡಲ ಅಧಿವೇಶನಕ್ಕೂ ಮುನ್ನ ರಾಜ್ಯ ಸರ್ಕಾರವು ಪಂಚಮಸಾಲಿ ಮೀಸಲಾತಿ ಹೋರಾಟಗಾರರು, ನಾಯಕರ ಜೊತೆ ಮಾತುಕತೆ ನಡೆಸಬೇಕು. ಕಾನೂನು ಅಡತಡೆ ನಿವಾರಿಸಿ, ನ್ಯಾಯ ಕೊಡಿಸಬೇಕು' ಎಂದು ಅವರು ಒತ್ತಾಯಿಸಿದರು.

'ಸರ್ಕಾರ ಸ್ಪಂದಿಸದಿದ್ದಲ್ಲಿ, ವಿಧಾನಸೌಧದ ಆವರಣದಲ್ಲಿ ಇಷ್ಟಲಿಂಗ ಪೂಜೆ ಸಲ್ಲಿಸುವ ಮೂಲಕ ಪ್ರತಿಭಟನೆ ನಡೆಸಲಾಗುವುದು. ಲೋಕಸಭಾ ಚುನಾವಣೆಗೂ ಮುನ್ನ ರಾಜ್ಯ ಸರ್ಕಾರವು ಪಂಚಮಸಾಲಿ ಸಮಾಜಕ್ಕೆ 2 'ಎ' ಮೀಸಲಾತಿ ಕಲ್ಪಿಸಬೇಕು. ಎಲ್ಲ ಲಿಂಗಾಯತರನ್ನು ಕೇಂದ್ರದ ಒಬಿಸಿ ಮೀಸಲಾತಿ ಪಟ್ಟಿಗೆ ಸೇರಿಸಲು ಶಿಫಾರಸು ಮಾಡಬೇಕು' ಎಂದರು.



ಧರ್ಮಸ್ಥಳ ಲಕ್ಷದೀಪೋತ್ಸವ ಡಿ.8 ರಿಂದ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳದ ಲಕ್ಷದೀಪೋತ್ಸವ ಕಾರ್ಯಕ್ರಮಗಳು ಡಿಸೆಂಬರ್ 8ರಿಂದ 12ರ ವರೆಗೆ ನಡೆಯಲಿವೆ.

ಡಿ.8ರಂದು ಹೊಸಕಟ್ಟೆ ಉತ್ಸವ, 9ರಂದು ಕೆರೆಕಟ್ಟೆ ಉತ್ಸವ, 10 ರಂದು ಉದ್ಯಾನೋತ್ಸವ, 11ರಂದು ಸರ್ವಧರ್ಮ ಸಮ್ಮೇಳನ, ಕಂಚಿಮಾರುಕಟ್ಟೆ ಉತ್ಸವ, 12ರಂದು ಸಾಹಿತ್ಯ ಸಮ್ಮೇಳನ ನಡೆಯಲಿದೆ. ಅಂದು ರಾತ್ರಿ 12 ಗಂಟೆ ಬಳಿಕ ಮಂಜುನಾಥ ಸ್ವಾಮಿಯ ಲಕ್ಷದೀಪೋತ್ಸವ, ಗೌರಿಮಾರುಕಟ್ಟೆ ಉತ್ಸವ ನಡೆಯಲಿದೆ.

ಪ್ರತಿ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಪ್ರಕಟಣೆ ತಿಳಿಸಿದೆ.

'ಗೋ ಬ್ಯಾಕ್ ಅಶೋಕ' ಭಿತ್ತಿಪತ್ರ ಅಂಟಿಸಿದರೂ ಅಚ್ಚರಿಯಿಲ್ಲ: ಪ್ರಿಯಾಂಕ್


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್. ಅಶೋಕ ಅವರಿಗೆ ಮಂಡ್ಯ ಉಸ್ತುವಾರಿ ನೀಡಿದಾಗ 'ಗೋ ಬ್ಯಾಕ್ ಅಶೋಕ' ಎಂದು ಭಿತ್ತಿಪತ್ರ ಅಂಟಿಸಲಾಗಿತ್ತು. ಈಗ ವಿರೋಧ ಪಕ್ಷದ ನಾಯಕನಾಗಿರುವ ಅವರಿಗೆ ಬಿಜೆಪಿ ಕಚೇರಿಯಲ್ಲೇ 'ಗೋ ಬ್ಯಾಕ್' ಎಂದು ಭಿತ್ತಿಪತ್ರ ಅಂಟಿಸಿದರೆ ಅಚ್ಚರಿ ಇಲ್ಲ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ವಿರೋಧ ಪಕ್ಷದ ನಾಯಕನ ಆಯ್ಕೆಯಿಂದ ಕಾಂಗ್ರೆಸ್‌ಗೆ ಖುಷಿಯಾಗಿದೆ. ಆದರೆ, ಬಿಜೆಪಿಗರಿಗೆ ಖುಷಿಯಾಗಿಲ್ಲ' ಎಂದರು.

'ಬಿಜೆಪಿ ವಿರುದ್ಧ ಬಿಜೆಪಿ ಇನ್ನೂ ಮುಗಿದಿಲ್ಲ. ಇದು ಭಾಗ–2. ಭಾಗ–1 ಬಿ. ಎಲ್. ಸಂತೋಷ್ ಅವರದ್ದು. ಅಶೋಕ ಅವರಿಗೆ ವಿರೋಧ ಪಕ್ಷದ ನಾಯಕನ ಸ್ಥಾನ ಕೊಟ್ಟು ಉರಿಯುವ ಬೆಂಕಿಗೆ ತುಪ್ಪ ಹಾಕಿದ್ದಾರೆ' ಎಂದರು.

'ಅಶೋಕ ಅವರು ಬಿಜೆಪಿಯಲ್ಲಿ ಬೆಳೆಯಬೇಕು. ವಿರೋಧ ಪಕ್ಷ ನಾಯಕರಾಗಿಯೇ ಉಳಿಯಬೇಕು ಎಂಬುದು ನಮ್ಮ ಆಸೆ. ಅಧ್ಯಕ್ಷ ಮತ್ತು ವಿರೋಧ ಪಕ್ಷದ ನಾಯಕನ ಆಯ್ಕೆಯಲ್ಲಿ ಯಡಿಯೂರಪ್ಪ ಅವರ ಮೇಲುಗೈ ಎಂದು ಮಾಧ್ಯಮಗಳಲ್ಲಿ ಬರುತ್ತಿದೆ. ಹಾಗಾದರೆ ಬಿ.ಎಲ್. ಸಂತೋಷ ಅವರು ಏನು ಮಾಡಬೇಕು? ಎಲ್ಲದಕ್ಕೂ ಉತ್ತರ ಕೇಶವಕೃಪ ಮತ್ತು ಬಿಜೆಪಿ ಕಚೇರಿಯಲ್ಲಿದೆ' ಎಂದು ವ್ಯಂಗ್ಯವಾಗಿ ಹೇಳಿದರು.



ಮೊದಲ ಕಂಬಳ

ಈ ಋತುವಿನ ಮೊದಲ ಕಂಬಳ ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಉಳಿ ಗ್ರಾಮದ ಕಕ್ಕೆಪದವಿನಲ್ಲಿ ಶನಿವಾರ ನಡೆಯಿತು. ಸತ್ಯ-ಧರ್ಮ ಜೋಡುಕರೆ ಬಯಲು ಕಂಬಳದ ಓಟದ ಮೋಹಕ ನೋಟ. ಮಿಜಾರ್ ಪ್ರಸಾದ್ ನಿಲಯದ ಶಕ್ತಿ ಪ್ರಸಾದ್ ಶೆಟ್ಟಿ ಮಾಲೀಕತ್ವದ ರಾಮ-ಕಾಲ ಕೋಣಗಳ ಜೋಡಿಯ ಜತೆಗೆ ಹಗ್ಗ ಹಿರಿಯ ವಿಭಾಗದಲ್ಲಿ ಓಡಿದ ಸುರೇಶ್ ಶೆಟ್ಟಿ –ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

ಪೋಕ್ಸೊ ಪ್ರಕರಣ ಮುಖ್ಯ ಶಿಕ್ಷಕ ಬಂಧನ

ಭಟ್ಕಳ (ಉತ್ತರ ಕನ್ನಡ): ಇಬ್ಬರು ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ತಾಲ್ಲೂಕಿನ ಶಾಲೆಯೊಂದರ ಮುಖ್ಯ ಶಿಕ್ಷಕ, ಕುಮಟಾದ ಶ್ರೀಧರ ನಾಯ್ಕ (58) ಎಂಬವರನ್ನು ಶಹರ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.

'ಲೈಂಗಿಕ ಕಿರುಕುಳ ನೀಡಿರುವ ಬಗ್ಗೆ ಸಲ್ಲಿಕೆಯಾದ ದೂರು ಆಧರಿಸಿ ಪೋಕ್ಸೊ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕಂದಾಯ ಇಲಾಖೆ
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
3 ಮತ್ತು 4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001. E-Mail: splocaima21@gmail.com ದೂರವಾಣಿ ಸಂಖ್ಯೆ : 080–29565353, 29604556

No. SPLOCA/ADM/06/2022-23 Date: 21.09.2023

ಪ್ರಕಟಣೆ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ಗಳವರ ಕಛೇರಿಗೆ ಮಂಜೂರಾಗಿ ನೇಮಕವಾಗದೇ ಖಾಲಿ ಇರುವ ಈ ಕೆಳಕಂಡ ವಿವಿಧ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆಸಕ್ತ ಏಜೆನ್ಸಿಗಳಿಂದ / ಆಸಕ್ತ ವೈಯಕ್ತಿಕ ವ್ಯಕ್ತಿಗಳಿಂದ **Resume/quotation** ಅನ್ನು ಆಹ್ವಾನಿಸಲಾಗಿದ್ದು, ಸದರಿ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ.

ಹುದ್ದೆಗಳ ವಿವರ:

Sl. No	Post	Qualification		Relevant Experience	No. of Post	Contract wage per Month
		Basic	Preference	Basic		
1	Legal FDA	Graduation +LLB & 1 Year at Bar	LLM & 2 Years at Bar	5 Years of Office experience in Accounting Firm / Bank/ Law firm/ Government Agencies. Good knowledge of computers including Excel. Age not to exceed 40 years, knowledge of Kannada is must.	1	Rs. 25,000 + sitting fees in court (as per rules)

Post Name CA :

Sl. No.	Post/ Designation	Qualification/ Requirements	Experience	No. of Post	Pay
1.	CA	Individuals with CA Certificate in forensic audit & Experience in the field of financial analysis and forensic audit of related Companies/Banks/Cooperatives. Job Profile: 1. Identifying Fund Trail, Tracking of banking transactions. 2. Conducting audit, Transactional forensic 3. Analysis of payer beneficiary details for bank transactions and identifying assets created out of the same. 4. Collecting information from various Government agencies such as RBI, SEBI, ED, CBI, IT etc. 5.Tracking fund transfers, analyzing cash transactions 6. Creating & validating database. 7. Analyzing and vetting claims. 8.Providing expert evidence in legal fora on payment of Rs.2000 per appearance/effective hearing and Rs 200 per ineffective hearing	Minimum- 5 Years as CA and 1Year as Forensic Auditor. Preferred- 10 Years as CA and 2 years as Forensic Auditor & Knowledge of Audit Software like IDEA Data Analysis, CaseWare Analytics AI. Age should not exceed 55 Years.	1	Rs:125000/- per month and Rs25,000/- per month for Experience in forensic audit.

Sl. No	Post/Post/ Designation	Qualification		Relevant Experience		No. of Post	Contract wage per Month
		Basic	Preference	Basic	Preference		
1	Law Officer	LLB, LLM Registered at Bar council of Karnataka	LLM	Minimum 5 years' experience in High court	10 years' experience in High court & other courts	1	75,000/- to 85,000/- depending on experience

The Position to be filled is a post created in the office of Special officer & Competent Authority, Financial Frauds Revenue Department Government of Karnataka vide Government Order No. RD45GRC2020(PIII) dated:25-08-2022 and is renewable year on year. It is a post on contract renewable on satisfactory performance with periodic enhancement of salary scales, not permanent government service.

ಸಹಿ/–
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ
ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು, ಬೆಂಗಳೂರು
DIPR/CP/2182/Zenkar/2023-24

'ಎಚ್‌ಡಿಕೆ ತಮ್ಮ ಘನತೆಗೆ ತಕ್ಕಂತೆ ವರ್ತಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರಿಗೊಂದು ಘನತೆ ಇದೆ. ಅದಕ್ಕೆ ತಕ್ಕಂತೆ ವರ್ತಿಸಬೇಕು. ದಿನಬೆಳಗಾದರೆ ಸುಳ್ಳು ಆರೋಪ ಮಾಡುವುದು ಅವರ ಘನತೆಗೆ ಸರಿಯಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕುಮಾರಣ್ಣ ಮತ್ತು ವಿಜಯೇಂದ್ರ ಈಗ ಪಾಲುದಾರರು. ಕುಮಾರಣ್ಣ ಎರಡು ಬಾರಿ ಮುಖ್ಯಮಂತ್ರಿ ಆಗಿದ್ದವರು. ಪಕ್ಷದ ಅಧ್ಯಕ್ಷರಾಗಿದ್ದವರು. ಆ ಸ್ಥಾನಕ್ಕೆ ಧಕ್ಕೆ ಆಗದಂತೆ ನಡೆದುಕೊಳ್ಳಬೇಕು. ಅದನ್ನು ಬಿಟ್ಟು ಮನಸ್ಸಿಗೆ ಬಂದಂತೆ ಮಾತನಾಡಿದರೆ ಪ್ರಯೋಜನವಿಲ್ಲ. ಮಾಜಿ ಮುಖ್ಯಮಂತ್ರಿ ಮಾತು, ವರ್ತನೆ ಎಂದರೆ ನಾವು ಹೆದರಿ ನಡುಗುವಂತಿರಬೇಕು' ಎಂದರು.

'ಯತೀಂದ್ರ ಅವರು ತಮ್ಮ ತಂದೆಗಾಗಿ ಶಾಸಕ ಸ್ಥಾನ ತ್ಯಾಗ ಮಾಡಿದವರು. ನಾವು ಮತ್ತು ನಮ್ಮ ಪಕ್ಷದ ಹೈಕಮಾಂಡ್ ಅವರನ್ನು ವಿಧಾನ ಪರಿಷತ್ ಸದಸ್ಯ ಮಾಡುತ್ತೇವೆ ಎಂದರೂ ನಿರಾಕರಿಸಿದರು. ಅವರು ತಂದೆಯ ಕ್ಷೇತ್ರದಲ್ಲಿ ಕೆಡಿಪಿ ಸದಸ್ಯನಾಗಿ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ನಮ್ಮ ಕ್ಷೇತ್ರದಲ್ಲೂ ಅಧಿಕಾರಿಗಳ ವರ್ಗಾವಣೆ ಅರ್ಜಿ ಇಟ್ಟುಕೊಂಡು ಅನೇಕರು ಬರುತ್ತಾರೆ. ಹಾಗೆಂದು ಯತೀಂದ್ರ ಅವರು ವರ್ಗಾವಣೆ ಮಾಡಿದ್ದಾರೆ ಎಂದು ಅರ್ಥವಲ್ಲ. ಸುಳ್ಳು ಆರೋಪ ಮಾಡುವುದು ಸರಿಯಲ್ಲ' ಎಂದರು.

'ವಿಧಾನಮಂಡಲ ಅಧಿವೇಶನದಲ್ಲಿ ಈ ವಿಚಾರ ಪ್ರಸ್ತಾಪಿಸುತ್ತೇನೆ' ಎಂಬ ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಈ ವಿಚಾರವನ್ನು ಅವರು ಪ್ರಸ್ತಾಪ ಮಾಡಲೇಬೇಕು. ಜತೆಗೆ ಅವರು ಇದುವರೆಗೂ ಜನತೆಗೆ ಕೊಟ್ಟ ಮಾತನ್ನೂ ಬಿಚ್ಚಿಟ್ಟು ಚರ್ಚೆ ಮಾಡಲಿ. ಪಕ್ಷದ ಅಧ್ಯಕ್ಷರಾಗಿ ಅವರಿಗೆ ವಿಚಾರ ಪ್ರಸ್ತಾಪಿಸುವ ಹಕ್ಕಿದೆ' ಎಂದರು.

ಎಚ್‌ಡಿಕೆ ಕಾಲದ ವರ್ಗಾವಣೆ ದಂಧೆಯೇ?: ಮಹದೇವಪ್ಪ



'ಎಚ್‌.ಡಿ. ಕುಮಾರಸ್ವಾಮಿ ಅವರು ಬಿಜೆಪಿಯ ಜನ ವಿರೋಧಿ ನೀತಿಗಳ ಕುರಿತು ಮೌನವಾಗಿದ್ದರು. ಕೆಲವಕ್ಕೆ ಬೆಂಬಲವನ್ನೂ ನೀಡಿದ್ದರು. ಈಗ ಅಧಿಕಾರ ಸಿಗದ ಕಾರಣದಿಂದ ಹತಾಶೆಯಿಂದ ವರ್ತಿಸುತ್ತಿದ್ದಾರೆ' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಟೀಕಿಸಿದ್ದಾರೆ.

'ತಾನು ಏನು ಬೇಕಾದರೂ ಮಾತನಾಡಬಹುದು, ಆದರೆ ಮಿಕ್ಕವರೆಲ್ಲ ಇವರು ಅಪೇಕ್ಷಿಸುವಂತೆ ಇರಬೇಕು ಎಂಬುದು ಕುಮಾರಸ್ವಾಮಿ ಬಯಸುತ್ತಾರೆ. ಅಕ್ರಮವಾಗಿ ವಿದ್ಯುತ್ ಬಳಸಿಕೊಂಡ ಪ್ರಕರಣದಲ್ಲಿ ಕ್ಷುಲ್ಲಕ ರಾಜಕೀಯ ಮಾಡಬೇಡಿ ಎನ್ನುತ್ತಾರೆ. ಆದರೆ, ಮುಖ್ಯಮಂತ್ರಿಯವರು ಒಂದೆರಡು ಗಂಟೆ ಕ್ರಿಕೆಟ್ ಪಂದ್ಯ ವೀಕ್ಷಿಸಿದರೆ ಟೀಕಿಸಿ ಬಾಲಿಶತನದ ಹೇಳಿಕೆ ನೀಡುತ್ತಾರೆ' ಎಂದು ವಾಗ್ದಾಳಿ ನಡೆಸಿದ್ದಾರೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ವರ್ಗಾವಣೆ ದಂಧೆ ನಡೆಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಕುಮರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ವರ್ಗಾವಣೆ ಮಾಡಿರಲಿಲ್ಲವೆ? ಅದನ್ನೂ ದಂಧೆ ಎಂದು ಪರಿಗಣಿಸುತ್ತಾರಾ' ಎಂದಿದ್ದಾರೆ.

ಗುಜರಾತ್‌ನ ಪ್ರಸಿದ್ಧ ತೀರ್ಥಕ್ಷೇತ್ರಗಳಿಗೆ ವಿಶೇಷ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಜರಾತ್‌ನ ಪ್ರಸಿದ್ಧ ತೀರ್ಥಕ್ಷೇತ್ರಗಳಿಗೆ ತೆರಳಲು ಕರ್ನಾಟಕದಿಂದ ವಿಶೇಷ ಪ್ಯಾಕೇಜ್ ಅನ್ನು ಭಾರತೀಯ ರೈಲ್ವೆ ಮತ್ತು ಟ್ರಾವೆಲ್ ಟೈಮ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಟೂರಿಸಂ ಸಂಸ್ಥೆ ರೂಪಿಸಿದೆ.

11 ದಿನಗಳ ಈ ಪ್ಯಾಕೇಜ್‌ನಲ್ಲಿ ದ್ವಾರಕ, ಬ್ಯಾಟ್ ದ್ವಾರಕ, ಸೋಮನಾಥ ಜ್ಯೋತಿರ್ಲಿಂಗ, ನಿಷ್ಕಳಂಕ ಮಹಾದೇವ ಸಮುದ್ರ ದೇವಸ್ಥಾನ, ಉದಯಪುರನಾಥ ದ್ವಾರಕ, ಕನ್ ಕೊರಳಿ ದ್ವಾರಕ ಹಾಗೂ ಸರ್ದಾರ್ ವಲ್ಲಭ ಭಾಯ್ ಪಟೇಲ್ ಏಕತಾ ಪ್ರತಿಮೆ ಭೇಟಿಗಳನ್ನು ಒಳಗೊಂಡಿದೆ.

ಪ್ಯಾಕೇಜ್ ವೆಚ್ಚ ₹19,050 ಆಗಿದ್ದು, ಯಲಹಂಕ, ತುಮಕೂರು, ಅರಸೀಕೆರೆ, ಬೀರೂರು, ದಾವಣಗೆರೆ, ಹುಬ್ಬಳ್ಳಿ, ಗದಗ, ಹೊಸಪೇಟೆ, ಬಳ್ಳಾರಿ ನಿಲ್ದಾಣಗಳಿಂದ ಪ್ರವಾಸಿಗರನ್ನು ಕರೆದೊಯ್ಯಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಸಾಕ್ಷ್ಯ ಸಿಕ್ಕಿದೆ, ಪಲಾಯನ ಅಸಾಧ್ಯ'

ಒಂದನೇ ಪುಟದಿಂದ...

'ಅಪ್ಪ–ಮಕ್ಕಳ ಭ್ರಷ್ಟಾಚಾರಕ್ಕೆ ಇದಕ್ಕಿಂತ ಸಾಕ್ಷ್ಯಬೇಕಾ' ಎಂದು ಪ್ರಶ್ನಿಸಿದ್ದಾರೆ.

'ಕರ್ನಾಟಕದ ಕಲೆಕ್ಷನ್ ಪ್ರಿನ್ಸ್ (ಯತೀಂದ್ರ) ವಿಡಿಯೊದಲ್ಲಿ ಪ್ರಸ್ತಾಪವಾಗಿದ್ದ ವಿವೇಕಾನಂದ 48 ಗಂಟೆಗಳ ಒಳಗೆ ವರ್ಗಾವಣೆ ಪಟ್ಟಿಯಲ್ಲಿ ಒಳನುಸುಳಿದ್ದಾರೆ. ಬಾಯಿ ತೆರೆದರೆ ಭಗವದ್ಗೀತೆ, ಪ್ರತಿ ಮಾತಿನಲ್ಲೂ ಮೌಲ್ಯ ಬೋಧಿಸುವ ಮುಖ್ಯಮಂತ್ರಿಗೆ ನಾಚಿಕೆ ಇಲ್ಲವೇ? ಡೂಪ್ಲಿಕೇಟ್ ಸಿ.ಎಂ (ಡಿ.ಕೆ.ಶಿವಕುಮಾರ್) ಮಾತು ಕೇಳಿ ಸಿಎಸ್‌ಆರ್ ನಿಧಿಯ ಕಥೆ ಕಟ್ಟಿದ್ದ ಮುಖ್ಯಮಂತ್ರಿಗೆ ನೂರೆಂಟು ನಮನ' ಎಂದು ಟೀಕಿಸಿದ್ದಾರೆ.

'ಸತ್ಯ ಹೇಳಿದರೆ ಗುಂಪುಗುಂಪಾಗಿ ಮೇಲೆ ಬೀಳುತ್ತಿದ್ದಾರೆ. ಬೆದರಿಸುತ್ತಿದ್ದಾರೆ. ಈಗ ವಿಡಿಯೊ ಸಾಕ್ಷ್ಯವಿದೆ. ರಾಜ್ಯದ ಜನ ನೋಡಿದ್ದಾರೆ. ಪಲಾಯನಕ್ಕೆ ಅವಕಾಶವೇ ಇಲ್ಲ' ಎಂದಿದ್ದಾರೆ.

> **ಕಾಂಗ್ರೆಸ್‌ನದ್ದು ಶೇ 60ರಷ್ಟು ಕಮಿಷನ್ ಸರ್ಕಾರ. ವರ್ಗಾವಣೆ ದಾಖಲೆಗಳೇ ಎಲ್ಲವನ್ನೂ ಹೇಳುತ್ತಿವೆ. ವರ್ಗಾವಣೆ ದಂಧೆ ಎಗ್ಗಿಲ್ಲದೇ ನಡೆಯುತ್ತಿದೆ**
> **ಆರ್. ಅಶೋಕ,** ವಿರೋಧ ಪಕ್ಷದ ನಾಯಕ

ಸಾಕ್ಷ್ಯ ಇಟ್ಟುಕೊಂಡು ಮಾತನಾಡಿ: ಯತೀಂದ್ರ

ಮೈಸೂರು: 'ನಾನಾಗಲಿ, ನಮ್ಮ ತಂದೆಯಾಗಲಿ ವರ್ಗಾವಣೆ ದಂಧೆಯಲ್ಲಿ ತೊಡಗಿಲ್ಲ. ಒಬ್ಬ ಮುಖ್ಯಮಂತ್ರಿ ಮೇಲೆ ಆರೋಪ ಮಾಡಬೇಕಾದರೆ ಸಾಕ್ಷ್ಯ ಇಟ್ಟುಕೊಂಡು ಮಾತನಾಡಿ' ಎಂದು ಎಚ್‌.ಡಿ. ಕುಮಾರಸ್ವಾಮಿಗೆ ಕಾಂಗ್ರೆಸ್ ಮುಖಂಡ ಯತೀಂದ್ರ ಸಿದ್ದರಾಮಯ್ಯ ತಿರುಗೇಟು ನೀಡಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ನಾನು ಮಾತನಾಡಿದ್ದು ಬಿಇಒ ವಿವೇಕಾನಂದ ವಿಚಾರವಾಗಿ. ಇನ್‌ಸ್ಪೆಕ್ಟರ್ ವಿವೇಕಾನಂದ ಯಾರೆಂಬುದೇ ನನಗೆ ಗೊತ್ತಿಲ್ಲ. ಅವರ ವರ್ಗಾವಣೆಗೂ ನನಗೂ ಸಂಬಂಧ ಇಲ್ಲ. ವಿಪಕ್ಷಗಳು ಹತಾಶವಾಗಿ ಟೀಕೆ ಮಾಡುತ್ತಿವೆ' ಎಂದರು.

'ಕುಮಾರಸ್ವಾಮಿ ಕೂಡ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಅವರು ಅಧಿಕಾರದಲ್ಲಿದ್ದಾಗ ಅನೇಕ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದಾರೆ. ಅದಕ್ಕೆಲ್ಲ ದಂಧೆಯನ್ನೇ ಮಾಡುತ್ತಿದ್ದರಾ' ಎಂದು ಪ್ರಶ್ನಿಸಿದರು.

'ನಾನು ಈ ಹಿಂದೆ ಇದೇ ಕ್ಷೇತ್ರದ ಶಾಸಕನಾಗಿ ಕೆಲಸ ಮಾಡಿದವನು. ನಮ್ಮ ಕ್ಷೇತ್ರದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗೆ ಪಟ್ಟಿ ಕೊಟ್ಟಿದ್ದೇನೆ. ಸಿಎಸ್‌ಆರ್ ಅನುದಾನದ ಪಟ್ಟಿ ನೀಡಿದ್ದೇನೆ. ಕ್ಷೇತ್ರದ ಕಾರ್ಯಕರ್ತರು ಅನೇಕ ಹುದ್ದೆಗಳಿಗೆ ಬೇಡಿಕೆ ಇಟ್ಟಿದ್ದಾರೆ. ಇದೆಲ್ಲದ್ದಕ್ಕೆ ಸಂಬಂಧಿಸಿ ಹತ್ತಾರು ಪಟ್ಟಿ ಕೊಟ್ಟಿದ್ದೇನೆ. ಆದರೆ ಎಲ್ಲಿಯೂ ವರ್ಗಾವಣೆ, ಹಣದ ಪ್ರಸ್ತಾಪ ಮಾಡಿಲ್ಲ. ಹೀಗಾಗಿ ನಾನು ಯಾರಿಗೂ ಸ್ಪಷ್ಟನೆ ನೀಡುವ ಅಗತ್ಯ ಇಲ್ಲ' ಎಂದರು.

'ಈ ಹಿಂದೆ ಬಿಜೆಪಿ ಸರ್ಕಾರದಲ್ಲಿ ಬಿಜೆಪಿಯವರೇ ವಿಎಸ್‌ಟಿ ಟ್ಯಾಕ್ಸ್ ಎಂದು ಟೀಕೆ ಮಾಡಿದ್ದರು. ಈಗ ನಮ್ಮ ಮೇಲೆ ವೈಎಸ್‌ಟಿ ಟ್ಯಾಕ್ಸ್ ಎಂದು ಆರೋಪ ಮಾಡುತ್ತಿದ್ದಾರೆ. ಅದಕ್ಕೆ ಏನಾದರೂ ದಾಖಲೆ ಇದೆಯಾ? ಕುಮಾರಸ್ವಾಮಿ ನಮ್ಮ ತಂದೆ ವಿಚಾರದಲ್ಲಿ ಏನನ್ನೂ ಆರೋಪ ಮಾಡಲು ಆಗುತ್ತಿಲ್ಲ. ಹೀಗಾಗಿ ಈ ರೀತಿಯಲ್ಲಿ ನಮ್ಮ ಕುಟುಂಬವನ್ನು ಸಿಲುಕಿಸುವ ಪ್ರಯತ್ನ ನಡೆಸಿದ್ದಾರೆ' ಎಂದು ಯತೀಂದ್ರ ಅವರು ಆರೋಪಿಸಿದರು.

ಯತೀಂದ್ರ ಉಲ್ಲೇಖಿಸಿದ ಅಧಿಕಾರಿ ಬಿಇಒ: ಸಿ.ಎಂ

ಒಂದನೇ ಪುಟದಿಂದ...

ತೋರಿಸುವಂತೆ ಹಲವು ಮಂದಿ ಮನವಿ ಮಾಡಿದ್ದರು. ಮೊದಲು ತೋರಿಸಲು ಹೇಳಿ. ವಿದ್ಯುತ್ ಕದ್ದವರ ಬಗ್ಗೆ ಏನು ಕೇಳುತ್ತೀರಿ? ಅಪರಾಧ ಎಂದರೆ ಅಪರಾಧವೇ. ಅವರಿಗೆ ಯಾವ ನೈತಿಕತೆ ಇದೆ' ಎಂದು ಪ್ರಶ್ನಿಸಿದರು.

'ಜೆಡಿಎಸ್ ಕಳೆದ ಚುನಾವಣೆಯಲ್ಲಿ 38ರಿಂದ 19 ಸ್ಥಾನಕ್ಕೆ ಇಳಿದಿದೆ. ಹೀಗಾಗಿ ಕುಮಾರಸ್ವಾಮಿ ಹತಾಶೆಯಿಂದ ಮಾತನಾಡುತ್ತಿದ್ದಾರೆ. ಅವರು ತಮ್ಮೆಲ್ಲ ಆರೋಪಗಳನ್ನು ಸಾಬೀತು ಮಾಡುತ್ತಾರಾ' ಎಂದು ಸವಾಲು ಹಾಕಿದರು.

ಕಾಂಗ್ರೆಸ್ ವಿರುದ್ಧ ಬಿಜೆಪಿ ಪೋಸ್ಟರ್ ಅಭಿಯಾನದ ಕುರಿತು ಮಾತನಾಡಿ 'ಜನ ಬಿಜೆಪಿಯವರಿಗೆ ಪಾಠ ಕಲಿಸಿ ಆರು ತಿಂಗಳಾಗಿದೆ. ಐದು ವರ್ಷ ವಿರೋಧ ಪಕ್ಷದಲ್ಲಿ ಕೂರುವಂತೆ ಜನಾದೇಶ ನೀಡಿದ್ದಾರೆ. ಹೀಗಾಗಿ ಎರಡೂ ಪಕ್ಷದವರು ಹತಾಶರಾಗಿದ್ದು, ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ' ಎಂದು ದೂರಿದರು.

ಕರ್ನಾಟಕ ಸರ್ಕಾರ
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ
ನಂ 10, 3ನೇ ಮಹಡಿ, ಖಾದಿ ಭವನ, ಜಸ್ಮಾದೇವಿ ಭವನ ರಸ್ತೆ, ವಸಂತನಗರ, ಬೆಂಗಳೂರು–560052.
ದೂರವಾಣಿ ಸಂಖ್ಯೆ: 29901193 ಇ–ಮೇಲ್ mdkmvstdc@gmail.com ವೆಬ್‌ಸೈಟ್: https//kmvstdcl.karnataka.gov.in

ಸಂಖ್ಯೆ : ಕಮವಾಪಪಂಅನಿ/ಸಿ&ಆ/ಸಿಆರ್–79/2010–11 ದಿನಾಂಕ : 17.11.2023

ವಾಹನದ ಅನುಪಯುಕ್ತ ಬಿಡಿ ಭಾಗಗಳ (Scrap) ಹರಾಜು ಪ್ರಕಟಣೆ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಕ್ಕೆ ಸೇರಿದ ಟಾಟಾ ಸಫಾರಿ ವಾಹನ ಸಂಖ್ಯೆ: ಕೆಎ01 ಎಂಸಿ 5285 (2007ರ ಮಾಡೆಲ್) ವಾಹನವನ್ನು ಅನುಪಯುಕ್ತ ಬಿಡಿ ಭಾಗಗಳನ್ನು (Scrap) ಮಾಡಲು ಉದ್ದೇಶಿಸಲಾಗಿರುತ್ತದೆ. ಸದರಿ ವಾಹನದ ಬಿಡಿ ಭಾಗಗಳನ್ನು ಖರೀದಿಸಲು ಆಸಕ್ತಿಯುಳ್ಳವರು ದರವನ್ನು ನಮೂದಿಸಿ ರೂ.2000/–ಗಳ ಠೇವಣಿಯೊಂದಿಗೆ ಮೊಹರು ಮಾಡಿದ ಲಕೋಟೆಯಲ್ಲಿ ನಿಗಮದ ಕೇಂದ್ರ ಕಛೇರಿಗೆ ದಿನಾಂಕ: 24.11.2023 ರಂದು ಸಂಜೆ 4.00 ಗಂಟೆಯೊಳಗಾಗಿ ಸಲ್ಲಿಸಲು ತಿಳಿಸಿದೆ. ನಿಗದಿತ ದಿನಾಂಕ ಮತ್ತು ಸಮಯ ಮೀರಿ ಸಲ್ಲಿಸುವ ದರಪಟ್ಟಿಗಳನ್ನು ತಿರಸ್ಕರಿಸಲಾಗುವುದು. ನಿಗಮದ ವ್ಯವಸ್ಥಾಪಕ ನಿರ್ದೇಶಕರು ಈ ಪ್ರಕಟಣೆ ಅನುಸಾರವಾಗಿ ಸಲ್ಲಿಸುವ ಯಾವುದೇ ಅಥವಾ ಎಲ್ಲಾ ದರಪಟ್ಟಿಯನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ. ವಾಹನದ ಅನುಪಯುಕ್ತ ಬಿಡಿ ಭಾಗಗಳನ್ನು (Scrap) ಹರಾಜು ಮಾಡಲು ಉದ್ದೇಶಿಸಲಾಗಿರುವ ಮೇಲ್ಕಂಡ ವಾಹನದ ಬಿಡಿ ಭಾಗಗಳನ್ನು ಖರೀದಿಸಲು ಆಸಕ್ತವುಳ್ಳವರು ನಿಗಮದ ಕೇಂದ್ರ ಕಛೇರಿಯ ಈ ಮೇಲ್ಕಂಡ ವಿಳಾಸದಲ್ಲಿ ವೀಕ್ಷಿಸಬಹುದಾಗಿರುತ್ತದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕ.ಮ.ವಾ.ಪ.ಪಂ.ಅನಿ, ಬೆಂಗಳೂರು
DIPR/CP/2179/Zenkar/2022-23

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನೇಮಕಾತಿ ಪರೀಕ್ಷೆ ಅಕ್ರಮ ಪ್ರಕರಣ

ಕರ್ತವ್ಯ ಲೋಪ: ಇಬ್ಬರು ಕಾನ್‌ಸ್ಟೆಬಲ್ ಅಮಾನತು

ಪ್ರಜಾವಾಣಿ ವಾರ್ತೆ

ಕಲಬುರಗಿ: ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನೇಮಕಾತಿ ಪರೀಕ್ಷೆ ಅಕ್ರಮ ಪ್ರಕರಣದ ಪ್ರಮುಖ ಆರೋಪಿ ಆರ್.ಡಿ. ಪಾಟೀಲನನ್ನು ವೈದ್ಯಕೀಯ ತಪಾಸಣೆಗೆ ಕರೆದೊಯ್ಯುವ ವೇಳೆ ಕರ್ತವ್ಯ ಲೋಪ ಎಸಗಿದ್ದ ಆರೋಪದಲ್ಲಿ ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಶನಿವಾರ ಅಮಾನತು ಮಾಡಲಾಗಿದೆ.

ಅಶೋಕ ನಗರ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಮಲ್ಲಿಕಾರ್ಜುನ ಹೆಬ್ಬಾಳ ಮತ್ತು ಬ್ರಹ್ಮಪುರ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಮಾಳಪ್ಪ ಜಿ.ಭರಗಿ ಅವರನ್ನು ಅಮಾನತು ಮಾಡಿ ಪೊಲೀಸ್ ಕಮಿಷನರ್ ಚೇತನ್ ಆರ್. ಆದೇಶ ಹೊರಡಿಸಿದ್ದಾರೆ.

ಪಾಟೀಲನನ್ನು ವೈದ್ಯಕೀಯ ತಪಾಸಣೆಗಾಗಿ ಶುಕ್ರವಾರ ಜಿಲ್ಲಾ ಆಸ್ಪತ್ರೆಗೆ ಕರೆತರಲಾಗಿತ್ತು. ಬೆಂಗಾವಲಿಗೆ ನಿಯೋಜಿತರಾಗಿದ್ದ ಮಲ್ಲಿಕಾರ್ಜುನ ಮತ್ತು ಮಾಳಪ್ಪ ಅವರು ಕರ್ತವ್ಯ ಲೋಪ ಎಸಗಿದ್ದರು. ಆರೋಪಿಯನ್ನು ಆಸ್ಪತ್ರೆ ದ್ವಾರದಲ್ಲಿ ನಿಲ್ಲಿಸಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಈ ಮೂಲಕ ಅತೀವ ದುರ್ನಡತೆ ಮತ್ತು ಅಶಿಸ್ತು ಪ್ರದರ್ಶಿಸಿ ಕರ್ತವ್ಯ ಲೋಪ ಎಸಗಿದ್ದಾರೆ. ಹೀಗಾಗಿ, ವಿಚಾರಣೆಯನ್ನು ಕಾಯ್ದಿರಿಸಿ ಇಬ್ಬರನ್ನೂ ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆಸ್ಪತ್ರೆಯ ಒಳಗೆ ಕರೆದೊಯ್ಯುವಾಗ ಆರ್.ಡಿ. ಪಾಟೀಲಗೆ ಕಾನ್‌ಸ್ಟೆಬಲ್ ಒಬ್ಬರು ಗೌರವ ಸೂಚಿಸಿ ನಮಸ್ಕರಿಸಿದ್ದ ಹಾಗೂ ಸಿಐಡಿ ವಿರುದ್ಧ ಪಾಟೀಲ ಮಾಧ್ಯಮಗಳ ಎದುರು ಅಸಮಾಧಾನ ಹೊರಹಾಕಿದ್ದ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಇದನ್ನು ಗಮನಿಸಿ ಶಿಸ್ತುಕ್ರಮ ಕೈಗೊಳ್ಳಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಿಗಿ ಪೊಲೀಸ್ ಕಣ್ಗಾವಲು

ಅಕ್ಟೋಬರ್ 28ರಂದು ನಡೆದಿದ್ದ ಕೆಇಎ ನೇಮಕಾತಿ ಪರೀಕ್ಷೆಯಲ್ಲಿ ಬ್ಲೂಟೂತ್ ಬಳಸಿ ಅಕ್ರಮವೆಸಗಲು ಯತ್ನಿಸಿದ್ದು ಬಯಲಿಗೆ ಬಂದಿರುವ ಕಾರಣ ಶನಿವಾರ ನಗರದಲ್ಲಿ ನಡೆದ ವಿವಿಧ ನಿಗಮಗಳ ನೇಮಕಾತಿ ಪರೀಕ್ಷೆಯ ಪ್ರತಿ ಕೇಂದ್ರಕ್ಕೂ ಸುಮಾರು 25 ಪೊಲೀಸರನ್ನು ನಿಯೋಜಿಸಲಾಗಿತ್ತು.

'ಈ ಹಿಂದೆ ಪ್ರತಿ ಕೇಂದ್ರಕ್ಕೆ ಇಬ್ಬರು ಅಥವಾ ಮೂವರು ಪೊಲೀಸರನ್ನು ನಿಯೋಜಿಸಲಾಗುತ್ತಿತ್ತು. ಕೆಇಎ ಅಧಿಕಾರಿಗಳು ಕಲಬುರಗಿಯಲ್ಲಿ ನಡೆಯುತ್ತಿರುವ ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸುವಂತೆ ಇಲಾಖೆಯನ್ನು ಕೋರಿದ್ದರು. ಹೀಗಾಗಿ, ಪ್ರತಿ ಕೇಂದ್ರಕ್ಕೆ ಸುಮಾರು 25 ಪೊಲೀಸರು ಭದ್ರತೆ ಒದಗಿಸಿದರು. ಕಿವಿಯಲ್ಲಿ ಬ್ಲೂಟೂತ್ ಉಪಕರಣ ತಪಾಸಣೆಗೆ ಇಎನ್‌ಟಿ ವೈದ್ಯರನ್ನು ಕರೆಸಿಕೊಳ್ಳಲಾಗಿತ್ತು' ಎಂದು ಡಿಡಿಪಿಯು ಶಿವಶರಣಪ್ಪ ಮುಳೆಗಾಂವ 'ಪ್ರಜಾವಾಣಿ'ಗೆ ತಿಳಿಸಿದರು.

ಕರ್ನಾಟಕ ಸರ್ಕಾರ

ಕರ್ನಾಟಕ ಅರಣ್ಯ ಇಲಾಖೆ, ಹೊನ್ನಾವರ ವಿಭಾಗ, ಹೊನ್ನಾವರ

ನಂ. ಬಿ1/ಡಿಟಿಎಸ್/ಡಿಸೆಂಬರ್–2023/ಎಂಎಸ್‌ಟಿಸಿ/ಸಿಆರ್–1/2023–24 ದಿನಾಂಕ: 04.11.2023

ಹೊನ್ನಾವರ ವಿಭಾಗದ ಕತಗಾಲ ಮತ್ತು ಇಡಗುಂಜಿ ಮರಮಟ್ಟು ಸಂಗ್ರಹಾಲಯದಲ್ಲಿ ಮರಮಟ್ಟುಗಳ ಇ–ಟೆಂಡರ್ ಪ್ರಕಟಣೆ

ಈ ಮೂಲಕ ಯಾವತ್ತೂ ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ, ದಿನಾಂಕ: 04.12.2023 ರಂದು ಬೆಳಿಗ್ಗೆ 10.00 ಗಂಟೆಯಿಂದ 01.00 ಗಂಟೆಯವರೆಗೆ ಹೊನ್ನಾವರ ಅರಣ್ಯ ವಿಭಾಗದ ಕತಗಾಲ ಮತ್ತು ಇಡಗುಂಜಿ ಮರಮಟ್ಟು ಸಂಗ್ರಹಾಲಯದಲ್ಲಿ ಚೌಬೀನು, ಉರುವಲು ಸೌಧೆ, ಬಿಲೆಟ್ಸ ಮತ್ತು ಎಲೆಗಳ ಇ–ಹರಾಜನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಗಳು ನಡೆಸಲಿದ್ದಾರೆ. ಆಸಕ್ತ ಬಿಡ್ಡುದಾರರು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಇ–ಹರಾಜಿನ ಕುರಿತು ವಿವರಗಳನ್ನು ವೆಬ್‌ಸೈಟ್ **www.mstcecommerce.com** ಮತ್ತು **www.etimber.in** ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ದೂರವಾಣಿ ಸಂಖ್ಯೆಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವದು. ವಲಯ ಅರಣ್ಯಾಧಿಕಾರಿ, ಹೊನ್ನಾವರ – 08387 –257362

ವಲಯ ಅರಣ್ಯಾಧಿಕಾರಿ, ಕತಗಾಲ – 08386–264100 ಅಥವಾ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹೊನ್ನಾವರ – 08387–295236

ಸಹಿ/– (ರವಿಶಂಕರ್ ಸಿ., ಭಾಅಸೇ)

ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ, ಹೊನ್ನಾವರ

DIPR/ADK/KSMCA/365/ 23-24 Dt.17.11.2023

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/13/2023–24 ದಿನಾಂಕ: 16–11–2023

ಅಲ್ಪಾವಧಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕಟಣೆ

2022–23 ನೇ ಸಾಲಿನ JJM ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **24–11–2023 ರಂದು ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ.

ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/2174/ಅಡ್ವರ್ಟೋ/2023–24

K.I.M.S HOSPITAL & RESEARCH CENTRE

K.R.ROAD, V.V. PURAM, BANGALORE - 04.

Ref.: - HDC meeting dated 23.03.2022
EC meeting dated 06.04.2022
RVS/ Admin /1218/23-24 dated 5-10-2023

INVITATION FOR RE TENDER TO SUPPLY OF MEDICAL EQUIPMENTS & INSTRUMENTS TO VARIOUS DEPARTMENTS IN KIMS HOSPITAL

1. AMO & Purchase Committee of KIMS Hospital & Research Centre, K.R. Road, V.V. Puram, Bangalore-560004, invite tenders from eligible tenderers for equipments & Surgical and Non-Surgical instruments for various departments in Two cover bid system from Manufactures/ authorized agencies.
2. The tenderers may submit their tender for various equipments listed as per the list of equipments. Tenderers are advised to note the qualification criteria specified in Section VII to qualify for award of the contract.
3. The tender application will be issued from 22.11.2023 to 06.12.2023 between 10.00am to 5.00pm @ Purchase section, KIMS Hospital & Research Centre on payment of non refundable tender form fee of Rs.3000/- (plus 18% of GST) shall be paid in the form of DD favouring "AMO, KIMS Hospital & Research Centre", Payable at Bangalore.
4. Tender FORMS submitted must be accompanied by Earnest money deposit as per the EMD Amount mentioned against each equipment in the "LIST OF REQUIREMENTS" in Tender Document in the form of Demand Draft issued in favour of "AMO, KIMS Hospital & Research Centre" payable at Bangalore. If the tenderer is quoting for more than one equipment the tenderer should submit the quote for each equipment in Two covers with cover 1 containing Technical Bid & EMD mentioned against each equipment in a separate covers. Cover 2 should contain only financial bid addressing in the name of "AMO, KIMS Hospital".
5. Last date for submitting the Tender document is on or before 16.12.2023 by 4.00pm
6. The tender document is non-transferable.
7. For other details tenders may refer the tender document.

Sd	Sd	Sd	Sd	Sd	Sd	Sd	Sd
Chairman	Chairman	Treasurer	Jt.Secretary	Gen. Secretary	Vice President 1&2	Hon.President	President
HDC	Purchases	RVS	RVS	RVS	RVS	RVS	RVS

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಹಾಸನ ವಿಭಾಗ, ಬಿ.ಎಂ. ರಸ್ತೆ, ಹಾಸನ – 573 201

ನಂ.ಕರಾಸ/ಹಾವಿ/ಸಂಚಾರ/ವಾಣಿಜ್ಯ/2164/2023–24 ದಿನಾಂಕ: 15.11.2023

ಇ–ಟೆಂಡರ್ ಪ್ರಕಟಣೆ / ಸಂಧಾನ ಪ್ರಕಟಣೆ ಸಂಖ್ಯೆ: 06/23–24

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಹಾಸನ ವಿಭಾಗದ ವ್ಯಾಪ್ತಿಗೆ ಬರುವ ವಿವಿಧ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ / ಖಾಲಿಯಾಗಲಿರುವ ಕಟ್ಟಿದ ಸಾಮಾನ್ಯ ಮಳಿಗೆ, ತೆರೆದ ಜಾಗ, ಉಪಹಾರ ಗೃಹ, ಖಾಲಿ ನಿವೇಶನಗಳಿಗೆ ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **ಇ–ಟೆಂಡರ್ / ಸಂಧಾನ ಪ್ರಕಟಣೆ ಸಂಖ್ಯೆ: 06/2023–24** ಟೆಂಡರ್ ಹೊರಡಿಸಿದ್ದು, ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಆನ್‌ಲೈನ್ ಮೂಲಕ ದಿ: **06.12.2023** ರಂದು **16:00 ಗಂಟೆಯೊಳಗೆ** ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ಅರ್ಜಿದಾರರು ಟೆಂಡರ್ ಅರ್ಜಿ ಶುಲ್ಕ, ಇ.ಎಂ.ಡಿ ಶುಲ್ಕದ ಡಿಡಿ ಹಾಗೂ ಇತರೆ ದಾಖಲಾತಿಗಳನ್ನು ದಿ: **07.12.2023** ರಂದು **16:00 ಗಂಟೆಯೊಳಗೆ** ಮುಚ್ಚಿದ ಲಕೋಟೆಯಲ್ಲಿ ವಿಭಾಗೀಯ ಕಛೇರಿ ಸಂಚಾರ ಶಾಖೆಯಲ್ಲಿ ಇರಿಸಿರುವ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ. ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: **08.12.2023** ರಂದು **ಬೆಳಿಗ್ಗೆ 11:30 ಗಂಟೆಗೆ** ನಿಗದಿಯಾಗಿದ್ದು, ಆರ್ಥಿಕ ಬಿಡ್ ತೆರೆಯುವ ದಿನಾಂಕ: **09.12.2023** ರಂದು **ಬೆಳಿಗ್ಗೆ 11:30 ಗಂಟೆಗೆ** ನಿಗದಿಯಾಗಿರುತ್ತದೆ. ಅದೇ ರೀತಿ ಸಂಧಾನ ಪ್ರಕಟಣೆ ಹೊರಡಿಸಿದ್ದು, ವೈಯಕ್ತಿಕ ಸಂಧಾನ ಅರ್ಜಿ ಪಡೆಯಲು **ದಿ: 06.12.2023** ರಂದು **16:00 ಗಂಟೆಗೆ** ಕೊನೆಯ ದಿನಾಂಕವಾಗಿದ್ದು, **ದಿ: 08.12.2023** ರಂದು **11:30 ಗಂಟೆಗೆ** ವಿಭಾಗ ಮಟ್ಟದ ಸಂಧಾನವನ್ನು ನಿಗಧಿಪಡಿಸಲಾಗಿದೆ. ಸಂಧಾನದ ಅರ್ಜಿಗಳನ್ನು ವಿಭಾಗೀಯ ಕಛೇರಿಯಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ ಕ.ರಾ.ರ.ಸಾ.ನಿಗಮ ಹಾಸನ ವಿಭಾಗ ಇಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಲು ಕೋರಲಾಗಿದೆ. ದೂರವಾಣಿ ಸಂಖ್ಯೆ: 7760990502.

ಸಹಿ/–,

ವಿಭಾಗೀಯ ನಿಯಂತ್ರಣಾಧಿಕಾರಿ

ಕ.ರಾ.ರ.ಸಾ.ನಿಗಮ, ಹಾಸನ ವಿಭಾಗ

ವಾಸಾಸಂಇ/ವಾಪ್ರ/ಎಲ್‌ಸಿ/2162/2023–24

ಕರ್ನಾಟಕ ಸರ್ಕಾರ

(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು)

ಜಿಲ್ಲಾ ಶಸ್ತ್ರಚಿಕಿತ್ಸಕರ ಕಾರ್ಯಾಲಯ, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ.

ದೂರವಾಣಿ 08194–234710, ಇ–ಮೇಲ್: dschitradurga@gmail.com

ಸಂಖ್ಯೆ:ಜಿಆಚಿ/ಅಭಿವೃದ್ಧಿ/(2)/2023–24 ದಿನಾಂಕ:18/11/2023

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2023–24ನೇ ಸಾಲಿಗೆ ರಕ್ತ ನಿಧಿ ಕೇಂದ್ರ, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ ಇಲ್ಲಿಗೆ ಅವಶ್ಯವಾಗಿ ಬೇಕಾಗಿರುವ ಉಪಕರಣಗಳನ್ನು ಸರಬರಾಜು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯುವ ಬಗ್ಗೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯ 1999–2000ರ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಅರ್ಹ ಟೆಂಡರ್ ದಾರರು ಕೆ.ಪಿ.ಪಿ ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್ ನಲ್ಲಿ ಸಲ್ಲಿಸಬಹುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು.

(1) ಟೆಂಡರ್ ಪ್ರಕಟಣೆ ಸಂಖ್ಯೆ:– ಸಂ: ಜಿಆಚಿ/ಅಭಿವೃದ್ಧಿ/10/2023–24 (2) ಸರಬರಾಜು ಸಾಮಾಗ್ರಿಗಳು /ಔಷಧಿ ರಾಸಾಯನಿಕಗಳು:– Equipments (3) ಟೆಂಡರ್ ಮೊತ್ತ:– ರೂ. 16,10,000/– (4)ಇ.ಎಂ.ಡಿ ಮೊತ್ತ:– ರೂ. 40,250/– (4) ಇ–ಟೆಂಡರ್ ದಾಖಲೆಗಳ ಇ–ಟೆಂಡರ್‌ಗಳಲ್ಲಿ ದಾಖಲಿಸುವ ಅವಧಿ ದಿನಾಂಕ: 18/11/2023 ರಿಂದ 02/12/2023 (6) ಇ–ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: 18/11/2023 ರಿಂದ 02/12/2023 ಸಂಜೆ 04:30 ರವರೆಗೆ (7) ತಾಂತ್ರಿಕ ಬಿಡ್ ತೆರೆಯುವ ದಿ: 04/12/2023 ಬೆಳಿಗ್ಗೆ 10:00 ಗಂಟೆಗೆ ಇ–ಟೆಂಡರ್ ಸಲ್ಲಿಸಿದ ಟೆಂಡರ್ ದಾರರ ತಾಂತ್ರಿಕ ಬಿಡ್ ತೆರೆದು ಪರಿಶೀಲಿಸಿ ಅರ್ಹ ಟೆಂಡರ್‌ದಾರರ ಆರ್ಥಿಕ ಬಿಡ್‌ಅನ್ನು ತೆರೆಯಲಾಗುವುದು. ಎಲ್ಲಾ ಟೆಂಡರ್ ಗಳನ್ನು ಪ್ರತ್ಯೇಕವಾಗಿ ಸಲ್ಲಿಸುವುದು.

RO.No.337:DIPR/CTA/ KSMCA/2023-24

ಸಹಿ/– ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010.

ಟೆಲಿಫ್ಯಾಕ್ಸ್: 080–22024000 ಇ–ಮೇಲ್: cekrdcl@gmail.com ವೆಬ್‌ಸೈಟ್: http://www.krdcl.in

ಸಂಖ್ಯೆ: ಕರಅನಿನಿ/ಐಎಫ್‌ಬಿ/2023–24/16 ದಿನಾಂಕ: 17–11–2023

ಟೆಂಡರ್ ಆಹ್ವಾನ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಆರ್.ಎಫ್.ಪಿ – ಕರ್ನಾಟಕ ರಾಜ್ಯದಲ್ಲಿ "ರಾಯಚೂರು ಬಳಿಯ ಕಲ್ಮಲಾ ಜಂಕ್ಷನ್ ನಿಂದ ಸಿಂಧನೂರು ಬಳಿಯ ಬಳ್ಳಾರಿ – ಲಿಂಗಸುಗೂರು ಜಂಕ್ಷನ್ ಕಿ.ಮೀ 0.000 ರಿಂದ ಕಿಮೀ 78.45 ರ ವರೆಗಿನ (ವಿನ್ಯಾಸಿತ ಉದ್ದ ಕಿ.ಮೀ 77.03) ಉದ್ದದ ರಸ್ತೆ ನಿರ್ಮಾಣವನ್ನು ಪಿಪಿಪಿ–ಡಿ.ಬಿ.ಎಫ್.ಓ.ಎಂ.ಟಿ–ಹೈಬ್ರಿಡ್ ಆನ್ಯೂಟಿ (HAM) ಆಧಾರದ ಮೇಲೆ ರಸ್ತೆ ನಿರ್ಮಾಣ".

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ (ಕ.ರ.ಅ.ನಿ.ನಿ) ವತಿಯಿಂದ ಕರ್ನಾಟಕ ರಾಜ್ಯದಲ್ಲಿ ರಾಯಚೂರು ಬಳಿಯ ಕಲ್ಮಲಾ ಜಂಕ್ಷನ್ ನಿಂದ ಸಿಂಧನೂರು ಬಳಿಯ ಬಳ್ಳಾರಿ – ಲಿಂಗಸುಗೂರು ಜಂಕ್ಷನ್ ಕಿ.ಮೀ 0.000 ರಿಂದ ಕಿಮೀ 78.45 ರ ವರೆಗಿನ (ವಿನ್ಯಾಸಿತ ಉದ್ದ ಕಿ.ಮೀ 77.03) ಉದ್ದದ ರಸ್ತೆಯನ್ನು ಪಿಪಿಪಿ–ಡಿ.ಬಿ.ಎಫ್.ಓ.ಎಂ.ಟಿ–ಹೈಬ್ರಿಡ್ ವರ್ಷಾಸನ ಯೋಜನೆಯಡಿಯಲ್ಲಿ (HAM) ರಸ್ತೆ ಅಭಿವೃದ್ಧಿ, ನಿರ್ವಹಣೆ ಹಾಗೂ ಮೇಲ್ವಿಚಾರಣೆಯನ್ನು ಕೈಗೊಳ್ಳಲು ಕರ್ನಾಟಕ ಸರ್ಕಾರವು ನಿರ್ಧರಿಸಿದೆ.

ಪ್ರಾಧಿಕಾರವು ಕರ್ನಾಟಕ ರಾಜ್ಯದಲ್ಲಿ ರಾಜ್ಯ ಹೆದ್ದಾರಿ–23 ರ ರಾಯಚೂರು ಬಳಿಯ ಕಲ್ಮಲಾ ಜಂಕ್ಷನ್ ನಿಂದ ಸಿಂಧನೂರು ಬಳಿಯ ಬಳ್ಳಾರಿ – ಲಿಂಗಸುಗೂರು ಜಂಕ್ಷನ್ ಕಿ.ಮೀ 0.000 ರಿಂದ ಕಿಮೀ 78.45 ರ ವರೆಗಿನ (ವಿನ್ಯಾಸಿತ ಉದ್ದ ಕಿ.ಮೀ 77.03) ಉದ್ದದ ರಸ್ತೆ ನಿರ್ಮಾಣವನ್ನು ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ, ನಿರ್ವಹಣೆ ಮತ್ತು ಹಸ್ತಾಂತರ (ಡಿ.ಬಿ.ಎಫ್.ಓ.ಎಂ.ಟಿ ಆನ್ಯೂಟಿ ಅಥವಾ ಹೈಬ್ರಿಡ್ ಆನ್ಯೂಟಿ (HAM)) ಆಧಾರದ ಮೇಲೆ ರಸ್ತೆ ನಿರ್ಮಾಣವನ್ನು ಕೈಗೊಳ್ಳಲು ಉದ್ದೇಶಿಸಿದೆ ಹಾಗೂ ಸದರಿ ಯೋಜನೆಗೆ ಖಾಸಗಿ ಸಂಸ್ಥೆಗಳ ಆಯ್ಕೆಗಾಗಿ ಸೂಕ್ತ ಬಿಡ್ಡುದಾರರನ್ನು ನೇಮಿಸಲು ಬಿಡ್ಡಿಂಗ್ ಪ್ರಕ್ರಿಯೆಯನ್ನು ಟೆಂಡರ್ ಮುಖಾಂತರ ಕೈಗೊಳ್ಳಲು ನಿರ್ಧರಿಸಿದೆ.

ಯೋಜನೆಯ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿವೆ:

ಯೋಜನೆಯ ಹೆಸರು	ರಸ್ತೆಯ ಉದ್ದ (ಕಿ.ಮೀ ಗಳಲ್ಲಿ)	ರಿಯಾಯಿತಿ ಅವಧಿ	ಅಂದಾಜು ಯೋಜನಾ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ) (ರೂ. ಕೋಟಿಗಳಲ್ಲಿ)*
ರಾಯಚೂರು ಬಳಿಯ ಕಲ್ಮಲಾ ಜಂಕ್ಷನ್ ನಿಂದ ಸಿಂಧನೂರು ಬಳಿಯ ಬಳ್ಳಾರಿ – ಲಿಂಗಸುಗೂರು ಜಂಕ್ಷನ್ ಕಿ.ಮೀ 0.000 ರಿಂದ ಕಿ.ಮೀ 78.45 ರ ವರೆಗಿನ (ವಿನ್ಯಾಸಿತ ಉದ್ದ ಕಿ.ಮೀ 77.03) ಉದ್ದದ ರಸ್ತೆಯನ್ನು ಪಿಪಿಪಿ–ಡಿ.ಬಿ.ಎಫ್.ಓ.ಎಂ.ಟಿ–ಹೈಬ್ರಿಡ್ ವರ್ಷಾಸನ ಯೋಜನೆಯಡಿಯಲ್ಲಿ (HAM) ರಸ್ತೆ ನಿರ್ಮಾಣ	77.03	15 ವರ್ಷಗಳು (36 ತಿಂಗಳುಗಳ ನಿರ್ಮಾಣ ಅವಧಿ ಸೇರಿದಂತೆ)	1238.00

*ಅಂದಾಜು ಯೋಜನಾ ಮೊತ್ತವು ಇ.ಪಿ.ಸಿ ವೆಚ್ಚ, ನಿರ್ಮಾಣದ ಸಮಯದಲ್ಲಿನ ಬಡ್ಡಿ, ಆರ್ಥಿಕ–ಭೌತಿಕ ಬೆಲೆ ಕಂಟಿಂಜೆನ್ಸಿ ಮತ್ತು ಇನ್ನಿತರೆ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಸಂಪೂರ್ಣ ಬಿಡ್ ದಾಖಲೆಯನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಕೆಪಿಪಿ ಪೋರ್ಟಲ್) **http//kppp.karnataka.gov.in** ವೆಬ್‌ಸೈಟ್ ಮೂಲಕ ದಿನಾಂಕ: **18–11–2023 ರಿಂದ 22–12–2023 (17–30 ಗಂಟೆಗಳ ವರೆಗೂ) ವರೆಗೆ** ಪಡೆದುಕೊಳ್ಳಬಹುದು. ಬಿಡ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಕೆಪಿಪಿ ಪೋರ್ಟಲ್) ಆನ್‌ಲೈನ್ ಮುಖಾಂತರ ಮಾತ್ರ ದಿನಾಂಕ: **22–12–2023 ವರೆಗೂ ಅಥವಾ ಮುಂಚಿತವಾಗಿ (17–30 ಗಂಟೆಗಳ ವರೆಗೂ)** ಸಲ್ಲಿಸಬೇಕು. ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **26–12–2023 ರಂದು 11.30 ಗಂಟೆಗೆ** ತೆರೆಯಲಾಗುತ್ತದೆ.

ಬೇರೆ ಯಾವುದೇ ವಿಧಾನದ ಮೂಲಕ ಸಲ್ಲಿಸಿದ ಬಿಡ್‌ನ್ನು ಪರಿಗಣಿಸಲಾಗುವುದಿಲ್ಲ. ಆದಾಗ್ಯೂ ಬಿಡ್ ಭದ್ರತೆ, ಬಿಡ್ ಸಹಿ ಮಾಡಲು ಪವರ್ ಆಫ್ ಅಟಾರ್ನಿ, ಕನ್ಸೋರ್ಟಿಯಂನ ಪ್ರಮುಖ ಸದಸ್ಯರಿಗೆ ಪವರ್ ಆಫ್ ಅಟಾರ್ನಿ (ಯಾವುದಾದರೂ ಇದ್ದಲ್ಲಿ), ಕನ್ಸೋರ್ಟಿಯಂ ಜಂಟಿ ಬಿಡ್ಡಿಂಗ್ ಒಪ್ಪಂದ (ಯಾವುದಾದರೂ ಇದ್ದಲ್ಲಿ) ಮತ್ತು ಅನುಭವ ಪ್ರಮಾಣ ಪತ್ರಗಳು ಹಾಗೂ ಆರ್.ಎಫ್.ಪಿ ಪ್ರಕಾರ ಅಗತ್ಯವಿರುವ ಇತರ ದಾಖಲೆಗಳನ್ನು ಆರ್.ಎಫ್.ಪಿ ಯಲ್ಲಿ ವಿವರಿಸಿರುವಂತೆ ಮೂಲ ಪ್ರಮಾಣ ಪತ್ರಗಳನ್ನು ಭೌತಿಕವಾಗಿ ಸಲ್ಲಿಸಬೇಕು. ಯಾವುದೇ ಕಾರಣವನ್ನು ನೀಡದೆ ಎಲ್ಲಾ ಅಥವಾ ಯಾವುದೇ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರವು ಕಾಯ್ದಿರಿಸಿದೆ.

ಸೂಚನೆ: ಈ ಸಂಬಂಧ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಮುಂದಿನ ಬದಲಾವಣೆಗಳನ್ನು ಕೇವಲ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್/ಕೆ.ಆರ್.ಡಿ.ಸಿ.ಎಲ್ ವೆಬ್‌ಸೈಟ್: http://www.krdcl.in ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕರಅನಿನಿ ಬೆಂಗಳೂರು

DIPR/CP/YC/2171/2023-24

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕಾಮಗಾರಿ ವಿಭಾಗ, ಬೆಂಗಳೂರು

ಸಂ.: ಕರಾನಿ/ಕಾನಿಅ/ಬೆಂ/ಕಿಅ/419/2023–24 ದಿನಾಂಕ: 16.11.2023

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ. 10/2023–24

ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿ ಕೆಲಸಗಳಿಗೆ ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರುಗಳು ಇ–ಆಡಳಿತ ರವರೊಡನೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಲು ಕೋರಲಾಗಿದೆ.

ಕ್ರ. ಸಂ.	ಟೆಂಡರ್ ಪ್ರಕಟಣೆಯ ಸಂಖ್ಯೆ	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ ರೂ. ಲಕ್ಷಗಳಲ್ಲಿ	ಮುಂಗಡ ಠೇವಣಿ ರೂ.ಗಳಲ್ಲಿ	ಕಾಲಾವಧಿ ತಿಂಗಳಲ್ಲಿ (ಮಳೆಗಾಲ ಸೇರಿ)
1	10/2023–24	ಮಾಲೂರು ಪರಿಶಿಷ್ಟ ಜಾತಿ ಮತ್ತು ವರ್ಗಗಳ ತರಬೇತಿ ಕೇಂದ್ರದ ಆವರಣದಲ್ಲಿ ಹೆಚ್ಚುವರಿ ಡಾರ್ಮಿಟರಿ ನಿರ್ಮಿಸುವುದು. (01 ಸಂಖ್ಯೆಯ ಬ್ಲಾಕ್‌ಗಳು)	232.00	3,48,000.00	12 ತಿಂಗಳು

ಹೆಚ್ಚಿನ ವಿವರಗಳನ್ನು **http://www.kppp.karnataka.gov.in** ವೆಬ್‌ಸೈಟ್‌ಗೆ ಲಾಗ್‌ಆನ್ ಮಾಡಿ ನೋಡಿಕೊಳ್ಳಬಹುದು.

ಸಹಿ/–,

ಕಾರ್ಯನಿರ್ವಾಹಕ ಅಭಿಯಂತರರು,

ಕ.ರಾ.ರ.ಸಾ. ನಿಗಮ, ಕಾಮಗಾರಿ ವಿಭಾಗ, ಬೆಂಗಳೂರು

ವಾಸಾಸಂಇ/ವಾಪ್ರ/ಎಲ್‌ಸಿ/2163/2023–24

ಕರ್ನಾಟಕ ಸರ್ಕಾರದ ಸಚಿವಾಲಯ

ಆರ್ಥಿಕ ಇಲಾಖೆ

ವಿಧಾನಸೌಧ, ಬೆಂಗಳೂರು.

ಸಂಖ್ಯೆ: ಆಇ 02 ಬಿಎಂಬಿ 2023 ದಿನಾಂಕ: 18.11.2023

ಪತ್ರಿಕಾ ಪ್ರಕಟಣೆ

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: **ಎಫ್.ಡಿ.02 ಬಿಎಂಬಿ 2013, ದಿನಾಂಕ: 13ನೇ ಡಿಸೆಂಬರ್ 2013** ನಿಬಂಧನೆಯ ಮೇರೆಗೆ ಹೊರಡಿಸಲಾದ **9.5% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2023, (9.5% Karnataka SDL 2023) ದಿನಾಂಕ: 17ನೇ ಡಿಸೆಂಬರ್ 2023 ದಿನಾಂಕವೂ** ಸೇರಿ ಅವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, **ದಿನಾಂಕ: 18ನೇ ಡಿಸೆಂಬರ್ 2023ರಂದು** ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನೆಗೋಷಿಯೇಬಲ್ ಇನಸ್ಟ್ರುಮೆಂಟ್ಸ್ ಆಕ್ಟ್ 1881ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ, ರಾಜ್ಯದಲ್ಲಿ ಪಾವತಿ ಕಛೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. **18ನೇ ಡಿಸೆಂಬರ್ 2023ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.**

2. ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು: 2007ರ ಉಪ ನಿಬಂಧನೆ 24(2) ಮತ್ತು 24(3)ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಅಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ. ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ–ಬ್ಯಾಂಕಿಂಗ್ ಖಾತೆಯನ್ನು ಹೊಂದಿದ್ದಲ್ಲಿ. ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ/ನೋಂದಾಯಿತವಾಗಿವೆಯೋ ಅಂತಹ ಬ್ಯಾಂಕ್‌ಗಳಲ್ಲಿ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.

3. ಅದಾಗ್ಯೂ ಬ್ಯಾಂಕ್ ಖಾತೆಯ ವಿವರಗಳು ಇಲ್ಲದ/ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, **9.5% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2023, (9.5% Karnataka SDL 2023)** ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು. ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರುಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.

"ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ"

4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೇ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು. ಈ ವಿಷಯವನ್ನು ವಿಶೇಷವಾಗಿ ಯಾವಗಲೂ ಗಮನದಲ್ಲಿಡಬೇಕು.

5. ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು. ಸಂಬಂಧಪಟ್ಟ ಸಾರ್ವಜನಿಕ ಋಣ ಕಛೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು. ಸಾರ್ವಜನಿಕ ಋಣ ಕಛೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ. ಅಂಥ ಡ್ರಾಫ್ಟನ್ನು ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.

ಸಹಿ/– (ಡಾ. ರೇಜು ಎಂ.ಟಿ.)

ಸರ್ಕಾರದ ಕಾರ್ಯದರ್ಶಿ (ವೆಚ್ಚ), ಆರ್ಥಿಕ ಇಲಾಖೆ

DIPR/CP/RO2178/AAPL/2023-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ (ವಿಜಯನಗರ) ಕಛೇರಿ, ಶಾಸಕರ ಭವನ, 1ನೇ ಮಹಡಿ, 3ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು – 560040.

ಸಂಖ್ಯೆ:ಕಾ.ಪಾ.ಅ(ವಿಜನ)/ಸ.ಅ/ಟಿ.ಎನ್/ಜಿಎಲ್–06/2023–24 ದಿನಾಂಕ: 18–11–2023

ತಿದ್ದುಪಡಿ–3

ವಿಷಯ : ಟೆಂಡರ್ ಷೆಡ್ಯೂಲ್ 'ಬಿ' ಗಳನ್ನು ಸ್ವೀಕರಿಸುವ ಮತ್ತು ಟೆಂಡರ್ ತೆರೆಯುವ ದಿನಾಂಕ ಮುಂದೂಡಿರುವ ಬಗ್ಗೆ.

ಉಲ್ಲೇಖ: ಟೆಂಡರ್ ಪ್ರಕಟಣೆ ಸಂಖ್ಯೆ: ಕಾ.ಪಾ.ಅ/ವಿಜನ/ಸ.ಅ/ಟಿ.ಎನ್/ಜಿಎಲ್–06/ 2023–24, ದಿನಾಂಕ: 25–10–2023.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಟೆಂಡರ್‌ನಲ್ಲಿನ ಕ್ರಮ ಸಂಖ್ಯೆ. (5) **ರಲ್ಲಿ ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 132 ರಲ್ಲಿ ವಿವಿಧೋದ್ದೇಶ ಕಟ್ಟಡ ನಿರ್ಮಾಣ ಹಾಗೂ ವಿಜಯನಗರ ವಿಧಾನಸಭಾ ಕ್ಷೇತ್ರದ ಪಾರ್ಕ್‌ಗಳಲ್ಲಿ ಆಟದ ಮೈದಾನ ಸುಧಾರಣೆಗಳು ಮತ್ತು ವಾಚ್‌ಮೆನ್ ಶೆಡ್‌ಗಳು, ಮಕ್ಕಳ ಆಟದ ಸಲಕರಣೆಗಳು, ಜಿಮ್ ಸಲಕರಣೆಗಳ ನಿರ್ಮಾಣ ಹಾಗೂ ಇತರೆ ತೋಟಗಾರಿಕೆ ಅಭಿವೃದ್ಧಿ ಕಾಮಗಾರಿಗಳು, ಎಲ್‌ಇಡಿ ಸ್ಟ್ರೀಟ್ ಲೈಟ್‌ಗಳ ಒದಗಿಸುವಿಕೆ. ಪ್ಯಾಕೇಜ್ ಸಂಖ್ಯೆ. 05. ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. 500.00 ಲಕ್ಷಗಳು.** ಕಾಮಗಾರಿಯ ಟೆಂಡರ್ ಷೆಡ್ಯೂಲ್ 'ಬಿ' ಗಳನ್ನು ಡೌನ್‌ಲೋಡ್ ಮಾಡುವ ದಿನಾಂಕವನ್ನು ಹಾಗೂ ಕ್ರಮ ಸಂಖ್ಯೆ. 1, 2, 3, 4 ಮತ್ತು 5 ರ ಪ್ಯಾಕೇಜ್ ಕಾಮಗಾರಿಗಳಿಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಮತ್ತು ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕವನ್ನು ಈ ಕೆಳಕಂಡಂತೆ ಮುಂದೂಡಲಾಗಿದೆ. ಉಳಿದಂತೆ ಟೆಂಡರ್ ನಿಯಮಾವಳಿಗಳಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ.

ಟೆಂಡರ್ ವೇಳಾಪಟ್ಟಿ: 1) ಕ್ರಮ ಸಂಖ್ಯೆ. (5) ರ ಕಾಮಗಾರಿಯ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡುವ ದಿನಾಂಕ: **27–11–2023 ರಿಂದ. 2)** ಕ್ರಮ ಸಂಖ್ಯೆ. (5) ರ ಕಾಮಗಾರಿಯ ಬಿಡ್ ಪೂರ್ವಭಾವಿ ಸಭೆ ದಿನಾಂಕ: **02–12–2023 ರಂದು ಮಧ್ಯಾಹ್ನ 3.00 ಗಂಟೆಗೆ. 3)** ಕ್ರಮ ಸಂಖ್ಯೆ. (1) ರಿಂದ (5) ರ ಎಲ್ಲಾ ಕಾಮಗಾರಿಗಳಿಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ: **06–12–2023 ರಂದು ಸಂಜೆ 4.00 ಗಂಟೆಯವರೆಗೆ. 4)** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **07–12–2023 ರಂದು ಸಂಜೆ 4.30 ಗಂಟೆಗೆ.**

ಸಹಿ/– ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ಬಿಬಿಎಂಪಿ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.

ಸಂ:ಕಾನಿಇಂ:ಲೋಇ:ವಿಕೊ:ಡಿಬಿ:KW–4:ಟೆಂ:2023–24:2492 ದಿನಾಂಕ:15–11–2023.

ಅಲ್ಪಾವಧಿ ಟೆಂಡರ್ ಪ್ರಕಟಣೆ

2023–24ನೇ ಸಾಲಿನ ಲೆಕ್ಕ ಶೀರ್ಷಿಕೆ: ನಬಾರ್ಡ ಆರ್‌ಐಡಿಎಫ್–28 ಅಡಿಯಲ್ಲಿ ಮಂಜೂರಾದ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕೂಮೆಂಟ್ KW–4 ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿ ಪೋರ್ಟಲ್ **http://kppp.karnataka.gov.in** ಮುಖಾಂತರ ಭಾಗವಹಿಸಬಹುದು. ಒಟ್ಟು 1 ಕಾಮಗಾರಿಗೆ (**ವರ್ಕ ಇಂಡೆಂಟ್ ಸಂಖ್ಯೆ:5920**) ಟೆಂಡರ್ ಸ್ವೀಕರಿಸುವ ಅಂತಿಮ **ದಿನಾಂಕ: 28–11–2023** ಸಮಯ 16.00 ಗಂಟೆ, ಟೆಂಡರ್ ತೆರೆಯುವ **ದಿನಾಂಕ: 29–11–2023** ಸಮಯ 16.30 ಗಂಟೆ, ಅಂದಾಜು ಮೊತ್ತ **ರೂ. 158.00** ಲಕ್ಷಗಳು ಇರುತ್ತದೆ. ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು **http://kppp.karnataka.gov.in** ನೋಡಿಕೊಳ್ಳುವುದು/ ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು.

ವಿಶೇಷ ಸೂಚನೆ: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು ಯಾವುದೇ ರೀತಿಯ ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,

ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/238/ಕೆಎಸ್‌ಎಂಸಿಎ/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಶಿವಾಜಿನಗರ ವಿಭಾಗ, ಕ್ವೀನ್ಸ್ ರಸ್ತೆ, ಬೆಂಗಳೂರು–52

ನಂ.: ಕಾಪಾಅ/ಶಿವಾಜಿನಗರ/ಟೆಂಡರ್/08/2023–24 ದಿನಾಂಕ: 17.11.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) ದ್ವಿ ಲಕೋಟೆ

ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ ವಿಭಾಗ), ಬಿಬಿಎಂಪಿ, ಬೆಂಗಳೂರು ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಥವಾ ತತ್ಸಮಾನ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೌಲ್ಯ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಗಳಲ್ಲಿ)
1	**ವಾರ್ಡ್ ನಂ: 62**ರಲ್ಲಿ ಚಿನ್ನಪ್ಪ ಗಾರ್ಡನ್ ಲಿಂಕ್ ರಸ್ತೆ, 1ನೇ ಮುಖ್ಯರಸ್ತೆ, ಚರ್ಚ್ ರಸ್ತೆ, ಎಂಎಂ ರಸ್ತೆ, ಮುದ್ದಮ್ಮ ಗಾರ್ಡನ್ 3ನೇ ಅಡ್ಡರಸ್ತೆ, ಚಿನ್ನಪ್ಪ ಗಾರ್ಡನ್ 2ನೇ ಮುಖ್ಯರಸ್ತೆ, 13ನೇ ಕ್ರಾಸ್ ಹಾಗೂ ಸುತ್ತಮುತ್ತಲ ಪ್ರದೇಶ ಮತ್ತು **ವಾರ್ಡ್ ನಂ: 63**ರಲ್ಲಿ ಮದಿ ಮಸೀದಿ, ಚಿಕ್ಕ ಬಜಾರ್, ಪಾಯಪ್ಪ ಗಾರ್ಡನ್, ಓಲ್ಡ್ ಸಿಮೆಂಟರಿ ರಸ್ತೆ, ಮಿಲ್ಕ್ ಮ್ಯಾನ್ ಸ್ಟ್ರೀಟ್, ಜಯಮಹಲ್ ಪಾರ್ಕ್ ಅಭಿವೃದ್ಧಿ ಕಾಮಗಾರಿಗಳು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಸಿಸಿ ರಸ್ತೆ, ಚರಂಡಿ ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ. **(ಪ್ಯಾಕೇಜ್ ಸಂಖ್ಯೆ: 01)**	1,000.00	10,00,000 (1,00,000.00 ಎನ್‌ಇಎಫ್‌ಟಿ ಬಾಕಿ 9,00,000.00 ಬ್ಯಾಂಕ್ ಗ್ಯಾರಂಟಿ)
2	**ವಾರ್ಡ್ ನಂ: 110**ರಲ್ಲಿ ಕಬ್ಬನ್ ಪೇಟೆ, ಬನ್ನಪ್ಪ ಪಾರ್ಕ್, ಟಾಸ್ಕರ್ ಟೌನ್, ಯೂನಿಯನ್ ಸ್ಟ್ರೀಟ್, ಲೇಡಿ ಕರ್ಜನ್ ರಸ್ತೆ, ಎಚ್‌ಎಎಲ್ ರಸ್ತೆ, ಸಫೀನಾ ಪ್ಲಾಜಾ ರಸ್ತೆ, ಕಮರ್ಷಿಯಲ್ ಸ್ಟ್ರೀಟ್ ಅಡ್ಡ ರಸ್ತೆಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಿಸಿ ರಸ್ತೆ, ಚರಂಡಿ ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ. **(ಪ್ಯಾಕೇಜ್ ಸಂಖ್ಯೆ: 02)**	1,000.00	10,00,000 (1,00,000.00 ಎನ್‌ಇಎಫ್‌ಟಿ ಬಾಕಿ 9,00,000.00 ಬ್ಯಾಂಕ್ ಗ್ಯಾರಂಟಿ)
3	**ವಾರ್ಡ್ ನಂ: 93**ರಲ್ಲಿ ಶ್ರೀಕಾಂತರ್ ಲೇಔಟ್, ಚಕ್ರವರ್ತಿ ಅಯ್ಯಂಗಾರ್ ಲೇಔಟ್, ಶ್ರೀ ಪುರಂ ವಸಂತನಗರ ಹಾಗೂ ಸುತ್ತಮುತ್ತಲ ಪ್ರದೇಶ ಮತ್ತು **ಹಲಸೂರು ವಾರ್ಡ್ ನಂ: 90**ರಲ್ಲಿ ಗುಪ್ತಾ ಲೇಔಟ್, ಕಾರ್ ಸ್ಟ್ರೀಟ್, ಸದಾಶಿವ ಮುದಲಿಯಾರ್ ರಸ್ತೆ, ಜಾಮಿಯಾ ಮಸೀದಿ ರಸ್ತೆ, ಹನುಮಯ್ಯ ರೆಡ್ಡಿ ರಸ್ತೆ, ಸುಬ್ಬಯ್ಯ ರೆಡ್ಡಿ ರಸ್ತೆ, ಆರ್.ಕೆ. ಮಠ ರಸ್ತೆ, ಬಜಾರ್ ಸ್ಟ್ರೀಟ್, ಭೋವಿ ಕಾಲೋನಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಿಸಿ ರಸ್ತೆ, ಚರಂಡಿ ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ. **(ಪ್ಯಾಕೇಜ್ ಸಂಖ್ಯೆ: 03)**	900.00	9,00,000 (1,00,000.00 ಎನ್‌ಇಎಫ್‌ಟಿ ಬಾಕಿ 8,00,000.00 ಬ್ಯಾಂಕ್ ಗ್ಯಾರಂಟಿ)
4	**ಭಾರತಿನಗರ ವಾರ್ಡ್ ನಂ: 91**ರಲ್ಲಿ ಎಲ್, ನಂ. 3ನೇ ಸ್ಟ್ರೀಟ್, ಲಬ್ಬೆ ಮಸೀದಿ ರಸ್ತೆಯ ಅಡ್ಡರಸ್ತೆಗಳು, ಮಾರ್ವಾಡಿ ಬಜಾರ್ ರಸ್ತೆ, ಟಾಡ್ ಲೇನ್, ಓ. ನಂ 2ನೇ ಸ್ಟ್ರೀಟ್, ನಾಲಾ ರಸ್ತೆ, ಇ. ನಂ. 2ನೇ ಸ್ಟ್ರೀಟ್, ತಿಮ್ಮಯ್ಯ ರಸ್ತೆಯ ಅಡ್ಡರಸ್ತೆಗಳು, ಸಬಾಪತಿ ಲೇನ್ ಹಾಗೂ ಸುತ್ತಮುತ್ತಲ ಪ್ರದೇಶ ಮತ್ತು **ಶಿವಾಜಿನಗರ ವಾರ್ಡ್ ಸಂಖ್ಯೆ: 92**ರಲ್ಲಿ ಮೀಯರ್ ಒಬೆದುಲ್ಲಾ ರಸ್ತೆ, ನೆಹರುಪುರಂ, ಕುಕ್ಸ್ ರಸ್ತೆ ಎ ಸ್ಟ್ರೀಟ್, ನಾಲಾ ರಸ್ತೆ, ಚೌಡಿ ಗಲ್ಲಿ ಅಡ್ಡ ರಸ್ತೆಗಳು, ಸುಲ್ತಾನ್ ನಗರ, ಹೊಸ ಮಾರುಕಟ್ಟೆ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆ, ಚರಂಡಿ ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ. **(ಪ್ಯಾಕೇಜ್ ಸಂಖ್ಯೆ: 04)**	1,100.00	11,00,000 (1,00,000.00 ಎನ್‌ಇಎಫ್‌ಟಿ ಬಾಕಿ 10,00,000.00 ಬ್ಯಾಂಕ್ ಗ್ಯಾರಂಟಿ)

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **22.11.2023**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **(2)** ಪೂರ್ವಭಾವಿ ಸಭೆಯು ದಿನಾಂಕ **18.12.2023**ರಂದು **ಮಧ್ಯಾಹ್ನ 12:00 ಗಂಟೆಗೆ** ಕಾರ್ಯಪಾಲಕ ಅಭಿಯಂತರರವರ ಕಛೇರಿ, ಶಿವಾಜಿನಗರ ವಿಭಾಗ, ಕ್ವೀನ್ಸ್ ರಸ್ತೆ, ಬೆಂಗಳೂರು–52ರಲ್ಲಿ ನಡೆಯಲಿದೆ. **(3)** ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ: **22.12.2023**ರ **ಸಂಜೆ 4:00 ಗಂಟೆಗೆ** ಮುಂಚಿತವಾಗಿ ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. **(4)** ತಾಂತ್ರಿಕ ಬಿಡ್‌ಗಳನ್ನು ವೆಬ್‌ಸೈಟ್ **https://kppp.karnataka.gov.in** ಮೂಲಕ ಕಾರ್ಯಪಾಲಕ ಅಭಿಯಂತರರವರ ಕಛೇರಿ, ಶಿವಾಜಿನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಇಲ್ಲಿ ದಿನಾಂಕ: **26.12.2023**ರ **ಸಂಜೆ 4:30 ಗಂಟೆಗೆ** ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಬಿಬಿಎಂಪಿ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು–570017

Telephone No: 9448994705

CHAMUNDESHWARI ELECTRICITY SUPPLY CORPORATION LIMITED

(A Government of Karnataka Undertaking)

Corporate Office, Procurement Section

CESC, Mysuru-570017

Website: www.cescmysore.org

E-mail ID: gmpurc@cescmysore.org

Company Identity Number(CIN): U40109KA2004SGC035177

ಚಾವಿಸನಿನಿ/ಪ್ರ.ವ್ಯ/ಸ.ಪ್ರ.ವ್ಯ(ಖ)/ಸ.ಪ್ರ.ವ್ಯ(ಖ–1)/2023–24/14307 ದಿನಾಂಕ: 13.11.2023

ಇ–ಹರಾಜು ಪ್ರಕಟಣೆ

(ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾವಿನಸನಿನಿ ವತಿಯಿಂದ ಕೆಳಕಂಡ ವಿಭಾಗೀಯ ಉಗ್ರಾಣಗಳಲ್ಲಿ ದಾಸ್ತಾನಿರುವ ವಿವಿಧ ರದ್ದಿ ಸಾಮಗ್ರಿಗಳನ್ನು 'AS IS WHERE IS BASIS' ಆಧಾರದ ಮೇಲೆ ಇ–ಹರಾಜು ಮುಖೇನ ವಿಲೇವಾರಿ ಮಾಡಲು ಬಿಡ್ ಆಹ್ವಾನಿಸಿದೆ. ವಿಭಾಗೀಯ ಉಗ್ರಾಣಗಳ ಮತ್ತು ಇತರೆ ವಿವರಗಳು ಕೆಳಕಂಡಂತಿವೆ;

ಕ್ರ.ಸಂ	ವಿಭಾಗ	ಮೊಬೈಲ್ ಸಂಖ್ಯೆ	ಕ್ರ.ಸಂ	ವಿಭಾಗ	ಮೊಬೈಲ್ ಸಂಖ್ಯೆ
1	ಎನ್. ಆರ್ ಮೊಹಲ್ಲಾ	9448994715	10	ಸಕಲೇಶಪುರ	9480810365
2	ಎನ್. ಆರ್ ಮೊಹಲ್ಲಾ	9448994842	11	ಹೊಳೆನರಸೀಪುರ	9449598598
3	ನಂಜನಗೂಡು	9448994718	12	ಚನ್ನರಾಯಪಟ್ಟಣ	9449598520
4	ಹುಣಸೂರು	9449598554	13	ಅರಸೀಕೆರೆ	9449598544
5	ಕೆ.ಆರ್ ನಗರ	9448283391	14	ಮಂಡ್ಯ	8277889833
6	ಮಡಿಕೇರಿ	9449598541	15	ಮದ್ದೂರು	9449598525
7	ಕೊಳ್ಳೇಗಾಲ	9480841185	16	ಪಾಂಡವಪುರ	9449598596
8	ಚಾಮರಾಜನಗರ	9449598542	17	ಕೆ.ಆರ್.ನಗರ	8277883811
9	ಹಾಸನ	9449598597	18	ನಾಗಮಂಗಲ	9480816902

ರದ್ದಿ ಸಾಮಗ್ರಿಗಳ ಪರಿಮಾಣ ಮತ್ತು ಇತರೆ ವಿವರಗಳನ್ನು ಹಾಗೂ ಹರಾಜಿನ ದಿನಾಂಕ, ಸಮಯ ಮತ್ತು ಅರ್ಹ ಬಿಡ್‌ದಾರರು ಸದರಿ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು https://kppp.karnataka.gov.in ನಲ್ಲಿ ದಿನಾಂಕ: 20.11.2023 ಅಥವಾ ನಂತರ ಪಡೆಯಬಹುದಾಗಿರುತ್ತದೆ. ಇ–ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ +91–8046010000, +91–8068948777ಗೆ ಅಥವಾ ಇ–ಮೇಲ್ ವಿಳಾಸ support@eprochelpdesk.comಗೆ ಸಂಪರ್ಕಿಸಬಹುದಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

ಸಹಿ/– ಪ್ರಧಾನ ವ್ಯವಸ್ಥಾಪಕರು(ಖರೀದಿ), ಚಾ.ವಿ.ಸ.ನಿನಿ., ಮೈಸೂರು

DIPR/DDMYS/KSMCA/642/2023-24

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ

ನಂ.ಗ್ರಾಕುನೀ&ನೈವಿ/ಹಾವೇರಿ/ಪಿಬಿ–1/ಟೆಂಡರ್:13/2023–24/ ದಿ: 17–11–2023

ಅಲ್ಪಾವಧಿ ಟೆಂಡರ ಪಕಟಣೆ

(E-GOK ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

JJM ಯೋಜನೆಯಡಿ ಹಿರೇಕೆರೂರ ತಾಲೂಕಿನ ಈ ಕೆಳಕಂಡ ಗ್ರಾಮಗಳಲ್ಲಿ ಟೆಂಡರ್ ಕರೆಯಲಾಗಿದೆ.

(1) Tender queries/ Clarifications ಗೆ ಕೊನೆಯ ದಿನ ಮತ್ತು ಸಮಯ : ದಿನಾಂಕ : **29–11–2023** ರ 11:00 ಗಂಟೆವರೆಗೆ (2) E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನ ಮತ್ತು ಸಮಯ ದಿನಾಂಕ : **05–12–2023** ರ 17:00 ಗಂಟೆವರೆಗೆ (3) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ : **06–12–2023** ರ 17:00 ಗಂಟೆ ನಂತರ (4) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ : **07–12–2023**ರ 10:00 ಗಂಟೆ ನಂತರ (5) ಪ್ರೀ ಬಿಡ್ ಮೀಟಿಂಗ್ ಸ್ಥಳ : Office of the Executive Engineer, Rural Drinking Water & Sanitation Division, Vidyanagar, Old ZP Compound, Haveri-581110. : ದಿನಾಂಕ : **01–12–2023** ರ 11:00 ಗಂಟೆ ನಂತರ

ಇಂಡೆಂಟ್ ನಂ : (1) Augmentation of MVS of Rattihalli & Other 12 villeges in Hirekeruru Taluka in Haveri District under Jal Jeevan Mission Project (RWSSD/2023-24/WS/ WORK_INDENT6912)

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E.GOK ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ **https:// kppp.karnataka.gov.in** ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್,

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ.

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/327/2023–24

ಭಕ್ತರಿಗಿಲ್ಲ ಮೂಲಸೌಕರ್ಯದ ‘ಪ್ರಸಾದ’



ಕೊಪ್ಪಳ ಜಿಲ್ಲೆಯ ಹುಲಿಗಿಯ ಹುಲಿಗೆಮ್ಮ ದೇವಿ ದೇವಸ್ಥಾನದ ಬಳಿ ತುಂಗಭದ್ರಾ ನದಿಯ ಸ್ಥಿತಿ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಒಂದನೇ ಪುಟದಿಂದ...

ಉತ್ತರ ಕರ್ನಾಟಕದ ಇನ್ನೊಂದು ಪ್ರಸಿದ್ಧ ಯಾತ್ರಾ ಸ್ಥಳ ಕಲಬುರಗಿ ಜಿಲ್ಲೆ ಅಫಜಲಪುರ ತಾಲ್ಲೂಕಿನ ಗಾಣಗಾಪುರವೂ ಸಮಸ್ಯೆಗಳ ಆಗರ. ಸ್ವಚ್ಛತೆ, ವಸತಿ ವ್ಯವಸ್ಥೆಯ ಕೊರತೆ ಕಾಡುತ್ತಿದೆ. ಹಲವು ತಿಂಗಳ ಹಿಂದೆ ಅಲ್ಲಿ ಮೃತಪಟ್ಟಿದ್ದ ವೃದ್ಧೆಯೊಬ್ಬರ ಶವವನ್ನು ನಾಯಿಗಳು ತಿಂದು ಹಾಕಿದ್ದು ಅವ್ಯವಸ್ಥೆಗೆ ಸಾಕ್ಷಿಯಂತಿದೆ ಎಂದು ಭಕ್ತರು ದೂರುತ್ತಾರೆ.

ಪೂಜಾ ಸಾಮಗ್ರಿಗಳ ವ್ಯಾಪಾರಿ ಅನುಸೂಯಾ, ‘ಗಾಣಗಾಪುರದ ದತ್ತನ ಮಂದಿರದಿಂದ ಎರಡು ಕಿ.ಮೀ. ದೂರದಲ್ಲಿರುವ ಸಂಗಮದಲ್ಲಿ ಹಲವರು ಭೀಮಾ ನದಿಯಲ್ಲಿ ಮಿಂದು, ಪೂಜೆ ನೆರವೇರಿಸುತ್ತಾರೆ. ಸ್ನಾನ ಮಾಡುವ ಭಕ್ತರು ನಂತರ ತಮ್ಮ ಬಟ್ಟೆಗಳನ್ನು ನದಿಯಲ್ಲಿಯೇ ಎಸೆಯುತ್ತಾರೆ. ಇದು ತಪ್ಪಬೇಕು’ ಎಂದರು.

ದಕ್ಷಿಣ ಭಾರತದ ಪ್ರಮುಖ ಶಕ್ತಿಪೀಠ ಬೆಳಗಾವಿ ಜಿಲ್ಲೆಯ ಸವದತ್ತಿಯ ಯಲ್ಲಮ್ಮನಗುಡ್ಡಕ್ಕೆ ಮಹಾರಾಷ್ಟ್ರ, ತಮಿಳುನಾಡು, ಆಂಧ್ರ ಪ್ರದೇಶ ಮತ್ತು ಗೋವಾ ರಾಜ್ಯಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ವರ್ಷವಿಡೀ ಭಕ್ತರಿಂದ ಗುಡ್ಡದ ಪರಿಸರ ತುಂಬಿ ತುಳುಕುತ್ತದೆ. ಈ ದೇವಸ್ಥಾನಕ್ಕೆ ಬರುವ ವಾರ್ಷಿಕ ಆದಾಯ ₹26 ಕೋಟಿಗೂ ಅಧಿಕ. ಆದರೆ, ಬೇಡಿಕೆಯಷ್ಟು ಮೂಲಸೌಕರ್ಯಗಳೇ ಇಲ್ಲ.

‘ಯಲ್ಲಮ್ಮನಗುಡ್ಡ–ಉಗರಗೋಳ ಮಾರ್ಗದಲ್ಲಿ ತಂಗುದಾಣ ಇಲ್ಲದ್ದರಿಂದ ಬಸ್‌ಗಾಗಿ ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿಯಿದೆ. ಶೌಚಾಲಯ, ವಸತಿಗೃಹದಂತಹ ಸಾಮಾನ್ಯ ಸೌಲಭ್ಯಗಳು ಸಿಗದೇ ಏದುಸಿರು ಬಿಡುವಂತಾಗಿದೆ’ ಎಂದು ಬೈಲಹೊಂಗಲ ತಾಲ್ಲೂಕಿನ ತಿಗಡಿ ಗ್ರಾಮದ ಭಕ್ತ ಮಲ್ಲಿಕಾರ್ಜುನ ನಿಚ್ಚಣ್ಣಿ ಬೇಸರ ವ್ಯಕ್ತಪಡಿಸಿದರು.

ಹಳೆ ಮೈಸೂರು ಭಾಗದಲ್ಲಿ ಲಕ್ಷಾಂತರ ಭಕ್ತರನ್ನು ಸೆಳೆದಿರುವ, ಕೋಟ್ಯಂತರ ರೂಪಾಯಿ ಆದಾಯ ತರುವ ದೇವಾಲಯಗಳಿವೆ. ಎಲ್ಲ ದೇವಸ್ಥಾನಗಳಲ್ಲೂ ಮೇಲೆ ಹೇಳಿದ ಸಮಸ್ಯೆಯೇ ಪುನರಾವರ್ತನೆಯಾಗುತ್ತದೆ. ಭಕ್ತರು ನೆಮ್ಮದಿ ಹುಡುಕಿ ದೇವಾಲಯಗಳಿಗೆ ಬಂದರೆ, ದೇವರ ಸನ್ನಿಧಿಯಲ್ಲಿರುವ ಸಮಸ್ಯೆಗಳು, ಇರುವ ನೆಮ್ಮದಿ ಕೆಡಿಸುತ್ತವೆ ಎನ್ನುವ ಆರೋಪ ಭಕ್ತರಿಂದ ಕೇಳಿ ಬರುತ್ತಿದೆ.



ಕೊಪ್ಪಳ ಜಿಲ್ಲೆಯ ಹುಲಿಗಿಯ ಹುಲಿಗೆಮ್ಮ ದೇವಿ ದೇವಸ್ಥಾನದ ತುಂಗಭದ್ರಾ ನದಿ ದಂಡೆಯಲ್ಲಿ ಮಹಿಳೆಯರಿಗೆ ಬಟ್ಟೆ ಬದಲಿಸಲು ಇರುವ ತಗಡಿನ ಶೆಡ್‌ಗಳು

ಸರ್ಕಾರಿ ಸ್ವಾಮ್ಯದಲ್ಲಿ ಹೆಚ್ಚು ಆದಾಯವುಳ್ಳ ರಾಜ್ಯದ ಎರಡನೇ ದೇವಾಲಯವೆಂಬ ಹೆಗ್ಗಳಿಕೆ ಹೊಂದಿರುವ ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟದ ಮಲೆ ಮಹದೇಶ್ವರ ಸ್ವಾಮಿ ದೇವಾಲಯಕ್ಕೆ ನೆರೆಯ ತಮಿಳುನಾಡು, ಆಂಧ್ರ, ತೆಲಂಗಾಣ ಸೇರಿದಂತೆ ಹೊರ ರಾಜ್ಯಗಳ ಸಾವಿರಾರು ಭಕ್ತರು ಬರುತ್ತಾರೆ. 2022–23ರಲ್ಲಿ ಈ ದೇವಾಲಯ ₹100 ಕೋಟಿ ಆದಾಯ ಗಳಿಸಿದೆ. ದೇವಾಲಯಕ್ಕೆ ಸರ್ಕಾರ ಪ್ರತ್ಯೇಕ ಪ್ರಾಧಿಕಾರ ರಚಿಸಿದ ಬಳಿಕ ಅಭಿವೃದ್ಧಿ ಕೆಲಸಗಳು ವೇಗ ಪಡೆದುಕೊಂಡರೂ ಪೂರ್ಣಗೊಂಡಿಲ್ಲ ಎನ್ನುತ್ತಾರೆ ಭಕ್ತರು.

ಚಾಮುಂಡಿ ಬೆಟ್ಟ ರಾಜ್ಯದ ಪ್ರಮುಖ ಧಾರ್ಮಿಕ ಕೇಂದ್ರ. ವಾರ್ಷಿಕ 75 ಲಕ್ಷಕ್ಕೂ ಹೆಚ್ಚು ಭಕ್ತರು ಭೇಟಿ ನೀಡುವ ದೇವಾಲಯದ ಸರಾಸರಿ ಆದಾಯ ₹26.82 ಕೋಟಿ. ಬೆಟ್ಟದ ಮೇಲೆ ವಾಹನ ಸಂಚಾರ ತಪ್ಪಿಸಲು ರೋಪ್‌ವೇ ಮಾಡುವ ಮಾತು ದಶಕಗಳಿಂದಲೂ ನಡೆಯುತ್ತಿದೆ. ಆದರೆ ಯೋಜನೆ ಕಾರ್ಯಗತವಾಗಿಲ್ಲ. ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಕ್ಕೆ ವಾರ್ಷಿಕ ₹16.5 ಕೋಟಿ ಆದಾಯವಿದೆ. ಭಕ್ತರ ಅನುಕೂಲಕ್ಕಾಗಿ 75 ಕೊಠಡಿಗಳ ವಸತಿಗೃಹ ನಿರ್ಮಾಣವಾಗುತ್ತಿದೆ. ನಿತ್ಯ ಸಾವಿರಾರು ಮಂದಿ ಪುಣ್ಯ ಸ್ನಾನ ಮಾಡುವ ಕಪಿಲಾ ನದಿ ಸ್ನಾನಘಟ್ಟ ಅಭಿವೃದ್ಧಿಯಾಗಿಲ್ಲ. ಬೇಲೂರಿನ ಚನ್ನಕೇಶವ ದೇಗುಲದಲ್ಲಿ ಯಾತ್ರಿ ನಿವಾಸ ನಿರ್ಮಿಸಿದ್ದರೂ, ನಿರ್ವಹಣೆಯೇ ಸರಿಯಾಗಿಲ್ಲ. ಪ್ರಶಾಂತ ಪರಿಸರದಲ್ಲಿರುವ ಬಿಳಿಗಿರಿರಂಗನಬೆಟ್ಟದ ಬಿಳಿಗಿರಿ ರಂಗನಾಥಸ್ವಾಮಿ ದೇವಾಲಯ ‘ಎ’ ಗ್ರೇಡ್‌ಗೆ ಏರಿದ್ದರೂ ಆದಾಯ ಹೆಚ್ಚಿಲ್ಲ. ಸುಸಜ್ಜಿತ ಮೆಟ್ಟಿಲುಗಳ ನಿರ್ಮಾಣಕ್ಕೆ ಭೂಮಿಪೂಜೆ ನಡೆದು ಹಲವು ವರ್ಷವಾದರೂ ಕಾಮಗಾರಿ ಆರಂಭವಾಗಿಲ್ಲ. ದಾಸೋಹ ಭವನವೂ ಸಮರ್ಪಕವಾಗಿಲ್ಲ ಎನ್ನುವುದು ಭಕ್ತರ ದೂರು.

ಶ್ರೀರಂಗಪಟ್ಟಣದ ಪುರಾತನ ರಂಗನಾಥಸ್ವಾಮಿ ದೇವಾಲಯದ ರಿಪೇರಿ ಕಾರ್ಯ ತುರ್ತಾಗಿ ಆಗಬೇಕಿದೆ. ಕಾವೇರಿ ನದಿಯಂಚಿನಲ್ಲಿರುವ ಈ ದೇವಾಲಯವನ್ನು ಆದಿರಂಗ ಎಂದೂ, ಶಿಂಷಾದಲ್ಲಿ ಮಧ್ಯರಂಗ ಹಾಗೂ ತಮಿಳುನಾಡಿನ ಶ್ರೀರಂಗನಾಥಸ್ವಾಮಿ ಅಂತ್ಯರಂಗನೆಂದೇ ಪ್ರಸಿದ್ಧ. ಈ ಮೂರು ದೇವಸ್ಥಾನಗಳನ್ನು ಒಂದೇ ದಿನದಲ್ಲಿ ದರ್ಶನ ಮಾಡುವ ತಿರಂಗ ದರ್ಶನ ಬಹಳ ಪ್ರಸಿದ್ಧ. ತಮಿಳುನಾಡಿನ ದೇವಾಲಯಕ್ಕೆ ಹೋಲಿಸಿದರೆ ರಾಜ್ಯದ ಎರಡೂ ದೇವಾಲಯಗಳು ಅಭಿವೃದ್ಧಿ ಮತ್ತು ಮೂಲಸೌಕರ್ಯ ದೃಷ್ಟಿಯಲ್ಲಿ ಸರ್ಕಾರದ ತಿರಸ್ಕಾರಕ್ಕೆ ಒಳಗಾಗಿವೆ. ಮಧ್ಯರಂಗದಲ್ಲಿ ಅಭಿವೃದ್ಧಿ ಕಾರ್ಯ ಆರಂಭವಾಗಿದ್ದರೂ ಆಮೆವೇಗದಲ್ಲಿ ನಡೆಯುತ್ತಿದೆ. ಶ್ರೀರಂಗಪಟ್ಟಣದಲ್ಲಿ ತಿರಂಗ ದರ್ಶನಕ್ಕೆ ಸಂಬಂಧಿಸಿದಂತೆ ಕೊಂಚವೂ ಮಾಹಿತಿಯಿಲ್ಲ. ಶ್ರೀರಂಗಕ್ಕೆ ಹೋಲಿಸಿದರೆ ಪೂಜೆ, ಪುನಸ್ಕಾರ, ಅಭಿವೃದ್ಧಿಯಲ್ಲೂ ಕರ್ನಾಟಕದ ಮುಜರಾಯಿ ಇಲಾಖೆಯ ಅಸಡ್ಡೆ ಎದ್ದು ಕಾಣುತ್ತದೆ ಎನ್ನುವುದು ಭಕ್ತರ ದೂರು.

ಮುಜರಾಯಿ ಇಲಾಖೆ ವ್ಯಾಪ್ತಿಯ ದೇವಸ್ಥಾನ ಸಂಖ್ಯೆ

ಗ್ರೇಡ್	ದೇವಸ್ಥಾನಗಳ ಸಂಖ್ಯೆ
ಎ	205
ಬಿ	193
ಸಿ	34,165
ಒಟ್ಟು	34,563

ಮಂಡ್ಯ ಜಿಲ್ಲೆಯ ಹಲವು ಶತಮಾನಗಳಷ್ಟು ಪುರಾತನವಾದ ಪ್ರಸಿದ್ಧ ಚಲುವನಾರಾಯಣ ಸ್ವಾಮಿ ದೇವಾಲಯಕ್ಕೆ ಬಳಸಿರುವ ಶಿಲೆ ಶಿಥಿಲಾವಸ್ಥೆಗೆ ತಿರುಗುತ್ತಿದೆ. ನೆಲಹಾಸು ಸವೆದಿದೆ. ದೂರದಿಂದ ಬರುವ ಭಕ್ತರು ಉಳಿಯಲು ಹೋಟೆಲ್ ಅಥವಾ ಛತ್ರವಿಲ್ಲ. ಹತ್ತಿರದಲ್ಲೇ ಬೆಟ್ಟದ ಮೇಲಿರುವ ನರಸಿಂಹಸ್ವಾಮಿಯ ದರ್ಶನಕ್ಕೆ ಹಿರಿಯರು ಹೋಗಲು ಪರಿಪಾಡು ಅನುಭವಿಸಬೇಕಾಗುತ್ತದೆ. ಕಾರಣ ಒಂದು ಮೆಟ್ಟಿಲಿಂದ ಮತ್ತೊಂದು ಮೆಟ್ಟಿಲಿಗೆ ಎರಡಡಿ ಎತ್ತರ. ಮೆಟ್ಟಿಲೇರಲಾಗದೆ ಭಕ್ತರು ದೂರದಿಂದಲೇ ನರಸಿಂಹನಿಗೆ ನಮಿಸುತ್ತಾರೆ.

ಆದಾಯ ಹೆಚ್ಚಿಸಿದ ‘ಶಕ್ತಿ’

ಧಾರ್ಮಿಕ ದತ್ತಿಯಡಿ ಬರುವ ದೇವಸ್ಥಾನಗಳಲ್ಲಿ ವಾರ್ಷಿಕವಾಗಿ ಅಂದಾಜು ₹ 400 ಕೋಟಿಯಿಂದ ₹ 450 ಕೋಟಿ ಆದಾಯ ಬರುತ್ತಿತ್ತು. ಕೋವಿಡ್ ಕಾಲದಲ್ಲಿ ಈ ಆದಾಯ ಕುಸಿತವಾಗಿ ₹300 ಕೋಟಿಯಿಂದ ₹ 330 ಕೋಟಿಗೆ ಇಳಿಕೆಯಾಗಿತ್ತು. ಕೋವಿಡ್ ಕಡಿಮೆಯಾದ ಬಳಿಕ ಮತ್ತೆ ಆದಾಯ ಹೆಚ್ಚಳವಾಗಿದೆ. ‘ಶಕ್ತಿ’ ಯೋಜನೆ ಜಾರಿಯಾದ ಮೇಲೆ ಶೇ 30ರಷ್ಟು ಆದಾಯ ಹೆಚ್ಚಳವಾಗಿದೆ.

ವಿಜಯನಗರ ಜಿಲ್ಲೆಯ ಮೈಲಾರಲಿಂಗೇಶ್ವರ ದೇವಸ್ಥಾನ ವಾರ್ಷಿಕ ₹4.88 ಕೋಟಿ ಆದಾಯ ಹೊಂದಿದ್ದರೂ ಭಕ್ತರ ಅಗತ್ಯದಷ್ಟು ವಸತಿ ಸೌಲಭ್ಯ ಹೊಂದಿಲ್ಲ. ರಾಯಚೂರು ತಾಲ್ಲೂಕಿನ ದೇವಸೂಗೂರಿನ ಸೂಗೂರೇಶ್ವರ ದೇವಸ್ಥಾನ ವಾರ್ಷಿಕವಾಗಿ ₹60 ಲಕ್ಷ ಆದಾಯ ಬರುತ್ತದೆ. ಭಕ್ತರ ಸಂಖ್ಯೆಗೆ ಅನುಗುಣವಾಗಿ ಇನ್ನಷ್ಟು ಸೇವೆ ಒದಗಿಸಬೇಕಾಗಿದೆ. ಯಾದಗಿರಿ ಜಿಲ್ಲೆಯಲ್ಲಿರುವ ಮೈಲಾಪುರ ಮೈಲಾರಲಿಂಗೇಶ್ವರ ಮತ್ತು ಸುರಪುರ ತಾಲ್ಲೂಕಿನ ತಿಂಥಣಿ ಮೌನೇಶ್ವರದಲ್ಲಿಯೂ ಇದೇ ಸಮಸ್ಯೆ.

‘ತಿಂಥಣಿ ಮೌನೇಶ್ವರ ದೇವಸ್ಥಾನದ ಬಳಿ ಮಹಿಳೆಯರಿಗೆ ಸೂಕ್ತ ಸೌಲಭ್ಯಗಳಿಲ್ಲ. ಉತ್ತಮ ಆದಾಯ ಬರುತ್ತಿದ್ದರೂ ಹಣ ಎಲ್ಲಿಗೆ ಹೋಗುತ್ತಿದೆ’ ಎಂದು ಯಾದಗಿರಿಯ ಭಕ್ತ ನಂದಪ್ಪ ಪೂಜಾರಿ ಪ್ರಶ್ನಿಸುತ್ತಾರೆ.

ಚಿತ್ರದುರ್ಗ ಜಿಲ್ಲೆಯ ಗುರುತಿಪ್ಪೇರುದ್ರಸ್ವಾಮಿ ದೇವಾಲಯ, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಹುಚ್ಚರಾಯ ಸ್ವಾಮಿ ದೇವಾಲಯ (ಆಂಜನೇಯ ಸ್ವಾಮಿ) ದೇವಾಲಯಕ್ಕೆ ವಾರ್ಷಿಕವಾಗಿ ₹35 ಲಕ್ಷದಿಂದ ₹40 ಲಕ್ಷ ಆದಾಯ ಬರುತ್ತದೆ. ದೇವಾಲಯದಲ್ಲಿ ಚಾವಣಿ ಇಲ್ಲದಿರುವುದರಿಂದ ಮಳೆ ಬಂದರೆ ನೆನೆಯಬೇಕಾಗುತ್ತದೆ. ಪವಿತ್ರ ಸ್ಥಳದಲ್ಲಿ ಎಗ್ಗಿಲ್ಲದೇ ಮದ್ಯ ಮಾರಾಟ ನಡೆಯುತ್ತಿದೆ. ಇದಕ್ಕೆಲ್ಲ ಕಡಿವಾಣ ಯಾವಾಗ ಎನ್ನುವುದು ಸ್ಥಳೀಯರ ಪ್ರಶ್ನೆ.

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಚಿಕ್ಕತಿರುಪತಿ ಪ್ರಸನ್ನ ವೆಂಕಟರಮಣಸ್ವಾಮಿ ದೇಗುಲಕ್ಕೆ ವಾರ್ಷಿಕ ₹2 ಕೋಟಿಗೂ ಹೆಚ್ಚಿನ ಆದಾಯವಿದ್ದರೂ ಸೌಲಭ್ಯವಿಲ್ಲ. ಮುಖ್ಯಗೋಪುರದ ಕಾಮಗಾರಿ ಇನ್ನೂ ಪೂರ್ಣವಾಗಿಲ್ಲ. ದೇವಾಲಯದಲ್ಲಿ ಅನ್ನಪ್ರಸಾದ ನಡೆಯುತ್ತಿದೆ. ಆದರೆ ವಾಹನ ನಿಲುಗಡೆ ಸ್ಥಳದಲ್ಲಿ ಶುಚಿತ್ವದ ಕೊರತೆಯಿದೆ.

‘ನಿತ್ಯ ಸಾವಿರಾರು ಭಕ್ತರು ಭೇಟಿ ನೀಡುವ ಈ ದೇವಾಲಯದಲ್ಲಿ ಮೂಲ ಸೌಕರ್ಯಗಳ ಕೊರತೆ ಇದೆ. ಹೆಚ್ಚು ಆದಾಯ ಬರುವ ದೇಗುಲಗಳಲ್ಲಿ ಒಂದಾಗಿದ್ದು ಯಾಕೆ ನಿರ್ಲಕ್ಷ್ಯ ಮಾಡುತ್ತಾರೋ ಏನೋ’ ಎಂದು ಪ್ರಶ್ನಿಸುತ್ತಾರೆ ಬೆಂಗಳೂರಿನ ಸಾಫ್ಟ್‌ವೇರ್ ಉದ್ಯಮಿ ಜಗನ್ನಾಥ್.

ಶಕ್ತಿ ಯೋಜನೆ ಜಾರಿಯಾದ ಬಳಿಕ ಶೇ 20ರಿಂದ 30ರಷ್ಟು ಹೆಚ್ಚು ಭಕ್ತರು ದೇವಸ್ಥಾನಗಳಿಗೆ ಭೇಟಿ ನೀಡುತ್ತಿದ್ದಾರೆ. ಮಹಿಳೆಯರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಹಾಗೇ ಆದಾಯವೂ ಹೆಚ್ಚಿದೆ. ಆದರೆ, ಅದನ್ನು ಮುಜರಾಯಿ ಇಲಾಖೆ ಬಳಸಿಕೊಂಡು ಮೂಲಸೌಕರ್ಯ ಕಲ್ಪಿಸುತ್ತಿಲ್ಲ. ಆದರೆ, ಬೇರೆ ಧರ್ಮಗಳ ಧಾರ್ಮಿಕ ಸ್ಥಳ ಅಭಿವೃದ್ಧಿಗೆ ಇಲಾಖೆಯ ಹಣ ಬಳಕೆಯಾಗುತ್ತದೆ ಎನ್ನುವ ಆರೋಪ ಹಲವು ಸಾರ್ವಜನಿಕರದ್ದಾಗಿದೆ. ದೇವಸ್ಥಾನದ ಹುಂಡಿಗೆ ಹಾಕಿದ ಹಣ ಮುಜರಾಯಿ ಇಲಾಖೆ ಖಾತೆಗೆ, ಆರತಿ ತಟ್ಟೆಯಲ್ಲಿ ಹಾಕಿದ ಕಾಣಿಕೆ ಅರ್ಚಕರಿಗೆ ಹೋಗುತ್ತದೆ. ಆದ್ದರಿಂದ ಆರತಿ ತಟ್ಟೆಗೇ ಹಣ ಹಾಕಿ. ಇಲ್ಲವಾದರೆ ಹಣ ಅನ್ಯಧರ್ಮದ ಧಾರ್ಮಿಕ ಸ್ಥಳ ಅಭಿವೃದ್ಧಿಗೆ ಹೋಗುತ್ತದೆ ಎನ್ನುವ ಬಾಯಿ ಮಾತಿನ ಆಂದೋಲನವೂ ನಡೆಯುತ್ತಿದೆ.

ಆದರೆ, ಈ ಆರೋಪವನ್ನು ಮುಜರಾಯಿ ಇಲಾಖೆ ಅಧಿಕಾರಿಗಳು ತಳ್ಳಿಹಾಕುತ್ತಾರೆ. ಕೊಲ್ಲೂರು ಮೂಕಾಂಬಿಕಾ ದೇವಸ್ಥಾನ, ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ, ಮೈಸೂರು ಚಾಮುಂಡೇಶ್ವರಿ ದೇವಸ್ಥಾನ ಸಹಿತ ಅಧಿಕ ಆದಾಯ ಇರುವ ದೇವಸ್ಥಾನಗಳಲ್ಲಿ ಕೂಡ ಶೇ 90ರಷ್ಟನ್ನು ಅದೇ ದೇವಸ್ಥಾನ, ಪ್ರದೇಶಗಳಿಗೆ ಬಳಸಬೇಕು. ಶೇ 10ರಷ್ಟನ್ನು ಸಾಮಾನ್ಯ ಸಂಗ್ರಹಣಾ ನಿಧಿ ಎಂದು ತೆಗೆದಿರಿಸಲಾಗುತ್ತದೆ. ರಾಜ್ಯ ಧಾರ್ಮಿಕ ಪರಿಷತ್ತು ಈ ಅನುದಾನವನ್ನು ಆದಾಯವಿಲ್ಲದ ದೇವಸ್ಥಾನಗಳ ಮೂಲಸೌಕರ್ಯಗಳ ಅಭಿವೃದ್ಧಿಗೆ ಬಳಸುತ್ತದೆ. ಅದನ್ನು ಹೊರತುಪಡಿಸಿ ಒಂದು ದೇವಸ್ಥಾನದ ಹಣವನ್ನು ಬೇರೆ ಇಲಾಖೆಯಷ್ಟೇ ಅಲ್ಲ, ಬೇರೆ ದೇವಸ್ಥಾನಕ್ಕೂ ಬಳಸುವುದಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ.

ಮುಜರಾಯಿ ದೇವಸ್ಥಾನಗಳನ್ನು ಅವುಗಳ ಆದಾಯದ ಆಧಾರದಲ್ಲಿ ಮೂರು ವಿಭಾಗಗಳನ್ನಾಗಿ ಮಾಡಲಾಗಿದೆ. ವಾರ್ಷಿಕ ₹ 25 ಲಕ್ಷಕ್ಕಿಂತ ಅಧಿಕ ಆದಾಯ ಇರುವ ದೇವಸ್ಥಾನಗಳು ‘ಎ’ ವರ್ಗ, ₹ 5 ಲಕ್ಷದಿಂದ ₹ 25 ಲಕ್ಷದವರೆಗೆ ಆದಾಯ ಇರುವ ದೇವಸ್ಥಾನಗಳನ್ನು ‘ಬಿ’ ವರ್ಗ ಹಾಗೂ ₹ 5 ಲಕ್ಷಕ್ಕಿಂತ ಕಡಿಮೆ ಆದಾಯ ಇರುವ ದೇವಸ್ಥಾನಗಳನ್ನು ‘ಸಿ’ ವರ್ಗ ಎಂದು ವಿಂಗಡಿಸಲಾಗಿದೆ.

ಮುಜರಾಯಿ ಇಲಾಖೆ ವ್ಯಾಪ್ತಿಯ ಕೆಲ ‘ಎ’ ಗ್ರೇಡ್ ದೇವಸ್ಥಾನಗಳಲ್ಲಿ ಅರ್ಚಕರಿಗೆ ಮಾಸಿಕ ₹28 ಸಾವಿರ ತನಕ ವೇತನ ಲಭಿಸುತ್ತದೆ. ಹಲವು ವರ್ಷಗಳ ಹಿಂದೆಯಷ್ಟೇ ಅವರಿಗೆ 6ನೇ ವೇತನ ಆಯೋಗದ ಮಾದರಿಯಲ್ಲಿ ವೇತನ ಪರಿಷ್ಕರಣೆ ಮಾಡಲಾಗಿದೆ. ಇನ್ನುಳಿದಂತೆ ದೇವಸ್ಥಾನಗಳು ಗಳಿಸುವ ಆದಾಯದ ಮೇಲೆ ಅರ್ಚಕರಿಗೆ ವೇತನ ನಿಗದಿ ಮಾಡಲಾಗುತ್ತಿದೆ.

ರಾಜ್ಯದ ಆರ್ಥಿಕತೆ ಅಭಿವೃದ್ಧಿಗೆ ಧಾರ್ಮಿಕ ಪ್ರವಾಸೋದ್ಯಮವೂ ಮುಖ್ಯ. ಧಾರ್ಮಿಕ ಪ್ರವಾಸ ಈಗಲೂ ಪ್ರಯಾಸವಾಗುತ್ತಿದೆ. ಧಾರ್ಮಿಕ ಪ್ರವಾಸೋದ್ಯಮದಲ್ಲಿ ಮೇಲುಗೈ ಸಾಧಿಸಿರುವ ತಮಿಳುನಾಡು, ಕೇರಳಕ್ಕೆ ಸಡ್ಡುಹೊಡೆಯಲು ಭಕ್ತರಿಗೆ ಸುಗಮ ದರ್ಶನದ ವ್ಯವಸ್ಥೆ, ಸಮಯಕ್ಕೆ ಸರಿಯಾದ ಬಸ್, ಶುದ್ಧ ಕುಡಿಯುವ ನೀರು, ಶೌಚಾಲಯ, ಉಳಿಯಲು ಛತ್ರ ಇಲ್ಲವೇ ಹೋಟೆಲ್, ಶುಚಿಯಾದ ಪ್ರಸಾದ ದೊರೆಯಬೇಕು. ಧಾರ್ಮಿಕ ಪ್ರವಾಸ ಸುಖಕರವಾಯಿತು ಎನ್ನುವ ಮಾತು ಹರಿದಾಡಿದರೆ ಮತ್ತಷ್ಟು ಜನ ಪ್ರವಾಸ ಕೈಗೊಳ್ಳುವರು. ಇದು ಟ್ಯಾಕ್ಸಿ ಸೇವೆ, ಹೋಟೆಲ್ ಉದ್ಯಮ ಸೇರಿದಂತೆ ಪೂಜಾ ಸಾಮಾಗ್ರಿ ಮಾರುವವರೂ ಹಣ ನೋಡುವಂತಾಗುತ್ತದೆ.

ದೇವಸ್ಥಾನಗಳ ಅಭಿವೃದ್ಧಿಗೆ ಆಗಬೇಕಾದ ಕೆಲಸಗಳು

- **ಕೊಪ್ಪಳ ಜಿಲ್ಲೆಯ ಹುಲಗಿ:** ಸ್ನಾನಘಟ್ಟ, ಸಾರ್ವಜನಿಕ ಶೌಚಾಲಯ, ಭಕ್ತರು ಉಳಿದುಕೊಳ್ಳಲು ಇನ್ನಷ್ಟು ಕೊಠಡಿಗಳ ನಿರ್ಮಾಣ.
- **ಕಲಬುರಗಿ ಜಿಲ್ಲೆಯ ಗಾಣಗಾಪುರ:** ದತ್ತ ಮಂದಿರದ ಸುತ್ತಮುತ್ತಲಿನಲ್ಲಿ ಮುಜರಾಯಿ ಇಲಾಖೆ ನಿರ್ವಹಿಸುವ ಧರ್ಮಶಾಲೆಗಳ ಪುನರ್ ನಿರ್ಮಾಣವಾಗಬೇಕಿದೆ. ಶೌಚಾಲಯ ಬಳಕೆಗೆ ಮುಕ್ತವಾಗಬೇಕಿದೆ. ಪ್ರವಾಸೋದ್ಯಮ ಇಲಾಖೆಯಿಂದ ನಿರ್ಮಿಸಲಾಗಿರುವ ಯಾತ್ರಿ ನಿವಾಸವನ್ನು ಖಾಸಗಿ ವಸತಿಗೃಹಗಳ ಲಾಬಿಗೆ ಮಣಿದು ಯಾತ್ರಿ ನಿವಾಸ ಆರಂಭಿಸಿಲ್ಲ ಎನ್ನುವ ಆರೋಪಗಳಿದ್ದು, ತ್ವರಿತವಾಗಿ ಆರಂಭಿಸಬೇಕು.
- **ಬೆಳಗಾವಿ ಜಿಲ್ಲೆಯ ಸವದತ್ತಿ:** ಭಕ್ತರ ಸಂಖ್ಯೆಗೆ ಅನುಗುಣವಾಗಿ ವಸತಿಗೃಹಗಳಿಲ್ಲ. ಶೌಚಗೃಹಗಳ ಕೊರತೆಯಿದೆ. ಕೆಲವರು ಬಯಲಲ್ಲೇ ಶೌಚಕ್ಕೆ ಹೋಗುವುದು ಸಾಮಾನ್ಯವಾಗಿದೆ.
- **ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಸ್ವಾಮಿ ದೇವಾಲಯ:** ಅಮಾವಾಸ್ಯೆ, ಜಾತ್ರೆ ಸಮಯದಲ್ಲಿ ಲಕ್ಷಾಂತರ ಜನ ಸೇರುವಾಗ ಬಿಸಿಲಿನಲ್ಲಿ ಗಂಟೆಗಟ್ಟಲೆ ನಿಲ್ಲಬೇಕು. ಸ್ವಚ್ಛತೆಯೇ ದೊಡ್ಡ ಸಮಸ್ಯೆ. ಎಲ್ಲರಿಗೂ ವಾಸ್ತವ್ಯದ ವ್ಯವಸ್ಥೆ ಇಲ್ಲ. ಶೌಚಾಲಯ ಸವಲತ್ತು ಸಾಕಾಗುವುದಿಲ್ಲ.
- **ಮೈಸೂರಿನ ಚಾಮುಂಡಿ ಬೆಟ್ಟ:** ಮೂಲಸೌಕರ್ಯಗಳ ಕೊರತೆ, ತ್ಯಾಜ್ಯ ವಿಲೇವಾರಿಯ ಕೊರತೆ, ಮಳಿಗೆದಾರರು ಬೀದಿಯಲ್ಲೇ ವಹಿವಾಟು ನಡೆಸುವುದರಿಂದ ಜಾಗ ಇಕ್ಕಟ್ಟಾಗಿದ್ದು ಭಕ್ತರು ಕಿರಿಕಿರಿ ಅನುಭವಿಸಬೇಕಾಗಿದೆ.
- **ಮಂಡ್ಯದ ಮೇಲುಕೋಟೆ ಚೆಲುವನಾರಾಯಣಸ್ವಾಮಿ ದೇವಾಲಯ:** ವಿಶ್ವವಿಖ್ಯಾತ ವೈರಮುಡಿ ಉತ್ಸವ ನಡೆಯುವ ಈ ದೇವಸ್ಥಾನಕ್ಕೆ ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರದಿಂದ ಅಪಾರ ಭಕ್ತರು ಬಂದರೂ ವಸತಿ ಸೌಲಭ್ಯವಿಲ್ಲ. ಮಂಡ್ಯ, ಮೈಸೂರಿನಲ್ಲಿ ಉಳಿದುಕೊಳ್ಳಬೇಕು. ವಾರ್ಷಿಕ ₹ 2 ಕೋಟಿಗೂ ಹೆಚ್ಚು ಆದಾಯವಿರಬೇಕೆಂಬ ನಿಯಮದಿಂದಾಗಿ ದೇವಾಲಯ ಪ್ರಾಧಿಕಾರ ರಚನೆಯಾಗಿಲ್ಲ.
- **ಚಿತ್ರದುರ್ಗ ಜಿಲ್ಲೆಯ ಗುರುತಿಪ್ಪೇರುದ್ರಸ್ವಾಮಿ ದೇವಾಲಯ:** 2004ರಲ್ಲಿ ಪಟ್ಟಣದ ಒಳಮಠ ಮತ್ತು ಹೊರಮಠ ದೇವಾಲಯಗಳ ಬಳಿ ತಲಾ ಒಂದೊಂದು ಬೃಹತ್ ಅತಿಥಿಗೃಹ ಸಮುಚ್ಚಯಗಳನ್ನು ನಿರ್ಮಿಸಲಾಗಿದೆ. ಆಗಿನ ಪೀಠೋಪಕರಣಗಳು ದುರಸ್ತಿಗೊಳ್ಳಬೇಕಿವೆ.



ಕಲಬುರಗಿ ಜಿಲ್ಲೆಯ ಗಾಣಗಾಪುರದ ದತ್ತ ಮಂದಿರದ ಮುಂಭಾಗದಲ್ಲಿ ಜಾನುವಾರುಗಳು ಠಿಕಾಣಿ ಹೂಡಿರುವುದು ಚಿತ್ರ: ತಾಜುದ್ದೀನ್ ಆಜಾದ್

ಭಕ್ತರನ್ನು ಆಕರ್ಷಿಸುವ ಘಟ್ಟ, ಕರಾವಳಿ ಭಾಗ

ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯಲ್ಲಿನ ಉತ್ತರ ಕರ್ನಾಟಕ ಭಾಗದಲ್ಲಿನ ದೇವಸ್ಥಾನಗಳು ಅವ್ಯವಸ್ಥೆಗಳ ಆಗರವಾಗಿದ್ದರೆ, ಕರಾವಳಿ ಮತ್ತು ಘಟ್ಟದಂಚಿನ ಭಾಗದಲ್ಲಿರುವ ದೇವಸ್ಥಾನಗಳು ಭಕ್ತರನ್ನು ಆಕರ್ಷಿಸುತ್ತಿವೆ. ಸ್ವಚ್ಛ ಪರಿಸರ, ಲಕ್ಷಾಂತರ ಜನರು ಬಂದರೂ ಅಡೆತಡೆಗಳಿಲ್ಲದೆ ದೇವರ ದರ್ಶನಕ್ಕೆ ವ್ಯವಸ್ಥೆ, ಶೌಚಾಲಯ, ಸ್ನಾನಗೃಹ ಮುಂತಾದ ಸಕಲ ವ್ಯವಸ್ಥೆಗಳು, ಶುಚಿರುಚಿಯಾದ ಭೋಜನ ಆಕರ್ಷಣೆಗೆ ಕಾರಣ.

ದೇವಸ್ಥಾನಗಳ ಆಡಳಿತ ಮಂಡಳಿಗಳು ಜವಾಬ್ದಾರಿಯಿಂದ ಕೆಲಸ ಮಾಡುತ್ತಿರುವುದು ಹಾಗೂ ಬಹುತೇಕ ದೇವಸ್ಥಾನಗಳಿಗೆ ಹಲವು ಕೋಟಿ ರೂಪಾಯಿಗಳ ಆದಾಯ ಇರುವುದು ಸಹ ಇದಕ್ಕೆ ಕಾರಣ ಎಂದು ಅಧಿಕಾರಿಗಳು ಹೇಳುತ್ತಾರೆ. ಧಾರ್ಮಿಕ ದತ್ತಿ ಇಲಾಖೆಯ ಆಡಳಿತಕ್ಕೆ ಬರುವ ‘ಎ’ ಶ್ರೇಣಿಯ ದೇವಸ್ಥಾನಗಳ ಸಂಖ್ಯೆ ಉಡುಪಿ ಜಿಲ್ಲೆಯಲ್ಲಿ 25 ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 44 ಇವೆ. ಇವುಗಳ ವಾರ್ಷಿಕ ಆದಾಯವು ₹15 ಲಕ್ಷದಿಂದ ಗರಿಷ್ಠ ₹100 ಕೋಟಿಯವರೆಗೂ ಇದೆ.

ದಕ್ಷಿಣ ಕನ್ನಡ ಭಾಗದ ಜನರಲ್ಲಿ ಮೊದಲಿನಿಂದಲೇ ಸ್ವಚ್ಛತೆಯ ಬಗ್ಗೆ ಜಾಗೃತಿ ಇದೆ. ಇಲಾಖೆಯು ದೇವಸ್ಥಾನಗಳ ಆಡಳಿತ ಮಂಡಳಿಯವರಿಗೆ ಹೆಚ್ಚಿನ ಅಧಿಕಾರವನ್ನು ನೀಡಿದೆ. ಅಭಿವೃದ್ಧಿ ಹಾಗೂ ಸೌಲಭ್ಯ ಕಲ್ಪಿಸುವ ವಿಚಾರದಲ್ಲಿ ಆಡಳಿತ ಮಂಡಳಿಯವರು ಸ್ಪರ್ಧೆಗೆ ಇಳಿದವರಂತೆ ಕೆಲಸ ಮಾಡುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮುಜರಾಯಿ ಇಲಾಖೆ ವ್ಯಾಪ್ತಿಗೆ ಸೇರಿದ ಕಳಸದ ಕಳಸೇಶ್ವರ ದೇವಸ್ಥಾನ ವರ್ಷಕ್ಕೆ ₹1.5 ಕೋಟಿ ಆದಾಯ ಹೊಂದಿದೆ. ವರ್ಷಕ್ಕೆ 10 ಲಕ್ಷಕ್ಕೂ ಹೆಚ್ಚು ಭಕ್ತರು ಭೇಟಿ ನೀಡುತ್ತಿದ್ದಾರೆ. ದೇವಸ್ಥಾನದ ರಾಜಗೋಪುರ ಮತ್ತು ವಾಲಗ ಮಂಟಪದ ಕಾಮಗಾರಿ ನಡೆಯಬೇಕಿದೆ. ಮಳೆ ದೇವರು ಎಂದು ಖ್ಯಾತಿ ಪಡೆದಿರುವ ಶೃಂಗೇರಿ ತಾಲ್ಲೂಕಿನ ಕಿಗ್ಗ ಶಾಂತ ಸಮೇತ ವೃಷ್ಯ ಶೃಂಗೇಶ್ವರ ದೇವಸ್ಥಾನ ವಾರ್ಷಿಕ ₹60 ಲಕ್ಷ ಆದಾಯ ಹೊಂದಿದ್ದು ಉತ್ತಮ ಆತಿಥ್ಯ ನೀಡುತ್ತಿದೆ. ಚಿಕ್ಕಮಗಳೂರು ಶ್ರೀಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾ ‘ಎ’ ಗ್ರೇಡ್ ಧಾರ್ಮಿಕ ಕೇಂದ್ರ. ವಾರ್ಷಿಕ ₹87 ಲಕ್ಷ ವರಮಾನ ಬರುತ್ತಿದೆ. ಧಾರ್ಮಿಕ ಕೇಂದ್ರದವರೆಗೂ ರಸ್ತೆ ಉತ್ತಮವಾಗಿದೆ.

ಉತ್ತರ ಕನ್ನಡ ಜಿಲ್ಲೆ ಧಾರ್ಮಿಕ ಪ್ರವಾಸೋದ್ಯಮಕ್ಕೆ ಹೆಸರಾಗಿದೆ. ‘ಎ’ ಗ್ರೇಡ್‌ನ 9 ದೇವಾಲಯಗಳಿದ್ದು, ಒಟ್ಟು ವಾರ್ಷಿಕ ಆದಾಯ ಅಂದಾಜು ₹15 ಕೋಟಿಗೂ ಹೆಚ್ಚಿದೆ. ಭಟ್ಕಳ ತಾಲ್ಲೂಕಿನ ಅಳ್ವೆಕೋಡಿಯ ದುರ್ಗಾಪರಮೇಶ್ವರಿ ದೇವಸ್ಥಾನ, ಶಿರಸಿ ತಾಲ್ಲೂಕು ಮಂಜುಗುಣಿಯ ವೆಂಕಟರಮಣ ದೇವಾಲಯಗಳು ಸರಾಸರಿ ₹1.50 ಕೋಟಿಗಿಂತ ಹೆಚ್ಚು ಆದಾಯ ಹೊಂದಿವೆ. ಜಿಲ್ಲೆ ಗೋಕರ್ಣದ ಮಹಾಬಲೇಶ್ವರ, ಇಡಗುಂಜಿಯ ಸಿದ್ಧಿ ವಿನಾಯಕ, ಶಿರಸಿಯ ಮಾರಿಕಾಂಬಾ ದೇವಾಲಯ ಪ್ರವಾಸಿಗರನ್ನು ಸೆಳೆಯುವಲ್ಲಿ ಮುಂಚೂಣಿಯಲ್ಲಿವೆ.

‘ಭಕ್ತರಿಗೆ ವಸತಿ ವ್ಯವಸ್ಥೆಗೆ ಹಲವು ವರ್ಷಗಳ ಹಿಂದೆ ನಿರ್ಮಿಸಿದ ಯಾತ್ರಿ ನಿವಾಸಕ್ಕೆ ವ್ಯವಸ್ಥಿತ ಸೌಕರ್ಯ ಒದಗಿಸಿ ಬಳಕೆಗೆ ನೀಡಲು ಪ್ರವಾಸೋದ್ಯಮ ಇಲಾಖೆ ಹಿಂದೇಟು ಹಾಕುತ್ತಿದೆ’ ಎಂದು ಮಾರಿಕಾಂಬಾ ದೇವಾಲಯದ ಧರ್ಮದರ್ಶಿ ಮಂಡಳದ ಅಧ್ಯಕ್ಷ ಆರ್.ಜಿ.ನಾಯ್ಕ ಹೇಳುತ್ತಾರೆ.

ಪೂರಕ ಮಾಹಿತಿ: ಬಾಲಕೃಷ್ಣ ಪಿ.ಎಚ್., ಬಾಲಚಂದ್ರ ಎಚ್., ವಿಜಯಕುಮಾರ್ ಎಸ್.ಕೆ., ಉದಯ ಯು., ಮನೋಜಕುಮಾರ್ ಗುದ್ದಿ, ಕೆ.ಎಂ.ಸತೀಶ್ ಬೆಳ್ಳಕ್ಕಿ, ಜಿ.ಬಿ. ನಾಗರಾಜ, ಕೆ. ಓಂಕಾರ ಮೂರ್ತಿ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 19-11-1998

- **ಚುನಾವಣೆ: ಮಹಿಳೆಯರಿಗೆ ಹೆಚ್ಚು ಸ್ಥಾನ– ಧರ್ಮಸಿಂಗ್**

ಬೆಂಗಳೂರು, ನ. 18– ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಮಹಿಳೆಯರಿಗೆ ಹೆಚ್ಚಿನ ಸ್ಥಾನ ನೀಡುವುದಾಗಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಧರ್ಮಸಿಂಗ್ ಅವರು ಇಂದು ಇಲ್ಲಿ ಭರವಸೆ ನೀಡಿದರು.

ಮಹಿಳಾ ಕಾಂಗ್ರೆಸ್ ಏರ್ಪಡಿಸಿದ್ದ ರಾಜ್ಯ ಮಟ್ಟದ ಮಹಿಳಾ ಸಮಾವೇಶ ಉದ್ದೇಶಿಸಿ ಮಾತನಾಡಿದರು.

‘ಹೆಚ್ಚು ಮಹಿಳೆಯರು ಸ್ಪರ್ಧಿಸಲು ಅವಕಾಶ ಮಾಡಿಕೊಡಬೇಕು ಎಂಬುದು ಪಕ್ಷದ ನೀತಿಯಾಗಿದೆ. ಇದು ಕರ್ತವ್ಯವೇ ಹೊರತು ಉಪಕಾರವಲ್ಲ’ ಎಂದು ಹೇಳಿದರು.

ಲೋಕಸಭೆ, ರಾಜ್ಯ ವಿಧಾನಸಭೆಗಳಿಗೆ ನಡೆಯುವ ಚುನಾವಣೆಗಳಲ್ಲಿ ಮಹಿಳೆಯರ ಪಾತ್ರ ನಿರ್ಣಾಯಕ ಎಂದು ಬಣ್ಣಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 19-11-1973

- **ಪಕ್ಷದಲ್ಲಿನ ಪ್ರತಿಗಾಮಿ ಶಕ್ತಿಗಳ ಉಚ್ಚಾಟನೆಗೆ ಅರಸು ಕರೆ**

ಬೆಂಗಳೂರು ನ. 18– ಕಾಂಗ್ರೆಸ್ ಪಕ್ಷದಲ್ಲಿ ನುಸುಳಿರುವ ಪ್ರತಿಗಾಮಿ ಶಕ್ತಿಗಳನ್ನು ಪತ್ತೆ ಮಾಡಿ ಬೇರ್ಪಡಿಸಲು ಯುವಕ ಕಾಂಗ್ರೆಸ್‌ಗೆ ಮುಖ್ಯಮಂತ್ರಿ ಶ್ರೀ ದೇವರಾಜು ಅರಸು ಅವರು ಇಂದು ಇಲ್ಲಿ ಕರೆಯಿತ್ತರು.

‘ಬಲಪಂಥೀಯ ಪ್ರತಿಗಾಮಿ’ ಬಗ್ಗೆ ಯುವಕ ಕಾಂಗ್ರೆಸ್ ಲಾಲ್‌ಬಾಗ್ ಸ್ವರ್ಣ ಮಹೋತ್ಸವ ಭವನದಲ್ಲಿ ಏರ್ಪಡಿಸಿದ್ದ ಎರಡು ದಿನಗಳ ವಿಚಾರಗೋಷ್ಠಿಯನ್ನು ಉದ್ಘಾಟಿಸಿ ಅವರು ಭಾಷಣ ಮಾಡಿದರು.

‘ಕೇವಲ ಘೋಷಣೆಗಳಿಂದ ಪ್ರತಿಗಾಮಿ ಮತ್ತು ಪಟ್ಟಭದ್ರ ಹಿತಾಸಕ್ತಿಗಳನ್ನು ಅರ್ಥ ಮಾಡಿಕೊಳ್ಳಲು ಆಗದು. ಅಭ್ಯಾಸ ಅಗತ್ಯ’ ಎಂದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ನವೆಂಬರ್ 19, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಷಷ್ಠಿ ಗಂ. 07-24 ನಂತರ ಸಪ್ತಮಿ ಗಂ. 29-22 ನಕ್ಷತ್ರ: ಶ್ರವಣ ಗಂ. 22-49 ಯೋಗ: ವೃದ್ಧಿ ಗಂ 23-28 ಕರಣ: ತೈತಿಲ ಗಂ. 07-24, ವೃಶ್ಚಿಕ ಮಾಸದ 03 ನೇ ದಿನ, ಮಳೆನಕ್ಷತ್ರ: ವಿಶಾಖ 4.
ರಾಹುಕಾಲ : ಸಾಯಂಕಾಲ 04-30 - 06-00
ಸೂರ್ಯೋದಯ : 06-35 ಸೂರ್ಯಾಸ್ತ : 05-57 ಮುಸ್ಲಿಂ ದಿನಾಂಕ : 04 ಜುಮಾದುಲ್ಲಾವಲ್ ದಿನ ವಿಶೇಷ : ಪ್ರತಿಹರ ಷಷ್ಠಿ ಅಥವಾ ಸೂರ್ಯ ಷಷ್ಠಿ
ಅದೃಷ್ಟ ಸಂಖ್ಯೆ : 8, 4

ಮೇಷ: ಜೀವನದ ಯಾವುದೇ ರಂಗದಲ್ಲಾದರೂ ನಿಮ್ಮ ಬಯಕೆಗೆ ತಕ್ಕಂತೆ ದೂರ ಕ್ರಮಿಸುವ ಸಾಮರ್ಥ್ಯ ನಿಮ್ಮಲ್ಲಿದೆ. ಈ ದಿನ ಮಾರ್ಗ ಗೋಚರವಾಗುವುದು. ಸಿಹಿ ತಿನಿಸುಗಳ ತಯಾರಿಕರಿಗೆ ಬೇಡಿಕೆ ಹೆಚ್ಚುವುದು.

ವೃಷಭ: ಹೆಂಡತಿಯ ಆರೋಗ್ಯದ ವಿಚಾರವಾಗಿ ವೈದ್ಯರಲ್ಲಿ ಸಮಾಲೋಚನೆ ನಡೆಸಬೇಕಾಗಬಹುದು. ಹಳೆಯ ಘಟನೆಗಳ ಮೂಲಕ ಪಾಠ ಕಲಿತಿರುವುದರಿಂದ ನಿಮಗೆ ಯಶಸ್ಸು ಲಭಿಸುವುದು.

ಮಿಥುನ: ಜಗತ್ತಿನ ಬೆಳವಣಿಗೆಯ, ಚಲನೆಯ ವೇಗಕ್ಕೆ ನಿಮ್ಮ ರೀತಿ ನೀತಿಗಳು, ಚಲನವಲನಗಳು ಕಡಿಮೆಯಾಗಿರುವ ಅನುಭವ ಕೆಲವು ಸಮಯ ಕಾಡಲಿದೆ. ದೂರ ಸಂಚಾರದಲ್ಲಿ ವಾಹನದ ಸಮಸ್ಯೆ ಎದುರಾಗಬಹುದು.

ಕರ್ಕಾಟಕ: ವ್ಯವಸ್ಥಿತ ಹಾಗೂ ತಂತ್ರಗಾರಿಕೆ ಹೊಂದಿದ ಯೋಜನೆಗಳಿಂದ ಆರ್ಥಿಕ ಲಾಭ ಉಂಟಾಗಲಿದೆ. ಮಾರಾಟ ಪ್ರತಿನಿಧಿಗಳಿಗೆ ಹೆಚ್ಚಿನ ಕಮಿಷನ್ ಸಿಗಲಿದೆ. ಖರ್ಚು ವೆಚ್ಚಗಳನ್ನು ಸಮತೋಲನದಲ್ಲಿ ಇರಿಸಿಕೊಳ್ಳುವಿರಿ.

ಸಿಂಹ: ಅಕ್ಕಪಕ್ಕದವರ ಟೀಕೆಯನ್ನೂ ಶಾಂತ ಮನಸ್ಸಿನಿಂದ ಸ್ವೀಕರಿಸಿ. ಯಾವುದೇ ಪ್ರತಿಕ್ರಿಯೆ ನೀಡದಿರುವುದನ್ನು ಅಭ್ಯಾಸ ಮಾಡಿಕೊಳ್ಳಿ. ಬಂಧು-ಬಾಂಧವರು ದೂರವಾಗುವ ಸಂಭವವಿದೆ. ಅನ್ಯರ ಮಾತಿಗೆ ಕಿವಿ ಒಡ್ಡಬೇಡಿ.

ಕನ್ಯಾ: ಮಾನಸಿಕ ಧೈರ್ಯ, ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಧ್ಯಾನ ಮಾರ್ಗದಲ್ಲಿ ಸಂಚರಿಸಬೇಕು. ಉಪಾಹಾರ ಗೃಹಗಳಿಂದ ಅಧಿಕ ಲಾಭ ಪಡೆಯುವಿರಿ. ಕೆಲವೊಂದು ಕಹಿ ಘಟನೆಗಳು ಜರುಗಲಿದೆ.

ತುಲಾ: ಅತಿ ಹೆಚ್ಚಿನ ಓದಿನಿಂದಾಗಿ ಬೇಸರಗೊಳ್ಳುವ ವಿದ್ಯಾರ್ಥಿಗಳು ಬದಲಾವಣೆಯನ್ನು ಬಯಸಲಿದ್ದಾರೆ. ಅಪರೂಪದ ಸ್ನೇಹಿತನ ಭೇಟಿಯು ಸಂತೋಷ ಮೂಡಿಸುತ್ತದೆ. ಇನ್ನಷ್ಟು ಪ್ರತಿಭೆ ಹೆಚ್ಚಿಸಿಕೊಳ್ಳುವ ಕಾಲ ಇದು.

ವೃಶ್ಚಿಕ: ಪ್ರಾಣಮಿತ್ರರ ಸಹಕಾರದಿಂದ ನಿಮ್ಮ ಜೀವನದಲ್ಲಿ ಉನ್ನತ ಸ್ಥಾನ ಮುಟ್ಟುವುದಕ್ಕೆ ಸಹಾಯವಾಗುವುದು. ದಾಂಪತ್ಯ ಜೀವನದಲ್ಲಿ ಮಧುರ ಬಾಂಧವ್ಯ ವೃದ್ಧಿಯಾಗುತ್ತದೆ ಹಾಗೂ ನೆಮ್ಮದಿ ಕಂಡು ಬರಲಿದೆ.

ಧನು: ಚಂಚಲ ಮನಸ್ಸಿನಿಂದ ಭಯ ಉಂಟಾಗುವ ಕೆಟ್ಟ ಯೋಚನೆಗಳು ಬರಲಿವೆ. ಭಾವನೆಗಳ ಬದಲು ವಾಸ್ತವದತ್ತ ಗಮನ ಹರಿಸಬೇಕಾಗುತ್ತದೆ. ಕ್ರೀಡಾ ಪಟುಗಳಿಗೆ ಸಾಮರ್ಥ್ಯ ಪ್ರದರ್ಶನಕ್ಕೆ ಇಂದು ಸೂಕ್ತ ದಿನವಾಗಿದೆ.

ಮಕರ: ಕೌಟುಂಬಿಕ ವಿಚಾರದಲ್ಲಿ ಇನ್ನೊಬ್ಬರ ಮಾತು ಕೇಳಿ ಪರಾಮರ್ಶಿಸದೆ ವಿವೇಚನೆ ಕಳೆದುಕೊಳ್ಳಬೇಡಿ. ಹಿರಿಯರ ಆಸೆಯಂತೆ ಹೊಸ ಆಸ್ತಿ ಖರೀದಿಸುವ ಅವಕಾಶ ಇದೆ. ವಾಣಿಜ್ಯ ರಂಗದಲ್ಲಿ ಹೊಸ ತಿರುವು ಮೂಡಲಿದೆ.


ಕುಂಭ: ಈ ದಿನ ಮನಸ್ಸಿನ ಮಾತನ್ನು ಬಿಟ್ಟು ಇನ್ನೊಬ್ಬರಲ್ಲಿ ಸಲಹೆ ಕೇಳುವ ಅಗತ್ಯವಿರುವುದಿಲ್ಲ. ಅಲಂಕಾರಿಕ ವಸ್ತುಗಳ ರಫ್ತು ಮಾರಾಟಗಾರರು ಹಾಗೂ ದಲ್ಲಾಳಿಗಳು ಹೆಚ್ಚಿನ ಅನುಕೂಲ ಪಡೆಯುವಿರಿ.

ಮೀನ: ನೀವು ತೆಗೆದುಕೊಳ್ಳುವ ನಿರ್ಧಾರ ನಿಮ್ಮ ಕುಟುಂಬಕ್ಕೆ ಮಾತ್ರವಲ್ಲದೆ, ನಿಮ್ಮ ಸುತ್ತಲಿನ ಇತರ ಜನರ ಜೀವನಕ್ಕೆ ಕೂಡ ಮಾರ್ಗದರ್ಶಿಯಾಗಲಿದೆ. ಸ್ವಪ್ರೇರಣೆ, ಪ್ರಯತ್ನದಿಂದ ಕೈಗೊಂಡ ಕಾರ್ಯಗಳು ಈ ದಿನ ಫಲ ನೀಡಲಿದೆ.

ಪದಬಂಧ 5504 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಈತ ಗೆಲುವನ್ನು ಪಡೆದವನು (4)
5.ಉಲ್ಲೇಖಕ್ಕೊಂದು ಪರ್ಯಾಯ ಪದ (3)
6.ತಾಯಿಯ ಮನೆ ಕಿಟಕಿ (4)
8.ಇದು ಕಾಲಸೂಚಕ ಯಂತ್ರ (4)
12.ಹೀಗೆ ಬಹಿರಂಗಗೊಳಿಸು (4)
14.ವಾದಕ್ಕೆ ಗ್ರಾಸವಾದ ತರ್ಜುಮೆ (4)
15.ಬಾಲವಿರುವ ಹುಡುಗ! (3)
16.ಮಾನವನ್ನು ಹೊಂದಿದ ವಸ್ತುಸ್ಥಿತಿ (4)

ಮೇಲಿಂದ ಕೆಳಕ್ಕೆ
1.ಕಾಡನ್ನು ರಕ್ಷಣೆ ಮಾಡುವವನು (5)
2.ಚದುರನಾಡಿದ ಚೆಸ್! (4)
3.ವಾರದ ಕೊನೆಗೆ ಧರಿಸಿದ ಯಜ್ಞೋಪವೀತ (4)
4.ಅಸಲಿಯ ವಿರುದ್ಧ ಪದವಿಲ್ಲಿ ಉಲ್ಟಾ ಆಗಿದೆ (3)
7.ಇಂದ್ರಿಯ ನಿಗ್ರಹ ಮಾಡುವವನು (2)
9.ಯಾಚಿಸುವವ ಇಲ್ಲಿದ್ದಾನೆ (3)
10.ಆಶ್ಚರ್ಯ ಮೂಡಿಸುವಂಥದ್ದು (5)
11.ಭಾವನು ನೋಡಿರುವ ಸೂರ್ಯ (2)
12.ತೋರಿಸುವಿಕೆಯನ್ನು ಹೀಗೆನ್ನಿ (4)
13.ಹೂವಿನ ಶರ ಇಲ್ಲಿದೆ (4)
14.ಅಡಗಿಕೊಳ್ಳಲು ಪ್ರಶಸ್ತವಾದ ಕಾಡು (3)



5503ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಅವಧಾನಿ 3.ತಡಸಲು
5.ಮತ 6.ಪರಿಚಯ
8.ಜಾಗ 9.ಮಗ್ಗ
10.ತರಕಾರಿ 13.ಸುತ
15.ಹರಿದಾರಿ 16.ನವರಂಗ

ಮೇಲಿಂದ ಕೆಳಕ್ಕೆ
1.ಅಣ್ಣ 2.ಧಾವಂತ
3.ತರಾತುರಿ 4.ಉವಾಸ
5.ಮನೋಗತ 6.ಪರಾರಿ
7.ಯಮದೂತ 11.ಕಾಲುದಾರಿ
12.ಪ್ರವಾಹ 13.ಸುದೈವ
14.ಮಗ

ಸುಡೊಕು 5890

3		1		7		6		2
		5	2		9			
2	8			1			9	
	5		7		4	8		
				8		5		9
8	3	6						4
6				5		9		7
	7	8	1	3				
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5889 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜಸ್ಥಾನ ವಿಧಾನಸಭೆ ಚುನಾವಣೆ: 68 ಕ್ಷೇತ್ರಗಳಲ್ಲಿ ಕಾಂಗ್ರೆಸ್, ಬಿಜೆಪಿಗೆ ಸವಾಲು ಎದುರಾಗುವ ಸಾಧ್ಯತೆ

ಸಣ್ಣ ಪಕ್ಷಗಳು, ಸ್ವತಂತ್ರ ಅಭ್ಯರ್ಥಿಗಳ ಪ್ರಾಬಲ್ಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕಣದಲ್ಲಿ 78 ಸಣ್ಣ ಪಕ್ಷಗಳು
- 38 ಬಂಡಾಯ–ಸ್ವತಂತ್ರ ಅಭ್ಯರ್ಥಿಗಳು
- 81 ಕ್ಷೇತ್ರಗಳಲ್ಲಿ ಆರ್‌ಎಲ್‌ಪಿ ಸ್ಪರ್ಧೆ

ಜೈಪುರ: ರಾಜಸ್ಥಾನದ ಕನಿಷ್ಠ 68 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿಗೆ ಸಣ್ಣ ಪಕ್ಷಗಳು ಮತ್ತು ಪಕ್ಷೇತರ ಅಭ್ಯರ್ಥಿಗಳಿಂದ ಸವಾಲು ಎದುರಾಗುವ ಸಾಧ್ಯತೆ ಇದೆ. ರಾಜಸ್ಥಾನ ವಿಧಾನಸಭೆಯು 200 ಸದಸ್ಯ ಬಲ ಹೊಂದಿದೆ.

ವಿಧಾನಸಭಾ ಚುನಾವಣಾ ಕಣದಲ್ಲಿ ಇರುವ 78 ಸಣ್ಣ ಪಕ್ಷಗಳು ಹಾಗೂ 38 ಬಂಡಾಯ–ಪಕ್ಷೇತರ ಅಭ್ಯರ್ಥಿಗಳಿಗೆ, ಎರಡು ಪ್ರಬಲ ರಾಜಕೀಯ ಪಕ್ಷಗಳಲ್ಲಿ ಯಾವುದಾದರೂ ಒಂದು ಪಕ್ಷದ ಪರವಾಗಿ ಅಥವಾ ವಿರುದ್ಧವಾಗಿ ಫಲಿತಾಂಶವನ್ನು ತಿರುಗಿಸುವ ಸಾಮರ್ಥ್ಯ ಇದೆ.

ಸಣ್ಣ ಪಕ್ಷಗಳ ಅಭ್ಯರ್ಥಿಗಳು ಹಾಗೂ ಸ್ವತಂತ್ರ ಅಭ್ಯರ್ಥಿಗಳು 1993 ರಿಂದ ಈಚೆಗೆ ಶೇಕಡ 20ರಷ್ಟು ಮತಗಳನ್ನು ಪಡೆಯುತ್ತಿದ್ದಾರೆ. ಸಣ್ಣ ಪಕ್ಷಗಳು ತಮ್ಮನ್ನು ಬಿಜೆಪಿ, ಕಾಂಗ್ರೆಸ್ಸಿಗೆ ಪರ್ಯಾಯವೆಂದು ಬಿಂಬಿಸಿಕೊಳ್ಳುತ್ತಿವೆ.

ಜಾಟ್ ಸಮುದಾಯದ ನಾಯಕ ಹನುಮಾನ್ ಬೆನಿವಾಲ್ ಅವರ ಆರ್‌ಎಲ್‌ಪಿ ಪಕ್ಷವು 81 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಈ ಪಕ್ಷವು 2018ರ ಚುನಾವಣೆಯಲ್ಲಿ 57 ಸ್ಥಾನಗಳಿಗೆ ಸ್ಪರ್ಧಿಸಿತ್ತು. 20 ಕ್ಷೇತ್ರಗಳಲ್ಲಿ ಆರ್‌ಎಲ್‌ಪಿ ಅಭ್ಯರ್ಥಿಗಳು ಮೂರನೆಯ ಸ್ಥಾನ ಪಡೆದಿದ್ದು, ದೊಡ್ಡ ಪ್ರಮಾಣದಲ್ಲಿ ಮತ ಪಡೆದಿದ್ದರು. ಆ ಚುನಾವಣೆಯಲ್ಲಿ ಪಕ್ಷವು 3 ಸ್ಥಾನ ಗೆದ್ದಿತ್ತು.

ಆರ್‌ಎಲ್‌ಪಿ ಉತ್ತರ ಪ್ರದೇಶದ ಚಂದ್ರಶೇಖರ ಆಜಾದ್ ಅವರ ಎಎಸ್‌ಪಿ ಪಕ್ಷದೊಂದಿಗೆ ಕೈಜೋಡಿಸಿದ್ದು, ಜಾಟ್ ಪ್ರಾಬಲ್ಯದ ಪಕ್ಷ ಎಂಬ ಹಣೆಪಟ್ಟಿಯನ್ನು ಕಳಚಿಕೊಳ್ಳುವ ಯತ್ನ ನಡೆಸಿದೆ. ಆರ್‌ಎಲ್‌ಪಿಯ ಇಬ್ಬರು ಶಾಸಕರು ದಲಿತ ಸಮುದಾಯಕ್ಕೆ ಸೇರಿದವರು. ಹೀಗಿದ್ದರೂ, ಬೇರೆ ಪಕ್ಷದೊಂದಿಗೆ ಮೈತ್ರಿ ಸಾಧಿಸಿ ಬೇರೆ ಜಾತಿಗಳನ್ನೂ ತನ್ನೊಂದಿಗೆ ಸೇರಿಸಿಕೊಳ್ಳಲು ಆರ್‌ಎಲ್‌ಪಿ ಮುಂದಾಗಿದೆ.


ಚುನಾವಣಾ ಕರ್ತವ್ಯದಲ್ಲಿರುವ ಸೀಮಾ ಗೃಹ ರಕ್ಷಕ ದಳದ ಸಿಬ್ಬಂದಿ ಶನಿವಾರ ರಾಜಸ್ಥಾನದ ಬಿಕಾನೇರ್‌ನಲ್ಲಿ ಮತಗಟ್ಟೆಯೊಂದರ ಮುಂದೆ ಸರತಿಯಲ್ಲಿ ನಿಂತ ಸಂದರ್ಭದಲ್ಲಿ ಗುರುತಿನ ಚೀಟಿ ಪ್ರದರ್ಶಿಸಿದರು ಪಿಟಿಐ ಚಿತ್ರ

ಭಾರತೀಯ ಆದಿವಾಸಿ ಪಕ್ಷವು 27 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಇದು 2018ರಲ್ಲಿ ಎರಡು ಸ್ಥಾನ ಗೆದ್ದಿತ್ತು. 17 ಮೀಸಲು ಕ್ಷೇತ್ರಗಳಲ್ಲಿ ಹಾಗೂ 10 ಸಾಮಾನ್ಯ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದ್ದಾರೆ. ಬಿಎಪಿ, ಮಹಿಳೆಯೊಬ್ಬರನ್ನು ಕಣಕ್ಕಿಳಿಸಿದೆ. ಆದಿವಾಸಿಗಳಿಗೆ ಪ್ರತ್ಯೇಕ ರಾಜ್ಯ ರಚಿಸುವುದು ಪಕ್ಷದ ಪ್ರಮುಖ ಬೇಡಿಕೆಗಳಲ್ಲಿ ಒಂದು. ಎರಡು ವರ್ಷಗಳ ಹಿಂದೆ ಜಿಲ್ಲಾ ಪ್ರಮುಖರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಿಎಪಿ 13 ಸ್ಥಾನ ಗೆದ್ದಿತ್ತು. ಆಗ ಕಾಂಗ್ರೆಸ್ ಮತ್ತು ಬಿಜೆಪಿ ಒಟ್ಟಾಗಿ 14 ಸ್ಥಾನ ಪಡೆದಿದ್ದವು. ಆದರೆ ಆಗ ಕಾಂಗ್ರೆಸ್ ಪಕ್ಷವು ಬಿಜೆಪಿಯನ್ನು ಬೆಂಬಲಿಸಿ, ಬಿಜೆಪಿಯವರು ಜಿಲ್ಲಾ ಪ್ರಮುಖ ಆಗುವಂತೆ ನೋಡಿಕೊಂಡಿತ್ತು. ಬಿಎಪಿ ಅಧಿಕಾರ ಹಿಡಿಯದಂತೆ ಮಾಡಿತ್ತು. ಈ ಬಾರಿಯ ವಿಧಾನಸಭಾ ಚುನಾವಣೆಯು ಬಿಎಪಿ ಪಾಲಿಗೆ ಮಹತ್ವದ್ದು.

ಮಾಯಾವತಿ ನೇತೃತ್ವದ ಬಿಎಸ್‌ಪಿ ಈ ಬಾರಿ 185 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. 2018ರಲ್ಲಿ 190 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದ ಬಿಎಸ್‌ಪಿ, ಶೇ 4.03ರಷ್ಟು ಮತ ಪಡೆದಿತ್ತು. ಆಗ ಪಕ್ಷವು ಆರು ಸ್ಥಾನ ಪಡೆದು, ಮೂರನೆಯ ಅತಿದೊಡ್ಡ ಪಕ್ಷವಾಗಿತ್ತು. ಆದರೆ ಬಿಎಸ್‌ಪಿ ಪ್ರಾಬಲ್ಯವು ಪೂರ್ವ ರಾಜಸ್ಥಾನ ಹಾಗೂ ಪರಿಶಿಷ್ಟ ಜಾತಿಗಳ ಪ್ರಾಬಲ್ಯವಿರುವ ಕ್ಷೇತ್ರಗಳಿಗೆ ಸೀಮಿತವಾಗಿದೆ. ಮಾಯಾವತಿ ಅವರು ಒಟ್ಟು ಎಂಟು ರ್‍ಯಾಲಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಸಿಪಿಎಂ 17 ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಇಳಿದಿದೆ. ಕನಿಷ್ಠ 4 ಕ್ಷೇತ್ರಗಳಲ್ಲಿ ಪ್ರಬಲ ಪೈಪೋಟಿ ಒಡ್ಡಲಿದೆ. 2018ರಲ್ಲಿ ಎರಡು ಸ್ಥಾನಗಳಲ್ಲಿ ಗೆಲುವು ಕಂಡಿತ್ತು. ಹರಿಯಾಣ ಮೂಲದ ಜೆಜೆಪಿ 20 ಕಡೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಈ ಪಕ್ಷಗಳು ಮಾತ್ರವಲ್ಲದೆ ಸ್ವತಂತ್ರ ಅಭ್ಯರ್ಥಿಗಳು ಕನಿಷ್ಠ 38 ಕ್ಷೇತ್ರಗಳಲ್ಲಿ ಬಿಜೆಪಿ, ಕಾಂಗ್ರೆಸ್ಸಿಗೆ ಪ್ರಬಲ ಪೈಪೋಟಿ ಒಡ್ಡಬಲ್ಲರು.

ಚುನಾವಣಾ ಕಣದಲ್ಲಿ

- **ಪ್ರತಿಭಟನೆ ಎಚ್ಚರಿಕೆ:** ಮತಎಣಿಕೆ ದಿನಾಂಕ ಮುಂದೂಡದಿದ್ದರೆ ಭಾರಿ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತದೆ ಎಂದು ಮಿಜೋರಾಂನ ಹಲವಾರು ಸಾಮಾಜಿಕ ಸಂಘಟನೆಗಳು ಮತ್ತು ವಿದ್ಯಾರ್ಥಿ ಸಂಘಟನೆಗಳ ಸಹಯೋಗವಾದ 'ಮಿಜೋರಾಂ ಎನ್‌ಜಿಒ ಕೋಆರ್ಡಿನೇಷನ್ ಕಮಿಟಿ'ಯು ಎಚ್ಚರಿಕೆ ನೀಡಿದೆ.
ಡಿಸೆಂಬರ್ 3ರ ಭಾನುವಾರದಂದು ಮತಎಣಿಕೆ ನಡೆಸುವುದಾಗಿ ಚುನಾವಣಾ ಆಯೋಗ ಘೋಷಿಸಿದೆ. ಕ್ರೈಸ್ತ ಧರ್ಮೀಯರೇ ಬಹುಸಂಖ್ಯಾತರಾಗಿರುವ ಮಿಜೋರಾಂನಲ್ಲಿ ಭಾನುವಾರ ಧಾರ್ಮಿಕ ಚಟುವಟಿಕೆಗಳು ನಡೆಯುವ ಕಾರಣ ಮತಎಣಿಕೆ ಮುಂದೂಡಬೇಕು ಎಂದು ಹಲವಾರು ಸಂಘಟನೆಗಳು ಆಗ್ರಹಿಸಿವೆ.
- **'ಕೆಸಿಆರ್ ವಿರುದ್ಧ ದಾಳಿ ಏಕಿಲ್ಲ?':** ದೇಶದ ಹಲವಾರು ನಾಯಕರ ವಿರುದ್ಧ ಜಾರಿ ನಿರ್ದೇಶನಾಲಯದಂಥ (ಇ.ಡಿ) ಕೇಂದ್ರೀಯ ಸಂಸ್ಥೆಗಳು ದಾಳಿ ನಡೆಸಿವೆ. ಆದರೆ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ (ಕೆಸಿಆರ್) ವಿರುದ್ಧ ಮಾತ್ರ ಏಕೆ ಇಂಥ ಕ್ರಮಗಳನ್ನು ಕೈಗೊಂಡಿಲ್ಲ. ಬಿಆರ್‌ಎಸ್ ಮತ್ತು ಬಿಜೆಪಿ ಒಗ್ಗಟ್ಟಿನಿಂದ ಇವೆ ಎಂದು ನಟಿ, ರಾಜಕಾರಣಿ ವಿಜಯಶಾಂತಿ ಅವರು ಸುದ್ದಿಗಾರರ ಮುಂದೆ ಆರೋಪಿಸಿದರು.
ಕೆಸಿಆರ್ ಅತ್ಯಂತ ಭ್ರಷ್ಟ ವ್ಯಕ್ತಿ. ಅವರಿಗೆ ಕೇವಲ 'ಭ್ರಷ್ಟ' ಎಂಬ ಹಣೆಪಟ್ಟಿ ನೀಡುವುದಷ್ಟೇ ಅಲ್ಲದೇ ಅವರ ವಿರುದ್ಧ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಎಂದು ನಿರೀಕ್ಷಿಸಿದ್ದೆವು. ಆದರೆ ಹಾಗಾಗಲಿಲ್ಲ ಎಂದು ಹೇಳಿದರು. ವಿಜಯಶಾಂತಿ ಈಚೆಗಷ್ಟೇ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದಾರೆ.
- **ಉಡುಗೊರೆಗಳ ವಶ:** ತೆಲಂಗಾಣ ವಿಧಾನಸಭೆ ಚುನಾವಣೆಯ ದಿನಾಂಕ ಘೋಷಣೆಯಾಗಿನಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಸುಮಾರು ₹600 ಕೋಟಿ ಮೌಲ್ಯದ ಮದ್ಯ, ಮಾದಕವಸ್ತು, ನಗದು ಹಾಗೂ ಇತರ ಉಡುಗೊರೆಗಳನ್ನು ಕಾನೂನು ಜಾರಿ ಸಂಸ್ಥೆಗಳು ವಶಕ್ಕೆ ತೆಗೆದುಕೊಂಡಿವೆ ಎಂದು ಮುಖ್ಯ ಚುನಾವಣಾಧಿಕಾರಿ ಶನಿವಾರ ತಿಳಿಸಿದ್ದಾರೆ.
₹214 ಕೋಟಿ ನಗದು, ₹179 ಕೋಟಿ ಮೌಲ್ಯದ ಚಿನ್ನ ಮತ್ತು ಇತರ ಬೆಲೆಬಾಳುವ ಲೋಹಗಳು, ₹96 ಕೋಟಿ ಮೌಲ್ಯದ ಮದ್ಯ, ₹34 ಕೋಟಿ ಮೌಲ್ಯದ ಮಾದಕವಸ್ತು ಹಾಗೂ ₹78 ಕೋಟಿ ಮೌಲ್ಯದ ಇತರ ಉಡುಗೊರೆಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ.

ನುಡಿ–ಕಿಡಿ


ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮತ್ತು ಮಾಜಿ ಉಪಮುಖ್ಯಮಂತ್ರಿ ಸಚಿನ್ ಪೈಲಟ್ ಅವರು ಚುನಾವಣೆಗಾಗಿ ಕೈಜೋಡಿಸಿದಂತೆ ನಟಿಸುತ್ತಿದ್ದಾರೆ. ನೂರು ಬಾರಿ ಹಸ್ತಲಾಘವ ಮಾಡಿದರೂ ಅವರಲ್ಲಿ ಹೊಂದಾಣಿಕೆ ಇಲ್ಲ. ದೆಹಲಿಯಿಂದ ದೊಡ್ಡ ನಾಯಕರು ಇಲ್ಲಿಗೆ ಬಂದು ಮುಖ್ಯಮಂತ್ರಿ ಮತ್ತು ಸಿ.ಎಂ ಆಗಲು ಬಯಸುವ ಇನ್ನೊಬ್ಬ ನಾಯಕನನ್ನು ಕ್ಯಾಮೆರಾ ಮುಂದೆ ಕೈಕುಲುಕುವಂತೆ ಮಾಡುತ್ತಾರೆ.

ನರೇಂದ್ರ ಮೋದಿ, ಪ್ರಧಾನ ಮಂತ್ರಿ


ಕೆಸಿಆರ್ ಕಂಡರೆ ಎರಡೂ ರಾಷ್ಟ್ರೀಯ ಪಕ್ಷಗಳಿಗೆ (ಕಾಂಗ್ರೆಸ್ ಮತ್ತು ಬಿಜೆಪಿ) ಹೆದರಿಕೆ. ತೆಲಂಗಾಣದಲ್ಲಿ ಆತ ಗೆದ್ದರೆ ಮಹಾರಾಷ್ಟ್ರಕ್ಕೂ ಬರುತ್ತಾನೆ ಎಂದು ಭಾವಿಸಿವೆ. ತೆಲಂಗಾಣದ ಜತೆ ವಿಲೀನಗೊಳಿಸುವಂತೆ ಕೋರಿ ಮಹಾರಾಷ್ಟ್ರದ 150 ಪಂಚಾಯಿತಿಗಳು ನಿರ್ಣಯ ಅಂಗೀಕರಿಸಿವೆ.

ಕೆ. ಚಂದ್ರಶೇಖರ ರಾವ್, ತೆಲಂಗಾಣ ಮುಖ್ಯಮಂತ್ರಿ

ಮಧ್ಯಪ್ರದೇಶ: ದಾಖಲೆ ಮತದಾನ

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ವಿಧಾನಸಭೆಯ 230 ಸ್ಥಾನಗಳಿಗೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಶೇ 76.22 ರಷ್ಟು ಮತದಾನ ಆಗಿದೆ. ರಾಜ್ಯದ ಇತಿಹಾಸದಲ್ಲಿ ಹಿಂದೆಂದೂ ಇಷ್ಟು ಪ್ರಮಾಣದ ಮತದಾನ ಆಗಿರಲಿಲ್ಲ ಎಂದು ಅಧಿಕಾರಿಗಳು ಶನಿವಾರ ಹೇಳಿದ್ದಾರೆ.

2018ರ ವಿಧಾನಸಭೆ ಚುನಾವಣೆಯಲ್ಲಿ ಶೇ 75.63ರಷ್ಟು ಮತದಾನ ಆಗಿತ್ತು. ಸಿವನಿ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ ಶೇ 85.68 ಮತದಾನ ಆಗಿದ್ದರೆ, ಬುಡಕಟ್ಟು ಜನರು ಹೆಚ್ಚಿರುವ ಅಲೀರಾಜ್‌ಪುರದಲ್ಲಿ ಅತಿ ಕಡಿಮೆ ಅಂದರೆ ಶೇ 60.10 ಮತದಾನ ಆಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ನಕ್ಸಲ್‌ಪೀಡಿತ ಪ್ರದೇಶ ಬಲಾಘಾಟ್ ಜಿಲ್ಲೆಯಲ್ಲಿ ಶೇ 85.23 ರಷ್ಟು ಮತದಾನವಾಗಿದೆ.

ಶೇ 76.31 ಮತದಾನ

ರಾಯಪುರ (ಪಿಟಿಐ): ಛತ್ತೀಸಗಢ ವಿಧಾನಸಭೆಯ 90 ಸ್ಥಾನಗಳಿಗೆ ನವೆಂಬರ್ 7 ಮತ್ತು 17 ರಂದು ಎರಡು ಹಂತಗಳಲ್ಲಿ ನಡೆದ ಚುನಾವಣೆಯಲ್ಲಿ ಶೇಕಡ 76.31 ರಷ್ಟು ಮತದಾನವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತೆಲಂಗಾಣದಲ್ಲಿ ಯುಸಿಸಿ ಜಾರಿ: ಬಿಜೆಪಿ

ಪ್ರಣಾಳಿಕೆ ಬಿಡುಗಡೆ ಮಾಡಿದ ಶಾ: ಕೆಸಿಆರ್ ಸರ್ಕಾರದ ಭ್ರಷ್ಟಾಚಾರದ ತನಿಖೆ

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ ಅಧಿಕಾರಕ್ಕೆ ಬಂದರೆ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೆ ತರಲಾಗುವುದು ಎಂದು ಬಿಜೆಪಿ ಶನಿವಾರ ಹೇಳಿದೆ.

ವಿಧಾನಸಭಾ ಚುನಾವಣೆಗೆ ಬಿಜೆಪಿ ಪ್ರಣಾಳಿಕೆ ಬಿಡುಗಡೆ ಮಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಏಕರೂಪ ನಾಗರಿಕ ಸಂಹಿತೆ ಕರಡು ರಚಿಸಲು ಸಮಿತಿ ರಚಿಸಲಾಗುವುದು. ಅಸಾಂವಿಧಾನಿಕ ಧರ್ಮ ಆಧಾರಿತ ಮೀಸಲಾತಿ ರದ್ದುಗೊಳಿಸಲಾಗುವುದು ಮತ್ತು ಇತರ ಹಿಂದುಳಿದ ವರ್ಗಗಳು (ಒಬಿಸಿ), ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಹೆಚ್ಚಿಸಲಾಗುವುದು ಎಂದು ಭರವಸೆ ನೀಡಿದರು.

ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮೌಲ್ಯವರ್ಧಿತ ತೆರಿಗೆ ಕಡಿಮೆ ಮಾಡಲಾಗುವುದು. ಜೊತೆಗೆ ಉಜ್ವಲಾ ಫಲಾನುಭವಿಗಳಿಗೆ ವಾರ್ಷಿಕವಾಗಿ ನಾಲ್ಕು ಎಲ್‌ಪಿಜಿ ಸಿಲಿಂಡರ್‌ಗಳನ್ನು ಉಚಿತವಾಗಿ ನೀಡಲಾಗುವುದು. ಭೂ ದಾಖಲೆಗಳನ್ನು ನಿರ್ವಹಿಸುವ ಧರಣಿ ಪೋರ್ಟಲ್ ಬದಲಾಯಿಸಲಾಗುವುದು ಎಂದು ತಿಳಿಸಿದರು.

ಸಣ್ಣ ಮತ್ತು ಅತಿಸಣ್ಣ ರೈತರಿಗೆ ಬೀಜಗಳು ಮತ್ತು ರಸಗೊಬ್ಬರ ಸಂಗ್ರಹಿಸಲು ಅನುವು ಮಾಡಿಕೊಡಲು ₹2,500 ನೆರವು, ಕಾಲೇಜು ವಿದ್ಯಾರ್ಥಿನಿಯರಿಗೆ ಉಚಿತ ಲ್ಯಾಪ್‌ಟಾಪ್ ಹಾಗೂ ಹೆಣ್ಣುಮಗು ಜನನದ ಸಮಯದಲ್ಲಿ ₹2 ಲಕ್ಷ ಸ್ಥಿರ ಠೇವಣಿ ನೀಡಲಾಗುವುದು ಎಂದು ಪ್ರಣಾಳಿಕೆಯಲ್ಲಿ ಭರವಸೆ ನೀಡಲಾಗಿದೆ.



ತೆಲಂಗಾಣ ವಿಧಾನಸಭಾ ಚುನಾವಣೆಗೆ ಬಿಜೆಪಿ ಪ್ರಣಾಳಿಕೆಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಶನಿವಾರ ಬಿಡುಗಡೆ ಮಾಡಿದರು. ರಾಜ್ಯ ಘಟಕದ ಅಧ್ಯಕ್ಷ ಜಿ.ಕಿಶನ್ ರೆಡ್ಡಿ, ಪಕ್ಷದ ನಾಯಕ ಪ್ರಕಾಶ್ ಜಾವಡೇಕರ್ ಇದ್ದಾರೆ ಪಿಟಿಐ ಚಿತ್ರ

ಮುಖ್ಯಾಂಶಗಳು
- ವಾರ್ಷಿಕ ನಾಲ್ಕು ಉಚಿತ ಎಲ್‌ಪಿಜಿ ಸಿಲಿಂಡರ್
- ಧರಣಿ ಪೋರ್ಟಲ್ ಬದಲಾವಣೆ

ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ನೇತೃತ್ವದ ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಸರ್ಕಾರದ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗುವುದು. 'ಧರ್ಮಾಧಾರಿತ ಮೀಸಲಾತಿ' ರದ್ದುಗೊಳಿಸಲಾಗುವುದು ಹಾಗೂ ಹಿಂದುಳಿದ ಸಮುದಾಯಗಳು, ಪರಿಶಿಷ್ಟ ಪಂಗಡದವರಿಗೆ ಪ್ರಯೋಜನ ವಿಸ್ತರಿಸಲಿದೆ ಎಂದು ಪ್ರಣಾಳಿಕೆ ತಿಳಿಸಿದೆ.

ತೆಲಂಗಾಣದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ, ಕಾಳೇಶ್ವರಂ ಮತ್ತು ಧರಣಿ ಹಗರಣಗಳು, ಬಿಆರ್‌ಎಸ್ ಸರ್ಕಾರದಲ್ಲಿ ನಡೆದಿದೆ ಎನ್ನಲಾದ ಇತರ ಹಣಕಾಸು ಅಕ್ರಮಗಳು ಸೇರಿದಂತೆ ಎಲ್ಲಾ ಭ್ರಷ್ಟಾಚಾರ ಆರೋಪಗಳನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ವಿಚಾರಣಾ ಆಯೋಗ ನೇಮಿಸಲಾಗುವುದು ಎಂದು ಹೇಳಿದೆ.

'ಅಯೋಧ್ಯೆಗೆ ಉಚಿತ ಯಾತ್ರೆ'

ತೆಲಂಗಾಣದಲ್ಲಿ ಬಿಜೆಪಿ ಗೆದ್ದು ಸರ್ಕಾರ ರಚಿಸಿದರೆ ರಾಜ್ಯದ ಎಲ್ಲರಿಗೂ ಅಯೋಧ್ಯೆ ರಾಮಮಂದಿರ ಉಚಿತ ಯಾತ್ರೆಗೆ ವ್ಯವಸ್ಥೆ ಮಾಡಲಾಗುವುದು ಎಂದು ಅಮಿತ್ ಶಾ ಅವರು ಭರವಸೆ ನೀಡಿದರು.

ರಾಜ್ಯದ ಗಡ್ವಾಲ್‌ನಲ್ಲಿ ಚುನಾವಣಾ ರ್‍ಯಾಲಿ ನಡೆಸಿದ ಅವರು, ರಾಮಮಂದಿರ ನಿರ್ಮಾಣಕ್ಕೆ ಕಾಂಗ್ರೆಸ್ 70 ವರ್ಷಗಳ ಕಾಲ ತಡೆಯೊಡ್ಡಿತು ಎಂದು ಆರೋಪಿಸಿದರು.

ಕಾಂಗ್ರೆಸ್, ಬಿಆರ್‌ಎಸ್ ಅನ್ನು ಹಿಂದುಳಿದ ವರ್ಗಗಳ ವಿರೋಧಿ ಎಂದು ಕರೆದ ಅವರು, ಬಿಜೆಪಿಯಿಂದ ಮಾತ್ರ ಹಿಂದುಳಿದ ವರ್ಗಗಳ ಕಲ್ಯಾಣ ಸಾಧ್ಯ ಎಂದರು. ಬಿಜೆಪಿ ಅಧಿಕಾರಕ್ಕೆ ಬಂದರೆ ಹಿಂದುಳಿದ ವರ್ಗಗಳ ನಾಯಕನನ್ನೇ ಮುಖ್ಯಮಂತ್ರಿ ಮಾಡಲಾಗುವುದು ಎಂದರು.


ಜೈಪುರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಎಂಜಿನಿಯರ್ ಹರ್ಷಾಧಿಪತಿ ವಾಲ್ಮೀಕಿ ಆರೋಗ್ಯ ವಿಚಾರಿಸಲು ಕಾಂಗ್ರೆಸ್ ಅಧ್ಯಕ್ಷ ಖರ್ಗೆ ಮತ್ತು ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಶನಿವಾರ ಆಸ್ಪತ್ರೆಗೆ ಭೇಟಿ ನೀಡಿದರು ಪಿಟಿಐ ಚಿತ್ರ

ಹಲ್ಲೆ ಮಾಡಿದ್ದ ಶಾಸಕನಿಗೆ ಬಿಜೆಪಿ ಟಿಕೆಟ್: ಖರ್ಗೆ ಟೀಕೆ

ಜೈಪುರ (ಪಿಟಿಐ): ದಲಿತ ಎಂಜಿನಿಯರ್ ಮೇಲೆ ಹಲ್ಲೆ ಮಾಡಿದ ಆರೋಪ ಹೊತ್ತ ಶಾಸಕನಿಗೆ ಕಾಂಗ್ರೆಸ್ ಟಿಕೆಟ್ ನಿರಾಕರಿಸಿದ ಬಳಿಕ ಆ ವ್ಯಕ್ತಿಗೆ ಬಿಜೆಪಿ ಟಿಕೆಟ್ ನೀಡಿದೆ. ಇಂತಹ ಪರಿಸ್ಥಿತಿಯಲ್ಲಿ ದಲಿತರ ಹಿತರಕ್ಷಣೆಗೆ ಕಾರ್ಯ ನಿರ್ವಹಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಹೇಗೆ ಹೇಳುತ್ತಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶನಿವಾರ ಪ್ರಶ್ನಿಸಿದರು.

ಎಂಜಿನಿಯರ್ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದ ಶಾಸಕ ಗಿರಿರಾಜ್ ಸಿಂಗ್ ಮಾಲಿಂಗ ಅವರಿಗೆ ಟಿಕೆಟ್ ನೀಡಲು ಕಾಂಗ್ರೆಸ್ ನಿರಾಕರಿಸಿತ್ತು. ಬಿಜೆಪಿಯು ಅವರನ್ನು ಕಣಕ್ಕಿಳಿಸಿರುವುದು ನಾಚಿಕೆಗೇಡು ಎಂದು ಖರ್ಗೆ ಹೇಳಿದರು.

ದಲಿತ ವ್ಯಕ್ತಿ ಹರ್ಷಾಧಿಪತಿ ವಾಲ್ಮೀಕಿ ಅವರ ಮೇಲೆ ಬಾರಿ ಕ್ಷೇತ್ರದ ಶಾಸಕ ಮತ್ತು ಅವರ ಬೆಂಬಲಿಗರು ಧೋಲ್‌ಪುರದಲ್ಲಿ ಹಲ್ಲೆ ಮಾಡಿದ್ದಾರೆ ಎನ್ನಲಾಗಿದೆ. ಕಳೆದ ಮಾರ್ಚ್‌ನಲ್ಲಿ ಹಲ್ಲೆ ನಡೆದ ಬಳಿಕ ವಾಲ್ಮೀಕಿ ಅವರು ಹಾಸಿಗೆ ಹಿಡಿದಿದ್ದಾರೆ. ಮಾಲಿಂಗ ಅವರು ಪೊಲೀಸರಿಗೆ ಶರಣಾದ ಬಳಿಕ ಬಂಧನಕ್ಕೊಳಗಾಗಿದ್ದು ನಂತರ ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದಾರೆ.

ಭರತ್‌ಪುರದ ಜಿಲ್ಲೆಯ ವೈರ್‌ನಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಖರ್ಗೆ, ಮೋದಿ ಅವರು ತಮ್ಮನ್ನು ದಲಿತರ ಉದ್ಧಾರಕ ಎಂದುಕೊಳ್ಳುತ್ತಾರೆ ಅಲ್ಲದೆ 'ನಾನ ಬಡವ, ದಲಿತರಿಗಾಗಿ ಹೋರಾಡುತ್ತೇನೆ' ಎನ್ನುತ್ತಾರೆ. ಆದರೆ ವಾಲ್ಮೀಕಿ ಅವರ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗೆ ಟಿಕೆಟ್ ಕೊಡುತ್ತಾರೆ ಎಂದು ಟೀಕಿಸಿದರು.

ಗಾಜಾದಲ್ಲಿನ ಹಮಾಸ್ ಕಾರ್ಯಾಚರಣೆ ಕೇಂದ್ರ, ಸುರಂಗ ಮಾರ್ಗಗಳಿಗೆ ಶೋಧ ತೀವ್ರ

ಆಸ್ಪತ್ರೆ ತೊರೆಯುತ್ತಿರುವ ರೋಗಿಗಳು, ವೈದ್ಯರು



ಖಾನ್ ಯೂನಿಸ್ (ಗಾಜಾ ಪಟ್ಟಿ) (ಎಪಿ): ಇಸ್ರೇಲ್ ಸೇನೆಯು ನಿಯಂತ್ರಣಕ್ಕೆ ತೆಗೆದುಕೊಂಡಿರುವ ಗಾಜಾ ಪಟ್ಟಿಯ ಅತಿದೊಡ್ಡ ಆಸ್ಪತ್ರೆ ಅಲ್ ಶಿಫಾವನ್ನು ಬಹಳಷ್ಟು ಸಂಖ್ಯೆಯ ರೋಗಿಗಳು ಮತ್ತು ವೈದ್ಯರು ಹಾಗೂ ಸಿಬ್ಬಂದಿ ಶನಿವಾರ ತೊರೆದರು ಎಂದು ಗಾಜಾ ಆರೋಗ್ಯ ಅಧಿಕಾರಿಗಳು ಹೇಳಿದ್ದಾರೆ.

ಸೇನಾ ಕಾರ್ಯಾಚರಣೆಯ ನಡುವೆ ಶಿಫಾ ಆಸ್ಪತ್ರೆಯನ್ನು ಸಾಮೂಹಿಕವಾಗಿ ತೊರೆಯಲು ರೋಗಿಗಳು ಮತ್ತು ವೈದ್ಯಕೀಯ ಸಿಬ್ಬಂದಿಗೆ ಇಸ್ರೇಲ್ ಸೇನೆ ಮತ್ತು ಪ್ಯಾಲೆಸ್ಟೀನ್ ಅಧಿಕಾರಿಗಳು ಮಾನವೀಯ ನೆಲೆಯಲ್ಲಿ ಅನುವು ಮಾಡಿಕೊಟ್ಟರು. ನೂರಾರು ಸಂಖ್ಯೆಯಲ್ಲಿ ರೋಗಿಗಳು ಮತ್ತು ನಾಗರಿಕರು ನಡೆದುಕೊಂಡೇ ಆಸ್ಪತ್ರೆಯ ಸಂಕೀರ್ಣದಿಂದ ಸುರಕ್ಷಿತ ಸ್ಥಳಗಳತ್ತ ತೆರಳಿದರು.

ರೋಗಿಗಳನ್ನು ಸುರಕ್ಷಿತ ಸ್ಥಳಗಳಿಗೆ ಕಳುಹಿಸಲು ಶನಿವಾರ ಬೆಳಿಗ್ಗೆ ಇಸ್ರೇಲ್ ಸೇನೆಯಿಂದ ಆರೋಗ್ಯ ಅಧಿಕಾರಿಗಳಿಗೆ ಆದೇಶ ರವಾನೆಯಾಗಿತ್ತು. ಆಸ್ಪತ್ರೆಯಿಂದ ನಿರ್ಗಮಿಸುವವರಿಗೆ ಸುರಕ್ಷಿತ ಮಾರ್ಗ ತೆರೆಯಲಾಗಿದೆ ಎಂದು ಸೇನೆಯು ತಿಳಿಸಿದೆ.

ಆಸ್ಪತ್ರೆ ತೊರೆಯುವ ಮೊದಲು, ರೋಗಿಗಳು, ಚಿಕಿತ್ಸೆಗೆ ಬಂದಿದ್ದವರು ಸೇರಿದಂತೆ ಸಾವಿರಾರು ಜನರು ಶಿಫಾದಲ್ಲಿ ಭೀಕರ ಪರಿಸ್ಥಿತಿಯನ್ನು ಎದುರಿಸಿದರು.

ಶಿಫಾ ಆಸ್ಪತ್ರೆಯ ಕಟ್ಟಡದಡಿ ಹಮಾಸ್ ಕಾರ್ಯಾಚರಣೆಯ ಪ್ರಧಾನ ಕೇಂದ್ರ ಮತ್ತು ಅಡಗುದಾಣಗಳ ಸುರಂಗ ಮಾರ್ಗಗಳಿವೆ, ರೋಗಿಗಳನ್ನು, ನಾಗರಿಕರನ್ನು ಹಮಾಸ್ ಮಾನವ ಗುರಾಣಿಯಾಗಿ ಬಳಸುತ್ತಿದೆ ಎಂದು ಆರೋಪಿಸುತ್ತಲೇ ಇರುವ ಇಸ್ರೇಲ್ ಸೇನೆ, ಸಾಕ್ಷ್ಯಗಳಿಗಾಗಿ ತೀವ್ರ ಶೋಧವನ್ನು ಶನಿವಾರ ಕೂಡ ಮುಂದುವರಿಸಿತು.

ಹಮಾಸ್ ಕುರುಹುಗಳಿಗಾಗಿ ಸೇನಾ ಶೋಧ ನಿಧಾನವಾಗಿ ನಡೆಯುತ್ತಿದೆ ಎಂದು ಒಪ್ಪಿಕೊಂಡಿರುವ ಇಸ್ರೇಲ್ ಸೇನೆ ವಕ್ತಾರ ಕರ್ನಲ್ ರಿಚರ್ಡ್ ಹೆಕ್ಟ್ ಅವರು, 'ಇದು ಇನ್ನಷ್ಟು ಸಮಯ ತೆಗೆದುಕೊಳ್ಳಲಿದೆ' ಎಂದೂ ಹೇಳಿದ್ದಾರೆ.

'ಬೃಹತ್ ಬಂದೀಖಾನೆಯಾಗಿದೆ ಶಿಫಾ': 'ಶಿಫಾ ಆಸ್ಪತ್ರೆ ಈಗ ಬೃಹತ್ ಕಾರಾಗೃಹವಾಗಿ ಮಾರ್ಪಟ್ಟಿದೆ. ನಮ್ಮನ್ನು ಸಾವು ಸುತ್ತುವರಿದಿದೆ' ಎಂದು ಆಸ್ಪತ್ರೆಯ ವೈದ್ಯರು ಹೇಳಿಕೊಂಡಿದ್ದಾರೆ.

ಆಸ್ಪತ್ರೆಯ ಸಂಕೀರ್ಣದ ಸುತ್ತಲೂ ಇಸ್ರೇಲ್ ಪಡೆಗಳು ಸುತ್ತುವರಿದ ನಂತರ, ರೋಗಿಗಳು, ಸಿಬ್ಬಂದಿ ಮತ್ತು ನಾಗರಿಕರು ಸೇರಿ ಸುಮಾರು 7,000 ಜನರು ಆಸ್ಪತ್ರೆಯೊಳಗೆ ಸಿಲುಕಿದ್ದು, ಆಸ್ಪತ್ರೆಗೆ ಅಲ್ಪ ಪ್ರಮಾಣದ ಆಹಾರ ಪೂರೈಕೆಯಾಗುತ್ತಿದೆ. ವಾರದಿಂದ ಕತ್ತಲೆ ಆವರಿಸಿದೆ. ಮಕ್ಕಳ ಇನ್‌ಕ್ಯುಬೇಟರ್ ಮತ್ತು ತೀವ್ರ ನಿಗಾ ಘಟಕಗಳ ವೆಂಟಿಲೇಟರ್‌ಗಳು ಸ್ಥಗಿತಗೊಂಡಿವೆ ಎಂದು ಅವರು ಹೇಳಿದ್ದಾರೆ.

'ಇಸ್ರೇಲ್ ಪಡೆಗಳು ಆಸ್ಪತ್ರೆಯ ಜನರೇಟರ್‌ಗಳಿಗೆ ಇಂಧನ ಪೂರೈಸಬೇಕು ಅಥವಾ ಎಲ್ಲರನ್ನೂ ಸ್ಥಳಾಂತರಿಸಲು ಅನುಮತಿಸಬೇಕು' ಎಂದು ಅಲ್ ಶಿಫಾ ಆಸ್ಪತ್ರೆಯ ನಿರ್ದೇಶಕ ಮೊಹಮ್ಮದ್ ಅಬು ಸೆಲ್ಮಿಯಾ 'ಅಲ್ ಜಜೀರಾ ಟೆಲಿವಿಜನ್'ಗೆ ತಿಳಿಸಿದ್ದಾರೆ.

ಶಿಫಾಗೆ 4,000 ಲೀಟರ್ ನೀರು ಮತ್ತು 1,500 ಸಿದ್ಧ ಊಟವನ್ನು ವಿತರಿಸಲಾಗುತ್ತಿದೆ ಎಂದು ಇಸ್ರೇಲ್ ಸೇನೆ ಹೇಳಿದೆ. ಆದರೆ, ಅಲ್ಲಿರುವ ಜನಸಂಖ್ಯೆಗೆ ಇದು ತುಂಬಾ ಕಡಿಮೆ ಎಂದು ಆಸ್ಪತ್ರೆ ಸಿಬ್ಬಂದಿ ಹೇಳಿದರು.

ಸಂವಹನ– ಸಂಪರ್ಕ ಭಾಗಶಃ ಪುನರಾರಂಭ: ಗಾಜಾ ಪಟ್ಟಿಯಲ್ಲಿ ಶನಿವಾರ ಇಂಟರ್‌ನೆಟ್ ಮತ್ತು ಮೊಬೈಲ್ ಸಂಪರ್ಕ ಸೇವೆ ಹಾಗೂ ಇಂಧನ ಪೂರೈಕೆ ನಿರ್ಬಂಧ ಸಡಿಲಗೊಂಡಿದ್ದು, ಈ ಸೇವೆಗಳು ಭಾಗಶಃ ಮರುಸ್ಥಾಪನೆಗೊಂಡಿವೆ.

ಗಾಜಾ ಪಟ್ಟಿಗೆ ಇಸ್ರೇಲ್ ಸೇನೆ, ನೀರು, ಆಹಾರ, ಇಂಧನ ಪೂರೈಕೆ ಹಾಗೂ ಸಂವಹನ ಸಂಪರ್ಕಗಳನ್ನು ದೀರ್ಘಾವಧಿಗೆ ನಿರ್ಬಂಧಿಸಿತ್ತು. ಇದರಿಂದಾಗಿ, ವಿಶ್ವಸಂಸ್ಥೆಯ ಬೆಂಗಾವಲು ಪಡೆಗಳು ಮತ್ತು ಮಾನವೀಯ ನೆರವು ಪೂರೈಕೆ ಏಜೆನ್ಸಿಗಳಿಗೆ, ಯುದ್ಧಪೀಡಿತ ಪ್ರದೇಶದಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಜನರಿಗೆ ಆಹಾರ, ಔಷಧ ಹಾಗೂ ತುರ್ತು ಮಾನವೀಯ ನೆರವು ಪೂರೈಸುವ ಮಾರ್ಗಗಳೆಲ್ಲವೂ ಸಂಪೂರ್ಣ ಮುಚ್ಚಿಹೋಗಿದ್ದವು.


ಪ್ಯಾಲೆಸ್ಟೀನ್ ಭೂಪ್ರದೇಶದ ಮೇಲೆ ಶನಿವಾರ ಇಸ್ರೇಲ್ ಸೇನಾ ಪಡೆಯು ನಡೆಸಿದ ಬಾಂಬ್‌ದಾಳಿಗೆ ಸೃಷ್ಟಿಯಾದ ಹೊಗೆ ಮುಗಿಲೆತ್ತರಕ್ಕೇರಿದೆ —ಎಎಫ್‌ಪಿ ಚಿತ್ರ

ಇಸ್ರೇಲ್ ಸೇನೆ ಆಸ್ಪತ್ರೆಯಲ್ಲಿ ಸೌಲಭ್ಯ ತೆರವಿಗೆ ಆದೇಶಿಸಿದೆ. ಜನರನ್ನು ಆಸ್ಪತ್ರೆಯಿಂದ ಹೊರ ಕಳುಹಿಸಲು ಒಂದು ಗಂಟೆ ಅವಕಾಶ ನೀಡಿತು
ಮೆಧತ್ ಅಬ್ಬಾಸ್, ಹಮಾಸ್ ನಿಯಂತ್ರಿತ ಗಾಜಾದಲ್ಲಿನ ಆರೋಗ್ಯ ಸಚಿವಾಲಯದ ವಕ್ತಾರ

ಮಾನವೀಯ ಉದ್ದೇಶಗಳಿಗಾಗಿ ಗಾಜಾಕ್ಕೆ ಇಂಧನ ಪೂರೈಕೆಗೆ ಅನುಮತಿಸಲು ಅಮೆರಿಕದ ಮನವಿಯ ನಂತರ ಇಸ್ರೇಲ್ ಒಪ್ಪಿಕೊಂಡಿದೆ
ತಾಕಿ ಹಾನೆಜ್‌ಬಿ, ಇಸ್ರೇಲ್ ರಾಷ್ಟ್ರೀಯ ಭದ್ರತಾ ಸಲಹೆಗಾರ

ಯಾವುದೇ ಸ್ಥಳಾಂತರಕ್ಕೆ ಆದೇಶ ನೀಡಿಲ್ಲ. ಸ್ಥಳಾಂತರಿಸಲಾಗದ ರೋಗಿಗಳ ಚಿಕಿತ್ಸೆಗೆ ವೈದ್ಯಕೀಯ ಸಿಬ್ಬಂದಿ ಆಸ್ಪತ್ರೆಯಲ್ಲೇ ಉಳಿಯಲು ಅನುಮತಿಸಲಾಗಿದೆ
ಇಸ್ರೇಲ್ ಸೇನೆ

ಒತ್ತೆಯಾಳುಗಳ ಬಿಡುಗಡೆಗೆ ಒತ್ತಡ

ಹಮಾಸ್ ಬಂಡುಕೋರರ ಒತ್ತೆಯಲ್ಲಿರುವ ಇಸ್ರೇಲಿಗರ ಬಿಡುಗಡೆಗೆ ಒತ್ತಾಯಿಸಿ ಸಂತ್ರಸ್ತರ ಕುಟುಂಬಗಳು ಮತ್ತು ಬೆಂಬಲಿಗರು ಟೆಲ್ ಅವಿವ್‌ನಿಂದ ಕೈಗೊಂಡ ಐದು ದಿನಗಳ ರ್‍ಯಾಲಿ ಶನಿವಾರ ಜೆರುಸಲೇಂ ತಲುಪಿತು. ಒತ್ತೆಯಾಳುಗಳ ಬಿಡುಗಡೆಗೆ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮೇಲೆ ಪ್ರತಿಭಟನಕಾರರು ತೀವ್ರ ಒತ್ತಡ ಹೇರಿದರು

ಒತ್ತೆಯಾಳುಗಳ ಬಿಡುಗಡೆಗೆ ಹಮಾಸ್, ಇಸ್ರೇಲ್ ಸೆರೆಯಲ್ಲಿರುವ 6 ಸಾವಿರಕ್ಕೂ ಹೆಚ್ಚು ಪ್ಯಾಲೆಸ್ಟೀನ್ ಕೈದಿಗಳನ್ನು ಬಿಡುಗಡೆ ಮಾಡಬೇಕು ಎಂಬ ಷರತ್ತನ್ನು ವಿಧಿಸಿದೆ.
ಒತ್ತೆಯಾಳುಗಳ ಬಿಡುಗಡೆಗೆ ಪ್ರತಿಯಾಗಿ ಕದನ ವಿರಾಮ ಅಥವಾ ಕೈದಿಗಳ ವಿನಿಮಯ ಪರಿಗಣಿಸುವಂತೆ 50ಕ್ಕೂ ಹೆಚ್ಚು ಒತ್ತೆಯಾಳುಗಳ ಕುಟುಂಬಗಳು ಮತ್ತು ಪ್ರತಿಭಟನಕಾರರು, ಇಸ್ರೇಲ್ ಅನ್ನು ಒತ್ತಾಯಿಸಿದ್ದಾರೆ.

ಲೆಬನಾನ್: ಉಲ್ಬಣಿಸಿದ ಸಂಘರ್ಷ

ಬೈರೂತ್ (ರಾಯಿಟರ್ಸ್): ಗಾಜಾದಲ್ಲಿನ ಯುದ್ಧ ತೀವ್ರತೆಯ ನಡುವೆ, ಲೆಬನಾನ್-ಇಸ್ರೇಲ್ ಗಡಿಯ ಸಮೀಪದ ಪ್ರದೇಶಗಳಲ್ಲಿ ಶನಿವಾರ ಹಿಜ್ಬುಲ್ಲಾ ಮತ್ತು ಇಸ್ರೇಲ್ ಪಡೆಗಳ ನಡುವೆ ಸಂಘರ್ಷ ಉಲ್ಬಣಿಸಿದೆ. ಉಭಯ ಪಡೆಗಳು ಪರಸ್ಪರ ನೆಲೆಗಳ ಮೇಲೆ ಕ್ಷಿಪಣಿ ಹಾಗೂ ಡ್ರೋನ್ ದಾಳಿ ನಡೆಸಿವೆ ಎಂದು ಎರಡೂ ಕಡೆಯ ಅಧಿಕಾರಿಗಳು ಹೇಳಿದ್ದಾರೆ.

ಗಡಿ ಭಾಗದಲ್ಲಿ ಉಲ್ಬಣಿಸಿರುವ ಹಿಂಸಾಚಾರದ ಈ ಹೊಸ ಬೆಳವಣಿಗೆ ಮಧ್ಯಪ್ರಾಚ್ಯದಲ್ಲಿ ಸಂಘರ್ಷ ವ್ಯಾಪಿಸಲು ಕಾರಣವಾಗಬಹುದೆಂದು ಅಮೆರಿಕ ಕಳವಳ ವ್ಯಕ್ತಪಡಿಸಿದೆ.

26 ಪ್ಯಾಲೆಸ್ಟೀನಿಯನ್ನರ ಸಾವು

ಈ ನಡುವೆ ಶನಿವಾರ ನಸುಕಿನಲ್ಲಿ ಇಸ್ರೇಲ್ ಖಾನ್ ಯೂನಿಸ್‌ನ ಹಮದ್ ನಗರದಲ್ಲಿ ವಸತಿ ಕಟ್ಟಡದ ಮೇಲೆ ನಡೆಸಿರುವ ವೈಮಾನಿಕ ದಾಳಿಯಲ್ಲಿ 26 ಪ್ಯಾಲೆಸ್ಟೀನಿಯನ್ನರು ಮೃತಪಟ್ಟಿದ್ದಾರೆ. 20ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ನಾಸಿರ್ ಖಾನ್ ಆಸ್ಪತ್ರೆಯ ವೈದ್ಯರಾದ ನೆಹದ್ ತಾಯಿಮಾ ಹೇಳಿದ್ದಾರೆ.

ಅಬುಧಾಬಿಗೆ ಗಾಯಗೊಂಡ ಮಕ್ಕಳು

ಅಬುಧಾಬಿ (ಎಪಿ): ಗಾಜಾ ಪಟ್ಟಿಯಲ್ಲಿ ಇಸ್ರೇಲ್-ಹಮಾಸ್ ಯುದ್ಧದಲ್ಲಿ ಗಾಯಗೊಂಡ ಪ್ಯಾಲೆಸ್ಟೀನ್ ಮಕ್ಕಳನ್ನು ಹೊತ್ತ ಮೊದಲ ವಿಮಾನವು ಶನಿವಾರ ಅರಬ್ ಸಂಯುಕ್ತ ಸಂಸ್ಥಾನವನ್ನು (ಯುಎಇ) ತಲುಪಿತು.

1,000 ಮಕ್ಕಳಿಗೆ ಸಹಾಯ ಮಾಡುವುದಾಗಿ ಯುಎಇ ನೀಡಿದ್ದ ವಾಗ್ದಾನದಂತೆ ಪರಿಹಾರ ಪ್ರಯತ್ನದ ಭಾಗವಾಗಿ ಈ ಮಕ್ಕಳನ್ನು ರಕ್ಷಿಸಿ ಕರೆತರಲಾಗಿದೆ.

ಮಕ್ಕಳು ಮತ್ತು ಅವರ ಕುಟುಂಬ ಸದಸ್ಯರು ಸೇರಿ 15 ಮಂದಿಯ ಗುಂಪು ಶುಕ್ರವಾರ ಗಾಜಾ ಪಟ್ಟಿ– ಈಜಿಪ್ಟ್ ನಡುವಿನ ರಫಾ ಗಡಿ ದಾಟಿ, ನಂತರ ಯುಎಇಯ ರಾಜಧಾನಿ ಅಬುಧಾಬಿಗೆ ವಿಮಾನದಲ್ಲಿ ಬಂದಿಳಿದರು.

'ಸುಪ್ರೀಂ'ನಿಂದ ಅರ್ಜಿ ವಿಚಾರಣೆ ನಾಳೆ

ಕೊಲಿಜಿಯಂ ಶಿಫಾರಸಿನ ಜಾರಿಯಲ್ಲಿ ಕೇಂದ್ರದ ವಿಳಂಬ

ನವದೆಹಲಿ (ಪಿಟಿಐ): ನ್ಯಾಯಮೂರ್ತಿಗಳ ನೇಮಕ ಮತ್ತು ವರ್ಗಾವಣೆಗೆ ಸಂಬಂಧಿಸಿದಂತೆ ಕೊಲಿಜಿಯಂ ಶಿಫಾರಸು ಮಾಡಿರುವ ಹೆಸರುಗಳ ಕುರಿತು ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರವು ವಿಳಂಬ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿ ಸಲ್ಲಿಸಲಾಗಿರುವ ಅರ್ಜಿ ಸೇರಿ ಎರಡು ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ಕೈಗೆತ್ತಿಕೊಳ್ಳಲಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಸುಧಾಂಶು ಧುಲಿಯಾ ಮತ್ತು ಸಂದೀಪ್ ಮೆಹ್ತಾ ಅವರಿರುವ ನ್ಯಾಯಪೀಠವು ಈ ಕುರಿತ ಅರ್ಜಿಯ ವಿಚಾರಣೆಯನ್ನು ನಡೆಸಲಿದೆ.

ಇದೇ ವಿಚಾರಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ನ. 7ರಂದು ಸುಪ್ರೀಂ ಕೋರ್ಟ್ ನಡೆಸಿತ್ತು. ನ್ಯಾಯಮೂರ್ತಿಗಳನ್ನು ನೇಮಿಸಲು ಕೊಲಿಜಿಯಂ ಶಿಫಾರಸು ಮಾಡಿರುವ ಹೆಸರುಗಳ ಪೈಕಿ ಕೆಲವನ್ನು ಮಾತ್ರ ಕೇಂದ್ರ ಸರ್ಕಾರ ಆಯ್ಕೆ ಮಾಡುತ್ತಿರುವುದು ಸಮಸ್ಯೆ ಸೃಷ್ಟಿಸುವಂಥದ್ದು ಎಂದು ಹೇಳಿತ್ತು. ಜೊತೆಗೆ, ಒಂದು ಹೈಕೋರ್ಟ್‌ನಿಂದ ಮತ್ತೊಂದು ಹೈಕೋರ್ಟ್‌ಗೆ ವರ್ಗಾವಣೆ ಆಗಬೇಕಿರುವ ನ್ಯಾಯಮೂರ್ತಿಗಳ ಹೆಸರುಗಳನ್ನು ಬಾಕಿ ಉಳಿಸಿರುವ ಕುರಿತೂ ಕಳವಳ ವ್ಯಕ್ತಪಡಿಸಿತ್ತು.

ಕೊಲಿಜಿಯಂನ ಶಿಫಾರಸು ಇತ್ಯರ್ಥಗೊಳಿಸುವಂತೆ ಎರಡನೇ ಬಾರಿಗೆ ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿದ ಬಳಿಕವೂ ಐದು ಹೆಸರುಗಳು ಬಾಕಿ ಉಳಿದಿವೆ ಎಂದು ಸುಪ್ರೀಂ ಹೇಳಿತ್ತು.

ನ್ಯಾಯಾಂಗ ನಿಂದನೆ ಕ್ರಮಕ್ಕೆ ಮನವಿ: ಸಕಾಲಕ್ಕೆ ನ್ಯಾಯಮೂರ್ತಿಗಳನ್ನು ನೇಮಿಸಬೇಕು ಎಂದು ಸುಪ್ರೀಂ ಕೋರ್ಟ್ 2021ರ ಏಪ್ರಿಲ್ 20ರಲ್ಲಿ ಹೊರಡಿಸಿದ್ದ ಆದೇಶವನ್ನು ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯ ಪಾಲಿಸಿಲ್ಲ. ಹೀಗಾಗಿ ಸಚಿವಾಲಯದ ವಿರುದ್ಧ ನ್ಯಾಯಾಂಗ ನಿಂದನೆ ಕ್ರಮ ಜರುಗಿಸಬೇಕು ಎಂದು ಬೆಂಗಳೂರು ವಕೀಲರ ಸಂಘ ಅರ್ಜಿ ಸಲ್ಲಿಸಿದೆ. ಈ ಅರ್ಜಿಯ ವಿಚಾರಣೆಯನ್ನೂ ಕೋರ್ಟ್ ಸೋಮವಾರ ನಡೆಸಲಿದೆ.

'ಸುಪ್ರೀಂ'ಗೆ ಮೊರೆ

ಚಂಡೀಗಢ (ಪಿಟಿಐ): ರಾಜ್ಯದ ನಿವಾಸಿಗಳಿಗೆ ಖಾಸಗಿ ವಲಯದ ಉದ್ಯೋಗದಲ್ಲೂ ಶೇ 75ರಷ್ಟು ಮೀಸಲಾತಿ ಕಲ್ಪಿಸಿದ್ದ ಹರಿಯಾಣ ಸರ್ಕಾರದ ಕಾನೂನನ್ನು ರದ್ದುಗೊಳಿಸಿರುವ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಆದೇಶದ ವಿರುದ್ಧ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ದುಶ್ಯಂತ್ ಚೌಟಾಲಾ ಶನಿವಾರ ಇಲ್ಲಿ ತಿಳಿಸಿದರು.

'ರದ್ದುಗೊಂಡ ಕಾನೂನು ರಾಜ್ಯ ಹಾಗೂ ಕೈಗಾರಿಕೆಗಳ ಹಿತಾಸಕ್ತಿ ಕಾಪಾಡುತ್ತಿತ್ತು. ಹೈಕೋರ್ಟ್‌ನ ಈ ತೀರ್ಪನ್ನು ಪರಿಶೀಲಿಸಲಾಗುತ್ತಿದೆ. ಶೀಘ್ರದಲ್ಲೇ ಸುಪ್ರೀಂ ಕೋರ್ಟ್ ಮೊರೆ ಹೋಗಲಿದ್ದೇವೆ' ಎಂದು ಹೇಳಿದರು.

'ಸ್ಥಳೀಯ ಯುವಕರಿಗೆ ಉದ್ಯೋಗ ಹಾಗೂ ಕೈಗಾರಿಕೆಗಳಿಗೆ ಕೌಶಲ ಹೊಂದಿದ ಕೆಲಸಗಾರರನ್ನು ಒದಗಿಸಿ ಕೊಡುವುದೇ ರಾಜ್ಯ ಸರ್ಕಾರದ ಉದ್ದೇಶವಾಗಿತ್ತು' ಎಂದರು.

ಜ್ಞಾನವಾಪಿ ವರದಿ ಸಲ್ಲಿಕೆಗೆ 28ರ ಗಡುವು

ವಾರಾಣಸಿ (ಪಿಟಿಐ): ಜ್ಞಾನವಾಪಿ ಮಸೀದಿ ಆವರಣದಲ್ಲಿ ವೈಜ್ಞಾನಿಕ ಸಮೀಕ್ಷೆ ನಡೆಸುತ್ತಿರುವ ಭಾರತೀಯ ಪುರಾತತ್ವ ಇಲಾಖೆಗೆ (ಎಎಸ್‌ಐ) ವರದಿ ಸಲ್ಲಿಸಲು ನೀಡಿದ್ದ ಕಾಲಾವಕಾಶವನ್ನು ಇನ್ನೂ 10 ದಿನಗಳಿಗೆ ವಿಸ್ತರಿಸಿ ವಾರಾಣಸಿ ಜಿಲ್ಲಾ ನ್ಯಾಯಾಲಯವು ಶನಿವಾರ ಆದೇಶ ನೀಡಿದೆ.

ನವೆಂಬರ್ 17ರಂದು ವರದಿ ಸಲ್ಲಿಸಲು ಎಎಸ್‌ಐಗೆ ಈ ಮೊದಲು ನ್ಯಾಯಾಲಯ ಸೂಚಿಸಿತ್ತು. ಕಾಲಾವಕಾಶವನ್ನು ಇನ್ನೂ 15 ದಿನಗಳಿಗೆ ವಿಸ್ತರಿಸುವಂತೆ ಎಎಸ್‌ಐ ಪರ ವಕೀಲರು ನ್ಯಾಯಾಲಯಕ್ಕೆ ಶುಕ್ರವಾರ ಮನವಿ ಮಾಡಿದ್ದರು. ಅದರಂತೆ, ವರದಿಯನ್ನು ನವೆಂಬರ್ 28ರ ಒಳಗೆ ಸಲ್ಲಿಸಲು ಜಿಲ್ಲಾ ನ್ಯಾಯಾಧೀಶ ಎ.ಕೆ. ವಿಶ್ವೇಶ್ ಅವರು ಎಎಸ್‌ಐಗೆ ಹೇಳಿದ್ದಾರೆ.

ತಾಂತ್ರಿಕ ವರದಿಯು ಲಭ್ಯವಾಗದ ಕಾರಣ ಸಮೀಕ್ಷೆಯ ವರದಿ ಸಲ್ಲಿಸಲು ಎಎಸ್‌ಐಗೆ ಮತ್ತಷ್ಟು ಸಮಯ ತಗಲುತ್ತದೆ ಎಂದು ಹಿಂದೂ ಅರ್ಜಿದಾರರ ಪರ ವಕೀಲ ಮದನ್ ಮೋಹನ್ ಯಾದವ್ ಅವರು ಹೇಳಿದ್ದಾರೆ.

ಸಚಿವರಾಗಿ ಬಾಲಾಜಿ: ಮೇಲ್ಮನವಿ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಆರೋಪದ ಮೇಲೆ ಬಂಧಿತರಾಗಿರುವ ವಿ. ಸೆಂಥಿಲ್ ಬಾಲಾಜಿ ಅವರನ್ನು ತಮಿಳುನಾಡಿನ ಖಾತೆರಹಿತ ಸಚಿವರಾಗಿ ಮುಂದುವರೆಸಿರುವುದರ ವಿರುದ್ಧ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಮದ್ರಾಸ್ ಹೈಕೋರ್ಟ್ ತಳ್ಳಿಹಾಕಿತ್ತು. ಹೈಕೋರ್ಟ್‌ನ ಈ ನಿರ್ಧಾರ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ.

ಸಾಮಾಜಿಕ ಕಾರ್ಯಕರ್ತ ಎಂ.ಎಲ್. ರವಿ ಅವರು ಈ ಅರ್ಜಿ ಸಲ್ಲಿಸಿದ್ದಾರೆ.

ಸೆಂಥಿಲ್ ಅವರನ್ನು ಇ.ಡಿ ಜೂನ್ 14ರಂದು ಬಂಧಿಸಿದ ಬಳಿಕವೂ ಅವರು ತಮಿಳುನಾಡು ಸಂಪುಟದಲ್ಲಿ ಖಾತೆರಹಿತ ಸಚಿವರಾಗಿ ಮುಂದುವರಿಯುವುದನ್ನು ವಿರೋಧಿಸಿ ಹಲವಾರು ಅರ್ಜಿಗಳು ಸಲ್ಲಿಕೆಯಾಗಿದ್ದವು. 2023ರ ಸೆಪ್ಟೆಂಬರ್ 5ರಂದು ಹೈಕೋರ್ಟ್ ಈ ಅರ್ಜಿಗಳನ್ನು ತಿರಸ್ಕರಿಸಿತ್ತು.

'ಯಾವುದೇ ವ್ಯಕ್ತಿ ವಿರುದ್ಧ ಆರೋಪ ಹೊರಿಸಿ, ವಿಚಾರಣೆಗೆ ಒಳಪಡಿಸಿದರೆ ರಾಜ್ಯ ವಿಧಾನಸಭೆ ಸದಸ್ಯತ್ವದಿಂದ ಆತನನ್ನು ಅನರ್ಹಗೊಳಿಸಬೇಕು ಎಂದು ಸಂವಿಧಾನದಲ್ಲಾಗಲೀ ಅಥವಾ 1951ರ ಜನಪ್ರತಿನಿಧಿ ಕಾಯ್ದೆಯಲ್ಲಾಗಲೀ ಉಲ್ಲೇಖಿಸಿಲ್ಲ' ಎಂದು ಹೈಕೋರ್ಟ್ ಹೇಳಿತ್ತು.

ಇದಕ್ಕೆ ಪ್ರತಿಯಾಗಿ, ಸಂವಿಧಾನದ 154, 163 ಮತ್ತು 164ನೇ ವಿಧಿಗಳ ಅನ್ವಯ ಬಾಲಾಜಿ ಅವರನ್ನು ಸಚಿವ ಸ್ಥಾನದಿಂದ ಕೂಡಲೇ ವಜಾಗೊಳಿಸಬೇಕು ಎಂದು ತಮಿಳುನಾಡಿನ ರಾಜ್ಯಪಾಲರು 2023ರ ಜೂನ್ 29ರಂದು ಪತ್ರ ಬರೆದಿದ್ದನ್ನು ಗಮನಿಸುವಲ್ಲಿ ಹೈಕೋರ್ಟ್ ತಪ್ಪೆಸಗಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಬಂಧನದಲ್ಲಿರುವ ವ್ಯಕ್ತಿಯನ್ನು ಖಾತೆರಹಿತ ಸಚಿವರನ್ನಾಗಿ ಮುಂದುವರೆಸುವುದು ಸಂವಿಧಾನದ ತತ್ವ, ಆಡಳಿತದಲ್ಲಿನ ಶುದ್ಧತೆ ಕಾಯ್ದುಕೊಳ್ಳುವ ದಿಸೆಯಲ್ಲಿ ಉತ್ತಮ ನಡೆಯಲ್ಲ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

‘ಪಿಜಿ ಕೇಂದ್ರಗಳಿಗೆ ಶೀಘ್ರ ಮಾರ್ಗಸೂಚಿ’

ಬೆಂಗಳೂರು: ಪೇಯಿಂಗ್ ಗೆಸ್ಟ್ (ಪಿಜಿ) ಕೇಂದ್ರಗಳ ಅಸಮರ್ಪಕ ನಿರ್ವಹಣೆಯನ್ನು ತಡೆಯಲು ಹೊಸ ಮಾರ್ಗಸೂಚಿಗಳನ್ನು ರೂಪಿಸಲಾಗುವುದು ಎಂದು ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ನಗರದಲ್ಲಿ ಪಿಜಿ ಕೇಂದ್ರಗಳ ಸಂಖ್ಯೆ ವಿಪರೀತವಾಗಿ ಏರುತ್ತಿದೆ. ಆದರೆ, ಅಲ್ಲಿ ಸರಿಯಾದ ಸೌಲಭ್ಯಗಳಿಲ್ಲದೇ ಹೆಚ್ಚು ಶುಲ್ಕ ವಸೂಲಿ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿವೆ. ಸ್ವಚ್ಛತೆ ಇಲ್ಲದಿರುವುದು, ಸಣ್ಣ ಸ್ಥಳಾವಕಾಶದಲ್ಲಿ ಹೆಚ್ಚು ಜನರನ್ನು ಇಟ್ಟುಕೊಳ್ಳುವುದು ಮುಂತಾದ ಆರೋಪಗಳು ಪಿ.ಜಿ. ಕೇಂದ್ರಗಳ ಮೇಲಿವೆ ಎಂದು ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

‘ಅವ್ಯವಸ್ಥೆಗಳನ್ನು ಸರಿಪಡಿಸಲು, ಸಮರ್ಪಕವಾಗಿ ಕಾರ್ಯನಿರ್ವಹಿಸಲು ನಿಯಮ ರೂಪಿಸಬೇಕಿದೆ. ಪಿಜಿ ಕೇಂದ್ರಗಳನ್ನು ತೆರೆಯಬೇಕಿದ್ದರೆ ವಾಣಿಜ್ಯ ಪರವಾನಗಿ ಪಡೆಯಬೇಕು. ಸುರಕ್ಷತಾ ನಿಯಮಗಳನ್ನು ಪಾಲಿಸಬೇಕು. ನಿಯಮ ಪಾಲಿಸದ ಪಿಜಿ ಕೇಂದ್ರಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಬಗ್ಗೆ ಮಾರ್ಗಸೂಚಿಯಲ್ಲಿ ತಿಳಿಸಲಾಗುವುದು’ ಎಂದು ವಿವರಿಸಿದರು.

ಪಿಜಿ ಕೇಂದ್ರಗಳಿರುವ ಕಟ್ಟಡಗಳ ವಿಸ್ತೀರ್ಣ ಎಷ್ಟಿರಬೇಕು. ಆಯಾ ವಿಸ್ತೀರ್ಣಕ್ಕೆ ಸರಿಯಾಗಿ ಎಷ್ಟು ಜನರಿಗೆ ವಸತಿ ಕಲ್ಪಿಸಬಹುದು ಎಂಬುದರ ಬಗ್ಗೆಯೂ ನಿಯಮ ರೂಪಿಸಲಾಗುವುದು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗಿದೆ. ಶೀಘ್ರ ಮಾರ್ಗಸೂಚಿ ಬಿಡುಗಡೆ ಮಾಡಲಾಗುವುದು ಎಂದು ಹೇಳಿದರು.

ಶಿವಾಚಾರ್ಯ ಸ್ವಾಮೀಜಿ ವಿರುದ್ಧ ಹೇಳಿಕೆ: ಖಂಡನೆ

ಬೆಂಗಳೂರು: ‘ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿಕೆಯನ್ನು ಕೆಲವರು ತಪ್ಪಾಗಿ ಅರ್ಥೈಸಿ ಬಸವತತ್ವ ಮತ್ತು ಸ್ವಾಮೀಜಿ ಅವರ ವಿರುದ್ಧ ಉಪದ್ವ್ಯಾಪಿ ಹೇಳಿಕೆ ನೀಡುತ್ತಿರುವುದು ಸರಿಯಲ್ಲ’ ಎಂದು ಜಾಗತಿಕ ಲಿಂಗಾಯತ ಮಹಾಸಭಾ ಬೆಂಗಳೂರು ಜಿಲ್ಲಾ ಘಟಕ ಖಂಡಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ವೀರಭದ್ರಯ್ಯ, ‘ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಬಸವ ಅನುಯಾಯಿಗಳಿಗೆ, ಲಿಂಗಾಯತ ಧರ್ಮದವರಿಗೆ ಅರಿವು ಮೂಡಿಸಲು ವಚನ ಸಾಹಿತ್ಯದ ಆಶೋತ್ತರಗಳನ್ನು ಪಾಲಿಸಲು ತಿಳಿಸಿದರು’.

‘ಮನೆಗಳಲ್ಲಿ ಗಣಪತಿಯನ್ನು ವಿಘ್ನ ನಿವಾರಕನನ್ನಾಗಿ ಪೂಜಿಸುವುದು, ಪ್ರಾರ್ಥನೆ ಸಲ್ಲಿಸುವುದು ನಮ್ಮ ಸಂಸ್ಕೃತಿಯಲ್ಲ. ಅದರ ಬದಲು ವಾಸ್ತವಕ್ಕೆ ತಕ್ಕುದಾದ ವಚನಗಳನ್ನು ಪಠಿಸಬೇಕೆಂದು ಕರೆ ನೀಡಿದ್ದರು. ಆದರೆ, ಲಿಂಗಾಯತ ಧರ್ಮದ ಅರಿವಿಲ್ಲದ ಕೆಲವರು ಸ್ವಾಮೀಜಿ ಹೇಳಿಕೆ ತಿರುಚಿ ಸ್ವಾಮೀಜಿ ಘನತೆಗೆ ಧಕ್ಕೆ ತರುತ್ತಿದ್ದಾರೆ’ ಎಂದು ದೂರಿದರು.

ಸ್ಕೈವಾಕ್: ಎಲ್ಲೆಡೆ ಬೇಕಿದೆ ನಿರ್ವಹಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಕೈವಾಕ್‌ಗಳ ಬಗ್ಗೆ ಸರಣಿ ವರದಿ ಪ್ರಕಟಿಸಿ ‘ಪ್ರಜಾವಾಣಿ’ ಗಂಭೀರ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದೆ. ನಗರದ ಬಹುತೇಕ ಕಡೆಗಳಲ್ಲಿ ಸ್ಕೈವಾಕ್ ಇದ್ದೂ ಉಪಯೋಗಕ್ಕೆ ಇಲ್ಲದಂತಾಗಿದೆ. ಈ ಸಮಸ್ಯೆ ಬಗ್ಗೆ ನಾಗರಿಕರು ಪ್ರತಿಕ್ರಿಯಿಸಿದ್ದು, ಅವುಗಳಲ್ಲಿ ಆಯ್ದ ಕೆಲವನ್ನು ಪ್ರಕಟಿಸಲಾಗಿದೆ.

ಲಿಫ್ಟ್ ಇಲ್ಲದ ಸ್ಕೈವಾಕ್

ಪದ್ಮನಾಭನಗರದ ಹೊಸಕೆರೆಹಳ್ಳಿ ಅಂಚೆ ಕಚೇರಿ ಬಳಿ ಸ್ವಯಂ ಚಾಲಿತ ಎಸ್ಕಲೇಟರ್ ಅಥವಾ ಲಿಫ್ಟ್ ಅಳವಡಿಸದೆ ಅವೈಜ್ಞಾನಿಕವಾಗಿ ನಿರ್ಮಿಸಲಾಗಿದೆ. ನಿತ್ಯ ನೂರಾರು ಮಂದಿ ವಯಸ್ಕರು, ಸ್ತ್ರೀಯರು , ಮಕ್ಕಳು ಅಂಚೆ ಕಚೇರಿ, ಬಿಎಸ್ಎನ್ಎಲ್ ಕಚೇರಿಗಳನ್ನು ಸಂಪರ್ಕಿಸಬೇಕಿದ್ದರೆ ರಸ್ತೆ ದಾಟಬೇಕು. ಈ ಇಳಿಜಾರು ರಸ್ತೆಯಲ್ಲಿ ಅಧಿಕ ವಾಹನಗಳ ಸಂಚಾರ ಇರುವುದರಿಂದ ರಸ್ತೆ ದಾಟಲು ಸಾಹಸ ಪಡಬೇಕಾಗಿದೆ.

ಟಿ.ಬಿ.ನಿರಂಜನ, ಕಾರ್ಯದರ್ಶಿ, ನಿರಂತರ ಜನ ಜಾಗೃತಿ ವೇದಿಕೆ, ಪದ್ಮನಾಭನಗರ



ಪದ್ಮನಾಭನಗರದ ಸ್ಕೈವಾಕ್‌ನಲ್ಲಿ ಲಿಫ್ಟ್ ಅಳವಡಿಸಿಲ್ಲ



ನಾಯಂಡಹಳ್ಳಿ ಸ್ಕೈವಾಕ್‌ನಲ್ಲಿ ಲಿಫ್ಟ್ ಕಾರ್ಯನಿರ್ವಹಿಸದೆ ಹಿರಿಯರೊಬ್ಬರು ಕಷ್ಟಪಟ್ಟು ಮೆಟ್ಟಿಲು ಹತ್ತುತ್ತಿರುವುದು

ನಾಯಂಡಹಳ್ಳಿಯಲ್ಲಿ ನಿರ್ವಹಣೆಯಿಲ್ಲ

ನಾಯಂಡಹಳ್ಳಿ– ಮೈಸೂರು ರಸ್ತೆಯಲ್ಲಿ ಇತ್ತೀಚೆಗೆ ಸ್ಕೈವಾಕ್ ನಿರ್ಮಿಸಲಾಗಿದೆ. ಆದರೆ ನಿರ್ವಹಣೆ ಮತ್ತು ಸ್ವಚ್ಛತೆ ಮರೀಚಿಕೆಯಾಗಿದೆ. ಇದಕ್ಕೆ ಯಾರು ಜವಾಬ್ದಾರರು ಎಂಬುದು ಗೊತ್ತಿಲ್ಲ. ನಮ್ಮಂಥ ಮಂಡಿನೋವು ಇರುವವರು, ವಯಸ್ಸಾದವರು, ಅಂಗವಿಕಲರು ಸ್ಕೈವಾಕ್ ಬಳಸಬೇಕಿದ್ದರೆ ಲಿಫ್ಟ್ ನಿರ್ಮಿಸಬೇಕು. ಅದು ಇಲ್ಲಿಲ್ಲ. ಸ್ವಚ್ಛತೆಯ ಕಡೆಗೂ ಗಮನ ಹರಿಸಬೇಕು.

ಯಶೋದಾ, ನಾಯಂಡಹಳ್ಳಿ

ದುರಸ್ತಿಯಾಗದ ಸಂಪಂಗಿ ರಾಮನಗರದ ಸ್ಕೈವಾಕ್

ಸಂಪಂಗಿರಾಮನಗರದ ಕಂಠೀರವ ಕ್ರೀಡಾಂಗಣದ ರಸ್ತೆಯ ಸ್ಕೈವಾಕ್ ದುಃಸ್ಥಿತಿಯಲ್ಲಿದೆ. ಬಿಬಿಎಂಪಿಯ ಕೇಂದ್ರ ಕಚೇರಿ ಕೂಗಳತೆಯಲ್ಲಿದ್ದರೂ ಅಧಿಕಾರಿಗಳ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಹಲವು ಹಗರಣಗಳು ಈ ಸ್ಕೈವಾಕ್ ನಿರ್ಮಾಣದ ಒಳಗಿರುವಂತೆ ಕಾಣುತ್ತಿದೆ. ಸ್ಕೈವಾಕ್ ಬಳಕೆಯ ಬಗ್ಗೆ ಜನರಲ್ಲೂ ಅರಿವು ಕಡಿಮೆ ಇದೆ. ಸ್ಕೈವಾಕ್ ಬೀದಿ ನಾಯಿಗಳ ಆಶ್ರಯ ತಾಣವಾಗಿ ಪರಿವರ್ತನೆಗೊಂಡಿದೆ.

ಸಿ. ಗಣೇಶ್ ಬಾಬು, ಸಂಪಂಗಿರಾಮನಗರ

ಹಾಳಾಗಿರುವ ಮೆಟ್ಟಿಲು, ಚಾವಣಿ

ಕೃಷ್ಣರಾಜಪುರ ಬಳಿಯ ಹಳೆ ಮದ್ರಾಸ್ ರಸ್ತೆಯಲ್ಲಿ ನಿರ್ಮಿಸಿರುವ ಸ್ಕೈವಾಕ್‌ಗಳ ಮೆಟ್ಟಿಲುಗಳು ಹಾಗೂ ಚಾವಣಿ ಹಾಳಾಗಿವೆ. ಸ್ಕೈವಾಕ್ ಇಳಿದು ಹೋಗಬೇಕಾದರೆ ಬಿದ್ದು ಹಲವರು ಗಾಯಗೊಂಡಿದ್ದಾರೆ. ಹಿರಿಯ ನಾಗರಿಕರಿಗೆ, ಅಂಗವಿಕಲರಿಗೆ ಮತ್ತು ದೈಹಿಕವಾಗಿ ನ್ಯೂನತೆ ಇರುವ ವ್ಯಕ್ತಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಲಿಫ್ಟ್ ಸೌಲಭ್ಯ ಕಲ್ಪಿಸಬೇಕು. ಪಾದಚಾರಿಗಳ ಅನುಕುಲಕ್ಕೆ ನಿರ್ಮಿಸಿರುವ ಸ್ಕೈವಾಕ್‌ನಲ್ಲಿ ಬೀದಿ ವ್ಯಾಪಾರಿಗಳು ಹಾವಳಿ ಹೆಚ್ಚಾಗಿದೆ.

ಕಿರಣ್ ಕುಮಾರ್ ಜೆ., ಮೇಡಹಳ್ಳಿ, ಕೃಷ್ಣರಾಜಪುರ

ನಾಯಿಗಳ ವಾಸಸ್ಥಾನ

ನರಸಿಂಹರಾಜ ಕಾಲೊನಿಯಲ್ಲಿ ಬಿಬಿಎಂಪಿ ಆಸ್ಪತ್ರೆಯ ಮುಂದಿನ ಸ್ಕೈವಾಕ್ ಉಪಯೋಗಕ್ಕೆ ಬಾರದೆ ನಾಯಿಗಳ ವಾಸಸ್ಥಾನ ಆಗಿದೆ. ಆಸ್ಪತ್ರೆಗೆ ಹೋಗುವವರು ವಿಪರೀತ ವಾಹನದಟ್ಟಣೆ ಇರುವ ರಸ್ತೆಯನ್ನು ದಾಟುವುದೇ ಕಷ್ಟ. ಜನರ ಬಳಕೆಗೆ ಉಪಯೋಗವಾಗುವಂತೆ ಸ್ಕೈವಾಕ್ ನಿರ್ಮಿಸಿಕೊಡಿ.

ಜಾಹ್ನವಿ ದೇಸಾಯಿ, ನರಸಿಂಹರಾಜ ಕಾಲೊನಿ

ಸ್ಕೈವಾಕ್ ಬೇಕಾಗಿದೆ

ಕೊಟ್ಟಿಗೆಪಾಳ್ಯ, ಸುಂಕದಕಟ್ಟೆ, ಹೇರೋಹಳ್ಳಿ ಕ್ರಾಸ್, ಅಂಜನಾನಗರ ಮತ್ತು ಬ್ಯಾಡರಹಳ್ಳಿಯಲ್ಲಿ ಸ್ಕೈವಾಕ್ ಅಗತ್ಯವಿದೆ. ವೃದ್ಧರು, ಮಕ್ಕಳು, ಅಂಗವಿಕಲರು ಸಹಿತ ಯಾರೇ ಇರಲಿ ಜೀವ ಕೈಯಲ್ಲಿ ಹಿಡಿದು ರಸ್ತೆ ದಾಟಬೇಕಾದ ಪರಿಸ್ಥಿತಿ ಇಲ್ಲಿದೆ. ಕನಿಷ್ಠ ಹಂಪ್ ಅಥವಾ ರೋಡ್ ಬ್ಲಾಕ್ ಆದರೂ ಹಾಕಿಸಿ ಜನರನ್ನು ಕಾಪಾಡಬೇಕಾಗಿದೆ. ಅವಶ್ಯಕತೆ ಇರುವಲ್ಲಿ ಸ್ಕೈವಾಕ್ ನಿರ್ಮಿಸದೇ, ಜನ ಓಡಾಡದ ಪ್ರದೇಶವಾದ ಹೌಸಿಂಗ್ ಬೋರ್ಡ್ (ಮಾಗಡಿ ರಸ್ತೆ) ಬಳಿ ಸ್ಕೈವಾಕ್ ಹಾಕಿದ್ದಾರೆ.

ಶ್ರೀಮತಿ ಸಿ.ಕೆ. ವಿದ್ಯಾಮಾನ್ಯ ನಗರ

ರಾಜಧಾನಿ ಜನರ ಧ್ವನಿ

ಹಾಳಾಗಿರುವ ಸ್ಕೈವಾಕ್

ಹೊಸೂರು ರಸ್ತೆಯ ಸ್ಕೈವಾಕ್ ಅನ್ನು ವಿದ್ಯಾರ್ಥಿಗಳು ಸೇರಿದಂತೆ ಸಾರ್ವಜನಿಕರು ಬಳಸುತ್ತಾರೆ. ಮೇಲ್ಭಾಗ ಚೆನ್ನಾಗಿದೆ. ಆದರೆ, ಸ್ಕೈವಾಕ್‌ನ ಕೆಳಭಾಗದಲ್ಲಿ ಲಾರಿ ಡಿಕ್ಕಿ ಹೊಡೆದಿರುವುದರಿಂದ ಹಾನಿಗೊಳಗಾಗಿದೆ. ಅಹಿತಕರ ಘಟನೆಗಳನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕು. ಜೊತೆಗೆ ಲಿಫ್ಟ್‌ನಲ್ಲಿ ಆಗಾಗ ವಿದ್ಯುತ್ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಇವೆಲ್ಲವನ್ನು ಸರಿಪಡಿಸಬೇಕು.

ಸಂಜಯ ಸಿ.ಸಿ., ಐಟಿ ಉದ್ಯೋಗಿ

80 ಮೆಟ್ಟಿಲು ಹತ್ತಿಳಿಯುವುದೇ ಕಷ್ಟ

ಸ್ಕೈವಾಕ್‌ಗಳಲ್ಲಿ ಎರಡು ಕಡೆ 80 ಮೆಟ್ಟಿಲುಗಳಿವೆ. ಹಿರಿಯ ನಾಗರಿಕರಿಗೆ ಈ ಮೆಟ್ಟಿಲುಗಳನ್ನು ಹತ್ತಲು, ಇಳಿಯಲು ಬಹಳ ತೊಂದರೆಯಾಗುತ್ತಿದೆ. ಸ್ಕೈವಾಕ್ ಮಾಡಿದವರನ್ನು ಶಪಿಸಿಕೊಂಡೇ ಕಷ್ಟಪಟ್ಟು ಉಪಯೋಗಿಸುತ್ತಿದ್ದಾರೆ. ಇದು ನಗರದ ಬಹುತೇಕ ಸ್ಕೈವಾಕ್‌ಗಳಲ್ಲಿ ಕಂಡು ಬರುವ ದೃಶ್ಯ. ಎಲ್ಲ ಸ್ಕೈವಾಕ್‌ಗಳಿಗೆ ಲಿಫ್ಟ್ ಇಲ್ಲವೇ ಎಸ್ಕಲೇಟರ್ ಅಳವಡಿಸಬೇಕು.

ಶಾಮರಾವ್ ಎ.ವಿ., ರಾಮಮೂರ್ತಿ ನಗರ

ಸುದ್ದಿ 2 ನಿಮಿಷ

ವ್ಹೀಲೆ: ಬಾಲಕನ ಪೋಷಕರ ವಿರುದ್ಧವೂ ಪ್ರಕರಣ ದಾಖಲು

ಬೆಂಗಳೂರು: ಕೆ.ಆರ್. ಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ವ್ಹೀಲೆ ಮಾಡುತ್ತಿದ್ದ ಆರೋಪದಡಿ ಬಾಲಕ ಸೇರಿ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಬಾಲಕನಿಗೆ ದ್ವಿಚಕ್ರ ವಾಹನ ನೀಡಿದ್ದಕ್ಕಾಗಿ ಆತನ ಪೋಷಕರ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಐಟಿಐ ಗೇಟ್ ಮುಖ್ಯರಸ್ತೆ ಹಾಗೂ ಕೆ.ಆರ್.ಪುರ ರೈಲ್ವೆ ನಿಲ್ದಾಣ ಬಳಿಯ ಕೆಳ ಸೇತುವೆ ರಸ್ತೆಯಲ್ಲಿ ಇಬ್ಬರು ಪ್ರತ್ಯೇಕವಾಗಿ ವ್ಹೀಲೆ ಮಾಡುತ್ತಿದ್ದರು. ವಿಶೇಷ ಕಾರ್ಯಾಚರಣೆ ನಡೆಸಿ ಇಬ್ಬರನ್ನೂ ವಶಕ್ಕೆ ಪಡೆಯಲಾಯಿತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಎರಡೂ ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ. ಬಾಲಕ, ಪೋಷಕರ ಹೆಸರಿನಲ್ಲಿ ನೋಂದಣಿ ಆಗಿದ್ದ ದ್ವಿಚಕ್ರ ವಾಹನವನ್ನು ವ್ಹೀಲೆ ಮಾಡಲು ಬಳಸಿದ್ದ’ ಎಂದು ತಿಳಿಸಿವೆ.

‘ಕಾನೂನಿನ ಚೌಕಟ್ಟಿನಲ್ಲಿ ತಂತ್ರಜ್ಞಾನ ಅಭಿವೃದ್ಧಿಪಡಿಸಿ’



ಬೆಂಗಳೂರು: ‘ಕಾನೂನಿನ ಚೌಕಟ್ಟಿನೊಳಗೆ ತಂತ್ರಜ್ಞಾನವನ್ನು ಯಾವ ರೀತಿಯಾಗಿ ಅಭಿವೃದ್ಧಿಪಡಿಸಬೇಕು ಎಂಬುದರ ಬಗ್ಗೆ ವಕೀಲರು ಮತ್ತು ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸಂಶೋಧನೆ ಮಾಡಬೇಕು’ ಎಂದು ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಅಶೋಕ ಶೆಟ್ಟರ್ ಹೇಳಿದರು.

ಕೆಎಲ್‌ಇ ಕಾನೂನು ಕಾಲೇಜಿನಲ್ಲಿ ಶನಿವಾರದಿಂದ ಆರಂಭವಾದ ‘ಮುಂದುವರಿದ ತಂತ್ರಜ್ಞಾನದಲ್ಲಿ ಕಾನೂನು ನೀತಿಯ ಆಯಾಮಗಳ ಬಗ್ಗೆ ಜವಾಬ್ದಾರಿಯುತ ಅನ್ವೇಷಣಾ ಮಾರ್ಗ’ ಎಂಬ ವಿಷಯದ ಕುರಿತು ಅಂತರರಾಷ್ಟ್ರೀಯ ವಿಚಾರಸಂಕಿರಣದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಡೇಟಾ ಸೆಕ್ಯೂರಿಟಿ ಆಫ್ ಇಂಡಿಯಾದ ನಿರ್ದೇಶಕ ವೆಂಕಟೇಶ್ ಮೂರ್ತಿ, ‘ಎಐ ತಂತ್ರಜ್ಞಾನ, ಡೀಪ್ ಫೇಕ್ ಎಫೆಕ್ಟ್ ಸೇರಿದಂತೆ ಮುಂದುವರೆದ ತಂತ್ರಜ್ಞಾನದ ಜೊತೆಗೆ ಸಮತೋಲನ ಸಾಧಿಸಿ, ಅದರಿಂದ ಯಾವ ರೀತಿಯ ರಕ್ಷಣೆ ಪಡೆದುಕೊಳ್ಳಬೇಕು ಎಂಬುದರ ಬಗ್ಗೆ ಚಿಂತನೆ ನಡೆಸಬೇಕು’ ಎಂದು ಸಲಹೆ ನೀಡಿದರು.

ಹೈಕೋರ್ಟ್ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ, ವೆಂಕಟೇಶಮೂರ್ತಿ, ಕಾಲೇಜಿನ ಪ್ರಾಂಶುಪಾಲ ಜೆ.ಎಂ. ಮಲ್ಲಿಕಾರ್ಜುನಯ್ಯ, ಗ್ಲಾಟರ್‌ನ ಸಂಸ್ಥಾಪಕ ಅಧ್ಯಕ್ಷ ಎಂ.ಕೆ. ಭಂಡಾರಿ, ಡೆಲಾಯ್ಟ್‌ನ ಗೋವಿಂದ ಮೆಂಗ್ಜಿ, ಸಿಂಗಾಪುರ್ ವಿಶ್ವವಿದ್ಯಾಲಯದ ಆಂಡ್ರ್ಯೂ ಕೊಹ್ ಇದ್ದರು.

ವಿಚಾರಗೋಷ್ಠಿಯಲ್ಲಿ ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಕಳವಳ

‘ಸ್ವಾಮೀಜಿ ಪಾದಪೂಜೆ: ಪ್ರಜ್ಞಾವಂತರಲ್ಲಿ ಕಣ್ಣೀರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೋಕ್ಸೊ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದ ಚಿತ್ರದುರ್ಗದ ಸ್ವಾಮೀಜಿ ಜೈಲಿನಿಂದ ಬಿಡುಗಡೆಯಾದ ಸಂದರ್ಭದಲ್ಲಿ ಪಾದಪೂಜೆ ಮಾಡಿ ಸ್ವಾಗತಿಸಿದ ದೃಶ್ಯವು ಪ್ರಜ್ಞಾವಂತರಲ್ಲಿ ಕಣ್ಣೀರು ತರಿಸಿತು’ ಎಂದು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಹೇಳಿದರು.

ನಗರದಲ್ಲಿ ಶನಿವಾರ ಸಮುದಾಯ ಕರ್ನಾಟಕದ 8ನೇ ರಾಜ್ಯ ಸಮ್ಮೇಳನದ ಲಾಂಛನ ಬಿಡುಗಡೆ ಹಾಗೂ ಘನತೆಯ ಬದುಕು–ಸಾಂಸ್ಕೃತಿಕ ಮಧ್ಯಪ್ರವೇಶ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಅತ್ಯಾಚಾರ, ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾದವರು ಜೈಲಿನಿಂದ ಬಿಡುಗಡೆ ಆಗುವ ಸಂದರ್ಭಗಳಲ್ಲಿ ಮಂತ್ರಿಗಳೇ ಖುದ್ದು ಹಾಜರಿರುತ್ತಾರೆ. ಇದು ದುರಂತ’ ಎಂದು ಹೇಳಿದರು.



ಸಮುದಾಯ ಕರ್ನಾಟಕದ 8ನೇ ರಾಜ್ಯ ಸಮ್ಮೇಳನದ ಲಾಂಛನವನ್ನು (ಮೇಲಿನ ಸಾಲಿನಲ್ಲಿ ನಿಂತವರು ಎಡದಿಂದ) ಚಲನಚಿತ್ರ ನಿರ್ದೇಶಕ ಬಿ.ಸುರೇಶ್, ಸಾಹಿತಿಗಳಾದ ಜಿ.ರಾಮಕೃಷ್ಣ, ಮೂಡ್ನಾಕೂಡು ಚಿನ್ನಸ್ವಾಮಿ ಹಾಗೂ ಎನ್.ಕೆ.ವಸಂತ್‌ರಾಜ್, (ಕೆಳಗಿನ ಸಾಲಿನಲ್ಲಿ ನಿಂತವರು ಎಡದಿಂದ) ಮಂಜುಳಾ, ಲಕ್ಷ್ಮಿ ಚಂದ್ರಶೇಖರ್, ಕೆ.ಸುಕನ್ಯಾ, ಶ್ಯಾಮಲಾ, ವಿಜಯಮ್ಮ ಅಗ್ರಹಾರ ಕೃಷ್ಣಮೂರ್ತಿ, ಸಿ.ಕೆ.ಗುಂಡಣ್ಣ ಅವರು ಬಿಡುಗಡೆ ಮಾಡಿದರು – ಪ್ರಜಾವಾಣಿ ಚಿತ್ರ

‘ದೇಶದಲ್ಲಿ ಘನತೆಯ ಬದುಕು ಸಾಧ್ಯವಾಗುತ್ತಿಲ್ಲ. ಭಾರತ ಶ್ರೇಷ್ಠ ಸಂಸ್ಕೃತಿ ಹೊಂದಿದೆ ಎಂದು ವಿದೇಶದಲ್ಲಿ ಭಾಷಣ ಮಾಡುವವರು ಇದ್ದಾರೆ. ಇದು ನಿಜವಾದ ಆತ್ಮವಂಚನೆ’ ಎಂದರು.

ಚಲನಚಿತ್ರ ನಿರ್ದೇಶಕ ಬಿ.ಸುರೇಶ್ ಮಾತನಾಡಿ, ‘ರಾಜ್ಯದಲ್ಲಿ ಸರ್ಕಾರ ಬದಲಾದರೂ ನಿಲುವುಗಳು ಬದಲಾವಣೆ ಕಂಡಿಲ್ಲ. ಹೋರಾಟಗಾರರು ಸಣ್ಣ ಸಭೆ ನಡೆಸುವುದಕ್ಕೂ ಸಾಧ್ಯವಾಗುತ್ತಿಲ್ಲ. ಪೊಲೀಸರ ಕಣ್ಣುಗಳು ಯಾವಾಗಲೂ ಹೋರಾಟಗಾರರ ಮೇಲೆ ಇರುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಘನತೆಯ ಬದುಕಿಗಾಗಿ ಹೋರಾಡುವ ಪರಿಸ್ಥಿತಿಯಿದೆ’ ಎಂದು ಹೇಳಿದರು.

‘ಖಾಸಗಿ ಸಂಸ್ಥೆಗಳು ಅಧ್ಯಯನ ನಡೆಸಿ, ಹಸಿವಿನಿಂದ ಬಳಲುತ್ತಿರುವವರ ಅಂಕಿಅಂಶ ನೀಡಿದರೆ ಕೇಂದ್ರ ಸರ್ಕಾರ ಹಸಿವಿನಿಂದ ಯಾರೂ ಬಳಲುತ್ತಿಲ್ಲ ಎಂದು ಪ್ರತಿಪಾದಿಸುತ್ತಿದೆ. ವೈದ್ಯಕೀಯ, ಅಪಘಾತ ಹಾಗೂ ಬೆಳೆ ವಿಮೆಯಲ್ಲಿ ಶೇ 4ರಷ್ಟು ಪರಿಹಾರ ಲಭಿಸುತ್ತಿಲ್ಲ. ತಮ್ಮ ಪಾಲಿನ ಹಕ್ಕು ಪಡೆಯಲು ಸಾಧ್ಯವಾಗುತ್ತಿಲ್ಲ’ ಎಂದು ಆತಂಕ ವ್ಯಕ್ತಪಡಿಸಿದರು.

ಸಮುದಾಯ ಕರ್ನಾಟಕ ಖಜಾಂಚಿ ಎನ್.ಕೆ.ವಸಂತರಾಜ್ ಮಾತನಾಡಿ, ‘ಬಹುತ್ವದ ಮೇಲೆ ನಿರಂತರ ದಾಳಿಯಾಗುತ್ತಿದೆ. ರಂಗಭೂಮಿ ಕ್ಷೇತ್ರವನ್ನೂ ಕೋಮುವಾದ ಬಿಟ್ಟಿಲ್ಲ’ ಎಂದು ಆತಂಕ ವ್ಯಕ್ತಪಡಿಸಿದರು.

ಸಾಹಿತಿ ಜಿ.ರಾಮಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಜೆ.ಲೋಕೇಶ್, ಶಶಿಕಾಂತ ಯಡಹಳ್ಳಿ, ಗೌರಿ ದತ್ತು ಅಭಿಪ್ರಾಯ ಹಂಚಿಕೊಂಡರು.

ನಾಯಿ, ಮೇಕೆ ಹೊತ್ತೊಯ್ದ ಚಿರತೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಸೋಂಪುರ ಹೋಬಳಿಯಲ್ಲಿ ಚಿರತೆಯೊಂದು ನಾಯಿ, ಮೇಕೆಗಳನ್ನು ಹೊತ್ತೊಯ್ಯುತ್ತಿದ್ದು, ಜನರು ಆತಂಕಗೊಂಡಿದ್ದಾರೆ.

ಗುರುವಾರ ರಾತ್ರಿ ಕಂಬಾಳುವಿನ ಕಲ್ಪವೇಂದ್ರ ಅವರ ಹೊರವಲಯದ ಮನೆಯ ಮುಂದೆ ಇದ್ದ ನಾಯಿಯನ್ನು ಚಿರತೆ ಎತ್ತಿಕೊಂಡು ಹೋಗುವ, ಅದನ್ನು ರಕ್ಷಿಸಲು ಚಿರತೆ ಮೇಲೆ ಮತ್ತೊಂದು ನಾಯಿ ದಾಳಿ ಮಾಡುವ ದೃಶ್ಯ ಸಿಸಿ ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಬುಗಡಿಹಳ್ಳಿ ಗೊಲ್ಲರಹಟ್ಟಿಯ ವೀರಚಿಕ್ಕಯ್ಯ ಅವರು, ಕುರುವೇಲ್ ತಿಮ್ಮನಹಳ್ಳಿ ಅರಣ್ಯದಲ್ಲಿ ಮೇಕೆ ಮೇಯಿಸಲು ಹೋದಾಗ, ದಾಳಿ ಮಾಡಿದ ಚಿರತೆ ಮೇಕೆಯನ್ನು ಹಿಡಿದುಕೊಂಡು ಹೋಗಿದೆ.

‘ಜೀವನೋಪಯಕ್ಕಾಗಿ ಮೇಕೆ ಸಾಕಿದ್ದು, ಬೆಳಿಗ್ಗೆ ಪಕ್ಕದ ಕುರುವೇಲ್ ತಿಮ್ಮನಹಳ್ಳಿ ಗಿಡದಲ್ಲಿ ಮೇಯಿಸುತ್ತಿದ್ದೆ. ಈ ಸಂದರ್ಭದಲ್ಲಿ ಚಿರತೆಯೊಂದು ದಾಳಿ ಮಾಡಿ, ಮೇಕೆಯನ್ನು ಹಿಡಿದುಕೊಂಡು ಹೋಗಿ ತಿಂದು ಹಾಕಿದೆ. ₹ 12 ಸಾವಿರ ನಷ್ಟವಾಗಿದೆ’ ಎಂದು ರೈತ ವೀರಚಿಕ್ಕಯ್ಯ ತಿಳಿಸಿದರು.

ಗೇಲಿ ಮಾಡಿದ್ದಕ್ಕೆ ಸ್ನೇಹಿತನ ಹತ್ಯೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊತ್ತನೂರು ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಲಕ್ಷ್ಮಣ್ ಮಾಂಜಿ (22) ಕೊಲೆ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಉತ್ತರ ಭಾರತದ ಜಗದೇವ್ ಹಾಗೂ ಚಂದನ್ ಕುಮಾರ್ ಬಂಧಿತರು. ಇಬ್ಬರು ಸೇರಿಕೊಂಡು ಲಕ್ಷ್ಮಣ್ ಅವರನ್ನು ಕೊಂದು ಪರಾರಿಯಾಗಿದ್ದರು. ದೂರು ದಾಖಲಾದ 24 ಗಂಟೆಯೊಳಗೆ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಲಕ್ಷ್ಮಣ್ ಹಾಗೂ ಆರೋಪಿಗಳು, ಉತ್ತರ ಭಾರತದವರು. ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಮೂವರೂ ಕೂಲಿ ಕೆಲಸ ಮಾಡುತ್ತಿದ್ದರು. ಒಂದೇ ಕಡೆ ವಾಸವಿದ್ದರು. ಆಗಾಗ ಮದ್ಯದ ಪಾರ್ಟಿ ಮಾಡುತ್ತಿದ್ದರು’ ಎಂದು ತಿಳಿಸಿದರು.

ಪಾರ್ಟಿ ವೇಳೆ ಗಲಾಟೆ: ‘ಲಕ್ಷ್ಮಣ್ ಹಾಗೂ ಆರೋಪಿಗಳು, ನ. 16ರಂದು ರಾತ್ರಿ ಮದ್ಯದ ಪಾರ್ಟಿ ಮಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಆರೋಪಿಗಳ ಬಗ್ಗೆ ವ್ಯಂಗ್ಯವಾಗಿ ಮಾತನಾಡಿದ್ದ ಲಕ್ಷ್ಮಣ್ ಗೇಲಿ ಮಾಡಿದ್ದ. ಇದೇ ವಿಚಾರವಾಗಿ ಗಲಾಟೆ ಶುರುವಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಲಕ್ಷ್ಮಣ್ ಮೇಲೆ ಹಲ್ಲೆ ಮಾಡಿದ್ದ ಆರೋಪಿಗಳು, ಅವರನ್ನು ಮನೆಯಿಂದ ಹೊರಗೆ ಎಳೆದು ತಂದಿದ್ದರು. ನಂತರ, ಕ್ಯಾಸಲಹಳ್ಳಿ ಬಳಿಯ ನಾರಾಯಣ ಪಿಯು ಕಾಲೇಜ್‌ನ ಹಿಂಭಾಗದಲ್ಲಿರುವ ಭೈರತಿ ಬಸವರಾಜ್ ಅವರಿಗೆ ಸೇರಿದ್ದ ಜಮೀನಿಗೆ ಹೊತ್ತೊಯ್ದಿದ್ದರು. ಅಲ್ಲಿಯೇ ತಲೆಗೆ ಇಟ್ಟಿಗೆಯಿಂದ ಹೊಡೆದು ಲಕ್ಷ್ಮಣ ಅವರನ್ನು ಕೊಂದಿದ್ದರು. ನಂತರ, ಪೊದೆಯಲ್ಲಿ ಮೃತದೇಹ ಎಸೆದು ಸ್ಥಳದಿಂದ ಪರಾರಿಯಾಗಿದ್ದರು’ ಎಂದು ತಿಳಿಸಿದರು.

‘ಮೃತದೇಹ ನೋಡಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಇದೊಂದು ಕೊಲೆ ಎಂಬುದು ಮೃತದೇಹದ ಮೇಲಿನ ಗಾಯದಿಂದ ಗೊತ್ತಾಗಿತ್ತು. ಸ್ನೇಹಿತರೇ ಕೊಲೆ ಮಾಡಿರುವ ಬಗ್ಗೆ ಸುಳಿವು ಸಹ ಸಿಕ್ಕಿತ್ತು’ ಎಂದು ಹೇಳಿದರು.

ಜೈಲಿನಿಂದ ಹೊರಬಂದು ಕಳ್ಳತನ: ಸೆರೆ

ಬೆಂಗಳೂರು: ಹೆಸರಘಟ್ಟದ ಮನೆಯೊಂದರ ಬೀಗ ಮುರಿದು ಕಳ್ಳತನ ಮಾಡಿದ್ದ ಆರೋಪಿ ಮುನಿರಾಜು ಅಲಿಯಾಸ್ ಅಪ್ಪಿಯನ್ನು (34) ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬಂಧಿತ ಮನಿರಾಜು, ಅಪರಾಧ ಹಿನ್ನೆಲೆಯುಳ್ಳವ. ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿ ಜೈಲಿಗೂ ಹೋಗಿ ಬಂದಿದ್ದ. ಐಷಾರಾಮಿ ಜೀವನ ಹಾಗೂ ದುಶ್ಚಟಗಳಿಗೆ ಹಣ ಹೊಂದಿಸಲು ಕಳ್ಳತನ ಮುಂದುವರಿಸಿದ್ದ’ ಎಂದು ಪೊಲೀಸರು ಹೇಳಿದರು.

‘ನ. 9ರಂದು ಬೆಳಿಗ್ಗೆ ಹೆಸರಘಟ್ಟದ ಮನೆಯೊಂದರ ಬೀಗ ಮುರಿದು ಒಳನುಗ್ಗಿದ್ದ ಆರೋಪಿ, ಚಿನ್ನಾಭರಣ ಹಾಗೂ ನಗದು ಕದ್ದುಕೊಂಡು ಪರಾರಿಯಾಗಿದ್ದ. ಮನೆ ಮಾಲೀಕರು ನೀಡಿದ್ದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು’ ಎಂದು ತಿಳಿಸಿದರು.

‘ಸಿಸಿಟಿವಿ ಕ್ಯಾಮೆರಾ ದೃಶ್ಯಗಳ ಸುಳಿವು ಆಧರಿಸಿ ಆರೋಪಿಯನ್ನು ವಶಕ್ಕೆ ಪಡೆಯಲಾಗಿತ್ತು. ಕಳ್ಳತನ ಮಾಡಿದ್ದ ಬಗ್ಗೆ ಆರೋಪಿ ತಪ್ಪೊಪ್ಪಿಕೊಂಡ. ಈತನಿಂದ ₹ 7.96 ಲಕ್ಷ ಮೌಲ್ಯದ 122 ಗ್ರಾಂ ಚಿನ್ನಾಭರಣ, ₹ 1.25 ಲಕ್ಷ ನಗದು, ದ್ವಿಚಕ್ರ ವಾಹನ ಹಾಗೂ ಕಬ್ಬಿಣದ ರಾಡ್ ಜಪ್ತಿ ಮಾಡಲಾಗಿದೆ’ ಎಂದರು.

‘ಗಿರಿನಗರ, ಹನುಮಂತನಗರ, ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿರುವುದು ಗೊತ್ತಾಗಿದೆ’ ಎಂದರು.

ಅಪರಾಧ ಸುದ್ದಿ



ಕಾರ್ಯಕ್ರಮದಲ್ಲಿ ಚೆನ್ನಬಸವಣ್ಣ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು

ವಚನ ಧರ್ಮದ ಸಂವಿಧಾನಶಿಲ್ಪಿ ಚೆನ್ನಬಸವಣ್ಣ: ಪಿನಾಕಪಾಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚೆನ್ನಬಸವಣ್ಣ ಎಂಬ ಚಿನ್ಮಯ ಜ್ಞಾನಿ, ವಚನ ಧರ್ಮದ ಸಂವಿಧಾನಶಿಲ್ಪಿ. ಆತನನ್ನು ಕನ್ನಡಿಗರು ಮರೆತಿದ್ದಾರೆ’ ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ವಿಷಾದಿಸಿದರು.

ಕಲ್ಯಾಣ ಲೇಔಟಿನಲ್ಲಿ ಆಯೋಜಿಸಿದ್ದ ಚೆನ್ನಬಸವಣ್ಣ ಜಯಂತಿಯಲ್ಲಿ ಅವರು ಉಪನ್ಯಾಸ ನೀಡಿದರು.

‘ಸಾವಿರಾರು ಮಠಗಳಿವೆ, ಲಕ್ಷಾಂತರ ಸಂಘ ಸಂಸ್ಥೆಗಳಿವೆ. ತಮ್ಮ ತಮ್ಮ ಮಠಗಳ ಸ್ವಾಮಿಗಳ ಜಯಂತಿ ಆಚರಿಸುವ, ತಮ್ಮ ಸಂಸ್ಥಾಪಕರ ದಿನಾಚರಣೆ ಆಚರಿಸುವ ನಮ್ಮ ಜನ ವಚನ ಧರ್ಮಕ್ಕೆ ಅಷ್ಟಾವರಣ, ಷಟಸ್ಥಲ, ಪಂಚಾಚಾರಗಳನ್ನು ಅಳವಡಿಸಿ ಸಂವಿಧಾನ ಬರೆದ ಚೆನ್ನಬಸವಣ್ಣನವರನ್ನು ನೆನಪಿಸಿಕೊಳ್ಳುವುದೇ ಇಲ್ಲ’ ಎಂದರು.

ಕಲ್ಯಾಣಕ್ರಾಂತಿಯ ನಂತರ ವಚನ ಸಾಹಿತ್ಯವನ್ನು ತನ್ನ ತಾಯಿ ಅಕ್ಕನಾಗಮ್ಮನವರೊಡಗೂಡಿ ಚೆನ್ನಬಸವಣ್ಣ ಸಂರಕ್ಷಿಸಿದರು. ಅವರು ರಕ್ಷಿಸಿರುವ 1,763 ವಚನಗಳಲ್ಲಿ ಅನುಭವ ಮಂಟಪದ ವಿಚಾರ ಮಂಥನದ ಸುವ್ಯವಸ್ಥಿತ ರೂಪ ಕಾಣಬಹುದು ಎಂದರು.

ವಚನ ಕಲಿಕಾ ತರಗತಿಯ ವಿದ್ಯಾರ್ಥಿಗಳು ಚೆನ್ನಬಸವಣ್ಣನವರ ವಚನಗಳನ್ನು ಹಾಡಿದರು. ಬಳಗದ ಮುಖ್ಯ ಕಾರ್ಯನಿರ್ವಾಹಕ ರಾಜಾಗುರುಪ್ರಸಾದ್, ಕಲ್ಯಾಣ ಲೇಔಟಿನ ಮುರುಗೇಶಯ್ಯ, ಕಲಿಕಾ ತರಗತಿಯ ಪ್ರಧಾನ ಸಂಚಾಲಕ ಎಚ್.ಬಿ. ದಿವಾಕರ್, ರಂಗ ಕಲಾವಿದ ಶಿವಲಿಂಗಮೂರ್ತಿ ಇದ್ದರು.

ಹಗುರವಾಗಿ ಟೀಕಿಸಿದರೆ ಜನರೇ ಧ್ವಂಸ ಮಾಡ್ತಾರೆ: ನಿವೃತ್ತ ನ್ಯಾ. ಗೋಪಾಲಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಜಿ ಮುಖ್ಯಮಂತ್ರಿಯೊಬ್ಬರನ್ನು ಸಣ್ಣ ವಿಚಾರಕ್ಕೆ ಹಗುರವಾಗಿ ಟೀಕಿಸಲಾಗುತ್ತಿದೆ. ಈ ವಿಚಾರದಲ್ಲಿ ಮಿತವಾಗಿ ಮಾತನಾಡದೇ ಇದ್ದರೆ ಟೀಕಿಸುವವರನ್ನೇ ಜನರು ಧ್ವಂಸ ಮಾಡುತ್ತಾರೆ’ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಹೇಳಿದರು.

ನಗರದಲ್ಲಿ ಶನಿವಾರ ಆಯೋಜಿಸಿದ್ದ ಸಾಹಿತ್ಯ ಸಂಗಮ ಟ್ರಸ್ಟ್‌ನ ದಶಮಾನೋತ್ಸವ ಹಾಗೂ ಒಕ್ಕಲಿಗರ ವಾಯ್ಸ್ ಮಾಸಪತ್ರಿಕೆಯ 4ನೇ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡಿದರು.

‘ಕಳೆದ ಮೂರು ದಿನಗಳಿಂದ ರಾಜ್ಯದಲ್ಲಿ ನಡೆಯುತ್ತಿರುವ ಚರ್ಚೆಯನ್ನು ನಾನು ಗಮನಿಸುತ್ತಿದ್ದೇನೆ’ ಎಂದರು.

‘ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಈ ಕಾರ್ಯಕ್ರಮಕ್ಕೆ ಬರಬೇಕಿತ್ತು. ಅವರ ಎದುರೇ ಕೆಲವು ವಿಚಾರ ಹಂಚಿಕೊಳ್ಳಲು ನಾನು ಇಚ್ಛಿಸಿದ್ದೆ. ಯಾವುದೇ ವಿಚಾರದಲ್ಲೂ ದೇವೇಗೌಡ ಅವರು ಆಳವಾಗಿ ಅಧ್ಯಯನ ನಡೆಸಿಯೇ ಮಾತನಾಡುತ್ತಾರೆ. ಅವರಿಗೆ ಇನ್ನೂ ಯಾಕೆ ಭಾರತರತ್ನ ಗೌರವ ನೀಡಿಲ್ಲ? ಅವರು ಅರ್ಹರು ಅಲ್ಲವೇ ಎಂದು ಪ್ರಶ್ನಿಸಿದರು. ‘ಭಾರತರತ್ನ ನೀಡುವಂತೆ ಪ್ರಧಾನಿ, ರಾಷ್ಟ್ರಪತಿಗೆ ಪತ್ರ ಬರೆಯುತ್ತೇನೆ’ ಎಂದರು.



ನಗರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ (ಎಡದಿಂದ ನಾಲ್ಕನೆಯವರು) ರಕ್ಷಣಾ ಇಲಾಖೆಯ ಮೇಜರ್ ಡಿ.ಸತೀಶ್ (ಎಡದಿಂದ ಐದನೆಯವರು) ಅವರ ‘ಕೆರಿಯರ್ ಇನ್ ದಿ ಇಂಡಿಯನ್ ಡಿಫೆನ್ಸ್ ಫೋರ್ಸಸ್’ ಕೃತಿ ಬಿಡುಗಡೆ ಮಾಡಿದರು. ಅಮರನಾಥ್‌ಗೌಡ, ಎಂ.ಎಸ್.ಮೂರ್ತಿ, ನ್ಯಾಯಮೂರ್ತಿ ಗೋಪಾಲಗೌಡ, ಆರತಿ ಕೃಷ್ಣ ಇದ್ದರು –ಪ್ರಜಾವಾಣಿ ಚಿತ್ರ

ಎನ್‌ಆರ್‌ಐ ಫೋರಂ ಉಪಾಧ್ಯಕ್ಷೆ ಆರತಿ ಕೃಷ್ಣ, ‘ಅನಿವಾಸಿ ಕನ್ನಡಿಗರಿಗೆ ಹೊಸ ಸಚಿವಾಲಯ ಸ್ಥಾಪಿಸುವ ಪ್ರಯತ್ನಗಳು ಸಾಗುತ್ತಿವೆ’ ಎಂದರು.

ಜಲಸಾರಿಗೆ ಇಲಾಖೆ ಆಯುಕ್ತ ಜಯರಾಮ್ ರಾಯಪುರ ಮಾತನಾಡಿ, ‘₹100 ಕೋಟಿ ಮೊತ್ತದ ಸಾಂಸ್ಕೃತಿಕ ನಿಧಿ ಸ್ಥಾಪಿಸಿ ಅದರಲ್ಲಿ ಸಂಸ್ಕೃತಿ ಉಳಿಸುವ ಕೆಲಸದಲ್ಲಿ ತೊಡಗಿರುವ ಸಂಘ ಸಂಸ್ಥೆಗಳಿಗೆ ನೆರವು ನೀಡಬಹುದು’ ಎಂದು ಸಲಹೆ ನೀಡಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಶಾಸಕರಾದ ಪುಟ್ಟಸ್ವಾಮಿಗೌಡ, ಎಂ.ಕೃಷ್ಣಪ್ಪ, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಡಿ.ಹನುಮಂತಯ್ಯ ಇದ್ದರು.

ಇದೇ ವೇಳೆ ಎಸ್.ನಾಗಭೂಷಣ್ ಸಂಪಾದಕತ್ವದ ‘ಮಣ್ಣಿನ ಮಕ್ಕಳ ಬದುಕಿನ ಹಣತೆ’ ಸಂಪುಟ–4, ಮಾಲಿನಿ ಗೋಯಲ್ ಹಾಗೂ ಪ್ರಶಾಂತ್ ಪ್ರಕಾಶ್ ಅವರ ‘ಅನ್ ಬಾಕ್ಸಿಂಗ್ ಬೆಂಗಳೂರು’ ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಒಕ್ಕಲಿಗ ಸಮುದಾಯದ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು.

‘ರಾಜ್ಯೋತ್ಸವ ನಿತ್ಯೋತ್ಸವವಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶ ಭಕ್ತಿಯ ನೆಪದಲ್ಲಿ ಮಾತೃ ಭಾಷೆ ಕಡೆಗಣಿಸಬಾರದು. ಕರ್ನಾಟಕ ರಾಜ್ಯೋತ್ಸವ ನಿತ್ಯೋತ್ಸವವಾಗಲಿ’ ಎಂದು ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜು ಮತ್ತು ಕಾನೂನು ಅಧ್ಯಯನ ವಿಭಾಗವು ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಶನಿವಾರ ಆಯೋಜಿಸಿದ್ದ ‘ಕನ್ನಡ ಕಲರವ–8’ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಕನ್ನಡ ರಾಜ್ಯೋತ್ಸವ ಕೇವಲ ನವೆಂಬರ್ ಒಂದಕ್ಕೆ ಮಾತ್ರ ಸೀಮಿತವಾಗಬಾರದು. ನಾವು ಕನ್ನಡ ಭಾಷೆಯನ್ನು ಹೆಚ್ಚು ಬಳಸಬೇಕು. ಜತೆಗೆ ಕೆಳಹಂತದ ನ್ಯಾಯಾಲಯಗಳಲ್ಲಿ ಕನ್ನಡ ಭಾಷೆಯ ಬಳಕೆ ಮಾಡಬೇಕು. ನಮ್ಮ ಭಾಷೆ ಮತ್ತು ಬೇರೆ ಭಾಷೆಗಳ ನಡುವೆ ಸಮನ್ವಯತೆಯನ್ನು ಕಾಪಾಡಿಕೊಳ್ಳಬೇಕು’ ಎಂದರು.



ಕರ್ನಾಟಕ ರಾಜ್ಯೋತ್ಸವವನ್ನು ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಉದ್ಘಾಟಿಸಿದರು. ಸಹ ಪ್ರಾಧ್ಯಾಪಕ ಎನ್. ಸತೀಶ್ ಗೌಡ, ಎಲ್.ಎನ್. ಮುಕುಂದರಾಜ್, ವಿಶ್ವವಿದ್ಯಾಲಯ ಕುಲಸಚಿವ ಎಸ್.ಎಂ. ಜಯಕರ, ಕುಲಸಚಿವ ಶೇಖ ಲತೀಫ್, ಕಾನೂನು ಕಾಲೇಜಿನ ಪ್ರಾಂಶುಪಾಲ ಸುರೇಶ್ ವಿ. ನಾಡಗೌಡರ್, ಕಾನೂನು ಅಧ್ಯಯನ ವಿಭಾಗದ ಅಧ್ಯಕ್ಷ ವಿ. ಸುದೇಶ್, ಡೀನ್ ಎನ್. ದಶರತ್ ಇದ್ದಾರೆ

ಕವಿ ಎಲ್.ಎನ್. ಮುಕುಂದರಾಜ್, ‘ಕನ್ನಡ ಅತ್ಯಂತ ಶ್ರೀಮಂತ ಭಾಷೆಯಾಗಿದೆ. ಕನ್ನಡ ಸಂಸ್ಕೃತಿ, ನೆಲ, ಜಲದ ಪರಿಚಯವನ್ನು ಇಂದಿನ ಮಕ್ಕಳಿಗೆ ಯಥಾವತ್ತಾಗಿ ತಲುಪಿಸುವ ಕೆಲಸವಾಗಬೇಕು. ಮಕ್ಕಳಿಗೆ ಕಡ್ಡಾಯವಾಗಿ ಕನ್ನಡ ಕಲಿಸಬೇಕು’ ಎಂದರು.

ಮಹಿಳಾ ಉದ್ಯಮಿಗಳಿಗೆ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಸಲಹೆ

‘ಬೆಂಗಳೂರಿನ ಆಚೆಯೂ ಚಿತ್ತ ಹರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕೆಗಳನ್ನು ಸ್ಥಾಪಿಸುವ ಮಹಿಳೆಯರಿಗೆ ಕರ್ನಾಟಕ ರಾಜ್ಯ ಹಣಕಾಸು ನಿಗಮದ (ಕೆಎಸ್‌ಎಫ್‌ಸಿ) ಮೂಲಕ ಶೇ 14ರಷ್ಟು ಬಡ್ಡಿದರದಲ್ಲಿ ಗರಿಷ್ಠ ₹2 ಕೋಟಿ ಸಾಲ ನೀಡಲಾಗುತ್ತಿದ್ದು, ಬೆಂಗಳೂರಿನ ಆಚೆಗೂ ಹೊಸ ಉದ್ಯಮಗಳತ್ತ ಚಿತ್ತ ಹರಿಸಬೇಕು ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಮಹಿಳಾ ಉದ್ಯಮಿಗಳ ಮಹಾಒಕ್ಕೂಟ ‘ಉಬುಂಟು’ ಶನಿವಾರ ಹಮ್ಮಿಕೊಂಡಿದ್ದ ಮಹಿಳಾ ಉದ್ಯಮಿಗಳ ಸಮಾವೇಶದಲ್ಲಿ ಅವರು ಮಾತನಾಡಿದರು.

₹2 ಕೋಟಿಯವರೆಗಿನ ಸಾಲಕ್ಕೆ ಶೇ 14ರಷ್ಟು ಬಡ್ಡಿ ವಿಧಿಸಿದರೂ, ಅದರಲ್ಲಿ ಶೇ 10ರಷ್ಟನ್ನು ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಐದು ವರ್ಷಗಳವರೆಗೆ ಪಾವತಿಸುತ್ತದೆ. ತಂತ್ರಜ್ಞಾನ ಪರಿಪೋಷಣಾ ಕೇಂದ್ರ, ತಂತ್ರಜ್ಞಾನ ಅಳವಡಿಕೆಯಲ್ಲೂ ಅರ್ಧದಷ್ಟು ಮೊತ್ತವನ್ನು ಸಬ್ಸಿಡಿಯಾಗಿ ನೀಡಲಾಗುತ್ತಿದೆ. ಮಳೆನೀರು ಸಂಗ್ರಹಣೆ, ತ್ಯಾಜ್ಯ ನೀರು ಮರುಬಳಕೆ, ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆಗಳಿಗೂ ನೆರವು ನೀಡಲಾಗುತ್ತಿದೆ ಎಂದರು.

ಕೆಐಎಡಿಬಿ ಮೂಲಕ ಉದ್ಯಮಿಗಳಿಗೆ ಹಂಚುತ್ತಿರುವ ನಿವೇಶನಗಳಲ್ಲಿ ಮಹಿಳಾ ಉದ್ಯಮಿಗಳಿಗೆ ಶೇ 5ರಷ್ಟು ಮೀಸಲಿಡಲಾಗುತ್ತಿದೆ. ಜಮೀನು ಹಂಚಿಕೆಯಲ್ಲಿ ಇದೇ ಸೂತ್ರ ಪಾಲಿಸಲಾಗುತ್ತಿದೆ. ಶೇ 5ರಷ್ಟು ಹೆಚ್ಚುವರಿ ಪ್ರೋತ್ಸಾಹ, ವಿದ್ಯುತ್ ಶುಲ್ಕದ ಮೇಲೆ ಗರಿಷ್ಠ ನಾಲ್ಕು ವರ್ಷಗಳ ವಿನಾಯಿತಿ ನೀಡಲಾಗುತ್ತಿದೆ ಎಂದು ಹೇಳಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಜೆಮ್ ಕಂಪನಿ ಹೆಚ್ಚುವರಿ ಸಿಇಒ ವೈ.ಕೆ.ಪಾಠಕ್, ಉಬುಂಟು ಅಧ್ಯಕ್ಷೆ ಕೆ.ರತ್ನಪ್ರಭಾ, ಎಂಎಸ್ಎಂಇ ಜಂಟಿ ನಿರ್ದೇಶಕ ಕೆ.ಸಾಕ್ರಟೀಸ್, ಕರ್ನಾಟಕ ಮಹಿಳಾ ಉದ್ಯಮಿಗಳ ಸಂಘದ ಅಧ್ಯಕ್ಷೆ ಆಶಾ, ಉದ್ಯಮಿಗಳಾದ ಉಮಾ ರೆಡ್ಡಿ, ರಾಜಲಕ್ಷ್ಮಿ, ಲತಾ ಗಿರೀಶ್, ಜ್ಯೋತಿ ಬಾಲಕೃಷ್ಣ ಉಪಸ್ಥಿತರಿದ್ದರು.



ಮಹಿಳಾ ಉದ್ಯಮಿಗಳ ಸಮಾವೇಶದಲ್ಲಿ ಜೆಮ್ ಕಂಪನಿ ಹೆಚ್ಚುವರಿ ಸಿಇಒ ವೈ.ಕೆ.ಪಾಠಕ್, ಉಬುಂಟು ಅಧ್ಯಕ್ಷೆ ಕೆ.ರತ್ನಪ್ರಭಾ ಅವರು ಇ–ಮಾರುಕಟ್ಟೆ ಪೋರ್ಟಲ್ ಒಪ್ಪಂದ ಮಾಡಿಕೊಂಡರು. ಸಚಿವ ಎಂ.ಬಿ.ಪಾಟೀಲ, ಉಬುಂಟು ಉಪಾಧ್ಯಕ್ಷೆ ರಾಜಲಕ್ಷ್ಮಿ ಇದ್ದಾರೆ –ಪ್ರಜಾವಾಣಿ ಚಿತ್ರ

ಎರಡನೇ ದಿನ 5.48 ಲಕ್ಷ ಜನರ ಭೇಟಿ • ಆಕರ್ಷಣೆಗೆ ಒಳಗಾದ ಕೋಳಿ, ಮೀನು, ಆಡು

ಕೃಷಿಮೇಳಕ್ಕೆ ಹರಿದು ಬಂದ ಜನಸಾಗರ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳಕ್ಕೆ ಎರಡನೇ ದಿನವಾದ ಶನಿವಾರ ಜನಸಾಗರವೇ ಹರಿದು ಬಂದಿದೆ. ಮೊದಲ ದಿನ ಭಾಗವಹಿಸಿದ್ದ ರೈತರು, ವಿದ್ಯಾರ್ಥಿಗಳು, ಕೃಷಿಯಾಸಕ್ತರ ಸಂಖ್ಯೆ 1.32 ಲಕ್ಷ ಇದ್ದರೆ, ಎರಡನೇ ದಿನ 5.48 ಲಕ್ಷ ಜನರು ಭೇಟಿ ನೀಡಿದ್ದರು.

ಬೆಳಿಗ್ಗಿನಿಂದಲೇ ತಂಡೋಪ ತಂಡವಾಗಿ ಬಂದವರು ವೇದಿಕೆ ಕಡೆಗಿಂತ ಪ್ರದರ್ಶನಗಳ ಕಡೆಗೇ ಧಾವಿಸುತ್ತಿದ್ದರು. ವಿಭಿನ್ನ ತಳಿಯ ಕೋಳಿಗಳು, ಆಲಂಕಾರಿಕ ಮೀನುಗಳು, ಉದ್ದ ಕಿವಿಯ ಆಡುಗಳನ್ನು ಮುಗಿಬಿದ್ದು ನೋಡಿ ಆನಂದಿಸಿದರು.

ಮಧ್ಯಾಹ್ನದ ರಿಯಾಯಿತಿ ದರದ ಊಟಕ್ಕೆ 8 ಸಾವಿರ ಮೊಟ್ಟೆಗಳನ್ನು ಪ್ರಾಯೋಜಕರು ನೀಡಿದ್ದರು. ಅದು ಮಧ್ಯಾಹ್ನ 2ರ ಹೊತ್ತಿಗೆ ಖಾಲಿಯಾಗಿತ್ತು. ಆನಂತರವೂ ಒಂದೂವರೆ ಸಾವಿರಕ್ಕೂ ಅಧಿಕ ಜನರು (ಒಟ್ಟು 9,620) ಊಟ ಮಾಡಿದ್ದಾರೆ ಎಂದು ಆಯೋಜಕರು ತಿಳಿಸಿದ್ದಾರೆ.

ಅಸಿಲ್ ಕ್ರಾಸ್: ನಾಟಿಕೋಳಿಯಂತೆ ಮನೆಯ ಹಿತ್ತಿಲಲ್ಲಿ ಬಿಟ್ಟು ಸಾಕಬಹುದಾದ ಅಸಿಲ್ ಕ್ರಾಸ್ (ಅಸಲಿ ಕೋಳಿ ಕ್ರಾಸ್) ಕೋಳಿಗಳು ನಾಟಿಕೋಳಿಗಳಂತೆ ಬಣ್ಣ ಬಣ್ಣದ ಪುಕ್ಕಗಳಿರುವುದರಿಂದ ನೋಡುಗರನ್ನು ಬೇಗ ಸೆಳೆಯುತ್ತಿವೆ. ನಾಟಿಕೋಳಿಗಳಿಗಿಂತ ಎರಡು–ಮೂರು ಪಟ್ಟು ದೊಡ್ಡದಾಗಿ ಬೆಳೆಯುತ್ತವೆ. ಫಾರಂ ಕೋಳಿಗಳಂತೆ ಹೆಚ್ಚು ಆರೈಕೆ ಅಗತ್ಯವಿಲ್ಲದ ಈ ಕೋಳಿಗಳು ರೈತರಿಗೆ ಲಾಭದಾಯಕವಾಗಿರುವುದರಿಂದ ಅನೇಕರು ಈ ಕೋಳಿಗಳ ಮರಿಗಳನ್ನು ಖರೀದಿಸಿದರು.

ವರ್ಷಕ್ಕೆ 150ರಿಂದ 180 ಮೊಟ್ಟೆಗಳನ್ನು ಇಡುವ ಕಾವೇರಿ ತಳಿ ಕೋಳಿಯು ಅಸಿಲ್ ಕ್ರಾಸ್‌ನಂತೆ ಮಾಂಸಕ್ಕೂ ಬಳಸಬಹುದು, ಕಳಿಂಗ ಬ್ರೌನ್‌ನಂತೆ ಮೊಟ್ಟೆಗೂ ಬಳಸಬಹುದಾದ ತಳಿ. ಅಸಿಲ್ ಕ್ರಾಸ್ ಬಳಿಕ ಹೆಚ್ಚು ಆಕರ್ಷಣೆಗೆ ಒಳಗಾಗಿದ್ದು, ಇದೇ ತಳಿ. ಉಳಿದಂತೆ ಕಳಿಂಗ ಬ್ರೌನ್, ಗಿರಿರಾಜಗಳ ಬಗ್ಗೆಯೂ ಜನರು ಮಾಹಿತಿ ಪಡೆಯುತ್ತಿದ್ದರು. ಇವುಗಳ ನಡುವೆ ಬಾತುಕೋಳಿ ಮರಿಗಳ ಖರೀದಿಯೂ ಜೋರಾಗಿತ್ತು. ಕಾಕಿ ಕಾಂಪ್ಬೆಲ್ (ಮೊಟ್ಟೆತಳಿ), ವೈಟ್‌ಪೆಕಿನ್ (ಮಾಂಸತಳಿ) ಬಾತುಕೋಳಿಗಳಿಗೆ ಬೇಡಿಕೆ ಹೆಚ್ಚಿತ್ತು. ಪಶುಸಂಗೋಪನಾ ಶ್ರೇಷ್ಠತೆಯ ಕೇಂದ್ರದ (ಸಿಇಎಚ್) ಜಂಟಿ ಆಯುಕ್ತ ಮಹೇಶ್ ಪಿ.ಎಸ್. ಮತ್ತು ಅವರ ತಂಡ ಕೋಳಿಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ಕೋಳಿ ಆಹಾರದಲ್ಲಿ ಆ್ಯಂಟಿ ಬಯ ಟಿಕ್‌ಗಳನ್ನು ಬಳಸಲಾಗುತ್ತದೆ. ಅದು ಅಡ್ಡ ಪರಿಣಾಮ ಬೀರುವ ಸಾಧ್ಯತೆಗಳು ಇರುವುದರಿಂದ ಐಸಿಎಆರ್–ಎನ್‌ಐಎಎನ್‌ಪಿ ಸಂಸ್ಥೆ 'ಪೈತೊ' ಎಂಬ ಆಹಾರವನ್ನು ತಯಾರಿಸಿದೆ. 'ಸಿರಿ ಧಾನ್ಯಗಳನ್ನೇ ಬಳಸಿ ತಯಾರಿಸಿರುವುದರಿಂದ ಕೋಳಿಗೂ, ಪರಿಸರಕ್ಕೂ, ಮನುಷ್ಯರಿಗೂ ಒಳ್ಳೆಯದು' ಎಂದು ಐಸಿಎಆರ್–ಎನ್‌ಐಎಎನ್‌ಪಿ ಸಂಸ್ಥೆಯ ಸಂಶೋಧಕಿ ಆರ್.ಯು. ಸುಗಂತಿ ಮಾಹಿತಿ ನೀಡಿದರು.

ಆಲಂಕಾರಿಕ ಮೀನು: ಕೊಳ, ಕೆರೆಗಳಲ್ಲಿ ಸಾಕುವ ಮೀನುಗಳು ಆಹಾರವಾಗಿ ಬಳಕೆಯಾಗುತ್ತವೆ. ಅವುಗಳಷ್ಟೇ ಬೇಡಿಕೆ ಆಲಂಕಾರಿಕ ಮೀನುಗಳಿಗೆ ಇವೆ. ಅದಕ್ಕಾಗಿ ₹ 50, ₹ 100ಕ್ಕೆ ಒಂದರಂತೆ ಇಟ್ಟಿದ್ದ ಆಲಂಕಾರಿಕ ಮೀನುಗಳನ್ನು ನೂರಾರು ಜನರು ಖರೀದಿಸಿದರು. ನಗರದ ನಾಗರಿಕರನ್ನು ಸೆಳೆಯುವ ವಿಭಿನ್ನ ಬಗೆಯ ಅಕ್ವೇರಿಯಂಗಳು ಗಮನಸೆಳೆದವು.

'ಮೀನು ಸಾಕಣೆ, ಪಾಲನೆಗಳ ಬಗ್ಗೆ ತರಬೇತಿಯನ್ನು ನಾವೇ ನೀಡುತ್ತೇವೆ. ಆಲಂಕಾರಿಕ ಮೀನುಗಳಿಂದಲೇ ರಾಜ್ಯದಲ್ಲಿ ₹ 300 ಕೋಟಿ ವ್ಯವಹಾರಗಳಾಗುತ್ತವೆ. ಒಳನಾಡಿನ ಮೀನುಗಾರಿಕೆಯೊಂದಿಗೆ ಆಲಂಕಾರಿಕ ಮೀನು ಸಾಕಣೆಯನ್ನೂ ರೈತರು ಮಾಡಬಹುದು' ಎಂದು ಒಳನಾಡು ಮೀನುಗಾರಿಕಾ ಸಂಶೋಧನೆ ಹಾಗೂ ಮಾಹಿತಿ ಕೇಂದ್ರದ ಕೆ.ಬಿ. ರಾಜಣ್ಣ ತಿಳಿಸಿದರು.

ಕೆ.ಜಿ ತೂಗುವ ಸೀಬೆ: ತೋಟಗಾರಿಕೆ ವಿಸ್ತರಣೆ ಮತ್ತು ಸಂಶೋಧನಾ ಕೇಂದ್ರದ ಪ್ರದರ್ಶನದಲ್ಲಿದ್ದ ಒಂದು ಕೆ.ಜಿ ಭಾರದ ಸೀಬೆಯನ್ನು ಎತ್ತಿಕೊಂಡು ವೀಕ್ಷಕರು ಫೋಟೊ, ಸೆಲ್ಫಿ ತೆಗೆದುಕೊಂಡರು. ಕೋಲಾರ ಚಡ್ಡನಹಳ್ಳಿಯ ರೈತ ಜಯರಾಮ್ ಬೆಳೆದಿದ್ದ 'ತೈವಾನ್ ಸೀಬೆ' ಇದಾಗಿದೆ.

ಮೇಳದಲ್ಲಿ ರೈತರೊಬ್ಬರು ಕಣ್ಣು ತಂಪಾಗಿಸುವ ಅಲೆವರಾ ಕನ್ನಡಕ ಮಾರಾಟ ಮಾಡುತ್ತಿದ್ದರು. ಅದನ್ನು ಧರಿಸಿ, ಅನುಭವಿಸಿ ಖರೀದಿಸುವ ದೃಶ್ಯ ಸಾಮಾನ್ಯವಾಗಿತ್ತು.

ಆಹಾರ ಮೇಳದಲ್ಲಿ ದಾವಣಗೆರೆ ಬೆಣ್ಣೆದೋಸೆ, ಪಡ್ಡು, ಮಂಡಕ್ಕಿ ಮಿರ್ಚಿ, ತುಮಕೂರು ತಟ್ಟೆ ಇಡ್ಲಿ, ಮಂಗಳೂರು ಮೀನು, ಉತ್ತರ ಕರ್ನಾಟಕದ ರೊಟ್ಟಿ, ಎಣಗಾಯಿ ಪಲ್ಯ ಹುಬ್ಬಳ್ಳಿಯ ಗಿರ್ಮಿಟ್ ಮಿರ್ಚಿ, ಮೇಲುಕೋಟೆ ಪುಳಿಯೋಗರೆ, ಬೆಂಗಳೂರು ಬಾಡೂಟ, ದಮ್ ಬಿರಿಯಾನಿ, ಗೌಡ್ರಮನೆ ಹಳ್ಳಿಯೂಟ ಹೀಗೆ ತರಹೇವಾರಿ ತಿನಿಸುಗಳ ಮಳಿಗೆಗಳಲ್ಲಿ ಭಾರಿ ಪ್ರಮಾಣದಲ್ಲಿ ಗ್ರಾಹಕರು ಕಂಡು ಬಂದರು. ಶನಿವಾರ ₹ 1.38 ಕೋಟಿ ವಹಿವಾಟು ನಡೆದಿದೆ.


ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದಿರುವ ಕೃಷಿಮೇಳದಲ್ಲಿ ಶನಿವಾರ ಕಂಡು ಬಂದ ಜನಸಾಗರ
ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್




ಅಸಿಲ್ ತಳಿಯ ಕೋಳಿಯನ್ನು ಕುತೂಹಲದಿಂದ ವೀಕ್ಷಿಸಿದ ಬಾಲಕಿ

ದೊಡ್ಡ ಕಿವಿಯ ಮೇಕೆ


ಕೃಷಿಮೇಳದಲ್ಲಿ ಕಣ್ಮನ ಸೆಳೆದ ಉದ್ದ ಕಿವಿಯ ಬೆಂಗಳೂರು ಮೇಕೆ

ಶೋಕಿಗಾಗಿ ನಾಯಿ ಸಾಕುವಂತೆ, ಮೇಕೆಗಳನ್ನೂ ಸಾಕುವ 'ಟ್ರೆಂಡ್' ಬೆಂಗಳೂರು ನಗರದಲ್ಲಿ ಬೆಳೆಯುತ್ತಿದೆ. ಅಂಥ ಮೇಕೆಗಳ ಪ್ರದರ್ಶನ ಕೃಷಿಮೇಳದಲ್ಲಿದೆ. ಅದರಲ್ಲಿ ಉದ್ದಕಿವಿಯ ಮೇಕೆ ತಳಿಯ ಮೇಲೆ ಎಲ್ಲರ ಕಣ್ಣು ನೆಟ್ಟಿತ್ತು. ಒಂದೂವರೆ ಅಡಿಗಿಂತಲೂ ಉದ್ದವಾದ ಕಿವಿಯೇ ಬೇರೆ ಮೇಕೆಗಳಿಗಿಂತ ಭಿನ್ನ ಎಂಬುದನ್ನು ತೋರಿಸಿತ್ತು. ಎತ್ತರ ಮತ್ತು ಉದ್ದದಲ್ಲಿಯೂ ಈ ಮೇಕೆ ತಳಿಗಳಿಗೆ ಸಾಟಿ ಇಲ್ಲದಂತೆ ಕಂಡಿತು.

'ಉದ್ದಕಿವಿಯ ಮೇಕೆಯು ಬೆಂಗಳೂರಿನದ್ದೇ ಆಗಿದ್ದರೂ ರಾಜ್ಯದಲ್ಲಿ ಅಷ್ಟು ಪ್ರಚಾರವಿಲ್ಲ. ದೇಶದ ವಿವಿಧ ರಾಜ್ಯಗಳಿಂದ ಬಂದು ಈ ತಳಿಗಳನ್ನು ಒಯ್ಯುತ್ತಿದ್ದಾರೆ. ಮೇಕೆ ಪ್ರದರ್ಶನದಲ್ಲಿ ಉದ್ದಕಿವಿಯ ಮೇಕೆಗಳೇ ಮೆರೆಯುತ್ತಿರುತ್ತವೆ' ಎಂದು ಸಾಕಣೆದಾರ ಅಬ್ರಾರ್ ತಿಳಿಸಿದರು.

'ಮರಿಗೆ ₹ 30 ಸಾವಿರದಿಂದ ₹ 50 ಸಾವಿರ ಇದೆ. ದೊಡ್ಡ ಮೇಕೆಗೆ ₹ 80 ಸಾವಿರವರೆಗೂ ದರವಿದೆ ಇದೆ ಎಂದು ಮಾಹಿತಿ ನೀಡಿದರು.

ಮಕ್ಕಳಿಗೆ 'ರಾಜಗಿರ' ಚಿಕ್ಕಿ ಕೃಷಿ ವಿಜ್ಞಾನಿಗಳ ಪ್ರಸ್ತಾವ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಸಿರಿಧಾನ್ಯಗಳ ಪೈಕಿ ಅತೀ ಹೆಚ್ಚು ಪೌಷ್ಟಿಕಾಂಶವುಳ್ಳ ರಾಜಗಿರ (ಬೀಜದ ದಂಟು) ಬೀಜಗಳ ಮೌಲ್ಯ ವರ್ಧನೆಯಿಂದ ಸಿದ್ಧಪಡಿಸಿದ ಚಿಕ್ಕಿಗಳನ್ನು ಶಾಲಾ ಮಕ್ಕಳಿಗೆ ವಿತರಿಸುವಂತೆ ಕೃಷಿ ವಿಜ್ಞಾನಿಗಳು ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದಾರೆ.

ಜಿಕೆವಿಕೆ ಆವರಣದಲ್ಲಿ ರಾಜಗಿರ ಬೆಳೆಯ ಪ್ರಾತ್ಯಕ್ಷಿಕೆ ನೀಡುತ್ತಿರುವ ಕೃಷಿ ವಿಜ್ಞಾನಿಗಳು, ಬೆಳೆಯುವ ಕ್ರಮ ಹಾಗೂ ಸೇವನೆಯಿಂದಾಗುವ ಆರೋಗ್ಯದ ಉಪಯೋಗದ ಬಗ್ಗೆ ಜನರಿಗೆ ತಿಳಿಸುತ್ತಿದ್ದಾರೆ.

'ಗುಡ್ಡಗಾಡು ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದ ರಾಜಗಿರ ಬೆಳೆಗೆ 6 ಸಾವಿರ ವರ್ಷಗಳ ಇತಿಹಾಸವಿದೆ. ರಾಜಗಿರ ಸೊಪ್ಪು ಎಲ್ಲರಿಗೂ ಚಿರಪರಿಚಿತ. ಅದಕ್ಕಿಂದ ಭಿನ್ನವಾದದ್ದು ಈ ರಾಜಗಿರ ಬೀಜ. ಇದು ರಾಜರ ಕಾಲದಲ್ಲಿ ಸೈನಿಕರಿಗೆ ವಿಶೇಷ ಆಹಾರವಾಗಿತ್ತು' ಎಂದು ಕೃಷಿ ವಿಶ್ವವಿದ್ಯಾಲಯದ ಅಖಿಲ ಭಾರತ ಸುಸಂಘಟಿತ ಸಮರ್ಥ ಬೆಳೆಗಳ ಸಂಶೋಧನಾ ಪ್ರಾಯೋಜನೆಯ ಹಿರಿಯ ಬೇಸಾಯ ತಜ್ಞ ಡಾ. ಎಚ್. ಆರ್. ಆನಂದ್ 'ಪ್ರಜಾವಾಣಿ'ಗೆ ತಿಳಿಸಿದರು.

'ಬೇರೆ ಸಿರಿಧಾನ್ಯಗಳಿಗೆ ಹೋಲಿಸಿದರೆ ರಾಜಗಿರ ಬೀಜಗಳಲ್ಲಿ ಪೌಷ್ಟಿಕಾಂಶ, ಕ್ಯಾಲ್ಸಿಯಂ, ನಾರು, ಖನಿಜ, ರಂಜಕ, ಪಿಷ್ಟ, ಲೈಸಿನ್, ಸಿಸ್ಟೀನ್, ಲ್ಯೂಸಿನ್ ಹಾಗೂ ಕಬ್ಬಿಣದ ಅಂಶ ಹೆಚ್ಚಿನ ಪ್ರಮಾಣದಲ್ಲಿದೆ. ಜೊತೆಗೆ, ಶೇ 6ರಿಂದ 10ರಷ್ಟು ಎಣ್ಣೆ ಅಂಶವೂ ಇದೆ. ಹೀಗಾಗಿ, ಮಕ್ಕಳಿಗೆ ಹೇಳಿ ಮಾಡಿಸಿದ ಬೆಳೆ ರಾಜಗಿರ' ಎಂದು ಹೇಳಿದರು.

'ರಾಜಗಿರ ಬೀಜಗಳನ್ನು ಮೌಲ್ಯವರ್ಧನೆ ಮಾಡಿ ಹಿಟ್ಟು, ಚಪಾತಿ, ಉಂಡೆ, ಚಿಕ್ಕಿ, ಲಡ್ಡು, ಕೇಕ್, ಮಾಲ್ಟ್ ತಯಾರಿಸಲಾಗುತ್ತಿದೆ. ಹೀಗಾಗಿ, ರಾಜಗಿರ ಬೀಜದಿಂದ ತಯಾರಿಸಿದ ಚಿಕ್ಕಿಯನ್ನು ಶಾಲಾ ಮಕ್ಕಳಿಗೆ ನೀಡುವಂತೆ ಕೃಷಿ ಸಚಿವರ ಮೂಲಕ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಸಚಿವರಿಂದಲೂ ಸಕಾರಾತ್ಮಕ ಸ್ಪಂದನ ಸಿಕ್ಕಿದೆ' ಎಂದು ಹೇಳಿದರು.

90 ದಿನಗಳ ಬೆಳೆ: 'ರಾಜಗಿರ ನಾಲ್ಕು ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಬಿತ್ತನೆ ಮಾಡಿದ 90 ದಿನಕ್ಕೆ ಕಟಾವು ಬರುತ್ತದೆ. ರೈತರು ಹೆಕ್ಟೇರ್‌ಗೆ 14ರಿಂದ 16 ಕ್ವಿಂಟಲ್ (ಖುಷ್ಕಿ) ಹಾಗೂ 18–20 ಕ್ವಿಂಟಲ್ ಇಳುವರಿ ಪಡೆಯಬಹುದು' ಎಂದು ಡಾ. ಎಚ್.ಆರ್. ಆನಂದ್ ತಿಳಿಸಿದರು.

'ರಾಜಗಿರ ಬೀಜಗಳಿಗೆ ಮಾರುಕಟ್ಟೆಯಲ್ಲಿಯೂ ಬೇಡಿಕೆ ಇದೆ. ಕೆಲ ಕಂಪನಿಗಳು, ಬೀಜಗಳನ್ನು ಖರೀದಿಸಿ ಮೌಲ್ಯವರ್ಧನೆ ಆಹಾರವನ್ನು ತಯಾರಿಸುತ್ತಿವೆ' ಎಂದು ಹೇಳಿದರು.

'ಮಹಿಳಾ ಗುಂಪಿನಿಂದ ಚಿಕ್ಕಿ ತಯಾರಿ'


ರತ್ನಮ್ಮ

'ಮಹಿಳಾ ಗುಂಪುಗಳನ್ನು ರಚಿಸಿಕೊಂಡು ರಾಜಗಿರ ಚಿಕ್ಕಿಗಳನ್ನು ತಯಾರಿಸಲಾಗುತ್ತಿದೆ. ಶಾಲಾ ಮಕ್ಕಳಿಗೆ ಸದ್ಯ ಮೊಟ್ಟೆ, ಬಾಳೆ ಹಣ್ಣು, ಹಾಲು ಹಾಗೂ ಶೇಂಗಾ ಚಿಕ್ಕಿ ನೀಡಲಾಗುತ್ತಿದೆ. ಇದರ ಜೊತೆಯಲ್ಲಿ ರಾಜಗಿರ ಬೀಜದ ಚಿಕ್ಕಿ ನೀಡಿದರೆ, ಮಕ್ಕಳ ಆರೋಗ್ಯ ಮತ್ತಷ್ಟು ಸುಧಾರಿಸಲಿದೆ. ಶೇಂಗಾ ಜೊತೆ ರಾಜಗಿರ ಮಿಶ್ರಣ ಮಾಡಿ ಚಿಕ್ಕಿ ತಯಾರಿಸಲೂಬಹುದು' ಎಂದು 2023ನೇ ಸಾಲಿನ ಕೃಷಿ ಮೇಳದ ರೈತ ಮಹಿಳೆ ಪ್ರಶಸ್ತಿ ಪುರಸ್ಕೃತರಾದ ರತ್ನಮ್ಮ ಹೇಳಿದರು.

'ಕೆಲ ಸ್ವಯಂಸೇವಾ ಸಂಸ್ಥೆಯವರು ರಾಜಗಿರ ಚಿಕ್ಕಿಗಳನ್ನು ಖರೀದಿಸುತ್ತಿದ್ದಾರೆ. ವಿಶೇಷ ಪ್ಯಾಕೇಜ್‌ಗಳ ರೂಪದಲ್ಲಿ ಕೆಲ ಅಂಗನವಾಡಿಗಳ ಮಕ್ಕಳಿಗೆ ಪ್ರಾಯೋಗಿಕವಾಗಿ ವಿತರಣೆ ಮಾಡುತ್ತಿದ್ದಾರೆ. ಆಯ್ದ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಚಿಕ್ಕಿ ವಿತರಣೆ ಮಾಡಬೇಕು. ಉತ್ತಮ ಸ್ಪಂದನೆ ಸಿಕ್ಕರೆ, ರಾಜ್ಯದ ಎಲ್ಲ ಶಾಲೆಗಳ ಮಕ್ಕಳಿಗೆ ರಾಜಗಿರ ಚಿಕ್ಕಿ ನೀಡಬೇಕು' ಎಂದು ಸರ್ಕಾರಕ್ಕೆ ಮನವಿ ಮಾಡಿದರು.


ರಾಜಗಿರ ಚಿಕ್ಕಿ


ರಾಜಗಿರ ಸೊಪ್ಪಿನ ತೆನೆ

ಕಿರುಧಾನ್ಯಗಳ ಬೇಕರಿ ಉತ್ಪನ್ನ ಸವಿದ ಜನ

ಸಿರಿಧಾನ್ಯ ಪಿಜ್ಜಾ, ಲಡ್ಡು

• ಎಂ. ನಂಜುಂಡಸ್ವಾಮಿ

ಬೆಂಗಳೂರು: ಕೇಕ್, ಪಿಜ್ಜಾ ಅನಾರೋಗ್ಯಕರ. ಅವುಗಳ ಸೇವನೆಯಿಂದ ಅತಿಯಾದ ಬೊಜ್ಜು ಬರುತ್ತದೆ ಎಂಬ ಮಾತುಗಳು ಸಾಮಾನ್ಯ. ಇದಕ್ಕೆ ತದ್ವಿರುದ್ಧವಾಗಿ, 'ಕೇಕ್, ಸ್ಪಾಂಜ್ ಕೇಕ್, ರಸ್ಕ್, ಪಿಜ್ಜಾ ಸೇವನೆಯಿಂದ ಆರೋಗ್ಯ ವೃದ್ಧಿಸುತ್ತದೆ' ಎಂಬ ಸಂದೇಶ ಕೃಷಿಮೇಳದಲ್ಲಿ ಕೇಳಿಬಂತು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯ ವರ್ಧನಾ ಸಂಸ್ಥೆಯ ಮಳಿಗೆಯಲ್ಲಿ ನವಣೆ, ಬರಗು, ಊದಲು, ಸಜ್ಜೆ, ಹಾರಕ ಮತ್ತು ರಾಗಿಯಿಂದ ತಯಾರಿಸಿದ ಬಗೆ ಬಗೆಯ ಬೇಕರಿ ತಿನಿಸುಗಳು ಜನರ ಬಾಯಲ್ಲಿ ನೀರೂರಿಸಿದವು.

ಸಿರಿಧಾನ್ಯ ಹಿಟ್ಟಿನಿಂದ ತಯಾರಿಸಿದ ಬಿಸ್ಕತ್, ಕೇಕ್, ಸ್ಪಾಂಜ್ ಕೇಕ್, ರಸ್ಕ್ ಮತ್ತು ಪಿಜ್ಜಾ ಸೇರಿ ಇತರೆ ಬೇಕರಿ ಉತ್ಪನ್ನಗಳ ಮಾರಾಟ ಮತ್ತು ಪ್ರದರ್ಶನ ಮೇಳದ ಆಕರ್ಷಕ ಬಿಂದುವಾಗಿದೆ. ಜತೆಗೆ ಅವುಗಳನ್ನು ತಯಾರಿಸುವ ಬಗ್ಗೆಯೂ ಪ್ರಾತ್ಯಕ್ಷಿಕೆ ನೀಡಲಾಗುತ್ತಿದೆ. ಮೈದಾ ಬಳಸದೆ ಸಾಮೆ ಹಿಟ್ಟು ಬಳಸಿ ತಯಾರಿಸುವ ಪಿಜ್ಜಾ ವೀಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ. ಸಿರಿಧಾನ್ಯದ ಕ್ಯಾರಟ್ ಕಪ್ ಕೇಕ್, ಫ್ರೂಟ್ ಕಪ್ ಕೇಕ್‌ಗೆ ಭಾರಿ ಬೇಡಿಕೆ ಇದ್ದು, ಮಳಿಗೆಯಲ್ಲಿ ಅತಿ ಹೆಚ್ಚು ಮಾರಾಟ ಆಗುತ್ತಿದೆ.

'ಸಿರಿಧಾನ್ಯದ ಲಡ್ಡು ಜನಪ್ರಿಯ ಗಳಿಸಿದ್ದು, ಮಳಿಗೆಯಲ್ಲಿರುವ ಲಡ್ಡು ಪೂರ್ಣ ಖಾಲಿ ಆಗಿದೆ. ಮೊದಲ ದಿನಕ್ಕಿಂತ ಇಂದು ಸಿರಿಧಾನ್ಯ ಪಿಜ್ಜಾಗೆ ಭಾರಿ ಬೇಡಿಕೆ ಬಂದಿದೆ. ತಯಾರಿಸಲಾಗಿದ್ದ 500 ಪಿಜ್ಜಾ ಖಾಲಿಯಾಗಿದೆ. ಬಿಸಿ ನೀರಿನಲ್ಲಿ ಸೇರಿಸಿ ಕುಡಿಯುವ 'ಸಿರಿಧಾನ್ಯ ಮ್ಯಾಜಿಕ್ ಡ್ರಿಂಕ್' ಕೂಡ ಜನರಿಗೆ ಇಷ್ಟವಾಗಿದೆ' ಎನ್ನುತ್ತಾರೆ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕಿ ಅಶ್ವಿನಿ.


ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯ ವರ್ಧನಾ ಸಂಸ್ಥೆ ಮಳಿಗೆಯಲ್ಲಿ ಸಿರಿಧ್ಯಾನದ ಬೇಕರಿ ತಿನಿಸು ತಯಾರಿಸುವಲ್ಲಿ ಜನರೂ ಪಾಲ್ಗೊಂಡಿದ್ದರು

ಆಸಕ್ತರಿಗೆ ತರಬೇತಿ: 'ಸಿರಿಧಾನ್ಯ ಬಳಸಿಕೊಂಡು ಹಲವು ಸ್ವಾದಗಳಲ್ಲಿ ಬೇಕರಿ ಆಹಾರ ಪದಾರ್ಥ ತಯಾರಿಸುತ್ತಿದ್ದೇವೆ. ಈ ತಂತ್ರಜ್ಞಾನವನ್ನು ಆಸಕ್ತಿವುಳ್ಳ ಬೇಕರಿ ಮತ್ತು ಉದ್ಯಮಿಗಳ ನಮ್ಮಿಂದ ಪಡೆಯಬಹುದು. ಅಗತ್ಯ ಇರುವವರಿಗೆ ತರಬೇತಿಯನ್ನು ನೀಡುತ್ತೇವೆ' ಎಂದು ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆಯ ಮುಖ್ಯಸ್ಥರಾದ ಡಾ.ಸವಿತಾ ತಿಳಿಸಿದರು.

ಜನರೇ ಬಾಣಸಿಗರಾಗಿ ತಿನಿಸು ತಯಾರಿಸಲು ಮಳಿಗೆಯಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಫುಡ್‌ಕೋರ್ಟ್ ಮತ್ತು ಸಿರಿಧಾನ್ಯ ಮಳಿಗೆಯಲ್ಲಿ ಸಿರಿಧಾನ್ಯದ ಚಾಕೊಲೆಟ್, ವೇಪರ್ಸ್, ಐಸ್‌ಕ್ರೀಮ್, ಬ್ರೆಡ್, ಬನ್, ಮಿಲ್ಕ್ ಬನ್, ಸ್ಯಾಂಡ್‌ವಿಜ್ ಬ್ರೆಡ್, ಬರ್ಗರ್ ಬನ್ ಖರೀದಿ ಹೆಚ್ಚಾಗಿತ್ತು.

ಶರಣರ ಬಿಡುಗಡೆ ಪ್ರಕ್ರಿಯೆ: ವರದಿಗೆ ಆದೇಶ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿರುವಾಗಲೇ ಮುರುಘಾ ಮಠದ ಶಿವಮೂರ್ತಿ ಶರಣರನ್ನು ಜಿಲ್ಲಾ ಕಾರಾಗೃಹದಿಂದ ಬಿಡುಗಡೆಗೊಳಿಸಿದ ಪ್ರಕ್ರಿಯೆಗೆ ಸಂಬಂಧಿಸಿದಂತೆ ವರದಿ ಸಲ್ಲಿಸಲು 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಆದೇಶಿಸಿದೆ.

ಶಿವಮೂರ್ತಿ ಶರಣರ ವಿರುದ್ಧ ದಾಖಲಾಗಿರುವ 2ನೇ ಪೋಕ್ಸೊ ಪ್ರಕರಣದ ಬಾಡಿ ವಾರಂಟ್ ಅರ್ಜಿಯ ವಿಚಾರಣೆಯನ್ನು ಶನಿವಾರ ಕೈಗೆತ್ತಿಕೊಂಡ ನ್ಯಾಯಾಧೀಶೆ ಬಿ.ಕೆ. ಕೋಮಲಾ ಅವರು, ಕಾರಾಗೃಹದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರಿಗೆ (ಎಡಿಜಿಪಿ) ಈ ಸೂಚನೆ ನೀಡಿದ್ದಾರೆ.

'2ನೇ ಪ್ರಕರಣದ ವಿಚಾರಣೆ ನಡೆಯುತ್ತಿರುವಾಗಲೇ ಆರೋಪಿಯನ್ನು ಕಾರಾಗೃಹದಿಂದ ಬಿಡುಗಡೆ ಮಾಡಿರುವ ಪ್ರಕ್ರಿಯೆ ಬಗ್ಗೆ ತನಿಖೆ ನಡೆಸಿ ಎಂಬುದಾಗಿ ಪತ್ರದ ಮೂಲಕ ಕಾರಾಗೃಹದ ಎಡಿಜಿಪಿಗೆ ನ್ಯಾಯಾಧೀಶರು ಆದೇಶಿಸಿದ್ದಾರೆ' ಎಂದು ವಿಶೇಷ ಸರ್ಕಾರಿ ವಕೀಲ ಎಚ್.ಆರ್.ಜಗದೀಶ್ ತಿಳಿಸಿದ್ದಾರೆ.

ಏನಿದು ಪ್ರಕರಣ?: ಶಿವಮೂರ್ತಿ ಶರಣರ ವಿರುದ್ಧ ಹೊರಡಿಸಿದ ಬಾಡಿ ವಾರಂಟ್ ಅನ್ನು ನ್ಯಾಯಾಂಗ ಬಂಧನದ ವಾರಂಟ್ ಆಗಿ ಪರಿವರ್ತಿಸುವಂತೆ ಪ್ರಾಸಿಕ್ಯೂಷನ್ ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ನ.16ರಂದು ಬೆಳಿಗ್ಗೆ 11ಕ್ಕೆ ಕೈಗೆತ್ತಿಕೊಂಡಿತ್ತು. ಪ್ರಕರಣದ ಆರೋಪಿಗಳಾದ ಶಿವಮೂರ್ತಿ ಶರಣರು ಹಾಗೂ ಹಾಸ್ಟೆಲ್ ವಾರ್ಡನ್ ರಶ್ಮಿ ಕಾರಾಗೃಹದಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಿದ್ದರು.

ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರು ಮಧ್ಯಾಹ್ನಕ್ಕೆ ಮುಂದೂಡಿದಾಗ ಶಿವಮೂರ್ತಿ ಶರಣರನ್ನು ಕಾರಾಗೃಹದಿಂದ ಬಿಡುಗಡೆ ಮಾಡಲಾಗಿತ್ತು. ಅದಾಗಲೇ ಶರಣರು ಮೊದಲ ಪೋಕ್ಸೊ ಪ್ರಕರಣದಲ್ಲಿ ಹೈಕೋರ್ಟ್‌ನಿಂದ ಜಾಮೀನು ಪಡೆದಿದ್ದರು. ಸೆಷನ್ಸ್ ನ್ಯಾಯಾಲಯದಲ್ಲಿ ಮತ್ತೆ ವಿಚಾರಣೆ ಆರಂಭವಾದಾಗ 2ನೇ ಆರೋಪಿ ರಶ್ಮಿ ಮಾತ್ರ ಕಾರಾಗೃಹದಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಿದ್ದರು. ಹೈಕೋರ್ಟ್ ಜಾಮೀನಿನ ಮೇಲೆ ಶರಣರನ್ನು ಬಿಡುಗಡೆ ಮಾಡಿದ್ದಾಗಿ ಕಾರಾಗೃಹದ ಅಧಿಕಾರಿಗಳು ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದರು.

ವಿಚಾರಣೆ 20ಕ್ಕೆ ಮುಂದೂಡಿಕೆ

2ನೇ ಪೋಕ್ಸೊ ಪ್ರಕರಣದ ಬಾಡಿ ವಾರಂಟ್‌ಗೆ ಸಂಬಂಧಿಸಿದ ವಿಚಾರಣೆಯನ್ನು ನ.20ಕ್ಕೆ ಮುಂದೂಡಿ ನ್ಯಾಯಾಧೀಶರು ಶನಿವಾರ ಆದೇಶಿಸಿದರು.

ಪ್ರಕರಣದ ವಿಚಾರಣೆಗೆ ಶಿವಮೂರ್ತಿ ಶರಣರು ಹಾಜರಾಗದಿರುವುದರಿಂದ ಜಾಮೀನು ರಹಿತ ಬಂಧನದ ವಾರಂಟ್ ಹೊರಡಿಸುವಂತೆ ವಿಶೇಷ ಸರ್ಕಾರಿ ವಕೀಲರು ಕೋರಿಕೆ ಸಲ್ಲಿಸಿದರು.

ಶರಣರ ಪರವಾಗಿ ಹಾಜರಾದ ವಕೀಲ ಎಂ.ಉಮೇಶ್, 'ಶಿವಮೂರ್ತಿ ಶರಣರು ನ್ಯಾಯಾಲಯಕ್ಕೆ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಲಿದ್ದಾರೆ' ಎಂದು ಮಾಹಿತಿ ನೀಡಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ವಿಶೇಷ ಸರ್ಕಾರಿ ವಕೀಲ, 'ಹೈಕೋರ್ಟ್ ಆದೇಶದಲ್ಲಿ ಇಂತಹ ಅವಕಾಶ ಇಲ್ಲ' ಎಂದರು.

ಜಾರಕಿಹೊಳಿ ವಿದೇಶಕ್ಕೆ

ಬೆಂಗಳೂರು: ತಮ್ಮ ಆಪ್ತರ ಜೊತೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ವಿದೇಶ ಪ್ರವಾಸಕ್ಕೆ ತೆರಳಿದ್ದಾರೆ.

ಬೆಂಗಳೂರಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಶುಕ್ರವಾರ ತಡರಾತ್ರಿ, ತಮ್ಮ ಮಗನ ಜತೆ ಪ್ರಯಾಣ ಬೆಳೆಸಿದ್ದಾರೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

ದಸರಾ ಸಂದರ್ಭದಲ್ಲಿ ಕೆಲವು ಶಾಸಕರ ಜೊತೆ ಮೈಸೂರಿಗೆ ತೆರಳಲು ಸತೀಶ ಜಾರಕಿಹೊಳಿ ಮುಂದಾಗಿದ್ದರು. ಆದರೆ, ಈ ರೀತಿ ಗುಂಪುಕಟ್ಟಿಕೊಂಡು ಹೋಗುವುದರಿಂದ ಪಕ್ಷದಲ್ಲಿ ಎಲ್ಲವೂ ಸರಿಯಿಲ್ಲ ಎಂಬ ಸಂದೇಶ ರವಾನೆಯಾಗಿ, ವಿರೋಧ ಪಕ್ಷಗಳಿಗೆ ಅಸ್ತ್ರ ಆಗಬಹುದೆಂದು ಪಕ್ಷದ ವರಿಷ್ಠರು ಎಚ್ಚರಿಕೆ ನೀಡಿದ್ದ ಕಾರಣ ಅವರು ಆ ಪ್ರವಾಸದಿಂದ ಹಿಂದೆ ಸರಿದಿದ್ದರು.

ಕಾರ್ಯಕರ್ತರ ಭೇಟಿಗೆ ಮುಕ್ತ ಅವಕಾಶ: ವಿಜಯೇಂದ್ರ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಕ್ಷದ ಕಾರ್ಯಕರ್ತರು ಕಚೇರಿಗೆ ಬಂದು ತಮ್ಮ ಸಮಸ್ಯೆ ಹೇಳಿಕೊಳ್ಳಲು ಮುಕ್ತ ಅವಕಾಶ ಇರಬೇಕು. ಯಾವುದೇ ಕಾರ್ಯಕರ್ತನನ್ನೂ ತಡೆದು, ವಾಪಸ್ ಕಳುಹಿಸುವಂತಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಮ್ಮ ಕಚೇರಿ ಸಿಬ್ಬಂದಿಗೆ ಸೂಚಿಸಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಕಚೇರಿ ಸಿಬ್ಬಂದಿ ಜತೆ ಶನಿವಾರ ಸಭೆ ನಡೆಸಿದ ಅವರು, ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಕೆಲವು ಸೂಚನೆಗಳನ್ನು ನೀಡಿದ್ದಾರೆ. ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಸಿಬ್ಬಂದಿಯನ್ನು ಬದಲಾವಣೆ ಮಾಡುವುದಿಲ್ಲ ಎಂಬ ಭರವಸೆಯನ್ನೂ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಪಕ್ಷದ ಕಾರ್ಯಕರ್ತರು ಮುಕ್ತವಾಗಿ ಕಚೇರಿಯೊಳಕ್ಕೆ ಬರಲು ಅವಕಾಶ ನೀಡಬೇಕು. ಕಾರ್ಯಕರ್ತರಿಗೆ ಊಟ ಮತ್ತು ಉಪಹಾರದ ವ್ಯವಸ್ಥೆ ಇರಬೇಕು. ಕಾರ್ಯಕರ್ತರ ಸಮಸ್ಯೆಗಳನ್ನು ಲಿಖಿತವಾಗಿ ದಾಖಲಿಸಿಕೊಂಡು, ಪರಿಹರಿಸಲು ಪ್ರಯತ್ನಿಸಬೇಕು. ನಿಮ್ಮ ಹಂತದಲ್ಲಿ ಪರಿಹರಿಸಲು ಸಾಧ್ಯವಾಗದಿದ್ದರೆ ನನ್ನ ಗಮನಕ್ಕೆ ತನ್ನಿ ಎಂಬ ಸೂಚನೆ ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

ತಮ್ಮ ಕಾರ್ಯನಿರ್ವಹಣಾ ಶೈಲಿಯ ಕುರಿತೂ ಅಭಿಪ್ರಾಯ ನೀಡುವಂತೆ ಕಚೇರಿ ಸಿಬ್ಬಂದಿಯನ್ನು ಕೋರಿದ್ದಾರೆ. ಕಾರ್ಯನಿರ್ವಹಣಾ ಶೈಲಿಯಲ್ಲಿ ಬದಲಾವಣೆ ಅಗತ್ಯ ಎಂಬ ಭಾವನೆ ಇದ್ದರೆ ಚೀಟಿಯಲ್ಲಿ ಬರೆದು ಕಳುಹಿಸಬೇಕು. ಗುರುತಿನ ವಿವರಗಳನ್ನು ಉಲ್ಲೇಖಿಸದೆಯೂ ಸಲಹೆ ನೀಡಬಹುದು ಎಂಬುದಾಗಿ ತಿಳಿಸಿದ್ದಾರೆ ಎಂದು ವಿಜಯೇಂದ್ರ ಆಪ್ತ ಮೂಲಗಳು ತಿಳಿಸಿವೆ.

ಭಾಷಣದ ಸಿ.ಡಿ ಒದಗಿಸಲು ಸೂಚನೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಆಕ್ಷೇಪಾರ್ಹ ಮತ್ತು ಕೋಮು ಭಾವನೆ ಕೆರಳಿಸುವ ಭಾಷಣ ಮಾಡಿದ್ದಾರೆ ಎಂದು ಆರೋಪಿಸಲಾದ ಕ್ರಿಮಿನಲ್ ಪ್ರಕರಣದಲ್ಲಿ ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾ ಉಲ್ಲೇಖಿಸಿರುವ ಹೇಳಿಕೆಯ ವಿಡಿಯೊದ ಸಿ.ಡಿ ಅನ್ನು ಒದಗಿಸಿ' ಎಂದು ಪ್ರಕರಣದ ಫಿರ್ಯಾದುದಾರರಿಗೆ ಹೈಕೋರ್ಟ್ ಸೂಚಿಸಿದೆ.

'ಬೆಳ್ತಂಗಡಿ ಠಾಣಾ ಪೊಲೀಸರು ನನ್ನ ವಿರುದ್ಧ ದಾಖಲಿಸಿರುವ ಎಫ್‌ಐಆರ್ ಮತ್ತು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿನ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಹರೀಶ್ ಪೂಂಜಾ ಸಲ್ಲಿಸಿರುವ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಇದೇ ವೇಳೆ ಫಿರ್ಯಾದುದಾರರ ಪರ ವಕೀಲ ಬಿ.ಲತೀಫ್, ಆಕ್ಷೇಪಣೆ ಸಲ್ಲಿಸಲು ಎರಡು ವಾರಗಳ ಸಮಯಾವಕಾಶ ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಡಿಸೆಂಬರ್ 8ಕ್ಕೆ ಮುಂದೂಡಿದೆ.



ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1570 (1580)
ಸೋಯಾ (ರಿಫೈನ್ಡ್)	₹960 (960)
ಸೂರ್ಯಕಾಂತಿ (ರಿಫೈನ್ಡ್)	₹970 (970)
ಪಾಮೋಲಿನ್	₹842 (840)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹595
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹595

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹132

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹222-480
ದ್ವಿತಳಿ (ಬಿ.ವಿ)	₹222-615

ಮೂರೂವರೆ ತಿಂಗಳಿನಲ್ಲಿ ₹77,995 ಕೋಟಿ ಮೌಲ್ಯದ ಷೇರು ಖರೀದಿ

ಪೇಟೆಗೆ ದೇಶಿ ಹೂಡಿಕೆ ಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಷೇರುಪೇಟೆಗಳ ಮೌಲ್ಯವು ಸದ್ಯ ಗರಿಷ್ಠ ಮಟ್ಟದಲ್ಲಿ ಇದೆ. ಹೀಗಾಗಿ ವಿದೇಶಿ ಹೂಡಿಕೆದಾರರು (ಎಫ್‌ಪಿಐ) ಷೇರುಗಳನ್ನು ಮಾರಾಟ ಮಾಡುವ ಮೂಲಕ ಲಾಭ ಮಾಡಿಕೊಳ್ಳುತ್ತಿದ್ದಾರೆ. ಇದು ದೇಶಿ ಹೂಡಿಕೆದಾರರಿಗೆ ಖರೀದಿ ಅವಕಾಶವನ್ನು ಹೆಚ್ಚಿಸುತ್ತಿದೆ.

ದೇಶದ ಷೇರುಪೇಟೆಗಳಲ್ಲಿ ಚಿಲ್ಲರೆ ಹೂಡಿಕೆದಾರು, ಸಾಂಸ್ಥಿಕ ಹೂಡಿಕೆದಾರರ ಸಕ್ರಿಯ ಭಾಗವಹಿಸುವಿಕೆ ಹೆಚ್ಚಾಗುತ್ತಿದೆ. ಇದರಿಂದಾಗಿ ವಿದೇಶಿ ಬಂಡವಾಳ ಹಿಂತೆಗೆತ ಆಗುತ್ತಿದ್ದರೂ ಷೇರುಪೇಟೆಗಳು ಹೆಚ್ಚಿನ ಕುಸಿತ ಕಾಣುವುದು ತಪ್ಪುತ್ತಿದೆ.



ಆಗಸ್ಟ್‌ನಿಂದ ನವೆಂಬರ್ 15ರವರೆಗಿನ ಅವಧಿಯಲ್ಲಿ ವಿದೇಶಿ ಹೂಡಿಕೆದಾರರು (ಎಫ್‌ಪಿಐ) ₹83,422 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಆದರೆ, ಇದೇ ಅವಧಿಯಲ್ಲಿ ದೇಶಿ ಸಾಂಸ್ಥಿಕ ಹೂಡಿಕೆದಾರರು (ಡಿಐಐ) ₹77,995 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಈ ಕಾರಣದಿಂದಾಗಿಯೇ ನಿಫ್ಟಿಯು ಆಗಸ್ಟ್‌ನ ಆರಂಭದಲ್ಲಿ ಇದ್ದ 19,700 ಅಂಶಗಳ ಆಸುಪಾಸಿನಲ್ಲಿಯೇ ಈಗಲೂ ಇದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಮಾಹಿತಿ ನೀಡಿದ್ದಾರೆ.

ರಾಷ್ಟ್ರೀಯ ಷೇರುಪೇಟೆಯಲ್ಲಿ ಇರುವ ಮಾಹಿತಿಯ ಪ್ರಕಾರ, ಎನ್‌ಎಸ್‌ಇನಲ್ಲಿ ಚಿಲ್ಲರೆ ಹೂಡಿಕೆದಾರರ ಪಾಲು 2020ರ ಸೆಪ್ಟೆಂಬರ್ ಅಂತ್ಯದಲ್ಲಿ ಶೇ 1.85ರಷ್ಟು ಇದ್ದಿದ್ದು 2023ರ ಸೆಪ್ಟೆಂಬರ್ ಅಂತ್ಯಕ್ಕೆ ಶೇ 8.75ಕ್ಕೆ ಏರಿಕೆ ಕಂಡಿದೆ.

ಷೇರುಪೇಟೆಯಲ್ಲಿ ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆ ಹೆಚ್ಚಾಗುತ್ತಿದೆ ಎಂದು ಈಚೆಗಷ್ಟೇ ಎನ್‌ಎಸ್‌ಇ ವ್ಯವಸ್ಥಾಪಕ ನಿರ್ದೇಶಕ ಆಶಿಶ್‌ಕುಮಾರ್ ಚೌಹಾಣ್ ಹೇಳಿದ್ದಾರೆ. 2023ರಲ್ಲಿ ಈವರೆಗೆ ₹28 ಲಕ್ಷ ಕೋಟಿ ಹೂಡಿಕೆ ಮಾಡಿದ್ದಾರೆ. ಅವರು ಒಟ್ಟು ಸಂಪತ್ತು ₹60 ಲಕ್ಷ ಕೋಟಿಯಷ್ಟು ಇದೆ ಎಂದೂ ಅವರು ಮಾಹಿತಿ ನೀಡಿದ್ದಾರೆ.

ಮುಖ್ಯಾಂಶಗಳು

- ತಗ್ಗಿದ ಬಾಂಡ್ ಗಳಿಕೆ; ಎಫ್‌ಪಿಐ ಒಳಹರಿವು ಸಂಭವ
- ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆ ಹೆಚ್ಚಳ

ಅಮೆರಿಕದ ಬಾಂಡ್ ಮೇಲಿನ ಗಳಿಕೆಯು ಶೇ 5ರ ಗರಿಷ್ಠ ಮಟ್ಟದಿಂದ ಶೇ 4.45ಕ್ಕೆ ಇಳಿಕೆ ಕಂಡಿದೆ. ಇದು ವಿದೇಶಿ ಹೂಡಿಕೆದಾರರನ್ನು ಮತ್ತೆ ಷೇರುಪೇಟೆಯತ್ತ ಮರಳುತ್ತಿದ್ದಾರೆ. ಗುರುವಾರ ಮತ್ತು ಶುಕ್ರವಾರದ ವಹಿವಾಟಿನಲ್ಲಿ ಷೇರುಗಳನ್ನು ಖರೀದಿ ಮಾಡಿರುವುದೇ ಅದಕ್ಕೆ ಸಚನೆ ಆಗಿದೆ. ಅಮೆರಿಕದ ಕೇಂದ್ರೀಯ ಬ್ಯಾಂಕ್ ಬಡ್ಡಿದರ ಹೆಚ್ಚಳ ಮಾಡುವ ಪ್ರವೃತ್ತಿಗೆ ಕೊನೆ ಹಾಡುವ ಸುಳಿವು ನೀಡಿರುವುದು ಸಹ ಹೂಡಿಕೆ ಚಟುವಟಿಕೆ ಹೆಚ್ಚಾಗುವಂತೆ ಮಾಡುತ್ತಿದೆ.

₹ 3 ಸಾವಿರ ಕೋಟಿ ಹೂಡಿಕೆ ನಿರೀಕ್ಷೆ: ಸಚಿವ ವೈಷ್ಣವ್


ಪಿಎಲ್‌ಐ: 27 ಕಂಪನಿಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಡೆಲ್, ಎಚ್‌ಪಿ, ಫಾಕ್ಸ್‌ಕಾನ್, ಲೆನೊವೊ ಸೇರಿದಂತೆ ಒಟ್ಟು 27 ಕಂಪನಿಗಳಿಗೆ ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯಡಿ ದೇಶದಲ್ಲಿ ಐ.ಟಿ. ಹಾರ್ಡ್‌ವೇರ್ ತಯಾರಿಸಲು ಒಪ್ಪಿಗೆ ನೀಡಲಾಗಿದೆ ಎಂದು ಕೇಂದ್ರ ಸರ್ಕಾರ ಶನಿವಾರ ಹೇಳಿದೆ.

ಲ್ಯಾಪ್‌ಟಾಪ್, ಟ್ಯಾಬ್ಲೆಟ್, ಪರ್ಸನಲ್ ಕಂಪ್ಯೂಟರ್, ಸೇವೆಗಳು, ಅಲ್ಟ್ರಾ-ಸ್ಮಾಲ್ ಫಾರ್ಮ್ ಫ್ಯಾಕ್ಟರ್ ಡಿವೈಸಸ್ ಈ ಯೋಜನೆಯ ವ್ಯಾಪ್ತಿಗೆ ಬರುತ್ತವೆ.

ಪಿಎಲ್‌ಐ ಐ.ಟಿ. ಹಾರ್ಡ್‌ವೇರ್ ಯೋಜನೆಯಡಿ 27 ಕಂಪನಿಗಳಿಗೆ ಒಪ್ಪಿಗೆ ನೀಡಲಾಗಿದೆ. ಇವುಗಳ ಪೈಕಿ 23 ಕಂಪನಿಗಳು ದೇಶದಲ್ಲಿ ತಯಾರಿಕೆ ಆರಂಭಿಸಲು ಸಿದ್ಧವಾಗಿವೆ. ನಾಲ್ಕು ಕಂಪನಿಗಳು 90 ದಿನಗಳೊಳಗೆ ತಯಾರಿಕೆಯನ್ನು ಆರಂಭಿಸಲಿವೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಈ 27 ಕಂಪನಿಗಳಿಗೆ ಒಪ್ಪಿಗೆ ನೀಡಿರುವುದರಿಂದ ₹ 3 ಸಾವಿರ ಕೋಟಿ ಹೂಡಿಕೆ ಆಗಲಿದೆ. ತಯಾರಿಕೆಯು ಭಾರತದಲ್ಲಿಯೇ ಅಗಲಿದೆ ಎನ್ನುವುದು ಮುಖ್ಯವಾದ ಸಂಗತಿ ಎಂದು ಅವರು ಹೇಳಿದ್ದಾರೆ.



ಪರ್ಸನಲ್ ಕಂಪ್ಯೂಟರ್ (ಪಿ.ಸಿ), ಲ್ಯಾಪ್ಟಾಪ್ ಮತ್ತು ಟ್ಯಾಬ್ಲೆಟ್‌ಗಳನ್ನು ತಯಾರಿಕೆಯಲ್ಲಿ ಭಾರತವನ್ನು ದೊಡ್ಡ ಶಕ್ತಿಯಾಗಿ ರೂಪಿಸಲು ಈ ಒಪ್ಪಿಗೆಯು ನೆರವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಭಾರತನ್ನು ಜಾಗತಿಕವಾಗಿ ಹೈ-ಟೆಕ್ ತಯಾರಿಕಾ ಕೇಂದ್ರವಾಗಿ ರೂಪಿಸಲು ಗುರಿಯನ್ನು ಸರ್ಕಾರ ಹೊಂದಿದೆ. ಈ ನಿಟ್ಟಿನಲ್ಲಿ ದೇಶದಲ್ಲಿ ಐ.ಟಿ. ಹಾರ್ಡ್‌ವೇರ್ ತಯಾರಿಕೆಗೆ ಉತ್ತೇಜನ ನೀಡಲು ಪಿಎಲ್‌ಐ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ.

ಪ್ರಯೋಜನ ಏನು?

₹3.5 ಲಕ್ಷ ಕೋಟಿ ಹೆಚ್ಚುವರಿಯಾಗಿ ತಯಾರಾಗಲಿರುವ ಐ.ಟಿ. ಹಾರ್ಡ್‌ವೇರ್‌ಗಳ ಮೌಲ್ಯ

50 ಸಾವಿರ ನೇರ ಉದ್ಯೋಗ ಸೃಷ್ಟಿ

1.5 ಲಕ್ಷ ಪರೋಕ್ಷ ಉದ್ಯೋಗ ಸೃಷ್ಟಿ

ಡೆಲ್, ಫಾಕ್ಸ್‌ಕಾನ್, ಎಚ್‌ಪಿ, ಫ್ಲೆಕ್ಸ್‌ಟ್ರಾನಿಕ್ಸ್, ವಿವಿಡಿಎನ್, ಆಪ್ಟಿಮಸ್, ಪಾಡ್‌ಗೆಟ್ ಎಲೆಕ್ಟ್ರಾನಿಕ್ಸ್, ಗುಡ್‌ವರ್ತ್ ನಿಯೊಲಿಂಕ್, ಮೆಗಾ ನೆಟ್‌ವರ್ಕ್, ಡಿಜಿಲೈಫ್, ಐಟಿಐ ಲಿಮಿಟೆಡ್... ಸರ್ಕಾರದ ಒಪ್ಪಿಗೆ ಪಡೆದುಕೊಂಡಿರುವ ಪ್ರಮುಖ ಕಂಪನಿಗಳಾಗಿವೆ.

ಐ.ಟಿ. ಹಾರ್ಡ್‌ವೇರ್ ಕ್ಷೇತ್ರಕ್ಕೆ ಪಿಎಲ್‌ಐ ಯೋಜನೆ 2.0ಗೆ ಕೇಂದ್ರ ಸಚಿವ ಸಂಪುಟವು ಮೇ 17ರಂದು ಒಪ್ಪಿಗೆ ನೀಡಿದೆ.

15 ಸಾವಿರ ಕೋಟಿ ಸಂಗ್ರಹ: ಬ್ಯಾಂಕ್ ಆಫ್ ಬರೋಡಾ

ನವದೆಹಲಿ (ಪಿಟಿಐ): ಬಾಂಡ್‌ಗಳನ್ನು ಮಾರಾಟ ಮಾಡುವ ಮೂಲಕ ₹15 ಸಾವಿರ ಕೋಟಿ ಸಂಗ್ರಹಿಸುವ ಯೋಜನೆ ಹೊಂದಿರುವುದಾಗಿ ಬ್ಯಾಂಕ್ ಆಫ್ ಬರೋಡಾ (ಬಿಒಬಿ) ಶನಿವಾರ ತಿಳಿಸಿದೆ.

ಬಾಂಡ್‌ಗಳನ್ನು ಮಾರಾಟ ಮಾಡಿ ಬಂಡವಾಳ ಸಂಗ್ರಹಿಸುವ ಯೋಜನೆಗೆ ಬ್ಯಾಂಕ್‌ನ ಬಂಡವಾಳ ಸಂಗ್ರಹ ಸಮಿತಿಯು ಶನಿವಾರ ಒಪ್ಪಿಗೆ ನೀಡಿರುವುದಾಗಿ ಅದು ಷೇರುಪೇಟೆಗೆ ಮಾಹಿತಿ ನೀಡಿದೆ.

ದಡಾರ ಲಸಿಕೆ ಕುರಿತ ವರದಿ ಸುಳ್ಳು: ಕೇಂದ್ರ

ನವದೆಹಲಿ (ಪಿಟಿಐ): ಭಾರತದಲ್ಲಿ 11 ಲಕ್ಷ ಮಕ್ಕಳು 2022ರಲ್ಲಿ ದಡಾರ ಲಸಿಕೆಯ ಮೊದಲ ಡೋಸ್‌ನಿಂದ ವಂಚಿತರಾಗಿದ್ದಾರೆ ಎಂಬ ಮಾಧ್ಯಮಗಳ ವರದಿಯು ನಿಖರವಲ್ಲದ, ದೋಷಯುಕ್ತ ಮಾಹಿತಿ ಎಂದು ಕೇಂದ್ರ ಆರೋಗ್ಯ ಕುಟುಂಬ ಕಲ್ಯಾಣ ಸಚಿವಾಲಯ ಶನಿವಾರ ತಿಳಿಸಿದೆ.

ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮತ್ತು ಅಮೆರಿಕದ 'ರೋಗ ನಿಯಂತ್ರಣ ಮತ್ತು ತಡೆಗಟ್ಟುವಿಕೆ ಕೇಂದ್ರದ(ಸಿಡಿಸಿ)' ಮಾಹಿತಿ ಆಧರಿಸಿ ಹಲವು ಮಾಧ್ಯಮಗಳು ದಡಾರ ಲಸಿಕೆ ಕುರಿತು ವರದಿ ಪ್ರಕಟಿಸಿದ್ದವು.

'ಈ ವರದಿಗಳು ಸತ್ಯಾಂಶವನ್ನು ಆಧರಿಸಿಲ್ಲ. ನೈಜ ಚಿತ್ರಣವನ್ನು ವರದಿಗಳು ಬಿಂಬಿಸುತ್ತಿಲ್ಲ. ಇವೆಲ್ಲವೂ 2022ರ ಜನವರಿ 1ರಿಂದ 2022ರ ಡಿಸೆಂಬರ್ ನಡುವಿನ ಡಬ್ಲ್ಯುಎಚ್‌ಒ ಮತ್ತು ಯುನಿಸೆಫ್‌ನ 'ರಾಷ್ಟ್ರೀಯ ಲಸಿಕೀಕರಣ ವರದಿ 2022'ರನ್ನು ಆಧರಿಸಿವೆ' ಎಂದು ಸರ್ಕಾರ ಹೇಳಿದೆ.



'ಭಾರತದಲ್ಲಿ 2022ರ ಏಪ್ರಿಲ್‌ನಿಂದ 2023ರ ಮಾರ್ಚ್ ನಡುವಿನ ಅವಧಿಯಲ್ಲಿ 2,63,84,580 ಮಕ್ಕಳ ಪೈಕಿ 2,63,63,270 ಮಕ್ಕಳಿಗೆ ದಡಾರ ಲಸಿಕೆಯ ಮೊದಲ ಡೋಸ್ ನೀಡಲಾಗಿದೆ. ಲಸಿಕೆ ವಂಚಿತರಾದ ಮಕ್ಕಳು ಕೇವಲ 21,310 ಮಾತ್ರ ಎಂದು ಆರೋಗ್ಯ ನಿರ್ವಹಣಾ ಮಾಹಿತಿ ವ್ಯವಸ್ಥೆ (ಎಚ್‌ಎಂಐಎಸ್) ತಿಳಿಸಿದೆ' ಎಂದು ಕೇಂದ್ರ ಸರ್ಕಾರ ತನ್ನ ಪ್ರಕಟಣೆಯಲ್ಲಿ ಹೇಳಿದೆ.

'ಇದರ ಜತೆಗೆ ಲಸಿಕೆ ಪಡೆಯದ, ಭಾಗಶಃ ಲಸಿಕೆ ಪಡೆದ ಮಕ್ಕಳಿಗೆ ತಪ್ಪಿಹೋಗಿರುವ ಡೋಸ್‌ಗಳನ್ನು ಹಾಕಲು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳೊಂದಿಗೆ ಸೇರಿ ಹಲವು ಕ್ರಮಗಳನ್ನು ಕೈಗೊಂಡಿದೆ' ಎಂದೂ ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	600

ಅಡಿಕೆ

ಬಂಟ್ವಾಳ

ಕೊಕಾ	15000-27500
ಹೊಸತು	27500-36500
ಹಳತು	43500-48500

ಹೊನ್ನಾವರ

ಹಳೆಚಾಲಿ	36000-39000
ಹೊಸಚಾಲಿ	25000-34000

ಬೆಳ್ತಂಗಡಿ

ಹೊಸತು	29400-36000
ಹಳತು	39000-43800

ಕಾರ್ಕಳ

ಹೊಸತು	25000-36500
ಹಳತು	30000-48500

ಪುತ್ತೂರು

ಕೊಕಾ	11000-25000
ಹೊಸತು	27000-36500

ಶಿರಸಿ

ಬೆಟ್ಟೆ	31699-36699
ಬಿಳಿಗೋಟು	23199-35609
ಚಾಲಿ	38111-40708
ಕೆಂಪುಗೋಟು	30699-32414
ರಾಶಿ	44099-47709

ಸೊರಬ

ಸಿಪ್ಪೆಗೋಟು	20313-21313
ರಾಶಿ	41509-46509

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	--	11300	-	170.95 ಸೆಂಟ್ಸ್
ಎಸಿ	--	6500	-	
ಆರ್‌ಪಿ	--	10000	-	ಲಂಡನ್
ಆರ್‌ಸಿ	--	244 on OT	-	2521 ಡಾಲರ್ಸ್

ಹರಳು, ಚಿನ್ನಾಭರಣ ರಫ್ತು ಇಳಿಕೆ

ನವದೆಹಲಿ (ಪಿಟಿಐ): ಭಾರತದಿಂದ ಹರಳು ಮತ್ತು ಚಿನ್ನಾಭರಣ ರಫ್ತು ಅಕ್ಟೋಬರ್‌ನಲ್ಲಿ ಶೇ 11.49ರಷ್ಟು ಇಳಿಕೆ ಕಂಡು ₹22,873 ಕೋಟಿಗೆ ತಲುಪಿದೆ ಎಂದು ಹರಳು ಮತ್ತು ಚಿನ್ನಾಭರಣ ರಫ್ತು ಉತ್ತೇಜನ ಮಂಡಳಿ (ಜಿಜೆಇಪಿಸಿ) ತಿಳಿಸಿದೆ.

2022ರ ಅಕ್ಟೋಬರ್‌ನಲ್ಲಿ ₹25,844 ಕೋಟಿ ಮೌಲ್ಯದ ಹರಳು ಮತ್ತು ಚಿನ್ನಾಭರಣ ರಫ್ತು ಆಗಿತ್ತು ಎಂದು ಅದು ಹೇಳಿದೆ.

ಅಮೆರಿಕ ಸೇರಿದಂತೆ ಪ್ರಮುಖ ಮಾರುಕಟ್ಟೆಗಳಲ್ಲಿ ಬೇಡಿಕೆ ಕಡಿಮೆ ಆಗಿದೆ. ಇದಲ್ಲದೆ ವಜ್ರದ ಪೂರೈಕೆಗೆ ಮಿತಿ ಇರುವುದು ಸಹ ರಫ್ತು ಕಡಿಮೆ ಆಗುವಂತೆ ಮಾಡಿದೆ. ಕ್ರಿಸ್‌ಮಸ್ ವೇಳೆ ಬೇಡಿಕೆಯು ಹೆಚ್ಚಾಗುವ ಭರವಸೆ ಇದೆ ಎಂದು ಮಂಡಳಿಯ ಅಧ್ಯಕ್ಷ ವಿಪುಲ್ ಶಾ ಹೇಳಿದ್ದಾರೆ.



ಕಟ್ ಮತ್ತು ಪಾಲಿಷ್ ಆಗಿರುವ ವಜ್ರದ ರಫ್ತು ಈ ವರ್ಷದ ಅಕ್ಟೋಬರ್‌ನಲ್ಲಿ ಶೇ 32.7ರಷ್ಟು ಇಳಿಕೆ ಆಗಿದ್ದು ₹10,495 ಕೋಟಿಯಷ್ಟು ಆಗಿದೆ. 2022ರ ಅಕ್ಟೋಬರ್‌ನಲ್ಲಿ ₹15,594 ಕೋಟಿಯಷ್ಟು ರಫ್ತು ಆಗಿತ್ತು.

ಮುಂಬೈ ಧಾರಣೆ

ಶೇಂಗಾ

18-11-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1590)
ಒಂದು ವಾರದ ಡೆಲಿವರಿ	1575 (1585)
ಸೋಯಾ ಕಚ್ಚಾ	930 (935)
ಪಾಮ್ ವಾರದ ಡೆಲಿವರಿ	840 (838)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 60,700 (60,950)

ಬೆಳ್ಳಿ ಕೆ.ಜಿ 73,050 (73,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಾಲ್ದೀವ್ಸ್ ಅಧ್ಯಕ್ಷರಾಗಿ ಮೊಹಮ್ಮದ್ ಮುಯಿಝು ಅಧಿಕಾರಕ್ಕೆ

ಭಾರತೀಯ ಸೇನೆ ಹೊರಹಾಕುವ ಸಂಕಲ್ಪ

ಮಾಲೆ (ಪಿಟಿಐ): ಕಾರ್ಯತಂತ್ರದ ಭಾಗವಾಗಿ ಮಹತ್ವ ಪಡೆದಿರುವ ಹವಳ ದ್ವೀಪ ರಾಷ್ಟ್ರ ಮಾಲ್ದೀವ್ಸ್‌ನಲ್ಲಿ ನೆಲೆಗೊಂಡಿರುವ ಭಾರತೀಯ ಸೇನಾ ಪಡೆಗಳನ್ನು ವಾಪಸ್ ಕಳುಹಿಸುವ ಸಂಕಲ್ಪವನ್ನು ನೂತನ ಅಧ್ಯಕ್ಷ ಮೊಹಮ್ಮದ್ ಮುಯಿಝು ಪುನರುಚ್ಚರಿಸಿದ್ದಾರೆ.

ದೇಶದ 8ನೇ ಅಧ್ಯಕ್ಷರಾಗಿ ಶುಕ್ರವಾರ ಅಧಿಕಾರ ಸ್ವೀಕರಿಸಿದ, 45 ವರ್ಷದ ಮುಯಿಝು, ಹೊಸ ಸರ್ಕಾರಕ್ಕೆ ಅಭೂತಪೂರ್ವ ಬೆಂಬಲ ತೋರಿದ ಭಾರತ ಸೇರಿದಂತೆ ವಿಶ್ವದ 49 ರಾಷ್ಟ್ರಗಳ ಪ್ರತಿನಿಧಿಗಳಿಗೆ ಧನ್ಯವಾದ ಸಲ್ಲಿಸಿದರು. ಜತೆಗೆ, ವಿಶ್ವ ಸಮುದಾಯದೊಂದಿಗೆ ತಮ್ಮ ದೇಶವು ಹೊಂದಿರುವ ಬಾಂಧವ್ಯ ಮತ್ತು ನೀತಿಗಳನ್ನು ಮುಂದುವರಿಸಿಕೊಂಡು ಹೋಗಲು ಬದ್ಧವಾಗಿದೆ ಎಂದೂ ಹೇಳಿದರು.



ಮೊಹಮ್ಮದ್ ಮುಯಿಝು

'ಹಿಂದೂ ಮಹಾಸಾಗರದಲ್ಲಿ ನೆಲೆಗೊಂಡಿರುವ ಯಾವುದೇ ವಿದೇಶಿ ಮಿಲಿಟರಿ ಉಪಸ್ಥಿತಿಯಿಂದ ದ್ವೀಪ ಸಮೂಹ ರಾಷ್ಟ್ರ ಮಾಲ್ದೀವ್ಸ್ ಅನ್ನು ಮುಕ್ತವಾಗಿಸಲು, ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವ ಸಂರಕ್ಷಿಸಲು ದೃಢವಾದ ಬದ್ಧತೆ ಹೊಂದಿದ್ದೇನೆ' ಎಂದರು.

ಮುಯಿಝು ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಭಾರತದ ಸಚಿವ ಕಿರಣ್ ರಿಜಿಜು ಸೇರಿದಂತೆ ಹಲವು ವಿದೇಶಿ ಗಣ್ಯರು ಭಾಗವಹಿಸಿದ್ದರು.

ಚೀನಾ ಪರ ಒಲವು ಹೊಂದಿರುವ ಮುಯಿಝು ತಾವು ಅಧ್ಯಕ್ಷರಾಗಿ ಆಯ್ಕೆಯಾದಾಗ ವಿಜಯೋತ್ಸವದ ರ್‍ಯಾಲಿಯಲ್ಲೂ ಈ ಸಂದೇಶ ನೀಡಿದ್ದರು. ಭಾರತವು ಮಾಲ್ದೀವ್ಸ್‌ನಲ್ಲಿ ಸೇನಾ ಪಡೆ ಹೊಂದಿರುವ ಏಕೈಕ ದೇಶವೆನಿಸಿದೆ. ತನ್ನ ವಿಶಾಲ ಸಾಗರದ ಗಸ್ತು ನಡೆಸಲು ಮಾಲ್ದೀವ್ಸ್‌ಗೆ ಉಡುಗೊರೆಯಾಗಿ ನೀಡಿದ ನಾಲ್ಕು ಬೇಹುಗಾರಿಕಾ ವಿಮಾನಗಳನ್ನು ನಿರ್ವಹಿಸಲು ಭದ್ರತಾ ಸಿಬ್ಬಂದಿಯ ಸಣ್ಣ ಘಟಕವನ್ನು ಭಾರತವು ಈ ದ್ವೀಪ ರಾಷ್ಟ್ರದಲ್ಲಿ ನಿಯೋಜಿಸಿದೆ. ಮುಯಿಝು ಅವರು ತಮ್ಮ ಚುನಾವಣಾ ಪ್ರಚಾರದಲ್ಲಿ ಈ ವಿಚಾರವಾಗಿ 'ಇಂಡಿಯಾ-ಔಟ್' ವಿಷಯ ಬಳಸಿಕೊಂಡಿದ್ದರು.

ಎಸ್ಕಾಂ: 98 ಪ್ರದೇಶದಲ್ಲಿ ಆನ್‌ಲೈನ್ ಸೇವೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಐದು ಎಸ್ಕಾಂಗಳ ವ್ಯಾಪ್ತಿಯ ನಗರ ಹಾಗೂ ಪಟ್ಟಣದ 98 ಪ್ರದೇಶಗಳಲ್ಲಿ ನ.24ರಿಂದ 26ರ ವರೆಗೆ ಆನ್‌ಲೈನ್ ಆಧಾರಿತ ಸೇವೆ ಸ್ಥಗಿತಗೊಳಿಲಾಗುತ್ತಿದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ಮಾಹಿತಿ ತಂತ್ರಜ್ಞಾನ ಸೇವೆಗೆ ಸಂಬಂಧಿಸಿದಂತೆ ತಂತ್ರಾಂಶ ಹಾಗೂ ಹಾರ್ಡ್‌ವೇರ್ ಉನ್ನತೀಕರಿಸಲಾಗುತ್ತಿದ್ದು ಆನ್‌ಲೈನ್ ಆಧಾರಿತ ಸೇವೆ ಸ್ಥಗಿತಗೊಳಿಸಲಾಗುತ್ತಿದೆ. ಬೆಂಗಳೂರು, ಮೈಸೂರು, ಬೆಳಗಾವಿ, ಹುಬ್ಬಳ್ಳಿ-ಧಾರವಾಡ , ಮಂಗಳೂರು, ಕಲಬುರಗಿ ವ್ಯಾಪ್ತಿಯ ನಗರ, ಪಟ್ಟಣ ಪ್ರದೇಶಗಳಲ್ಲಿ ಮೂರು ದಿನ ನಗದು ಪಾವತಿ ಕೌಂಟರ್‌ಗಳಲ್ಲಿ ಸೇವೆಗಳು ಲಭ್ಯವಿರುವುದಿಲ್ಲ.

ಆನ್‌ಲೈನ್ ಸೇವೆಗಳಾದ ಹೊಸ ವಿದ್ಯುತ್ ಸಂಪರ್ಕ, ಹೆಸರು–ಲೋಡ್ ಬದಲಾವಣೆ, ನಗದು ಪಾವತಿ, ಆನ್‌ಲೈನ್ ಮೂಲಕ ವಿದ್ಯುತ್ ಬಿಲ್ ಪಾವತಿಗಳು ಇರುವುದಿಲ್ಲ. ಈ ಅವಧಿಯಲ್ಲಿ ವಿದ್ಯುತ್ ಸರಬರಾಜು ಸೇವೆಗಳಲ್ಲಿ ಯಾವುದೇ ವ್ಯತ್ಯಯ ಇರುವುದಿಲ್ಲ.

ಸೇವೆ ಲಭ್ಯವಿಲ್ಲದ ಪಟ್ಟಣಗಳು


- **ಬೆಸ್ಕಾಂ:** ಬೆಂಗಳೂರು ನಗರ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಕೋಲಾರ, ಚಿಂತಾಮಣಿ, ಕನಕಪುರ, ರಾಮನಗರ, ದಾವಣಗೆರೆ-1, ದಾವಣಗೆರೆ–2, ಚಿತ್ರದುರ್ಗ, ತುಮಕೂರು–1, ತುಮಕೂರು–2, ಕ್ಯಾತ್ಸಂದ್ರ, ಶಿರಾ, ಚನ್ನಪಟ್ಟಣ, ಆನೇಕಲ್, ಮುಳಬಾಗಿಲು, ಬಂಗಾರಪೇಟೆ, ಹೊಸಕೋಟೆ, ದೊಡ್ಡಬಳ್ಳಾಪುರ, ಕೆಜಿಎಫ್, ಚಳ್ಳಕೆರೆ, ಹರಪನಹಳ್ಳಿ, ಹರಿಹರ, ಹಿರಿಯೂರು, ತಿಪಟೂರು, ಗೌರಿಬಿದನೂರು.
- **ಸೆಸ್ಕ್:** ಮಳವಳ್ಳಿ, ನಂಜನಗೂಡು, ಮೈಸೂರು, ಮಂಡ್ಯ, ಹುಣಸೂರು, ಚಾಮರಾಜನಗರ, ಕೆ.ಆರ್. ನಗರ, ಅರಸೀಕೆರೆ, ಮಡಿಕೇರಿ, ಕೊಳ್ಳೇಗಾಲ, ಹಾಸನ, ಚನ್ನರಾಯಪಟ್ಟಣ.
- **ಮೆಸ್ಕಾಂ:** ಬಂಟ್ವಾಳ, ಕಡೂರು, ತರೀಕೆರೆ, ಪುತ್ತೂರು, ಉಡುಪಿ, ಮಂಗಳೂರು, ಶಿಕಾರಿಪುರ, ಸಾಗರ, ಶಿವಮೊಗ್ಗ, ಭದ್ರಾವತಿ, ಚಿಕ್ಕಮಗಳೂರು.
- **ಜೆಸ್ಕಾಂ:** ಮಾನ್ವಿ, ಸಿಂಧನೂರು, ಬೀದರ್, ಗಂಗಾವತಿ, ಕಲಬುರಗಿ, ಸೇಡಂ, ಬಸವಕಲ್ಯಾಣ, ವಾಡಿ, ಶಹಬಾದ್, ಶಹಾಪುರ, ಶಿರಗುಪ್ಪ, ಕಂಪ್ಲಿ, ಯಾದಗಿರಿ, ರಾಯಚೂರು, ಬಳ್ಳಾರಿ, ಕೊಪ್ಪಳ, ಹುಮ್ನಾಬಾದ್, ಹೊಸಪೇಟೆ.
- **ಹೆಸ್ಕಾಂ:** ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಕಾರವಾರ, ನಿಪ್ಪಾಣಿ, ಜಮಖಂಡಿ, ಬೈಲಹೊಂಗಲ, ಲಕ್ಷ್ಮೇಶ್ವರ, ನರಗುಂದ, ರಾಮದುರ್ಗ, ಚಿಕ್ಕೋಡಿ, ಗುಳೇದಗುಡ್ಡ, ಮಹಾಲಿಂಗಪುರ, ಅಥಣಿ, ಭಟ್ಕಳ, ದಾಂಡೇಲಿ, ಇಂಡಿ, ಸವದತ್ತಿ, ಸವಣೂರು, ಶಿರಸಿ, ಬಾಗಲಕೋಟೆ, ರಬಕವಿ–ಬನಹಟ್ಟಿ, ಗದಗ, ಗೋಕಾಕ್, ಹಾವೇರಿ, ಇಳಕಲ್, ರಾಣೆಬೆನ್ನೂರು, ವಿಜಯಪುರ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು



ಸೆಲೆಬ್ರಿಟಿ LIVE ಬೆಳಿಗ್ಗೆ 11 ಗಂಟೆಗೆ

ಡಾರ್ಲಿಂಗ್ ಕೃಷ್ಣ ನಟ, ಸೋನಲ್ ಮಾಂಥೆರೋ ನಟಿ ಅದ್ವಿತಿ ಶೆಟ್ಟಿ ನಟಿ

ಪ್ರಜಾವಾಣಿ ಜೊತೆ ಶುಗರ್ ಫ್ಯಾಕ್ಟರಿ ತಂಡ

ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಿಧನ ವಾರ್ತೆ

ಆರ್‌ಬಿಐ ಮಾಜಿ ಗವರ್ನರ್ ಎಸ್. ವೆಂಕಟರಮಣನ್

ಚೆನ್ನೈ (ಪಿಟಿಐ): ಅನಾರೋಗ್ಯದ ಕಾರಣ ಆರ್‌ಬಿಐನ ಮಾಜಿ ಗವರ್ನರ್ ಎಸ್. ವೆಂಕಟರಮಣನ್ (92) ಅವರು ಶನಿವಾರ ನಿಧನರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

1990ರ ಡಿಸೆಂಬರ್‌ನಿಂದ 1092ರ ಡಿಸೆಂಬರ್ ಅವಧಿಯಲ್ಲಿ ಆರ್‌ಬಿಐನಲ್ಲಿ ಅವರು ಸೇವೆ ಸಲ್ಲಿಸಿದ್ದರು. ಅದಕ್ಕೂ ಮೊದಲು ಹಣಕಾಸು ಕಾರ್ಯದರ್ಶಿ ಮತ್ತು ಕರ್ನಾಟಕ ಸರ್ಕಾರದ ಸಲಹೆಗಾರರಾಗಿದ್ದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

ಉದ್ಯೋಗಾವಕಾಶ

General

ಬೆಂಗಳೂರಿನಲ್ಲಿರುವ SLV ಹೋಂ ನರ್ಸಿಂಗ್ ನಲ್ಲಿ ಕೆಲಸ ಮಾಡಲು ಹುಡುಗಿಯರು, ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು (18ರಿಂದ45). ಊಟ ವಸತಿಯೊಂದಿಗೆ ಟ್ರೈನಿಂಗ್ ಕೊಟ್ಟು ಸಂಬಳ 10000/ ರಿಂದ 20000/ ವರೆಗೆ ಕೊಡಲಾಗುವುದು. ಆಸಕ್ತಿ ಉಳ್ಳವರು ಕರೆ ಮಾಡಿ. 7019869181, 9886922255

ವಿಕೇರ್ ಹೋಮ್ ನರ್ಸಿಂಗ್: ಉಡುಪಿಯಲ್ಲಿ ರೋಗಿಯ ಆರೈಕೆಗೆ ಮಹಿಳಾ ಹೋಮ್ ನರ್ಸ್ ಬೇಕಾಗಿದ್ದಾರೆ. ವೇತನ 16,000–23,000/–. ಸಂಪರ್ಕಿಸಿ: 8792127333/ 9035727798.

Marketing & Sales

MALE SALES executives Sal: 15k to 50k Cont +91 9346202112 Email- staffingcharminar@gmail.com www.charminarbrush.com Hegade Nagar Bangalore.

Multiple Vacancy

IMMEDIATE PLACEMENT for Banking Collection process Fresher Welcome. Collection Executive, Qualification : Min 10th Pass & 2 Wheeler Must. Salary: Up to 20,000+ Incentives. 8867443657/ 8762900934, Telecallers :Language to Speak- Kannada. Salary: Up to 15,000+ incentives. PG accommodation for 3 months for outside Bangalore people. 9791121135. 119/1, 2nd Floor,Srinidhi Complex, 11th Cross, Malleshwaram, Bangalore- 560003

ಪ್ರಜಾವಾಣಿ To place your ad in Prajavani Classifieds ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿರಿ: 9845114560 : 9731810277 9901641752 : 9886213331 080 - 45557163 / 164

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Wanted

ಯುವಕ ಯುವತಿಯರಿಗೆ ಹೆಲ್ಪರ್ ಕೆಲಸ ಖಾಲಿ ಇದೆ. ಊಟ ವಸತಿಯೊಂದಿಗೆ ತಿಂಗಳಿಗೆ ವೇತನ 20000 ರಿಂದ 25000/-ವರೆಗೆ. ವಿಳಾಸ : ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು ಬೆಂಗಳೂರು. 7349494852

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Mysore

1250 SOUTH east facing plot is for sale in SBM officer's enclave, HONNASIRI Gardens, Mysuru. Contact No. 8861261899

ವ್ಯಾಪಾರ

Business Offers

Business For Sale

FOR SALE Haswini electric vehicles startup manufacturing company Bangalore 500km long range for details view www.haswini.com, contact 8790471108

ವೈವಾಹಿಕ

Grooms Wanted

Brahmin

30ವರ್ಷ,ವಯಸ್ಸಿನ ಮಕ್ಕಳಿಲ್ಲದ ಸುಂದರ, ವಿಚ್ಛೇದಿತ ಸಂಪ್ರದಾಯಸ್ಥ ಬಿಸಿಎ ಓದಿರುವ,ವಧುವಿಗೆ ಉದ್ಯೋಗಸ್ಥ, ಕರ್ನಾಟಕದ ಶ್ರಿಮತಸ್ಥಬ್ರಾಹ್ಮಣ ವರ ಬೇಕಾಗಿದ್ದಾರೆ. ವಿವರಗಳೊಂದಿಗೆ ವಾಟ್ಸಪ್ಪ್ ಕಳಿಸಿ: 9342026162 bruhathnadus@gmail.com

ಭವಿಷ್ಯ

Astrology

ಓಂ ಶ್ರೀ.ಮಹಾಗಣಪತಿ ಜೋತಿಷ್ಯಾಲಯ, ಮಹಾರಾಷ್ಟ್ರದ ಪ್ರಖ್ಯಾತ ಜೋತಿಷ್ಯರು, ಕನ್ನಡ,ಹಿಂದಿ, ಮರಾಠಿ ಭಾಷೆಯಲ್ಲಿ ಭವಿಷ್ಯವನ್ನು ಹೇಳುತ್ತಾರೆ, ಸ್ತ್ರೀ/ ಪುರುಷ ವಶೀಕರಣ,ಕೆಲವೇ ದಿನಗಳಲ್ಲಿ ಪರಿಹಾರ, ನಿಮ್ಮ ಹಲವಾರು ಸಮಸ್ಯೆಗಳಿಗೆ ಪರಿಹಾರ,ಕೆಲಸ ಆಗದಿದ್ದಲ್ಲಿ ಹಣ ವಾಪಸ್ಸ, ಗಣೇಶರಾವ್ ಶಾಸ್ತ್ರಿ ಜಿ: 9226506660/ 9960147770

ಪ್ರವಾಸ

Travel

3.12.2023 ಗುಜರಾತ್, ಮಧ್ಯಪ್ರದೇಶ. 23.12.2023 ಗುರುವಾಯೂರು, ಮುನ್ನಾರ್, ಕೊಚ್ಚಿನ್, ಅಲಪೇ, ಜಠಾಯು, ತಿರುವನಂತಪುರಂ, ಕನ್ಯಾಕುಮಾರಿ,ರಾಮೇಶ್ವರಂ, ಮದುರೈ ಕರ್ನಾಟಕ ಹೆರಿಟೇಜ್ ಟೂರ್ಸ್(ಹನುಮಂತನಗರ) 9845035349, 9482435755

Holiday Package Tours

28.1.2024, 2.2.2024, 10ದಿನ ಅಯೋಧ್ಯ ವಿಶೇಷ ಪ್ರವಾಸ,ಲಕ್ನೋ,ನೈಮಿಷಾರಣ್ಯ ಅಯೋಧ್ಯರಾಮಮಂದಿರ ಅಲಹಾಬಾದ್,ಗಯಾ ಬುದ್ಧಗಯಾ,ಕಾಶಿ,ಆಗ್ರಾ ಮಥುರ,ದೆಹಲಿ Twite Holidays Pvt.Ltd. 8088559962, 7975189234

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 21/12 ಗುಜರಾತ್, ಮಧ್ಯಪ್ರದೇಶ 4 ಜ್ಯೋತಿರ್ಲಿಂಗ ದರ್ಶನ. 4/12 ಪುರಿ ಜಗನ್ನಾಥ್, ಕೋನಾರ್ಕ್, ಭುನೇಶ್ವರ.9964527782,95 91017782


ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು | Log on to : https://homages.deccanherald.com or Scan QR code to access booking form

ನಾಲ್ಕನೇ ವರ್ಷದ ವಾರ್ಷಿಕ ಪುಣ್ಯಸ್ಮರಣೆಯ ಸವಿನೆನಪು



ಶ್ರೀಯುತ ಬಿ. ಮುನಿಕೃಷ್ಣಪ್ಪನವರು (ಪಿ.ಡಬ್ಲ್ಯೂ.ಡಿ. ಕಂಟ್ರಾಕ್ಟರ್)

ನನ್ನ ಪೂಜ್ಯ ಪತಿಯವರಾದ ಶ್ರೀಯುತ ಬಿ. ಮುನಿಕೃಷ್ಣಪ್ಪನವರು ನಮ್ಮನ್ನು ಅಗಲಿ (ದಿನಾಂಕ: 19–11–2019) ಇಂದಿಗೆ **ನಾಲ್ಕು** ವರ್ಷಗಳು ಕಳೆದಿದ್ದು ಅವರು ತೋರಿಸಿಕೊಟ್ಟ ಉತ್ತಮ ಮಾರ್ಗದರ್ಶನ ಹಾಗೂ ಅವರ ಆದರ್ಶಗಳು ಇಂದಿಗೂ ನಮಗೆ ದಾರಿದೀಪವಾಗಿದೆ. ಅವರನ್ನು ಸದಾ ಹೃದಯಗಳಲ್ಲಿ ಪೂಜಿಸುವ ಶ್ರೀಮತಿ ಅನ್ನಪೂರ್ಣಮ್ಮನವರು ಮಾಜಿ ಪುರಸಭಾ ಅಧ್ಯಕ್ಷರು, ವಿಜಯಪುರ, ಜೆ. ಸಿ. ಬಡಾವಣೆ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬ ವರ್ಗದವರು

ಪುಣ್ಯಸ್ಮರಣೆ



"ಗತಿಸಿದರೂ ವರ್ಷಗಳು ನಿಮ್ಮ ನೆನಪು ಅಮರ" ಕೋರುವೆವು ಸದಾ ನಿಮ್ಮ ನಿರಂತರ ಆಶೀರ್ವಾದ

ಕೆ.ಎಂ.ಚಿಕ್ಕಪ್ಪಯ್ಯ (ನಿವೃತ್ತ ತಹಸೀಲ್ದಾರ್)

ದುಃಖತಪ್ತರು: ನಾರಾಯಣಮ್ಮ ಕುಟುಂಬದವರು ಕೆ.ಎಂ.ಸಿ ಶಾಲಾ ಆಡಳಿತ ಮಂಡಳಿ

ಆರನೇ ವರ್ಷದ ಸವಿನೆನಪು



ಶ್ರೀಮತಿ ಡಿ.ಲಕ್ಷ್ಮಿರವರು

ಜನನ : 24–10–1959 ಮರಣ : 19–11–2017

ಸದಾ ನಿಮ್ಮ ನೆನಪಿನಲ್ಲಿರುವ ಪತಿ: ಕೆ.ಸುಬ್ರಮಣ್ಯಂ ನಾಯ್ಡು

ಮಾಜಿ ಅಧ್ಯಕ್ಷರು: ಕಮ್ಮವಾರಿ ಸಂಘಂ ಬೆಂಗಳೂರು ಮತ್ತು ಕುಟುಂಬ ವರ್ಗದವರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ. ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 | Tanveer: +91 9886213331 | Ravichandra: +91 9901641752 | Anitha: +91 9900428036

LOOKING FOR JOB OPPORTUNITY Refer Classifieds on Wednesday



ವಿಶ್ವಕಪ್ ಕ್ರಿಕೆಟ್ ಫೈನಲ್ ಇಂದು: ಮೊಟೇರಾ ಅಂಗಳದಲ್ಲಿ ಭಾರತಕ್ಕೆ ಆಸ್ಟ್ರೇಲಿಯಾ ಸವಾಲು

ಜಗದ ಕಣ್ಣು ಭಾರತದತ್ತ ತಂಡದ ಚಿತ್ತ ಕಿರೀಟದತ್ತ



ವಿರಾಟ್ ಕೊಹ್ಲಿ



ಡೇವಿಡ್ ವಾರ್ನರ್

• ಗಿರೀಶ ದೊಡ್ಡಮನಿ

ಅಹಮದಾಬಾದ್: ಸಾಬರಮತಿ ನದಿಯ ಮೇಲಿಂದ ಬೀಸಿ ಬರುವ ತಂಗಾಳಿಗೂ ಈಗ ಕ್ರಿಕೆಟ್ ಜ್ವರ ಆವರಿಸಿದೆ. ಭಾನುವಾರ ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳ ಹಣಾಹಣಿಯ ಕಾವು ಅಹಮದಾಬಾದಿಗಷ್ಟೇ ಅಲ್ಲ ಇಡೀ ದೇಶವನ್ನೇ ಆವರಿಸಿದೆ.

ಈ ಪಂದ್ಯ ವೀಕ್ಷಿಸಲು ದೇಶ, ವಿದೇಶಗಳಿಂದ ಪ್ರವಾಹೋಪಾದಿಯಲ್ಲಿ ಬರುತ್ತಿರುವವರನ್ನು ಸ್ವಾಗತಿಸಲು ಗರ್ಭಾ ಕಲಾವಿದರು ದಣಿವರಿಯದೇ ದಾಂಡಿಯಾ ನೃತ್ಯ ಮಾಡುತ್ತಿದ್ದಾರೆ. ಎಲ್ಲೆಡೆ ನವರಾತ್ರಿ ವಾತಾವರಣ ಗರಿಗೆದರಿದೆ.

ದೀಪಾವಳಿ ಮುಗಿದರೂ ಪಟಾಕಿ ಅಂಗಡಿಗಳಿನ್ನೂ ಬಂದ್ ಆಗಿಲ್ಲ. ಭಾರತ ಗೆಲ್ಲುವ ವಿಶ್ವಾಸದಲ್ಲಿ ಜನರೂ ಪಟಾಕಿ ಖರೀದಿಸುತ್ತಿದ್ದಾರೆ. ರಸ್ತೆಯ ಇಕ್ಕೆಲಗಳಲ್ಲಿರುವ ಗೋಡೆ, ಕಂಬಗಳು ಮತ್ತು ವಾಹನಗಳ ಮೇಲೆ 'ಜೀತೇಗಾ ಭಾರತ್' (ಜಯಿಸಲಿದೆ ಭಾರತ) ಎಂಬ ಬರಹಗಳು ಹಲವು ಬಣ್ಣಗಳಲ್ಲಿ ಕಣ್ಮನ ಸೆಳೆಯುತ್ತಿವೆ. ಕ್ರೀಡಾಂಗಣದಲ್ಲಿ ಸೇರಲಿರುವ 1.30 ಲಕ್ಷ ಪ್ರೇಕ್ಷಕರಿಗಾಗಿ ಕೇಸರಿ ಬಣ್ಣದಲ್ಲಿ ಕಂಗೊಳಿಸುತ್ತಿರುವ ಕುರ್ಚಿಗಳೂ ಸಿದ್ಧವಾಗಿವೆ.

ಭಾನುವಾರ ರಾತ್ರಿ ಐದು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡವನ್ನು ಹಣಿದು ರೋಹಿತ್ ಶರ್ಮಾ ಬಳಗವು ಟ್ರೋಫಿ ಎತ್ತಿ ಹಿಡಿಯುವುದೇ ಎಂಬ ಮಾತುಗಳೇ ಬಹುತೇಕ ಎಲ್ಲ ವೇದಿಕೆಗಳಲ್ಲಿ ಚರ್ಚಾವಸ್ತುವಾಗಿದೆ. ಲೀಗ್ ಹಂತದ ಎಲ್ಲ ಒಂಬತ್ತು ಪಂದ್ಯಗಳನ್ನು ಮತ್ತು ಸೆಮಿಫೈನಲ್‌ನಲ್ಲಿ ಭರ್ಜರಿ ಜಯದೊಂದಿಗೆ ಇಲ್ಲಿಗೆ ಬಂದಿರುವ ಭಾರತವೇ ಗೆಲ್ಲುವ ಫೇವರಿಟ್ ತಂಡವಾಗಿದೆ.

ಏಕೆಂದರೆ; ಈ ತಂಡವು ಇದುವರೆಗೆ ಆಡಿರುವ ಆಟವೇ ಆ ರೀತಿಯದ್ದು. ಹಿಂದೆಂದೂ ಕಾಣದಂತಹ ಆಟ ಇದು ಎಂದು ದಿಗ್ಗಜ ಕ್ರಿಕೆಟಿಗರೇ ಬಾಯ್ತುಂಬ ಹೊಗಳಿದ್ದಾರೆ. ಈ ರೀತಿಯ ಆಟ ಮೂಡಿಬರಲು ಏನು ಕಾರಣಗಳಿರಬಹುದು?

2011ರಲ್ಲಿ ವಿಶ್ವಕಪ್ ಗೆದ್ದ ಭಾರತ ತಂಡಕ್ಕೆ ರೋಹಿತ್ ಶರ್ಮಾ ಆಯ್ಕೆಯೇ ಆಗಿರಲಿಲ್ಲ. ಈಗ ಅವರೇ ನಾಯಕರಾಗಿದ್ದಾರೆ. 36 ವರ್ಷದ ರೋಹಿತ್ ಅವರಿಗೆ ಬಹುಶಃ ಇದು ಕೊನೆಯ ವಿಶ್ವಕಪ್ ಟೂರ್ನಿಯೂ ಹೌದು. ಅವರು ಈ ವಿಶ್ವ ವಿಜಯಕ್ಕಾಗಿ ಹಂಬಲಿಸಿರುವುದನ್ನು ಬ್ಯಾಟಿಂಗ್ ಮೂಲಕ ತೋರಿಸುತ್ತಿದ್ದಾರೆ. ಮೊದಲ ಪಂದ್ಯದಲ್ಲಿ ಇದೇ ಆಸ್ಟ್ರೇಲಿಯಾ ಎದುರು ಸೊನ್ನೆ ಸುತ್ತಿದ್ದ ರೋಹಿತ್ ನಂತರದ ಪಂದ್ಯಗಳಲ್ಲಿ ಸ್ಫೋಟಕ ಆರಂಭ ನೀಡಿದ್ದಾರೆ. ಹೊಸಚೆಂಡಿನೊಂದಿಗೆ ದಾಳಿಗಿಳಿಯುವ ಬೌಲರ್‌ಗಳ ಚಳಿ ಬಿಡಿಸಿದ್ದಾರೆ.

ಇನ್ನು ಯುವ ಆಟಗಾರ ಶುಭಮನ್ ಗಿಲ್ 19 ವರ್ಷದೊಳಗಿನವರ ವಿಶ್ವಕಪ್ ವಿಜೇತ ತಂಡದ ಆಟಗಾರ. ಸೀನಿಯರ್ ತಂಡದ ಟ್ರೋಫಿಗೂ ಮುತ್ತಿಡುವ ಕನಸು ಈ ಹುಡುಗನದ್ದು. ಗಾಯದ ಕಾರಣಕ್ಕೆ, ಫಾರ್ಮ್ ಕೊರತೆಯಿಂದಾಗಿ ಅಪಾರ ಟೀಕೆಗಳನ್ನು ಎದುರಿಸಿಯೂ ಮರಳಿ ಬಂದು ವಿಕೆಟ್‌ಕೀಪಿಂಗ್‌ನಲ್ಲಿ ಮಿಂಚುತ್ತಿರುವ ಕನ್ನಡಿಗ ಕೆ.ಎಲ್. ರಾಹುಲ್, ಬೆಂಕಿಚೆಂಡುಗಳನ್ನೇ ಪ್ರಯೋಗಿಸುತ್ತಿರುವ ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ, ಮಿಂಚಿನ ಫೀಲ್ಡರ್ ಮತ್ತು ಆಲ್‌ರೌಂಡರ್ ರವೀಂದ್ರ ಜಡೇಜ, ಛಲದಂಕಮಲ್ಲ ಕುಲದೀಪ್ ಯಾದವ್, ಹೈದರಾಬಾದಿ ಮುತ್ತು ಮೊಹಮ್ಮದ್ ಸಿರಾಜ್ ಅವರಿಗೆ ಮೊದಲ ವಿಶ್ವಕಪ್ ಕಪ್ ಗೆಲ್ಲುವ ಛಲ.

ರನ್ ಯಂತ್ರ ವಿರಾಟ್ ಕೊಹ್ಲಿ ಅವರಿಗೆ ತಮ್ಮ ಅನುಭವವನ್ನು ಧಾರೆ ಎರೆದು ಎರಡನೇ ಬಾರಿ ವಿಶ್ವಕಪ್ ಗೆದ್ದ ತಂಡದ 'ದಿಗ್ಗಜ'ನಾಗುವ ಗುರಿ. ಅಂತಿಮ ಹನ್ನೊಂದರಲ್ಲಿ ಆಡುವ ಅವಕಾಶ ಹೆಚ್ಚು ಸಿಗದಿದ್ದರೂ ಡ್ರೆಸ್ಸಿಂಗ್ ಕೋಣೆಯ 'ಆರೋಗ್ಯ'ವನ್ನು ಉಲ್ಲಾಸಮಯಗೊಳಿಸುವುದರಲ್ಲಿ ಭಾಗಿಯಾದ ಆರ್.ಅಶ್ವಿನ್, ಶಾರ್ದೂಲ್ ಠಾಕೂರ್, ಇಶಾನ್ ಕಿಶನ್ ಮತ್ತು ನೆರವು ಸಿಬ್ಬಂದಿಗೂ ಸಾರ್ಥಕ ಕ್ಷಣಗಳ ಪಾಲುದಾರರಾಗುವ ಹಂಬಲವಿದೆ.

ಈ ಭಾವನಾತ್ಮಕ ಅಂಶಗಳು, ಪ್ರತಿಭೆಗಳ ಸಾಮರ್ಥ್ಯವನ್ನು ಮಿಶ್ರಗೊಳಿಸಿ ಸಮರ್ಥ ತಂಡವನ್ನು ರೂಪಿಸಿದ ತೆರೆಮರೆಯ ಹಿಂದಿರುವ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಇದ್ದಾರೆ. ತಾವು ನಾಯಕರಾಗಿದ್ದಾಗ ಕೈತಪ್ಪಿದ್ದ ಯಶಸ್ಸನ್ನು 'ದ್ರೋಣಾಚಾರ್ಯ'ನಾಗಿ ರೋಹಿತ್ ಬಳಗಕ್ಕೆ ಕೊಡಿಸುವ ಛಲ ಅವರದ್ದು.

ಆದರೆ ಐದು ಪ್ರಶಸ್ತಿ ಗೆದ್ದ ಅನುಭವ ಇರುವ ಆಸ್ಟ್ರೇಲಿಯಾವನ್ನು ಮಣಿಸುವುದು ಸುಲಭವಲ್ಲ ಎಂಬುದು ಆತಿಥೇಯ ಬಳಗಕ್ಕೆ ಚೆನ್ನಾಗಿ ಗೊತ್ತಿದೆ. ಟೂರ್ನಿಯ ಮೊದಲೆರಡು ಪಂದ್ಯಗಳ ಸೋಲಿನ ನಂತರ ಪುಟಿದೆದ್ದು ಸತತ ಗೆಲುವುಗಳೊಂದಿಗೆ ಈ ಹಂತಕ್ಕೆ ಬಂದಿರುವ ಆಸ್ಟ್ರೇಲಿಯಾ ತಂಡವು ಆರನೇ ಬಾರಿ ವಿಶ್ವಕಪ್ ಜಯಿಸಲು ಕಠಿಣ ಪೈಪೋಟಿಯೊಡ್ಡುವ ತಂಡವಂತೂ ಹೌದು.

'ಹತ್ತು ಪಂದ್ಯಗಳ ಗೆಲುವುಗಳದ್ದು ಒಂದು ತೂಕವಾದರೆ, ಫೈನಲ್ ಆಟವೇ ಬೇರೆ. ಒಂದು ಸಣ್ಣ ಲೋಪ ಫಲಿತಾಂಶದ ದಿಕ್ಕು ಬದಲಿಸಿಬಿಡಬಹುದು. ಆದ್ದರಿಂದ ಹಿಂದಿನ ಸಾಧನೆಯಿಂದ ಅತಿಯಾದ ಆತ್ಮವಿಶ್ವಾಸವಾಗಲಿ, ಮುಂಬರುವ ಸವಾಲಿನ ಒತ್ತಡವಾಗಲೀ ನಮಗಿಲ್ಲ. ವರ್ತಮಾನದ ಬಗ್ಗೆ ಮಾತ್ರ ಗಮನ' ಎಂದು ನಾಯಕ ರೋಹಿತ್ ಹೇಳಿದ್ದಾರೆ.

ಡೇವಿಡ್ ವಾರ್ನರ್, ಮಿಚೆಲ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಟ್ರಾವಿಸ್ ಹೆಡ್ ಅವರ ಆಟಕ್ಕೆ ಕಡಿವಾಣ ಹಾಕುವ ಸವಾಲು ಶಮಿ ಮತ್ತು ಬೌಲಿಂಗ್ ಪಡೆಯ ಮುಂದಿದೆ. ಹ್ಯಾಜಲ್‌ವುಡ್ ಮತ್ತು ಜಂಪಾ ಅವರ ದಾಳಿಯನ್ನು ಪುಡಿಗಟ್ಟುವ ಕೆಲಸ ಬ್ಯಾಟಿಂಗ್ ಪಡೆಯಿಂದ ಆದರೆ ಸಾಬರಮತಿ ನದಿಯಲ್ಲಿ ಸಂಭ್ರಮ ಉಬ್ಬರವೇಳುವುದರಲ್ಲಿ ಅನುಮಾನವಿಲ್ಲ.

ಮುಖ್ಯಾಂಶಗಳು

- 2003ರ ಫೈನಲ್‌ನಲ್ಲಿ ಆಸ್ಟ್ರೇಲಿಯಾಕ್ಕೆ ಮಣಿದಿದ್ದ ಭಾರತ
- ಹತ್ತು ವರ್ಷಗಳಿಂದ ಐಸಿಸಿ ಟ್ರೋಫಿ ಜಯಿಸಿಲ್ಲ ಭಾರತ ತಂಡ
- ಎರಡು ಬಾರಿ ವಿಶ್ವಕಪ್ ಗೆದ್ದಿರುವ ಆತಿಥೇಯ ತಂಡ



ಮಿಚೆಲ್ ಸ್ಟಾರ್ಕ್



ಮೊಹಮ್ಮದ್ ಶಮಿ

ಫೈನಲ್‌ಗೆ ಸಾಗಿ ಬಂದ ಹಾದಿ

	ಭಾರತ		ಆಸ್ಟ್ರೇಲಿಯಾ
	ಲೀಗ್ ಹಂತ		ಲೀಗ್ ಹಂತ
1	ಆಸ್ಟ್ರೇಲಿಯಾ ಎದುರು 6 ವಿಕೆಟ್ ಜಯ	1	ಭಾರತದ ಎದುರು 6 ವಿಕೆಟ್ ಸೋಲು
2	ಅಫ್ಗಾನಿಸ್ತಾನ ವಿರುದ್ಧ 8 ವಿಕೆಟ್ ಗೆಲುವು	2	ದಕ್ಷಿಣ ಆಫ್ರಿಕಾ ಎದುರು 134 ರನ್ ಸೋಲು
3	ಪಾಕಿಸ್ತಾನ ಎದುರು 7 ವಿಕೆಟ್ ಜಯ	3	ಶ್ರೀಲಂಕಾ ವಿರುದ್ಧ 5 ವಿಕೆಟ್ ಗೆಲುವು
4	ಬಾಂಗ್ಲಾದೇಶ ಎದುರು 7 ವಿಕೆಟ್ ಜಯ	4	ಪಾಕಿಸ್ತಾನ ಎದುರು 62 ರನ್ ಜಯ
5	ನ್ಯೂಜಿಲೆಂಡ್ ವಿರುದ್ಧ 4 ವಿಕೆಟ್ ಜಯ	5	ನೆದರ್ಲೆಂಡ್ಸ್ ವಿರುದ್ಧ 309 ರನ್ ಗೆಲುವು
6	ಇಂಗ್ಲೆಂಡ್ ಎದುರು 100 ರನ್ ಜಯ	6	ನ್ಯೂಜಿಲೆಂಡ್ ಎದುರು 5 ರನ್ ಗೆಲುವು
7	ಶ್ರೀಲಂಕಾ ಎದುರು 302 ರನ್ ಗೆಲುವು	7	ಇಂಗ್ಲೆಂಡ್ ವಿರುದ್ಧ 33 ರನ್ ಜಯ
8	ದಕ್ಷಿಣ ಆಫ್ರಿಕಾ ವಿರುದ್ಧ 243 ರನ್ ಜಯ	8	ಅಫ್ಗಾನಿಸ್ತಾನ ಎದುರು 3 ವಿಕೆಟ್ ಗೆಲುವು
9	ನೆದರ್ಲೆಂಡ್ಸ್ ಎದುರು 160 ರನ್ ಗೆಲುವು	9	ಬಾಂಗ್ಲಾದೇಶ ಎದುರು 8 ವಿಕೆಟ್ ಗೆಲುವು
	ಸೆಮಿಫೈನಲ್		ಸೆಮಿಫೈನಲ್
	ನ್ಯೂಜಿಲೆಂಡ್ ಎದುರು 70 ರನ್ ಗೆಲುವು		ದ. ಆಫ್ರಿಕಾ ಎದುರು 3 ವಿಕೆಟ್ ಜಯ

ಆಸ್ಟ್ರೇಲಿಯಾ ಸಾಧನೆ

ವರ್ಷ	ಫಲಿತಾಂಶ
1975	ರನ್ನರ್ಸ್ ಅಪ್
1979	ಗುಂಪು ಹಂತ
1983	ಗುಂಪು ಹಂತ
1987	ಚಾಂಪಿಯನ್
1992	ರೌಂಡ್–ರಾಬಿನ್ ಹಂತ
1996	ರನ್ನರ್ಸ್ ಅಪ್
1999	ಚಾಂಪಿಯನ್
2003	ಚಾಂಪಿಯನ್
2007	ಚಾಂಪಿಯನ್
2011	ಕ್ವಾರ್ಟರ್‌ಫೈನಲ್
2015	ಚಾಂಪಿಯನ್
2019	ಸೆಮಿಫೈನಲ್

ಭಾರತ ಸಾಧನೆ

ವರ್ಷ	ಫಲಿತಾಂಶ
1975	ಗುಂಪು ಹಂತ
1979	ಗುಂಪು ಹಂತ
1983	ಚಾಂಪಿಯನ್
1987	ಸೆಮಿಫೈನಲ್
1992	ರೌಂಡ್–ರಾಬಿನ್ ಹಂತ
1996	ಸೆಮಿಫೈನಲ್
1999	ಸೂಪರ್ ಸಿಕ್ಸ್
2003	ರನ್ನರ್ಸ್ ಅಪ್
2007	ಗುಂಪು ಹಂತ
2011	ಚಾಂಪಿಯನ್
2015	ಸೆಮಿಫೈನಲ್
2019	ಸೆಮಿಫೈನಲ್

ದಾಖಲೆಗಳ ನಿರೀಕ್ಷೆ

40 ಶತಕ
ಫೈನಲ್‌ನಲ್ಲಿ ಯಾವುದೇ ತಂಡದ ಆಟಗಾರ ಒಂದು ಶತಕ ಗಳಿಸಿದರೂ, ಈ ಬಾರಿಯ ವಿಶ್ವಕಪ್ ಟೂರ್ನಿಯಲ್ಲಿ ದಾಖಲಾದ ಶತಕಗಳ ಸಂಖ್ಯೆ 40ಕ್ಕೇರಲಿದ್ದು, ಇದೇ ಮೊದಲ ಬಾರಿಗೆ ಈ ಸಾಧನೆ ಮೂಡಿಬರಲಿದೆ.

39 ರನ್
ವಿಶ್ವಕಪ್ ಟೂರ್ನಿ ಒಂದರಲ್ಲಿ 750ಕ್ಕೂ ಹೆಚ್ಚು ರನ್ ಗಳಿಸಿದ ಮೊದಲ ಬ್ಯಾಟರ್ ಆಗಲು ವಿರಾಟ್ ಕೊಹ್ಲಿಗೆ ಬೇಕಿರುವ ರನ್‌ಗಳು. ಸದ್ಯ ಅವರು 711 ರನ್ ಗಳಿಸಿದ್ದಾರೆ

1
ವಿಶ್ವಕಪ್ ಟೂರ್ನಿಗಳ ಫೈನಲ್‌ಗಳಲ್ಲಿ ಭಾರತದ ಆಟಗಾರರು ಇದುವರೆಗೆ ಶತಕ ಗಳಿಸಿಲ್ಲ. ಈ ಬಾರಿ ಗಳಿಸಿದರೆ ಮೊದಲ ಭಾರತೀಯ ಆಗಲಿದ್ದಾರೆ. ಫೈನಲ್‌ಗಳಲ್ಲಿ ಇದುವರೆಗೆ ಒಟ್ಟು ಆರು ಶತಕಗಳು ದಾಖಲಾಗಿವೆ.

25 ವಿಕೆಟ್
ಈ ಟೂರ್ನಿಯಲ್ಲಿ ಭಾರತದ ಮೊಹಮ್ಮದ್ ಶಮಿ ಮತ್ತು ಆ್ಯಡಂ ಜಂಪಾ ಕ್ರಮವಾಗಿ 23 ಮತ್ತು 22 ವಿಕೆಟ್ ಗಳಿಸಿದ್ದಾರೆ. ಇವರಿಬ್ಬರೂ ಕ್ರಮವಾಗಿ ಎರಡು ಹಾಗೂ ಮೂರು ವಿಕೆಟ್‌ಗಳನ್ನು ಈ ಪಂದ್ಯದಲ್ಲಿ ಗಳಿಸಿದ್ದೇ ಆದರೆ, ಒಂದೇ ವಿಶ್ವಕಪ್ ಟೂರ್ನಿಯಲ್ಲಿ ಇಬ್ಬರು ಬೌಲರ್‌ಗಳು 25ಕ್ಕೂ ಹೆಚ್ಚು ವಿಕೆಟ್ ಪಡೆದ ದಾಖಲೆ ಮೊದಲ ಬಾರಿಯಾಗಲಿದೆ.

3 ವಿಕೆಟ್
ವಿಶ್ವಕಪ್ ಕ್ರಿಕೆಟ್‌ನಲ್ಲಿ ಒಟ್ಟು 27 ವಿಕೆಟ್ ಗಳಿಸಿರುವ ರವೀಂದ್ರ ಜಡೇಜ 30ಕ್ಕೂ ಹೆಚ್ಚು ವಿಕೆಟ್ ಕಬಳಿಸಿದ ನಾಲ್ಕನೇ ಎಡಗೈ ಸ್ಪಿನ್ನರ್ ಆಗಲಿದ್ದಾರೆ. ಶಕೀಬ್ ಅಲ್ ಹಸನ್ (43), ಡೇನಿಯಲ್ ವೆಟೋರಿ (36) ಮತ್ತು ಬ್ರಾಡ್ ಹಾಗ್ (34) ಅವರ ನಂತರದ ಸ್ಥಾನ ಪಡೆಯುವರು.

ಅಂಕಿ ಸಂಖ್ಯೆ: ಎಚ್.ಆರ್. ಗೋಪಾಲಕೃಷ್ಣ

ರಾಜಕಾರಣಿಗಳ ದಂಡು

ಪಂದ್ಯ ವೀಕ್ಷಣೆಗೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಕೇಂದ್ರ ಸರ್ಕಾರದ ಹಲವು ಸಚಿವರು ಆಗಮಿಸಲಿದ್ದಾರೆ. ಅವರೊಂದಿಗೆ ಗುಜರಾತ್ ರಾಜ್ಯದ ಪ್ರಮುಖ ರಾಜಕಾರಣಿಗಳೂ ಹಾಜರಿರಲಿದ್ದಾರೆ.

ಅದರಿಂದಾಗಿ ಬಿಗಿಯಾದ ಭದ್ರತಾ ವ್ಯವಸ್ಥೆ ಮಾಡಲಾಗಿದೆ. ಪೊಲೀಸರು ಮತ್ತು ಎಸ್‌ಪಿಜಿ ಪಡೆಗಳು ಕಟ್ಟೆಚ್ಚರ ವಹಿಸಿವೆ. ಹೆಜ್ಜೆಹೆಜ್ಜೆಗೂ ತಪಾಸಣೆಗಳು ನಡೆಯುತ್ತಿವೆ.

ತಂಡಗಳು ಇಂತಿವೆ

ಭಾರತ: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್.ರಾಹುಲ್ (ಉಪನಾಯಕ/ ವಿಕೆಟ್ ಕೀಪರ್), ಸೂರ್ಯಕುಮಾರ್ ಯಾದವ್, ರವೀಂದ್ರ ಜಡೇಜ, ಕುಲದೀಪ್ ಯಾದವ್, ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ರವಿಚಂದ್ರನ್ ಅಶ್ವಿನ್, ಶಾರ್ದೂಲ್ ಠಾಕೂರ್, ಇಶಾನ್ ಕಿಶನ್ ಮತ್ತು ಪ್ರಸಿದ್ಧ ಕೃಷ್ಣ.

ಆಸ್ಟ್ರೇಲಿಯಾ: ಪ್ಯಾಟ್ ಕಮಿನ್ಸ್, ಡೇವಿಡ್ ವಾರ್ನರ್, ಟ್ರಾವಿಸ್ ಹೆಡ್, ಮಿಚೆಲ್ ಮಾರ್ಷ್, ಸ್ಟೀವ್ ಸ್ಮಿತ್, ಮಾರ್ನಸ್ ಲಾಬುಷೇನ್, ಗ್ಲೆನ್ ಮ್ಯಾಕ್ಸ್‌ವೆಲ್, ಮಾರ್ಕಸ್ ಸ್ಟೊಯಿನಿಸ್, ಮಿಚೆಲ್ ಸ್ಟಾರ್ಕ್, ಆ್ಯಡಂ ಜಂಪಾ, ಜೋಶ್ ಹ್ಯಾಜಲ್‌ವುಡ್, ಕ್ಯಾಮರಾನ್ ಗ್ರೀನ್, ಜೋಶ್ ಇಂಗ್ಲಿಸ್ (ವಿಕೆಟ್ ಕೀಪರ್), ಸೀನ್ ಅಬೋಟ್.

ಪಿಚ್ ಹೇಗಿದೆ?

ಲೀಗ್ ಹಂತದಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯವು ಇಲ್ಲಿಯೇ ನಡೆದಿತ್ತು. ಇನಿಂಗ್ಸ್ ಆರಂಭದಲ್ಲಿ ವೇಗಿಗಳಿಗೆ ನಂತರದ ಹಂತದಲ್ಲಿ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ಲಭಿಸಿತ್ತು. ರವೀಂದ್ರ ಜಡೇಜ ಮತ್ತು ಕುಲದೀಪ್ ಯಾದವ್ ಮಿಂಚಿದ್ದರು. ಭಾರತವು ಪಾಕ್ ತಂಡವನ್ನು ಕೇವಲ 191 ರನ್‌ಗಳಿಗೆ ಕಟ್ಟಿಹಾಕಿತ್ತು. ಏಳು ವಿಕೆಟ್‌ಗಳಿಂದ ಗೆದ್ದಿತ್ತು.

'ಆಗ ಇಲ್ಲಿ ಹೆಚ್ಚು ಉಷ್ಣಾಂಶವಿತ್ತು. ಆದರೆ ಈಗ ಸ್ವಲ್ಪ ಕಡಿಮೆ ಇದೆ. ತಂಪು ವಾತಾವರಣವೂ ಇದೆ. ಪಂದ್ಯದ ದಿನ ಇಬ್ಬನಿ ಬೀಳುವುದನ್ನು ಗಮನಿಸಿ ತಂತ್ರ ರೂಪಿಸಬೇಕು. ಮೊದಲು ಬ್ಯಾಟಿಂಗ್ ಮತ್ತು ಚೇಸಿಂಗ್ ಯಾವುದೇ ಇರಲಿ ಸಮರ್ಥವಾಗಿ ಎದುರಿಸುತ್ತೇವೆ' ಎಂದು ರೋಹಿತ್ ಶರ್ಮಾ ಹೇಳಿದ್ದಾರೆ.

ಇದುವರೆಗೆ ಇಲ್ಲಿ 31 ಏಕದಿನ ಪಂದ್ಯಗಳು (ಮರುನಿರ್ಮಾಣಕ್ಕಿಂತ ಮುಂಚೆ ಮತ್ತು ನಂತರ ಸೇರಿ) ನಡೆದಿದೆ. ಮೊದಲು ಬ್ಯಾಟಿಂಗ್ ಮಾಡಿದ ತಂಡಗಳು ಇದರಲ್ಲಿ 17 ಬಾರಿ ಗೆದ್ದಿವೆ. ಚೇಸಿಂಗ್ ಮಾಡಿದ ತಂಡಗಳು 15 ಸಲ ಜಯಿಸಿವೆ.

ದೊಡ್ಡ ಪರದೆಯಲ್ಲಿ ವೀಕ್ಷಣೆಗೆ ಸೌಲಭ್ಯ

ಬೆಂಗಳೂರು: ಭಾರತ ಮತ್ತು ಆಸ್ಟ್ರೇಲಿಯಾ ನಡುವೆ ಭಾನುವಾರ ನಡೆಯಲಿರುವ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದ ನೇರ ಪ್ರಸಾರ ನೋಡಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಎಲ್ಲ ಜಿಲ್ಲಾ ಕ್ರೀಡಾಂಗಣಗಳಲ್ಲಿ ದೊಡ್ಡ ಗಾತ್ರದ ಪರದೆಯ ವ್ಯವಸ್ಥೆ ಕಲ್ಪಿಸುವಂತೆ ಯುವ ಸಬಲೀಕರಣ ಇಲಾಖೆ ಆಯುಕ್ತರು ಪ್ರಕಟಣೆಯಲ್ಲಿ ಸೂಚಿಸಿದ್ದಾರೆ.

ಈ ಸೂಚನೆಯ ಬೆನ್ನಲ್ಲೇ ಭಾನುವಾರ ಸಂಜೆಯ ವೇಳೆಗೆ ಹೆಚ್ಚಿನ ಜಿಲ್ಲೆಗಳಲ್ಲಿ ಸಿದ್ಧತೆ ನಡೆದಿತ್ತು.

ಚಳಿಗಾಲಕ್ಕೆ ಮಸಾಲೆಯುಕ್ತ ಸ್ವಾದಿಷ್ಟ ಭಕ್ಷ್ಯಗಳು

Freedom Healthy Cooking Oils presents cuisines of karnataka
Associate sponsors: Ravi, star

ಚಳಿಗಾಲದಲ್ಲಿ ಬಾಯಲ್ಲಿ ನೀರೂರಿಸುವ ಹಾಗೂ ಮೈಚಳಿ ಬಿಡಿಸುವ ಎರಡು ರುಚಿಕರ ಮಸಾಲೆ ಆಹಾರ ಪದಾರ್ಥಗಳನ್ನು ಪ್ರಸಿದ್ಧ ಬಾಣಸಿಗ ಆದರ್ಶ್ ತತ್ಪತಿ ಅವರು 'ದಿ ಕ್ಯುಸಿನ್ಸ್ ಆಫ್ ಕರ್ನಾಟಕ'ದ ಮೂಲಕ ನಿಮ್ಮ ಮುಂದೆ ಇಡಲಿದ್ದಾರೆ.

ಶೀತ ಕಾಲ ದಿನಗಳು ಈಗಷ್ಟೇ ಪ್ರಾರಂಭವಾತ್ತಲಿವೆ. ಮಸಾಲೆಯುಕ್ತ ತಿನಿಸು ಹಾಗೂ ಭಕ್ಷ್ಯಗಳ ಸೇವನೆಗೆ ಇದು ಉತ್ತಮ ಕಾಲ. ಚಳಿ ದೂರಾಗಿಸುವ ವಿಶಿಷ್ಟ ಅಡುಗೆಗಳು ಈ ಪ್ರದರ್ಶನದ ಆವೃತ್ತಿಯಲ್ಲಿ ಕಂಡುಬರಲಿವೆ. ನಿಮ್ಮ ಮನೆಗೆ ಅತಿಥಿಗಳು ಬಂದ ಸಂದರ್ಭದಲ್ಲಿ ಈ ಸ್ವಾದಿಷ್ಟ ಭಕ್ಷ್ಯಗಳು ಉತ್ತಮವೆನಿಸಲಿವೆ.



ಅಂಕೋಲ ಸ್ಪೆಷಲ್ ಕೊಂಕಣಿ ಮೀನು ಸಾರು (ಅಂಬಟ್)

ಪದಾರ್ಥಗಳು:

5 ಬ್ಯಾಡಗಿ ಮೆಣಸಿನಕಾಯಿಗಳು
3 ಸೇಲಂ ದುಂಡು ಮೆಣಸಿನಕಾಯಿ
3 ಚಮಚ ಕೊತ್ತಂಬರಿ ಬೀಜ
5 ಚಮಚ ಎಣ್ಣೆ, 1 ಕತ್ತರಿಸಿದ ಈರುಳ್ಳಿ (ಅರ್ಧ ಕಪ್), 500 ಗ್ರಾಂ ಮ್ಯಾಕ್ರೆಲ್ ಮೀನು, 1 ಚಮಚ ಅರಿಶಿನ ಪುಡಿ, 3 ಹಸಿಮೆಣಸಿನ ಕಾಯಿಗಳು, ರುಚಿಗೆ ತಕ್ಕಷ್ಟು ಉಪ್ಪು
1/2 ಕಪ್ ತೆಂಗಿನಕಾಯಿ ತುರಿ
1/2 ಚಮಚ ಅಜ್ವೈನ್/ಕೇರಂ
1 ಚಮಚ ಜೀರಿಗೆ
ಹುಣಿಸೆಹಣ್ಣು/1 ಸಣ್ಣ ನಿಂಬೆಹಣ್ಣು
1 ಚಮಚ ಸಣ್ಣಗೆ ಕತ್ತರಿಸಿದ ಶುಂಠಿ

ಮಾಡುವ ವಿಧಾನ: ಒಂದು ಪ್ಯಾನ್ ತೆಗೆದುಕೊಂಡು ಒಂದು ಚಮಚ ಎಣ್ಣೆ, ಬ್ಯಾಡಗಿ ಮತ್ತು ಸೇಲಂ ದುಂಡು ಮೆಣಸಿನಕಾಯಿಗಳನ್ನು ಸೇರಿಸಿ. ಅದಕ್ಕೆ ದನಿಯಾ, ಅಜ್ವೈನ್, ಜೀರಿಗೆ ಹಾಕಿ ಮೂರು ನಿಮಿಷ ಮಧ್ಯಮ ಉರಿಯಲ್ಲಿ ಬಾಡಿಸಿ. ಎಲ್ಲವನ್ನೂ ಮಿಕ್ಸಿ ಜಾರ್‌ನಲ್ಲಿ ಹಾಕಿಕೊಂಡು ಹುಣಿಸೆಹಣ್ಣು ಮತ್ತು ತೆಂಗಿನತುರಿ ಸೇರಿಸಿ, ಬೇಕಾದಷ್ಟು ನೀರನ್ನು ಹಾಕಿ ನುಣ್ಣಗೆ ಪೇಸ್ಟ್ ಆಗುವಂತೆ ರುಬ್ಬಿಕೊಳ್ಳಿ.

ಬಾಣಲೆಯಲ್ಲಿ 4 ಟೇಬಲ್ ಚಮಚ ಎಣ್ಣೆ ಹಾಕಿ ಬಿಸಿ ಮಾಡಿಕೊಳ್ಳಿ. ಅದಕ್ಕೆ ಸಣ್ಣಗೆ ಕತ್ತರಿಸಿಟ್ಟ ಈರುಳ್ಳಿ, ಹಸಿಮೆಣಸಿಕಾಯಿಗಳು, ಕತ್ತರಿಸಿಟ್ಟ ಹಸಿಶುಂಠಿ ಸೇರಿಸಿ ಮಧ್ಯಮ ಉರಿಯಲ್ಲಿ 10 ನಿಮಿಷ ಹುರಿಯಿರಿ. ರುಬ್ಬಿಟ್ಟ ಮಸಾಲ ಪೇಸ್ಟ್ ಹಾಕಿ ಮತ್ತೆ ಐದು ನಿಮಿಷ ಚೆನ್ನಾಗಿ ಬೇಯುವ ತನಕ ಹುರಿಯಿರಿ. ನಂತರ ಮೀನು ತುಂಡುಗಳನ್ನು ಹಾಕಿ, ನೀರನ್ನು ಸೇರಿಸಿ. ರುಚಿಗೆ ತಕ್ಕಷ್ಟು ಉಪ್ಪು ಹಾಕಿ. ಈಗ ಮತ್ತೊಮ್ಮೆ ಎಲ್ಲವನ್ನೂ ಬೆರೆಸಿ, ಮಧ್ಯಮ ಉರಿಯಲ್ಲಿ 10 ನಿಮಿಷ ಬೇಯಿಸಿ. ಅನ್ನದ ಜೊತೆ ಬಿಸಿಯಾಗಿ ಬಡಿಸಿ.

ವಿಜಯಪುರ ವಿಶೇಷ ಗಡಗಿ ಮಟನ್ ಮಸಾಲ

ಪದಾರ್ಥಗಳು:

ಮಾಂಸ 500 ಗ್ರಾಂ, ಅಚ್ಚಖಾರ ಪುಡಿ 2 ಚಮಚ, ಅರಿಶಿನ 1 ಚಮಚ, ದನಿಯಾ ಪುಡಿ 2 ಚಮಚ, ಗರಂ ಮಸಾಲ 1 ಚಮಚ, 1 ಸಣ್ಣಕಪ್ ಕತ್ತರಿಸಿದ ಕೊತ್ತಂಬರಿ, 1 ಸಣ್ಣ ಕಪ್ ಪುದೀನ, 1 ದೊಡ್ಡ ಈರುಳ್ಳಿ, 2 ಮಧ್ಯಮ ಗಾತ್ರದ ಟೊಮೆಟೊ 1 ಚಮಚ ಶುಂಠಿ–ಬೆಳ್ಳುಳ್ಳಿ ಪೇಸ್ಟ್, ಎಣ್ಣೆ 1 ಸಣ್ಣ ಕಪ್, ಮೊಸರು 100 ಮಿ.ಲೀ., ನೀರು 250 ಮಿ.ಲೀ. ಉಪ್ಪು ರುಚಿಗೆ ತಕ್ಕಷ್ಟು

ಒಂದು ಪಾತ್ರೆ ಅಥವಾ ದೊಡ್ಡ ಬೌಲ್ ತೆಗೆದುಕೊಂಡು ತೊಳೆದಿಟ್ಟ ಮಾಂಸ, ಅಚ್ಚ ಖಾರ ಪುಡಿ, ಅರಿಶಿನ, ದನಿಯಾ ಪುಡಿ, ಗರಂ ಮಸಾಲ, ಮೊಸರು, ಶುಂಠಿ–ಬೆಳ್ಳುಳ್ಳಿ ಪೇಸ್ಟ್, ಪುದೀನ, ಕೊತ್ತಂಬರಿ ಸೊಪ್ಪು ಮತ್ತು ಉಪ್ಪು ಸೇರಿಸಿ ಚೆನ್ನಾಗಿ ಕಲಸಿ. 30 ನಿಮಿಷ ಮ್ಯಾರಿನೇಟ್ ಮಾಡಿ.



ಮಾಡುವ ವಿಧಾನ: ಗಡಗಿಯಲ್ಲಿ (ಮಟ್ಕ) ಎಣ್ಣೆ ಹಾಕಿ ಬಿಸಿ ಮಾಡಿ, ಮ್ಯಾರಿನೇಟ್ ಮಾಡಿರುವ ಮಾಂಸವನ್ನು ಸೇರಿಸಿ ಮಧ್ಯಮ ಉರಿಯಲ್ಲಿ 10 ನಿಮಿಷ ಬಾಡಿಸಿ. ನಂತರ ನೀರನ್ನು ಸೇರಿಸಿ ಚೆನ್ನಾಗಿ ಕಲಸಿ ಮುಚ್ಚಿಡಿ. ಮಾಂಸ ಹದವಾಗಿ ಬೇಯಲು ಬಿಡಿ. ಮುಚ್ಚಳ ತೆಗೆದು ಕತ್ತರಿಸಿಟ್ಟ ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿ ಬಿಸಿ ಬಿಸಿಯಾಗಿ ಬಡಿಸಿ.

ಅಡುಗೆ ಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ರಾಜ್ಯಾದ್ಯಂತ ಯಶಸ್ವೀ ಪ್ರದರ್ಶನ

ತ್ರಿವೇಣಿ ಕೆಂಪೇಗೌಡ ಸರ್ಕಲ್ | URVASHI | CAUVERY | Swagath | ನವೀನ ಪವಿತ್ರ | MUKUNDA | ನರ್ತಕಿ | RAVI



PVR INOX: NEXUS | ORION | VAISHNAVI | REGALIA | MARKETCITY | AURA | VEGACITY | SPIRIT | UPTOWN | BHARTIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEXUS NEIGHBOURHOOD | SBR | BROOKFIELD
Cinépolis: ETA | MEENAKSHI | ORION EAST | LULU | SHANTINIKETAN | SJR
GOPALAN CINEMAS: ARCH | INNOVATION | GRAND | SIGNATURE | LEGACY
ROCKLINE cinemas JALAHALLI | MIRAJ SUNKADAKATTE | KING CINEMAS SEEGEHALLI | INNOVATIVE MULTIPLEX MARATHHALLI | CINEPHILE HSR LAYOUT

ಮಾಗಡಿ ರಸ್ತೆ ಪ್ರಸನ್ನ | ರಾಜಾಜಿನಗರ ನವರಂಗ್ | ಆವಲಹಳ್ಳಿ ವೆಂಕಟೇಶ್ವರ | ಜೆ.ಪಿ.ನಗರ ಸಿದ್ಧೇಶ್ವರ | ಮಾರತ್ ಹಳ್ಳಿ ವಿನಾಯಕ | ಪೀಣ್ಯ ಭಾರತಿ | ಕಮಲಾನಗರ ವೀರಭದ್ರೇಶ್ವರ | ತಾವರೆಕೆರೆ ಬಾಲಾಜಿ | ಮಡಿವಾಳ ಸಂಧ್ಯಾ | ಕೊಡಿಗೇಹಳ್ಳಿ ರಾಜ್‌ಮುರಳಿ | ಕೋಣನಕುಂಟೆ ಮಾನಸ | ಹೊಂಗಸಂದ್ರ ಬೃಂದ | ಸುಂಕದಕಟ್ಟೆ ಮೋಹನ್ | ಕೆಂಗೇರಿ ರಾಬಿನ್ | ಸಂಜಯನಗರ ವೈಭವ್ | ಕತ್ರಿಗುಪ್ಪೆ ಈಶ್ವರಿ | ಗೌಡನಪಾಳ್ಯ ಶ್ರೀನಿವಾಸ | ದೊಮ್ಮಸಂದ್ರ ಬಾಲಾಜಿ | ಗೊಟ್ಟಿಗೆರೆ ಲಕ್ಷ್ಮಿ | ಚಿಕ್ಕಲಸಂದ್ರ ಬಾಲಾಜಿ | ಅಗರ ತಿರುಮಲ | ಕಾಡುಗುಡಿ ಶ್ರೀನಿವಾಸ | ಬೊಮ್ಮನಹಳ್ಳಿ ಕೃಷ್ಣ

ಆರ್.ಟಿ.ನಗರ ರಾಧಾಕೃಷ್ಣ | ಕೆ.ಆರ್.ಪುರಂ ವೆಂಕಟೇಶ್ವರ | ಉತ್ತರಹಳ್ಳಿ ವೃಷ್ಣವಿ | ಮೈಸೂರು ರಸ್ತೆ ವಿಜಯ್ | ಕೋನಪ್ಪನ ಅಗ್ರಹಾರ ವೆಂಕಟೇಶ್ವರ | ಗರುಡಾಚಾರ್‌ಪಾಳ್ಯ ವಿಜಯಲಕ್ಷ್ಮಿ | ಉಲ್ಲಾಳ ವಜ್ರೇಶ್ವರಿ | ಗೊಲ್ಲರಹಟ್ಟಿ ವೆಂಕಟೇಶ್ವರ | ಹೆಸರುಘಟ್ಟ ಎಸ್.ಎಲ್.ಎನ್ | ರಾಜಗೋಪಾಲನಗರ ಮಾರುತಿ | ಕದಿರೇನಹಳ್ಳಿ ಮಹದೇಶ್ವರ | ಲಗ್ಗೆರೆ ಆಕಾಶ್ | ಹೆಗ್ಗನಗರ ವಿನಾಯಕ | ಮಲ್ಲತ್ತಹಳ್ಳಿ ವಿ.ಆರ್.ಸಿನಿಮಾಸ್ | ನಾಗವಾರ ವೃದ್ಧಿ | ಯಲಹಂಕ ಗಣೇಶ್ | ರಾಮಮೂರ್ತಿನಗರ ಲಕ್ಷ್ಮಿ | ಸಿಂಗಾಪುರ ವೈನಿಧಿ | ಮಡಿವಾಳ(ತೆಲುಗು) ಸಂಧ್ಯಾ | ತುಮಕೂರು ಗಾಯತ್ರಿ, PVR INOX | ರಾಮನಗರ ಶ್ರೀರಾಮ | ತಿಪಟೂರು ಗಣೇಶ್ | ಆನೇಕಲ್ ಲಕ್ಷ್ಮಿ ನರಸಿಂಹ | ಕೋಲಾರ ನಾರಾಯಣಿ | ಚಿಕ್ಕಬಳ್ಳಾಪುರ ಬಾಲಾಜಿ | ಮಾಲೂರು ಬಾಲಾಜಿ | ಕನಕಪುರ ಅರ್ಕಾವತಿ | ಕುಣಿಗಲ್ ಪದ್ಮ | ಮಾಗಡಿ ಬಾಲಾಜಿ | ದೊಡ್ಡಬಳ್ಳಾಪುರ ಸೌಂದರ್ಯಮಹಲ್ | ಮಧುಗಿರಿ ಶಂಕರ್ | ವಿಜಯಪುರ ಗೌರಿಶಂಕರ | ಹಾರೋಹಳ್ಳಿ ವಿನಾಯಕ | ಚನ್ನಪಟ್ಟಣ ಲಕ್ಷ್ಮಿ

ಚಿಂತಾಮಣಿ ಅಂಜನಿ | ಗೌರಿಬಿದನೂರು ಶಂಕರ್ | ನೆಲಮಂಗಲ ರೂಪ | ಶಿರಾ ಭಾಗ್ಯಲಕ್ಷ್ಮಿ | ಬಂಗಾರುಪೇಟೆ ಬಾಲಚಂದ್ರ | ಹೊಸೂರು ರಾಘವೇಂದ್ರ | ಮೈಸೂರು ಸಂಗಮ್, ಗಾಯತ್ರಿ, PVR INOX GARUDA | FORUM | SATYAM, DRC CINEMAS, VISION CINEMAS | ಮಂಡ್ಯ ಗುರುಶ್ರೀ | ಹಾಸನ ಎಸ್.ಬಿ.ಜಿ | ಚಾಮರಾಜನಗರ ಬಸವೇಶ್ವರ | ಕೊಳ್ಳೇಗಾಲ ಶ್ರೀನಿವಾಸ | ಹೊಳೆನರಸೀಪುರ ಚೆನ್ನಾಂಬಿಕ | ಚನ್ನರಾಯಪಟ್ಟಣ ಗಾಯತ್ರಿ | ಬನ್ನೂರು ರತ್ನಮಹಲ್ | ಗುಂಡ್ಲುಪೇಟೆ ಸೂರ್ಯ | ಕೆ.ಆರ್.ನಗರ ಗೌರಿಶಂಕರ | ನಂಜನಗೂಡು ಶಾರದ | ಟಿ.ನರಸೀಪುರ ಮುರುಗನ್ | ಮಳವಳ್ಳಿ ರಾಜರಾಜೇಶ್ವರಿ | ಮದ್ದೂರು ಮಹಾವೀರ | ಕೆ.ಎಂ.ದೊಡ್ಡಿ ಸುಮ | ಸಕಲೇಶಪುರ ತೇಜಸ್ವಿನಿ | ಪಾಂಡವಪುರ ಲಕ್ಷ್ಮಿ | ಬಾಬೂರಾಯನಕೊಪ್ಪಲು ಭಾರತಿ | ಕೆ.ಆರ್.ಪೇಟೆ ಬಸವೇಶ್ವರ | ಪಿರಿಯಾಪಟ್ಟಣ ಶಾರದ | ಕೆ.ಆರ್.ಪೇಟೆ ರತ್ನ | ಹುಣಸೂರು ಲೀಲಾ | ಕುಶಾಲನಗರ ಕೂರ್ಗ್ | ಶನಿವಾರಸಂತೆ ಯಶಸ್ವಿನಿ | ಸಿದ್ಧಾಪುರ ವುಡ್‌ಲ್ಯಾಂಡ್ಸ್ | ಸರಗೂರು ಶಂಕರ್

ನಾಗಮಂಗಲ ವೆಂಕಟೇಶ್ವರ | ಬೆಳ್ಳೂರು ಕ್ರಾಸ್ ಮಾರುತಿ | ಬೇಲೂರು ರೇಣುಕಾ | ದಾವಣಗೆರೆ ಗೀತಾಂಜಲಿ, MOVIETIME | ಬಳ್ಳಾರಿ ನಟರಾಜಕಾಂಪ್ಲೆಕ್ಸ್, MOVIETIME | ಚಿತ್ರದುರ್ಗ ವೆಂಕಟೇಶ್ವರ | ಹೊಸಪೇಟೆ ಲಕ್ಷ್ಮಿ | ಚಳ್ಳಕೆರೆ ರಾಮಕೃಷ್ಣ | ಹರಿಹರ ಶ್ರೀಕಾಂತ್ | ಹೊಸದುರ್ಗ ಜ್ಯೋತಿ | ಹಿರಿಯೂರು ನಂಜುಂಡೇಶ್ವರ | ಹುಬ್ಬಳ್ಳಿ ಸುಧಾ, PVR INOX, Cinépolis | ಧಾರವಾಡ ಪದ್ಮ, PVR INOX | ಗದಗ ಮಹಾಲಕ್ಷ್ಮಿ | ಬಿಜಾಪುರ ಲಕ್ಷ್ಮಿ | ಬೆಳಗಾವಿ ಚಿತ್ರಾ, PVR INOX, KAPEEL | ರಾಣೆಬೆನ್ನೂರು ಶಕ್ತಿ | ಬಾಗಲಕೋಟೆ ಶಕ್ತಿ | ಇಳಕಲ್ ಶ್ರೀನಿವಾಸ | ಮುಧೋಳ ಸೂರ್ಯವಂಶಿ | ಹಾವೇರಿ ಮಾಧವಿ | ಶಿರಸಿ ನಟರಾಜ | ಗೋಕಾಕ್ ಆನಂದ್ | ಜಮಖಂಡಿ ಸುವರ್ಣ | ಬನಹಟ್ಟಿ ವೈಭವ್ | ಅಥಣಿ ಮುರುಗೇಂದ್ರ | ನಿಪ್ಪಾಣಿ MAGNUM CINEMAS | ಹೊನ್ನಾವರ ಪದ್ಮಾಂಜಲಿ | ಸಿಂಧಗಿ ವಿನಾಯಕ | ಅಂಕೋಲಾ ಸಮರ್ಥ | ಕಾರವಾರ ಅರ್ಜುನ

ಗುಲ್ಬರ್ಗ PVR INOX, MIRAJ, SHETTY'S MULTIPLEX | ರಾಯಚೂರು MIRAJ | ಬೀದರ್ ಸಪ್ನ | ಗಂಗಾವತಿ MOHIUDDIN TALKIES | ಕೊಪ್ಪಳ ಶಾರದ | ಶಹಾಪುರ ಜಯಶ್ರೀ | ದೇವದುರ್ಗ ಭಾರತ್ | ಕುಷ್ಟಗಿ ಬಸವರಾಜ | ಮಾನ್ವಿ ಮಲ್ಲಿಕಾರ್ಜುನ | ಸಿಂಧನೂರು ಮಂಜುನಾಥ | ಕಾರಟಗಿ ಲಕ್ಷ್ಮಿ | ಶಿವಮೊಗ್ಗ ವೀರಭದ್ರೇಶ್ವರ, Bharath Cinemas | ಚಿಕ್ಕಮಗಳೂರು ನಾಗಲಕ್ಷ್ಮಿ | ಭದ್ರಾವತಿ ವೀರಭದ್ರೇಶ್ವರ | ಅನವೇರಿ ಶ್ರೀದೇವಿ | ಸಾಗರ ಶ್ರೀ | ಕಡೂರು ಅನ್ನಪೂರ್ಣ | ಶಿಕಾರಿಪುರ ಕಿರಣ್ | ತರೀಕೆರೆ ವಿನಾಯಕ | ಮಂಗಳೂರು SP CINEMAS, PVR INOX, Cinépolis, Bharath Cinemas | ಉಡುಪಿ ಅಲಂಕಾರ್ | ಮಣಿಪಾಲ PVR INOX, Bharath Cinemas | ಕುಂದಾಪುರ ವಿನಾಯಕ, Bharath Cinemas | ಬೆಳ್ತಂಗಡಿ ಭಾರತ್ | ಕಾರ್ಕಳ ಪ್ಲಾನೆಟ್ | ಬೈಂದೂರು ಶಂಕರ್ | ಸುರತ್ಕಲ್ Cine GALAXY | ಪಡುಬಿದ್ರಿ Bharath Cinemas | ಪುತ್ತೂರು Bharath Cinemas

ಹಾಗೂ ರಾಜ್ಯಾದ್ಯಂತ

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 19 ನವೆಂಬರ್ 2023

ತರಗತಿ ಕೊಠಡಿಯಲ್ಲಿ ಧೀಂಗಿಣ

ಮಂಗಳೂರಿನ ಯಕ್ಷಧ್ರುವ ಪಟ್ಲ ಫೌಂಡೇಷನ್ ಟ್ರಸ್ಟ್ 'ಯಕ್ಷ ಶಿಕ್ಷಣ ಯೋಜನೆ' ಆರಂಭಿಸಿ ಮೂರು ತಿಂಗಳಾಗಿದೆ. ಅಷ್ಟರಲ್ಲೇ ಪ್ರಸಂಗವೊಂದನ್ನು ನೀಡಲು ಅಣಿಯಾಗುವಷ್ಟು ಉತ್ಸಾಹವನ್ನು ಶಾಲಾ ಮಕ್ಕಳು ತೋರಿದ್ದಾರೆ.

ವಿಕ್ರಂ ಕಾಂತಿಕೆರೆ

ಧೀಂ ಕಿಟ, ಕಿಟ ತಕ...ತರಿಕಿಟ ಕಿಟ ತಕ... ತದಿಗಿಣ ಥೋ, ತದಿಗಿಣ ಥೋ, ತದಿಗಿಣ ಥೋ...

ತರಗತಿ ಕೊಠಡಿಯ ಒಂದು ಭಾಗದಲ್ಲಿ ಅಭ್ಯಾಸ ಮಾಡುತ್ತಿದ್ದ ಮಕ್ಕಳು ಈ ತಾಳವನ್ನು ಬಾಯಲ್ಲಿ ಹೇಳುತ್ತ ಹೆಜ್ಜೆ ಹಾಕುತ್ತಿದ್ದರು. ಇತ್ತ ಮತ್ತೊಂದು ಕಡೆಯಲ್ಲಿ...

ತಿತ್ತಿತ್ಥೈ, ತಿತ್ತಿತ್ಥೈ, ತಿತ್ತಿತ್ಥೈ...ತದೋಂ ದಿಗು ತಕ ಥೈಯ...

ಕಿಟತಕ...ತದೋಂ ದಿಗು ತಕ ಥೈಯ...

ಎಂದು ತಾಳವನ್ನು ನುಡಿಸುತ್ತಿದ್ದ ವಿದ್ಯಾರ್ಥಿಗಳು ಭರವಸೆಯಿಂದಲೇ ನಾಟ್ಯದ ಅಭ್ಯಾಸ ಮಾಡುತ್ತ ಲಾಸ್ಯವಾಡುತ್ತಿದ್ದರು. ಇನ್ನೊಂದು ಕಡೆ ಇದ್ದವರು...

ದಿದ್ದಗ ದಿದ್ದಗ ದಿದ್ದಗ ದಿದ್ದಗ...ದಿದ್ದಗ ದಿದ್ದಗ ದಿದ್ದಗ ದಿದ್ದಗ...

ಎನ್ನುತ್ತ ಮೈ ಬಳುಕಿಸುತ್ತ ಮುಂದೆ ಸಾಗಿ ಜಿಗಿಯುತ್ತಿದ್ದರು. ಇವರೆಲ್ಲರೂ ಹೈಸ್ಕೂಲ್ ವಿದ್ಯಾರ್ಥಿಗಳು. ವೇದಿಕೆಯಲ್ಲಿದ್ದ ಯಕ್ಷಗಾನ ಗುರು ಜಾಗಟೆ ಹಿಡಿದುಕೊಂಡು ತಾಳ ಹಾಕುತ್ತ ಹಾಡುತ್ತಿದ್ದರೆ, 'ರಂಗಪ್ರವೇಶ'ದ ಕನಸು ಕಂಡುಕೊಂಡಿರುವ ಚಿಗುರು ಕಲಾವಿದರ ಹುಮ್ಮಸ್ಸು ಹೆಚ್ಚುತ್ತಿತ್ತು.

ಮಂಗಳೂರಿನ ಯಕ್ಷಧ್ರುವ ಪಟ್ಲ ಫೌಂಡೇಷನ್ ಟ್ರಸ್ಟ್, ಶಾಲಾ ಮಕ್ಕಳಿಗೆ ಯಕ್ಷಗಾನ ಕಲಿಸಲು ಹಮ್ಮಿಕೊಂಡಿರುವ 'ಯಕ್ಷ ಶಿಕ್ಷಣ ಯೋಜನೆ' ಆರಂಭವಾಗಿ ಮೂರು ತಿಂಗಳು ಕಳೆದಿದೆಯಷ್ಟೆ. ಅಷ್ಟರಲ್ಲಿ ವಿದ್ಯಾರ್ಥಿಗಳು ತಾಳ-ಲಯದ ಪಾಠ ಕರಗತ ಮಾಡಿಕೊಂಡು ನಾಟ್ಯಲೋಕ ಪ್ರವೇಶಿಸಿದ್ದಾರೆ. ಮುಂದಿನ ವರ್ಷ ಜನವರಿಯಲ್ಲಿ ಮಂಗಳೂರಿನಲ್ಲಿ ನಡೆಯಲಿರುವ ನವ ಪ್ರತಿಭೆಗಳ ಮೊದಲ ಪ್ರಸಂಗದಲ್ಲಿ ಕುಣಿಯುವ ಉತ್ಸಾಹದಲ್ಲಿದ್ದಾರೆ.


ಯಕ್ಷಶಿಕ್ಷಣ ಯೋಜನೆಯ ಬೀಜ ಮೊಳೆತದ್ದು ಉಡುಪಿ ವಿಧಾನಸಭಾ ಕ್ಷೇತ್ರದಲ್ಲಿ, 2007ರಲ್ಲಿ. ಉಡುಪಿಯ ಯಕ್ಷಗಾನ ಕಲಾರಂಗ, ಯಕ್ಷಶಿಕ್ಷಣ ಟ್ರಸ್ಟ್ ಸ್ಥಾಪಿಸಿ ಆರಂಭಿಸಿದ್ದ ಯೋಜನೆ ಈಗ ಕಾಪು ಮತ್ತು ಕುಂದಾಪುರ ಕ್ಷೇತ್ರಕ್ಕೂ ವ್ಯಾಪಿಸಿದೆ. ಅಲ್ಲಿ ಒಟ್ಟು ಒಟ್ಟು 69 ಶಾಲೆಗಳಲ್ಲಿ 31 ಶಿಕ್ಷಕರು ತರಬೇತಿ ನೀಡುತ್ತಿದ್ದಾರೆ.

ಇದೇ ಮಾದರಿಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ವಿದ್ಯಾರ್ಥಿಗಳಿಗೆ ಯಕ್ಷಗಾನ ಕಲಿಸುವ ಉದ್ದೇಶದಿಂದ ಯಕ್ಷಧ್ರುವ ಪಟ್ಲ ಫೌಂಡೇಷನ್ ಟ್ರಸ್ಟ್ ಈ ವರ್ಷದ ಆಗಸ್ಟ್‌ನಲ್ಲಿ ಪ್ರಯೋಗಕ್ಕೆ ಇಳಿದಿತ್ತು. ಸೂರಿಕುಮೇರು ಗೋವಿಂದ ಭಟ್ ಅವರ ಮಾರ್ಗದರ್ಶನದಲ್ಲಿ ಆರಂಭಗೊಂಡ ಯೋಜನೆ ದಕ್ಷಿಣ ಕನ್ನಡ 12 ವಸತಿಶಾಲೆ ಸೇರಿ 40 ಸರ್ಕಾರಿ ಶಾಲೆಗಳಲ್ಲಿ ಕಾರ್ಯಗತಗೊಂಡಿದ್ದು, 4500 ವಿದ್ಯಾರ್ಥಿಗಳು 'ತರಿಕಿಟ ಕಿಟ ತಕ, ತದಿಗಿಣ ಥೋಂ...' ಕಲಿಯುತ್ತಿದ್ದಾರೆ.

14ನೇ ಪುಟಕ್ಕೆ...

> **ಶಾಲಾ ಮಕ್ಕಳ ಯಕ್ಷಗಾನ ಕಲಿಕೆಗೆ ಆರ್ಥಿಕ ಪರಿಸ್ಥಿತಿ ಅಡ್ಡಿಯಾಗಬಾರದು ಎಂಬ ಉದ್ದೇಶದಿಂದ ಈ ಯೋಜನೆ ಜಾರಿಗೆ ತರಲಾಗಿದೆ. ಉಚಿತವಾಗಿ ನೀಡುವ ತರಬೇತಿಗೆ ಈ ವರ್ಷ ಕನಿಷ್ಠ ₹ 50 ಲಕ್ಷ ವೆಚ್ಚ ಆಗಲಿದೆ. ಯೋಜನೆಯನ್ನು ಕರಾವಳಿಯ ಎಲ್ಲ ಸರ್ಕಾರಿ ಶಾಲೆಗಳಿಗೂ ವಿಸ್ತರಿಸಬೇಕು ಎಂಬ ಆಶಯವಿದೆ.**
>
> **–ಪಟ್ಲ ಸತೀಶ್ ಶೆಟ್ಟಿ**
> ಯಕ್ಷಧ್ರುವ ಪಟ್ಲ ಫೌಂಡೇಷನ್ ಟ್ರಸ್ಟ್ ಸ್ಥಾಪಕ


ದಕ್ಷಿಣ ಕನ್ನಡ ಜಿಲ್ಲೆಯ ಹರೇಕಳ ಶ್ರೀ ರಾಮಕೃಷ್ಣ ಅನುದಾನಿತ ಶಾಲೆಯಲ್ಲಿ ಗುರುವಿನ ಜೊತೆ ಹೆಜ್ಜೆ ಹಾಕುತ್ತಿರುವ ವಿದ್ಯಾರ್ಥಿಗಳು – ಪ್ರಜಾವಾಣಿ ಚಿತ್ರ /ಫಕ್ರುದ್ದೀನ್ ಎಚ್.



ಸರ್ವಾಂತರ್ಯಾಮಿ ಡೀಪ್‌ಫೇಕ್

ಉದಯ ಶಂಕರ ಪುರಾಣಿಕ

ಈಗ ಬಹಳ ಚರ್ಚೆಯಲ್ಲಿರುವ ವಿಷಯ 'ಡೀಪ್‌ಫೇಕ್'. ಒಂದು ಅಂದಾಜಿನ ಪ್ರಕಾರ ಇಂಟರ್‌ನೆಟ್‌ನಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಡೀಪ್‌ಫೇಕ್‌ಗಳು ವೈರಲ್ ಆಗಿವೆ. ಹಾಗಾದರೆ, ಏನಿದು ಡೀಪ್‌ಫೇಕ್? 'ಡೀಪ್ ಲರ್ನಿಂಗ್' ತಂತ್ರಜ್ಞಾನವನ್ನು ದುರ್ಬಳಕೆ ಮಾಡಿಕೊಂಡು ಸೃಷ್ಟಿಸಿದ ಫೇಕ್ ಅಥವಾ ನಕಲಿ ಪತ್ರ, ದಾಖಲೆ, ಫೋಟೊ, ಆಡಿಯೊ, ವಿಡಿಯೊ ಮತ್ತು ಮಲ್ಟಿಮೀಡಿಯಾಗಳನ್ನು ಡೀಪ್‌ಫೇಕ್ ಎಂದು ಕರೆಯಲಾಗುತ್ತದೆ. ಈ ಮೊದಲು ಕೂಡ ಫೋಟೊ, ವಿಡಿಯೊಗಳನ್ನು ತಿರುಚುವ ಪ್ರಯತ್ನಗಳು ನಡೆದಿದ್ದವು. ಆದರೆ, 1997ರಲ್ಲಿ ಬಳಕೆಗೆ ಬಂದ ವಿಡಿಯೊ ರೀರೈಟ್ ಹೆಸರಿನ ತಂತ್ರಾಂಶದ ಬಳಕೆಯಿಂದ ಫೋಟೊ, ವಿಡಿಯೊಗಳನ್ನು ಮಾರ್ಫ್ ಮಾಡುವ ಕೆಲಸಕ್ಕೆ ಹೊಸ ಆಯಾಮ ದೊರೆಯಿತು. ಈಗ 'ಡೀಪ್ ಲರ್ನಿಂಗ್' ತಂತ್ರಜ್ಞಾನದ ಜೊತೆಯಲ್ಲಿ ಇತರೆ ತಂತ್ರಜ್ಞಾನ ಮತ್ತು ತಂತ್ರಾಂಶಗಳನ್ನು ಬಳಸಿಕೊಂಡು, ಅಸಲಿ ವಿಡಿಯೊಗಳಿಗಿಂತ ಹೆಚ್ಚು ನೈಜವಾಗಿ ಕಾಣುವಂತಹ ವಿಡಿಯೊಗಳನ್ನು ಸೃಷ್ಟಿಸಲಾಗುತ್ತಿದೆ.

ಮನೋರಂಜನೆಗಾಗಿ ಫೋಟೊ, ವಿಡಿಯೊಗಳನ್ನು ಮಾರ್ಪಾಡು ಮಾಡಲು ಹಲವು ಆ್ಯಪ್‌ಗಳು, ಜಾಲತಾಣಗಳು ದೊರೆಯುತ್ತಿವೆ. ಆದರೆ, 'ಡೀಪ್‌ಫೇಕ್' ಬಳಸಿಕೊಂಡು ನಡೆಸುತ್ತಿರುವ ಅಪರಾಧಗಳು ಹೆಚ್ಚಾಗುತ್ತಿವೆ. ವಿಶ್ವದಾದಂತ್ಯ ಕೋಟ್ಯಂತರ ಡಾಲರ್ ಹಣ ಕದಿಯಲಾಗುತ್ತಿದೆ ಮತ್ತು ಅನೇಕರ ಚಾರಿತ್ರ್ಯವಧೆ ಮಾಡಲಾಗುತ್ತಿದೆ.

> ಸೆಲೆಬ್ರಿಟಿಗಳ ವಿಷಯದಲ್ಲಿ 'ಡೀಪ್‌ಫೇಕ್' ವಿಡಿಯೊ ಅಥವಾ ಫೋಟೊ ಜಾಹೀರಾದರೆ ದೊಡ್ಡ ಸುದ್ದಿಯಾಗುತ್ತದೆ. ವಾಸ್ತವದಲ್ಲಿ ಇದು ನಮ್ಮ ಬದುಕಿನ ಹಲವೆಡೆ ಹೇಗೆಲ್ಲ ಬೆರೆತುಹೋಗಿದೆ ಎನ್ನುವುದೇ ಗಾಬರಿ ಹುಟ್ಟಿಸುತ್ತದೆ.

ಸೆಲಿಬ್ರಿಟಿಗಳನ್ನು ಮಾತ್ರವಲ್ಲ, ಜನಸಾಮಾನ್ಯರನ್ನು ಕೂಡ ಡೀಪ್‌ಫೇಕ್ ಕಾಡುತ್ತಿದೆ. ಉದಾಹರಣೆಗೆ, 'ನಿಮ್ಮ ಖಾಸಗಿ ಫೋಟೊ, ವಿಡಿಯೊ ನಮ್ಮ ಹತ್ತಿರವಿದೆ. ನಾವು ಕೇಳಿದಷ್ಟು ಹಣ ಕೊಡದಿದ್ದರೆ ಅವುಗಳನ್ನು ಸಾರ್ವಜನಿಕರಿಗೆ ದೊರೆಯುವಂತೆ ಮಾಡುತ್ತೇವೆ' ಎಂದು ಬ್ಲಾಕ್‌ಮೇಲ್ ಮಾಡುವ ಅಪರಾಧಿಗಳಿದ್ದಾರೆ. ಅಪರಿಚಿತರಿಗೆ ನಿಮ್ಮ ಖಾಸಗಿ ವಿಡಿಯೊ, ಫೋಟೊ ಹೇಗೆ ದೊರೆಯಿತು ಎನ್ನುವುದು ನಿಮ್ಮ ಪ್ರಶ್ನೆ. ಸಾಮಾನ್ಯವಾಗಿ ಸಾಮಾಜಿಕ ಜಾಲತಾಣಗಳಲ್ಲಿ ನಾವು ಹಂಚಿಕೊಳ್ಳುವ ವೈಯಕ್ತಿಕ ಫೋಟೊಗಳನ್ನು ಪಡೆದುಕೊಂಡು, ಡೀಪ್‌ಫೇಕ್ ಫೋಟೊ, ವಿಡಿಯೊಗಳನ್ನು ಅಪರಾಧಿಗಳು ಸೃಷ್ಟಿಸುತ್ತಿದ್ದಾರೆ. ಹೀಗಾಗಿ ಮುಂಜಾಗ್ರತಾ ದೃಷ್ಟಿಯಿಂದ ಸಾಮಾಜಿಕ ಜಾಲತಾಣಗಳಲ್ಲಿ ವೈಯಕ್ತಿಕ ಫೋಟೊ, ವಿಡಿಯೊಗಳನ್ನು ನಿಮ್ಮ ಸ್ನೇಹಿತರಿಗೆ ಮಾತ್ರ ಲಭ್ಯವಾಗುವಂತೆ ಹಂಚಿಕೊಳ್ಳುವುದು ಸೂಕ್ತ.

ಶಾಂತಿ ಕದಡಲು ಬಳಕೆ

ನಾವು ಮಾತನಾಡಿರುವಂತೆ ನೈಜವಾಗಿರುವ ಡೀಪ್‌ಫೇಕ್ ಆಡಿಯೊಗಳನ್ನು ಕೂಡ ಅಪರಾಧಿಗಳು ಸೃಷ್ಟಿಸುತ್ತಿದ್ದಾರೆ. ಕುಟುಂಬ ಸದಸ್ಯರಿಗೆ ಅಥವಾ ಸ್ನೇಹಿತರಿಗೆ ಕರೆ ಮಾಡಿ, ಡೀಪ್‌ಫೇಕ್ ಆಡಿಯೊ ಮೂಲಕ ತಮಗೆ ತುರ್ತಾಗಿ ಹಣ ಬೇಕಾಗಿದೆ ಎಂದು ಕೇಳುವುದು, ಹಣ ಪಡೆದು ವಂಚಿಸುವ ಕೆಲಸವನ್ನು ಕೆಲವು ಅಪರಾಧಿಗಳು ಮಾಡುತ್ತಿದ್ದಾರೆ. ಇದೇ ರೀತಿ, 'ಡೀಪ್‌ಫೇಕ್ ವಿಡಿಯೊ ಮತ್ತು ಆಡಿಯೊ' ಎರಡನ್ನೂ ಬಳಸಿಕೊಂಡು, ಸ್ನೇಹಿತರಿಗೆ ವಿಡಿಯೊ ಕಾಲ್ ಮಾಡುವುದು ಮತ್ತು ಅವರಿಂದ ಹಣ ಪಡೆದು ವಂಚಿಸುವ ಪ್ರಕರಣಗಳೂ ಹೆಚ್ಚಾಗುತ್ತಿವೆ.

ಸಮಾಜದಲ್ಲಿ ಅಶಾಂತಿ, ಹಿಂಸಾಚಾರ ಮತ್ತು ಕೋಮು ಗಲಭೆ ಸೃಷ್ಟಿಸಲು ಭಯೋತ್ಪಾದಕರು ಡೀಪ್‌ಫೇಕ್ ಸುದ್ದಿ, ಫೋಟೊ, ಆಡಿಯೊ ಮತ್ತು ವಿಡಿಯೊಗಳನ್ನು ಸೃಷ್ಟಿಸಿ, ಅತ್ಯಂತ ಕಡಿಮೆ ಸಮಯದಲ್ಲಿ ವೈರಲ್ ಆಗುವಂತೆ ಮಾಡುತ್ತಿದ್ದಾರೆ. ಹೀಗಾಗಿ, ವೈರಲ್ ಆಗುವ ಯಾವುದೇ ಸುದ್ದಿ, ಆಡಿಯೊ-ವಿಡಿಯೊ-ಫೋಟೊಗಳ ಸತ್ಯಾಸತ್ಯತೆಯನ್ನು ಪರಿಶೀಲಿಸುವುದು ಸೂಕ್ತ.

ಮಾನವ ಕಳ್ಳಸಾಗಣೆ, ಅಪರಾಧಿಗಳು ಬೇರೆ ದೇಶಗಳಿಗೆ ಪರಾರಿಯಾಗುವುದು, ಮಾದಕ ಮತ್ತು ನಿಷೇಧಿತ ವಸ್ತುಗಳ ಮಾರಾಟ ಮೊದಲಾದ ಕೃತ್ಯಗಳಿಗೆ ಅಗತ್ಯವಾದ ಪಾಸ್‌ಪೋರ್ಟ್ ಮೊದಲಾದ ಸರ್ಕಾರಿ ದಾಖಲೆಗಳನ್ನು ಸೃಷ್ಟಿಸಲು ಕೂಡ ಡೀಪ್‌ಫೇಕ್ ಬಳಸಲಾಗುತ್ತಿದೆ. ಹೀಗಾಗಿ ನಮ್ಮ ಪಾಸ್‌ಪೋರ್ಟ್, ಡ್ರೈವಿಂಗ್ ಲೈಸೆನ್ಸ್, ಆಧಾರ್, ಪ್ಯಾನ್, ವೋಟರ್ ಐಡಿ ಮೊದಲಾದ ದಾಖಲೆಗಳನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು. ಮತ್ತು ಒಂದು ವೇಳೆ ಅವುಗಳ ಕಳವಾದರೆ, ಈ ಕುರಿತು ತಕ್ಷಣ ಪೋಲಿಸರಲ್ಲಿ ದೂರು ದಾಖಲಿಸಬೇಕು.

ಯುದ್ಧದಿಂದ ಅಪಾರ ಪ್ರಮಾಣದ ಸಾವು, ನೋವು ಮತ್ತು ಆಸ್ತಿಪಾಸ್ತಿ ನಷ್ಟವಾಗುತ್ತದೆ. ಆದರೆ ಯುದ್ಧದಲ್ಲಿ ಕೂಡ ತಮಗೆ ಅನುಕೂಲವಾಗುವಂತೆ ಡೀಪ್‌ಫೇಕ್‌ಗಳನ್ನು ಅಪರಾಧಿಗಳು ಬಳಸಿಕೊಳ್ಳುತ್ತಿದ್ದಾರೆ. ಉದಾಹರಣೆಗೆ, ಉಕ್ರೇನ್‌ನಲ್ಲಿ ನಡೆದಿರುವ ಯುದ್ಧದಲ್ಲಿ ಉಕ್ರೇನ್ ಅಥವಾ ರಷ್ಯಾ ವಿಜಯ ಸಾಧಿಸುತ್ತಿದೆ, ಸಾವಿರಾರು ಸಂಖ್ಯೆಯಲ್ಲಿ ಸೈನಿಕರು ಶರಣಾಗುತ್ತಿದ್ದಾರೆ ಎಂದು ಬಿಂಬಿಸುವಂತಹ ಸಾವಿರಾರು ಫೇಕ್ ಸುದ್ದಿಗಳು, ವಿಡಿಯೊಗಳನ್ನು ಸೃಷ್ಟಿಸಿ ವೈರಲ್ ಮಾಡಲಾಗುತ್ತಿದೆ.

ಪತ್ತೆಗೆ ವಿಧಿವಿಜ್ಞಾನ ತಂತ್ರಜ್ಞಾನ

ಆಧುನಿಕ ತಂತ್ರಜ್ಞಾನ ದುರ್ಬಳಕೆ ಮಾಡಿಕೊಂಡು ಸೃಷ್ಟಿಸುವ ಡೀಪ್‌ಫೇಕ್‌ಗಳನ್ನು ಪತ್ತೆ ಮಾಡಲು ಮತ್ತು ಇಂತಹ ಡೀಪ್‌ಫೇಕ್ ಸೃಷ್ಟಿಸಿದವರು– ವೈರಲ್ ಮಾಡಿದವರನ್ನು ಪತ್ತೆ ಮಾಡಲು ಭಾರತವೂ ಸೇರಿ ಹಲವು ದೇಶಗಳಲ್ಲಿ ಅತ್ಯಾಧುನಿಕ ಸೈಬರ್ ವಿಧಿವಿಜ್ಞಾನ ತಂತ್ರಜ್ಞಾನ ಬಳಸಲಾಗುತ್ತಿದೆ.

14ನೇ ಪುಟಕ್ಕೆ...

ದೊಡ್ಡವರೂ ಟಾರ್ಗೆಟ್

ಪ್ರಸಿದ್ಧ ಕಂಪನಿಯೊಂದರ ಸಿಇಒ, ಲೈವ್ ವಿಡಿಯೊದ ಮೂಲಕ ತಮ್ಮ ಸಂಸ್ಥೆಯ ಉತ್ಪನ್ನಗಳು ಮಾರಾಟವಾಗುತ್ತಿಲ್ಲ ಮತ್ತು ಗ್ರಾಹಕರು ಬೇರೆ ಕಂಪನಿಗಳ ಉತ್ಪನ್ನಗಳನ್ನು ಖರೀದಿಸಲು ಮುಂದಾಗುತ್ತಿದ್ದಾರೆ. ಇದರಿಂದಾಗಿ ಕಂಪನಿಗೆ ಕೋಟ್ಯಂತರ ಡಾಲರ್ ನಷ್ಟವಾಗಿದೆ ಮತ್ತು ನೈತಿಕ ಹೊಣೆ ಹೊತ್ತು ತಾನು ರಾಜೀನಾಮೆ ಸಲ್ಲಿಸುತ್ತಿರುವುದಾಗಿ ಘೋಷಿಸಿದರು. ಒಂದು ಕಡೆ ಈ ವಿಡಿಯೊ ವೈರಲ್ ಆಗುತ್ತಿದ್ದರೆ, ಮತ್ತೊಂದು ಕಡೆ ಷೇರು ಮಾರುಕಟ್ಟೆಯಲ್ಲಿ ಈ ಕಂಪನಿಯ ಷೇರು ಮೌಲ್ಯ ದೊಡ್ಡ ಕುಸಿತ ಕಂಡಿತು. ಕಂಪನಿಯ ಸಿಇಒ ಅವರ ಡೀಪ್‌ಫೇಕ್ ವಿಡಿಯೊ ಸೃಷ್ಟಿಸಿ, ವೈರಲ್ ಮಾಡಿದ ಅಪರಾಧಿಗಳು, ಕಂಪನಿಗೆ ಮತ್ತು ಷೇರುದಾರರಿಗೆ ದೊಡ್ಡ ಪ್ರಮಾಣದ ನಷ್ಟವನ್ನುಂಟು ಮಾಡಿದ್ದರು. ಈ ರೀತಿ, ವಿಡಿಯೊ ಮತ್ತು ಆಡಿಯೊ ಲೈವ್‌ಗಳಲ್ಲಿ ಕೂಡ ಡೀಪ್‌ಫೇಕ್ ಬಳಸಿ ರಾಜಕಾರಣಿಗಳು, ಹಿರಿಯ ಅಧಿಕಾರಿಗಳು, ಗಣ್ಯರು ಮತ್ತು ಉದ್ಯಮಿಗಳಿಗೆ ಮುಜುಗರ ಮತ್ತು ಸಂಕಷ್ಟ ತಂದಿಡುತ್ತಿರುವ ಅಪರಾಧಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಮುಂಬರುವ ಅಮೆರಿಕ ಅಧ್ಯಕ್ಷರ ಚುನಾವಣೆ ಸಮಯದಲ್ಲಿ ಅಭ್ಯರ್ಥಿ ಅಥವಾ ಪಕ್ಷದ ಪರ ಮತ್ತು ವಿರುದ್ಧವಾಗಿ ಜನಾಭಿಪ್ರಾಯ ಸೃಷ್ಟಿಸಲು ದೊಡ್ಡ ಪ್ರಮಾಣದಲ್ಲಿ ಡೀಪ್‌ಫೇಕ್ ಬಳಸುವ ಸಾಧ್ಯತೆ ಕುರಿತು ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.


ವನ್ಯಜೀವಿಗಳ ಮರಣ ಮೃದಂಗ

> ವನ್ಯಜೀವಿಗಳನ್ನು ಓಡಿಸಲು ಅನುಸರಿಸುವ ಅನಾಗರಿಕ ಮತ್ತು ಕ್ರೂರ ಮಾರ್ಗಗಳನ್ನು ನಿಷೇಧಿಸಬೇಕು ಎಂಬ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯೊಂದು ಸುಪ್ರೀಂ ಕೋರ್ಟ್ ತಲುಪಿದೆ. ಈ ಸಂದರ್ಭದಲ್ಲಿ ಅರಣ್ಯಜೀವಿಗಳ ಸಾವಿನ ಕಥನಗಳನ್ನು ಕೇಳಿಯಾದರೂ ನಾವು ಕರಗಬೇಕು.

ಎನ್.ಜಗದೀಶ್ ಕೊಪ್ಪ

ಮೂರು ವರ್ಷಗಳ ಹಿಂದೆ 2020ರ ಜೂನ್‌ನಲ್ಲಿ ಕೇರಳದ ಪಾಲಕ್ಕಾಡ್ ಜಿಲ್ಲೆಯಲ್ಲಿ ಆಹಾರ ಅರಸಿ ಕೃಷಿ ಭೂಮಿಗೆ ಬಂದಿದ್ದ, ಗರ್ಭ ಧರಿಸಿದ್ದ ಹೆಣ್ಣಾನೆಯೊಂದು ಕಾಡು ಹಂದಿಗಳಿಗಾಗಿ ಇರಿಸಿದ್ದ ಸ್ಫೋಟಕ ತುಂಬಿದ್ದ ಅನಾನಸ್ ಹಣ್ಣನ್ನು ತಿನ್ನಲುಹೋಯಿತು. ಅದರ ಬಾಯಿಯು ಸ್ಫೋಟದಿಂದ ಛಿದ್ರಗೊಂಡಿತು. ನೋವನ್ನು ತಾಳಲಾರದ ಆ ಮೂಕಪ್ರಾಣಿಯು ಸಮೀಪದ ನದಿಯೊಂದರಲ್ಲಿ ನಾಲ್ಕು ದಿನಗಳ ಕಾಲ ಹಗಲು-ರಾತ್ರಿ ನಿಂತು, ಕೊನೆಗೆ ಪ್ರಾಣಬಿಟ್ಟಿತು. ಆ ದಾರುಣ ಸಾವು ಈ ನೆಲದ ಪ್ರತಿಯೊಬ್ಬ ಪ್ರಜ್ಞಾವಂತನನ್ನು ಕ್ಷಣ ಮಾತ್ರವಲ್ಲದೆ ಹಲವು ದಿನಗಳ ಕಾಲ ಕಾಡಿದ್ದು ನಿಜ. ವನ್ಯಜೀವಿಗಳನ್ನು ನಾಡಿನಿಂದ ಕಾಡಿಗೆ ಓಡಿಸಲು ಈ ನಾಗರಿಕ ಸಮಾಜ ಅನುಸರಿಸುತ್ತಿರುವ 'ಅನಾಗರಿಕ ಮತ್ತು ಕ್ರೂರ ಮಾರ್ಗಗಳ' ನಡವಳಿಯನ್ನು ನಿಷೇಧಿಸಬೇಕೆಂದು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯೊಂದು ಇದೀಗ ಸುಪ್ರೀಂ ಕೋರ್ಟ್ ತಲುಪಿದೆ. 2019ರಲ್ಲಿ ತಮಿಳುನಾಡಿನ ನೀಲಗಿರಿಯ ಬಳಿ ಚಹಾ ತೋಟವೊಂದರಲ್ಲಿ ನಾಲ್ಕು ವರ್ಷದ ಗಂಡಾನೆಯೊಂದನ್ನು ಇದೇ ರೀತಿ ಹತ್ಯೆ ಮಾಡಲಾಗಿತ್ತು.

ಆಧುನಿಕ ಭಾರತದಲ್ಲಿ ವನ್ಯಜೀವಿ ಮತ್ತು ಮನುಷ್ಯರ ನಡುವಿನ ಸಂಘರ್ಷವು ದಿನನಿತ್ಯದ ಕ್ರಿಯೆ ಎಂಬಂತಾಗಿದೆ. ಋತುಮಾನಗಳಿಗೆ ಅನುಸಾರವಾಗಿ ನೀರು ಮತ್ತು ಆಹಾರ ಅರಸಿಕೊಂಡು ಕಾಡಿನಿಂದ ಕಾಡಿಗೆ ಅಥವಾ ಪ್ರದೇಶದಿಂದ ಪ್ರದೇಶಕ್ಕೆ ಹೋಗುತ್ತಿದ್ದ ಹುಲಿ, ಚಿರತೆ ಮತ್ತು ಆನೆಗಳು ಇತ್ತೀಚೆಗೆ ನಾಡಿನತ್ತ ಮುಖಮಾಡಿವೆ. ನಾಡಿನಲ್ಲಿ ಇರಬೇಕಾದ ಮನುಷ್ಯ ಕಾಡಿಗೆ ಲಗ್ಗೆ ಇಟ್ಟಿದ್ದಾನೆ. ರೆಸಾರ್ಟ್, ಸಫಾರಿ, ಅರಣ್ಯ ವೀಕ್ಷಣೆ ಮುಂತಾದವುಗಳ ನೆಪದಲ್ಲಿ ಅವುಗಳ ಆವಾಸಸ್ಥಾನದಲ್ಲಿ ಬೀಡುಬಿಟ್ಟು ವನ್ಯಜೀವಿಗಳ ಸಹಜ ಬದುಕಿಗೆ ಧಕ್ಕೆ ತಂದಿದ್ದಾನೆ. ಇಪ್ಪತ್ತೊಂದನೆಯ ಶತಮಾನದ ಆಧುನಿಕ ಜಗತ್ತು ಮತ್ತು ತಂತ್ರಜ್ಞಾನದ ದೃಷ್ಟಿಯಲ್ಲಿ ಅಭಿವೃದ್ಧಿ ಎಂದರೆ ಮನುಷ್ಯನ ಶ್ರೇಯೋಭಿವೃದ್ಧಿಗೆ ಇರುವ ಏಕೈಕ ಸೂತ್ರ ಎಂಬ ಸ್ವಾರ್ಥದ ಪರಿಕಲ್ಪನೆ ಮುನ್ನೆಲೆಗೆ ಬಂದಿದೆ.



ರಸ್ತೆ ಕಾಮಗಾರಿಯಿಂದ ಸಾವಿನ ಕೂಪ

ಇಂದು ದೇಶದಾದ್ಯಂತ ವಿಸ್ತರಿಸುತ್ತಿರುವ ರಾಷ್ಟ್ರೀಯ ಹೆದ್ದಾರಿಗಳು ಮತ್ತು ರೈಲ್ವೆ ಮಾರ್ಗಗಳು ವನ್ಯಜೀವಿಗಳ ಪಾಲಿಗೆ ಸಾವಿನ ಕೂಪಗಳಾಗಿ ಪರಿಣಮಿಸಿವೆ. ಅವುಗಳ ಸಹಜ ಕಿರುದಾರಿ ಎಂದು ಕರೆಯುವ 'ಕಾರಿಡಾರ್'ಗಳು ಹೆದ್ದಾರಿಯಿಂದ ಮುಚ್ಚಿಹೋಗುತ್ತಿದೆ. ಇತ್ತೀಚೆಗೆ ಮೈಸೂರು ಮತ್ತು ಬೆಂಗಳೂರು ನಡುವೆ ನಿರ್ಮಿಸಲಾದ ಹೊಸ ರಾಷ್ಟ್ರೀಯ ಹೆದ್ದಾರಿಯಿಂದ ರಾಮನಗರದ ಬಳಿ ಗುಡ್ಡಗಳಲ್ಲಿ ವಾಸಿಸುತ್ತಿದ್ದ ಕರಡಿ, ನರಿ, ಮೊಲ, ಮುಂತಾದ ಪ್ರಾಣಿಗಳು ಆಹಾರಕ್ಕಾಗಿ ರಸ್ತೆ ದಾಟಲಾಗದೆ ಹಸಿವು ಮತ್ತು ನೀರಡಿಕೆಯಿಂದ ಅಸುನೀಗುತ್ತಿವೆ. ಹುಬ್ಬಳ್ಳಿ ಮತ್ತು ಗೋವಾ ನಡುವಿನ ರೈಲ್ವೆ ಮಾರ್ಗದಲ್ಲಿ ದಾಂಡೇಲಿ ಅಭಯಾರಣ್ಯದ ಕಾಡುಕೋಣಗಳ ಸ್ಥಿತಿ ಕೂಡ ಇದೇ ಆಗಿದೆ. ಕನಿಷ್ಠ ತಿಂಗಳಿಗೆ ಒಂದು ಅಥವಾ ಎರಡು ಪ್ರಾಣಿಗಳು ರೈಲಿಗೆ ಸಿಲುಕಿ ಸಾಯುತ್ತಿವೆ.

ಹುಲಿಗಳ ಜೀವಶಾಸ್ತ್ರಜ್ಞರಾದ ಉಲ್ಲಾಸ್ ಕಾರಂತರು ವನ್ಯ ಜೀವಿಗಳು ಮತ್ತು ಮಾನವನ ನಡುವಿನ ಸಂಘರ್ಷವನ್ನು ಕುರಿತು 2019ರ ಜನವರಿಯ 'ದ ಜರ್ನಲ್ ಆಫ್ ಗವರ್ನೆನ್ಸ್' ಪತ್ರಿಕೆಯಲ್ಲಿ ಹೀಗೆ ದಾಖಲಿಸಿದ್ದರು: 'ಇಲ್ಲಿಯವರೆಗಿನ ಅರಣ್ಯ ಇಲಾಖೆಯ ಕ್ರಮಗಳು ಬಹುಮಟ್ಟಿಗೆ ಪ್ರತಿಕ್ರಿಯಾತ್ಮಕವಾಗಿವೆ. ಆದರೆ, ವನ್ಯಜೀವಿ ಸಂರಕ್ಷಣೆ ಮತ್ತು ಸಂಘರ್ಷ ತಡೆಗಟ್ಟುವಲ್ಲಿ ಮತ್ತು ಸ್ಪಷ್ಟವಾದ ಗುರಿ ಸಾಧಿಸುವಲ್ಲಿ ಅವುಗಳು ನಿಖರವಾದ ಯೋಜನೆಗಳನ್ನು ಹೊಂದಿಲ್ಲ. ಇದರ ಪರಿಣಾಮವಾಗಿ ಘರ್ಷಣೆಗಳು ಸಹಿಷ್ಣುತೆಯ ಮಟ್ಟವನ್ನು ಮೀರಿ ಉಲ್ಬಣಗೊಳ್ಳುತ್ತಿವೆ. ಈವರೆಗೆ ವನ್ಯಜೀವಿ-ಮಾನವ ಸಂಘರ್ಷಗಳನ್ನು ಎದುರಿಸಲು ನಿರ್ವಹಣಾ ಆಯ್ಕೆಗಳ ಮಾದರಿಯನ್ನು ತರ್ಕಬದ್ಧವಾಗಿ ಚರ್ಚಿಸಲಾಗಿಲ್ಲ. ಪ್ರಾಣಿಗಳ ಜೀವಶಾಸ್ತ್ರದ ಬಗ್ಗೆ ವಿಜ್ಞಾನವು ನಮಗೆ ಏನು ಹೇಳುತ್ತದೆ ಎಂಬುದನ್ನು ಪರಿಗಣಿಸಿ, ನಿಯಮಿತವಾಗಿ ಸಂಘರ್ಷಗಳನ್ನು ಎದುರಿಸಬೇಕಾದ ವನ್ಯಜೀವಿ ವ್ಯವಸ್ಥಾಪಕರ ಅಗತ್ಯಗಳು ಮತ್ತು ಮಧ್ಯಸ್ಥಗಾರರ ಅಭಿಪ್ರಾಯಗಳನ್ನು (ಸಾಮಾನ್ಯವಾಗಿ ರೈತರು, ಬುಡಕಟ್ಟು ಜನರು ಮತ್ತು ಇತರ ಗ್ರಾಮೀಣ ಜನರು) ಸಂಗ್ರಹಿಸುವ ಅಗತ್ಯವಿದೆ. ಜೊತೆಗೆ ಪ್ರತಿಯೊಂದು ವನ್ಯಜೀವಿ ಪ್ರಭೇದದ ರಕ್ಷಣೆಯು ಸಾಂಸ್ಕೃತಿಕ ಮಹತ್ವ ಪಡೆಯಬೇಕಿದೆ. ಹೆಚ್ಚು ಸಂವೇದನಾಶೀಲವಾದ ಆನೆಯಂತಹ ಜೀವಿಗಳಿಗೆ ಹಾನಿಯನ್ನುಂಟುಮಾಡುವ ಸ್ಫೋಟಕ ತುಂಬಿದ ತೆಂಗಿನಕಾಯಿ ಅಥವಾ ಅನಾನಸ್ ಮತ್ತು ಹಲಸಿನ ಹಣ್ಣುಗಳ ಬಳಕೆಗೆ ರೈತರು ಮೊರೆಹೋಗುವ ಅಗತ್ಯ ಇರುತ್ತಿರಲಿಲ್ಲ. ಒಂದು ಸಮಸ್ಯೆಯನ್ನು ವಿವಿಧ ಆಯಾಮಗಳಲ್ಲಿ ಗುರುತಿಸುವ ಹಾಗೂ ಅದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಅಗತ್ಯವಿದೆ'.


13ನೇ ಪುಟಕ್ಕೆ...

2 ವರ್ಷಗಳಲ್ಲಿ 63 ಸಾವಿರ ಪ್ರಾಣಿಗಳ ಸಾವು

ಇಂದು ನಮ್ಮ ರಾಜ್ಯವೂ ಸೇರಿದಂತೆ ಇಡೀ ದೇಶದಲ್ಲಿ ಆನೆ, ಹುಲಿ ಮತ್ತು ಚಿರತೆಗಳ ದಾಳಿಯಿಂದ ವರ್ಷವೊಂದಕ್ಕೆ ಕನಿಷ್ಠ ಐನೂರು ಮಂದಿ ಸಾವನ್ನಪ್ಪುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಭಾರತದಲ್ಲಿ ಪ್ರತಿವರ್ಷ ಅಸ್ವಾಭಾವಿಕವಾಗಿ ಐವತ್ತರಿಂದ ಅರವತ್ತು ಆನೆಗಳು ಅಸುನೀಗಿದರೆ, 2017-18 ಮತ್ತು 2020-21ರ ನಡುವೆ ನಾಲ್ಕು ಸಿಂಹ ಹಾಗೂ ಎಪ್ಪತ್ತೂರು ಆನೆಗಳು ಸೇರಿ ಒಟ್ಟು 63,345 ವನ್ಯಜೀವಿಗಳ ಸಾವಿನ ಪ್ರಕರಣಗಳು ಸಂಭವಿಸಿವೆ ಎಂದು 'ಕಂಟ್ರೋಲರ್ ಆಫ್ ಆಡಿಟರ್ ಜನರಲ್' ಸಂಸ್ಥೆ (ಸಿಎಜಿ) ತನ್ನ ವರದಿಯಲ್ಲಿ ದಾಖಲಿಸಿದೆ.


ಕೇರಳದ ಪಾಲಕ್ಕಾಡ್ ಜಿಲ್ಲೆಯಲ್ಲಿ ಸ್ಫೋಟಕದಿಂದ ಗಾಯಗೊಂಡು ನರಳಿ ಮೃತಪಟ್ಟಿದ್ದ ಗರ್ಭಿಣಿ ಆನೆಯ ಶವವನ್ನು ಹೊರತೆಗೆದ ಸಂದರ್ಭದ ಚಿತ್ರ. –ಪಿಟಿಐ ಚಿತ್ರ

ಹಿಂಸೆ-ಅಹಿಂಸೆಯ ಮುಖಾಮುಖಿ



ನಕೋಸಿಯ ಭಾರತೀಯಗೊಂಡ ನಾಟಕ 'ಆ ಲಯ ಈ ಲಯ'ದ ದೃಶ್ಯ

ದೇವು ಪತ್ತಾರ

ರಂಗಭೂಮಿ

ಆರು ದಶಕಗಳ ಹಿಂದೆ ರಚಿತವಾದ ಆಫ್ರಿಕನ್ ನಾಟಕವೊಂದು ಭಾರತದ-ಕರ್ನಾಟಕದ ವರ್ತಮಾನದ 'ಪ್ರಶ್ನೆ'ಗಳಿಗೆ ಉತ್ತರ ಹುಡುಕಲು ಯತ್ನಿಸುತ್ತದೆ. ಹಾಗೆ ನೋಡಿದರೆ ಅದೇನೂ ವಿಶೇಷ ಸಂಗತಿಯಲ್ಲ. ಸಾಹಿತ್ಯದ ಎಲ್ಲ ಅಲ್ಲದಿದ್ದರೂ ಬಹುತೇಕ ಪಠ್ಯಗಳು ಕಾಲ-ದೇಶಗಳ 'ಮಿತಿ'ಯನ್ನು ಮೀರುವ ಮೂಲಕವೇ ತಮ್ಮತನ ಸಾಬೀತುಪಡಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತವೆ. ಈ ಹೆಣಗುವಿಕೆಯ 'ಫಲ' ನಿರ್ಧಾರವಾಗುವುದು ಅದು ಕೊಡುವ ಅನುಭವದ ಆಧಾರದ ಮೇಲೆ. ಕೃತಿಯೊಂದು 'ಕ್ಲಾಸಿಕ್' ಆಗುವುದರ ಕಡೆಗಿನ ಚಲನೆ ಅದು. ರೂಪಕಗಳ ಭಾಷೆಯಲ್ಲಿ ಮಾನವ ಬದುಕಿನ ಚಲನೆಗಳನ್ನು ದಾಖಲಿಸುವ ಎಚ್.ಕೆ. ಶ್ವೇತಾರಾಣಿಯವರ ನಿರ್ದೇಶನದ ಈ ಪ್ರದರ್ಶನವು ಕೇವಲ 'ಪ್ರಯೋಗ'ವಾಗಿ ಮಾತ್ರ ಉಳಿಯದೇ ವಿಭಿನ್ನ- ವಿಶಿಷ್ಟ ಹಾಗೂ ತೀವ್ರ ರಂಗಾನುಭವ ಒದಗಿಸುತ್ತದೆ ಎಂಬುದೇ ವಿಶೇಷ.

ಆಫ್ರಿಕಾದ ನಾಟಕಕಾರ ಲೂಯಿ ನಕೋಸಿಯ (1936-2010) ನಾಟಕ 'ದ ರಿದಮ್ ಆಫ್ ವಯಲನ್ಸ್' (1963) ಕನ್ನಡದಲ್ಲಿ 'ಆ ಲಯ ಈ ಲಯ' ಆಗಿದೆ. ಮೂಲ ಇಂಗ್ಲಿಷ್ ನಾಟಕವವನ್ನು ನಟ-ನಿರ್ದೇಶಕ ನಟರಾಜ ಹೊನ್ನವಳ್ಳಿ ಅವರು ಕನ್ನಡೀಕರಿಸಿದ್ದಾರೆ. ಸಾಹಿತ್ಯ ಕೃತಿಯಾದ ನಾಟಕವು ರಂಗದ ಮೇಲೆ ಪ್ರಯೋಗವಾದಾಗಲೇ ಅದು ಸಾರ್ಥಕ. ಹಾಗೆಯೇ ರಂಗಪಠ್ಯವು ಸಾಹಿತ್ಯಕೃತಿಯೂ ಆದಾಗಲೇ ಸೊಗಸು. ನಾಟಕ-ರಂಗಪಠ್ಯಗಳೆರಡೂ ಆಗಿ ಮನ-ಗಮನ ಸೆಳೆಯುವುದು ಈ ನಾಟಕ- ಪ್ರಯೋಗದ ವಿಶೇಷ. 1963ರಲ್ಲಿ ಇಂಗ್ಲಿಷಿನಲ್ಲಿ ಮೊದಲ ಬಾರಿಗೆ ರಂಗಪ್ರಯೋಗ ಕಂಡಿದ್ದ ರಂಗಪಠ್ಯವು 1964ರಲ್ಲಿ ನಾಟಕವಾಗಿ ಪ್ರಕಟವಾಗಿತ್ತು.

> ಮೊದಲ ದೃಶ್ಯದ ಸಂಯೋಜನೆಯೇ ವಿಭಿನ್ನ. ರಂಗದ ಎರಡೂ ಬದಿ ಇಬ್ಬರು ಪೊಲೀಸರು 'ಹಿಂಸೆ'ಗಾಗಿ ಕಾಯುವುದು ಅವರ ಅಸಹನೆಯ ಜೊತೆಗೆ ಸಹಾನುಭೂತಿಯನ್ನೂ ಕಾಣಿಸಿದೆ.

ತನ್ನ ಸಮಕಾಲೀನ ವರ್ತಮಾನಕ್ಕೆ ತೀವ್ರವಾಗಿ ಪ್ರತಿಕ್ರಿಯಿಸುವ ಮೂಲಕ ಎಲ್ಲ ಕಾಲ-ದೇಶಗಳಿಗೂ ಸಮಕಾಲೀನವಾಗುವ ಗುಣವನ್ನು ಈ ಪಠ್ಯ ಮತ್ತು ಅದರ ಪ್ರಯೋಗ ಒಳಗೊಂಡಿದೆ. ರೈತರ ಪ್ರತಿಭಟನೆಯೂ ಸೇರಿ ಕಳೆದ ನಾಲ್ಕಾರು ವರ್ಷಗಳಲ್ಲಿ ಭಾರತ ಕಂಡ ಹೋರಾಟ- ಪ್ರತಿಭಟನೆಗಳನ್ನು ಈ ನಾಟಕದಲ್ಲಿ ವಾಚ್ಯವಾಗದಂತೆ ಸೂಚ್ಯವಾಗಿ ದಾಖಲಿಸಲಾಗಿದೆ.

ಅಹಿಂಸಾತ್ಮಕ ಪ್ರತಿಭಟನೆಯೊಂದು 'ಹಿಂಸೆ'ಯೆಡೆಗೆ ತಿರುಗಲಿ ಎಂದು ಆಶಿಸುವ ಪ್ರಭುತ್ವ. ಅದಕ್ಕೆ ಪ್ರತಿಕ್ರಿಯೆಯಾಗಿ ಶಾಂತಿಯುತ ಪ್ರತಿರೋಧದಲ್ಲಿ ತೊಡಗಿಸಿಕೊಂಡೂ ಅದರ 'ಲಯ' ಬದಲಿಸಿ ಹಿಂಸೆಯೆಡೆಗೆ ಚಲಿಸುವ ಆಲೋಚನೆಗಳು ಪರಸ್ಪರ ಮುಖಾಮುಖಿ ಆಗುತ್ತವೆ. ಈ ಸಂಘರ್ಷವೇ ನಾಟಕವನ್ನು 'ಜೀವಂತ'ವಾಗಿ ಇಡುತ್ತದೆ. ಸರಿ-ತಪ್ಪುಗಳ, ಹಿಂಸೆ-ಅಹಿಂಸೆಗಳ ನಡುವಿನ ಎರಡಾಗಿ ವಿಭಜಿಸುವ ಕ್ರಮವನ್ನು ಇಲ್ಲವಾಗಿಸಿಬಿಡುತ್ತದೆ. ಒಂದು ಮತ್ತೊಂದರೊಳಗೆ ಬೆರೆತು, ಪರಸ್ಪರ ತಮ್ಮ ಅಸ್ತಿತ್ವವನ್ನೇ ಇಲ್ಲವಾಗಿಸುವ ನಿಟ್ಟಿನಲ್ಲಿ ಚಲಿಸುತ್ತವೆ. ಈ ಚಲನೆಯು ನಾಟಕದ ಜೀವಾಳ.

ಪ್ರಭುತ್ವದ ವರ್ಣಭೇದ ನೀತಿ, ತಾರತಮ್ಯ -ಅಸಮಾನತೆಯ ವಿರುದ್ಧದ ದನಿಗಳು ಪ್ರೇಕ್ಷಕರ ಸಮೂಹದ ನಡುವಿನಿಂದಲೇ 'ಪಾತ್ರ'ಗಳಾಗಿ ವೇದಿಕೆ ಪ್ರವೇಶಿಸುತ್ತವೆ. ರಂಗ ಮತ್ತು ನೋಡುಗರ ನಡುವಿನ 'ಅಂತರ'ವನ್ನು ಕಡಿಮೆ ಮಾಡುವ ಅಥವಾ ಬಹುತೇಕ 'ಇಲ್ಲ'ವಾಗಿಸುವ ಪ್ರಯತ್ನ ಇದು. ಇದೇನೂ ಹೊಚ್ಚಹೊಸ ಪ್ರಯತ್ನವೇನಲ್ಲವಾದರೂ ಈ ನಾಟಕದ ವಸ್ತುವಿನ ಹಿನ್ನೆಲೆಯಲ್ಲಿ ಪರಿಣಾಮಕಾರಿಯಾಗಿ ಆಗಿದೆ.

ಮೊದಲ ದೃಶ್ಯದ ಸಂಯೋಜನೆ ವಿಭಿನ್ನವಾಗಿದೆ. ರಂಗದ ಎರಡೂ ಬದಿ ಇಬ್ಬರು ಪೊಲೀಸ್ ಸಿಬ್ಬಂದಿ 'ಹಿಂಸೆ'ಗಾಗಿ ಕಾಯುತ್ತಿದ್ದಾರೆ. ಈ ಕಾಯುವಿಕೆ ಅವರ ಅಸಹನೆಯ ಜೊತೆಗೆ ಸಹಾನುಭೂತಿಗೂ ಕಾರಣವಾಗಿದೆ. 'ಕಾವ್ಯಾತ್ಮಕ' ಅನುಭವ ಒದಗಿಸುವ ಸಂಭಾಷಣೆಗಳು ಭಾವನೆಗಳ ಜೊತೆಗೆ ವಿಚಾರಕ್ಕೂ ಅನುವು ಮಾಡಿಕೊಡುತ್ತವೆ.

> ಶ್ವೇತಾರಾಣಿ ಎಚ್.ಕೆ. ನಿರ್ದೇಶನದ 'ಆ ಲಯ ಈ ಲಯ' ನಾಟಕವು ಲೂಯಿ ನಕೋಸಿಯ ರಚನೆ. ಅದನ್ನು ನಟರಾಜ್ ಹೊನ್ನವಳ್ಳಿ ಕನ್ನಡೀಕರಿಸಿದ್ದು, ನವೆಂಬರ್ 8ರಂದು ಬೆಂಗಳೂರಿನ ರಂಗಶಂಕರದಲ್ಲಿ ಪ್ರದರ್ಶಿತವಾಯಿತು.

ರಂಗವನ್ನು ಪರದೆಯ ಮೂಲಕ ವಿಭಾಗಿಸಿ, ಪರದೆಯಾಚೆಗಿನ ಪ್ರತಿಭಟನೆಗೆ ಹಿಂಬೆಳಕು ನೀಡಿ ತೆರೆಯ ಮೇಲೆ ಕಪ್ಪು-ಬಿಳುಪಾಗಿ ಕಾಣಿಸುವಂತೆ ಮಾಡಿದ್ದು ವಿಶೇಷ. ಈ ಪ್ರತಿಭಟನೆಯು 'ಆಜಾದಿ' ಘೋಷಣೆ ಹಾಗೂ 'ಕಾಗದ ತೋರಿಸುವುದಿಲ್ಲ' ಎಂಬ ಅಂಶ ಸೇರಿಕೊಳ್ಳುವುದರೊಂದಿಗೆ ಭಾರತೀಯಗೊಂಡಿದೆ. ಮೇಲ್ನೋಟಕ್ಕೆ ವಾಚ್ಯ ಎಂಬಂತೆ ಭಾಸವಾದರೂ, ಅದು ಸಹ್ಯವೂ ಆಗಿದೆ.

ಕತೆಯ ಜೊತೆಗೆ ಬೆಳೆಯುತ್ತ ನಾಟಕವು ಒಂದೊಂದೇ ಮಜಲನ್ನು ದಾಟುತ್ತ ಹೋಗುತ್ತದೆ. ಮೊದಲಿಗೆ ಇದ್ದ ಪ್ರತಿಭಟನೆ- ಆಕ್ರೋಶದ ದನಿಯು ನಂತರದ ದೃಶ್ಯದಲ್ಲಿ ಶಿಫ್ಟ್ ಆಗುತ್ತದೆ. ಹಾಗಂತ ಅದು ಮೂಲ ಆಶಯದಿಂದ ದೂರ ಸಾಗುವುದಿಲ್ಲ. ವಿದ್ಯಾರ್ಥಿಗಳು ಒಂದೆಡೆ ಸೇರುವ ಕೆಫೆಯಲ್ಲಿನ ದೃಶ್ಯಗಳು ಜೀವಂತಿಕೆಯಿಂದ ಕೂಡಿವೆ. ಸಂಗೀತ ಪ್ರಧಾನ ನೆಲೆಗೆ ಬರುವುದರ ಜೊತೆಗೆ ಪ್ರತಿಭಟನೆಯಲ್ಲಿ ತನ್ನ ಪಾಲನ್ನೂ ಸೇರಿಸಿಕೊಳ್ಳುತ್ತದೆ. ಪ್ರೀತಿ- ಪ್ರಣಯ- ಆತಂಕ- ಭರವಸೆ- ಹುಡುಕಾಟಗಳ ಕೂಡುತಾಣವಾದ ಕೆಫೆಯು ನಾಟಕೀಯ ಸನ್ನಿವೇಶಗಳಿಗೆ ಸಾಕ್ಷಿಯಾಗುತ್ತದೆ.

ಸ್ಫೋಟದ ಮೂಲಕ 'ಹಿಂಸೆ'ಯ ಲಯ ಬದಲಿಸುವ ಪ್ರಯತ್ನ, ಅದನ್ನು ಅರಿತು ಸ್ಫೋಟ ತಪ್ಪಿಸಲು ಹೊರಡುವ ಯುವಕ, ಅದಕ್ಕೆ ನಾಟಕ ಒದಗಿಸುವ ಕಾರಣ 'ತೆಳು'ವಾಗಿದೆ. ಎರಡು ಗಂಟೆಗಳ ಹಿಂದಷ್ಟೇ ಭೇಟಿಯಾದ 'ಬಿಳಿ'ಯ ಹುಡುಗಿ ಪ್ರೇಯಸಿಯಾಗುತ್ತಾಳೆ. ಪ್ರೇಯಸಿಯ ತಂದೆಯ ಉಳಿಸಲು ವಿಫಲ ಯತ್ನ ನಡೆಸುತ್ತಾನೆ. ಸ್ಫೋಟದಲ್ಲಿ ತಂದೆಯನ್ನು ಮಾತ್ರವಲ್ಲದೆ ಪ್ರಿಯಕರನನ್ನೂ ಕಳೆದುಕೊಂಡ ಯುವತಿಯು ಸಿನಿಮೀಯ ರೀತಿಯಲ್ಲಿ ಪ್ರತಿಭಟಿಸುತ್ತಾಳೆ. ನಾಟಕದ ಒಡಲಲ್ಲಿಯೇ ಈ ತೆಳುವಾದ ರಚನೆ ಇರುವುದರಿಂದ ರಂಗದ ಮೇಲೆಯೂ ಕಾಣಿಸಿಕೊಂಡಿದೆ. ಸಾಹಿತ್ಯ ಕೃತಿಯನ್ನು ರಂಗಪಠ್ಯವಾಗಿಸಿ ಅದನ್ನು ಸಮಕಾಲೀನ ಹಾಗೂ ಭಾರತೀಯಗೊಳಿಸುವ ನಿಟ್ಟಿನಲ್ಲಿ ಅನುವಾದಕರ ಹಾಗೂ ನಿರ್ದೇಶಕರ ಶ್ರಮ ಪರಿಶ್ರಮ ಎದ್ದು ಕಾಣಿಸುತ್ತದೆ. ಈ ಕಾರಣಕ್ಕಾಗಿಯೇ ನಟರಾಜ ಹೊನ್ನವಳ್ಳಿ ಹಾಗೂ ಎಚ್.ಕೆ. ಶ್ವೇತಾರಾಣಿ ಅವರು ಅಭಿನಂದನಾರ್ಹರು.

ನಾಟಕವನ್ನು ವೈಚಾರಿಕತೆಯ ಭಾರದಿಂದ ಕುಸಿಯದಂತೆ ನೋಡಿಕೊಳ್ಳುವ ಪ್ರಯತ್ನವನ್ನು ರಂಗದ ಮೇಲೆ ಅಭಿನಯಿಸಿದ ಕಲಾವಿದರು ಮಾಡಿದ್ದಾರೆ. ನಿರ್ದೇಶಕರ ಆಲೋಚನೆ-ವಿಚಾರಗಳು ಪ್ರದರ್ಶನದ ವೇಳೆ ಲವಲವಿಕೆಯಿಂದ ಸಾಕಾರಗೊಳ್ಳುವಂತೆ ಮಾಡಿದ್ದು ನಟರ ವೃತ್ತಿಪರತೆಗೆ ಸಾಕ್ಷಿಯಂತಿತ್ತು. ಬೆಳಕು-ರಂಗಸಂಯೋಜನೆ-ಸಂಗೀತ-ಪ್ರಸಾಧನ ಪೂರಕವಾಗಿದ್ದವು.



ಭಾರತದ ಇತ್ತೀಚಿನ ಹೋರಾಟ-ಪ್ರತಿಭಟನೆಗಳನ್ನೂ ಸೂಚ್ಯವಾಗಿ ಕಾಣಿಸುವ ಉದ್ದೇಶದ ನಾಟಕವಿದು

ಕಳೆದ ಕೆಲವು ವರ್ಷಗಳಿಂದ ಹಾಡು-ಕುಣಿತ, ಪುರಾಣ-ಚರಿತ್ರೆಗಳ ಮೂಲಕ ಮನರಂಜನೆ ಕೇಂದ್ರಿತವಾಗಿದ್ದ 'ನೀನಾಸಂ'ನ ತಿರುಗಾಟದ ನಾಟಕಗಳ ಲಯವನ್ನು ಈ ನಾಟಕ ಬದಲಿಸಿದೆ. 'ಆ ಲಯ ಈ ಲಯ'ವು ವೈಚಾರಿಕ- ಪ್ರತಿಭಟನೆಯನ್ನು ಸಕಾರಾತ್ಮಕ ನೆಲೆಯಿಂದ ನೋಡಿದ-ನೋಡಬಯಸುವ ಮೂಲಕ 'ತಿರುಗಾಟ'ವು ತಪ್ಪಿಸಿಕೊಂಡಿದ್ದ ತನ್ನ ಹೆಜ್ಜೆ ಜಾಡಿಗೆ ಮರಳುವ ಪ್ರಯತ್ನದಂತಿದೆ.

ಎಡಗೈ ರೇಖೆಗಳ ಕಲಾಸೆಲೆ



ಶ್ರೀಸಾಮಾನ್ಯರ ಬದುಕಿನ ಕುರಿತ ಕಲಾಕೃತಿ
ಚಿತ್ರ: ಪ್ರಶಾಂತ್ ಎಚ್.ಜಿ.


ರೂಪಾ ಕೆ.ಎಂ.

ಎಡಗೈನಲ್ಲಿ ರೇಖೆಗಳನ್ನು ಬಿಡಿಸುವ ಮೂಲಕ ಕಲಾರಚನೆಗೆ ಹೊಸ ಆಯಾಮ ಒದಗಿಸಿದ್ದಾರೆ ಹಿರಿಯ ಕಲಾವಿದ ಪ.ಸ.ಕುಮಾರ್.

ಅಪಘಾತ, ಅದರಿಂದ ಬಲಗೈಗೆ ಆದ ಪೆಟ್ಟು, ಬಲಗೈನಲ್ಲಿ ಚಿತ್ರ ಬಿಡಿಸಲು ಸಾಧ್ಯವೇ ಇಲ್ಲ ಎನ್ನುವ ಸ್ಥಿತಿ– ಈ ಎಲ್ಲಾ ಸವಾಲುಗಳನ್ನು ದಿಟ್ಟವಾಗಿ ಎದುರಿಸುತ್ತಲೇ ಎಡಗೈನಲ್ಲಿ ರೇಖೆಗಳನ್ನು ಎಳೆಯುತ್ತ ಈ ಕಲಾಕೃತಿಗಳದ್ದೇ ಸಂಗ್ರಹವನ್ನು ಅವರು ಹೊರತಂದಿದ್ದಾರೆ. ಇವುಗಳ ಪ್ರದರ್ಶನಕ್ಕೆ ಒತ್ತಾಸೆಯಾಗಿ ನಿಂತಿದ್ದು ಕಲಾ ಇತಿಹಾಸಕಾರರಾದ ಡಾ. ಪ್ರಮೀಳಾ ಲೋಚನ್.

ಬದುಕಿನ ಅನಿವಾರ್ಯಕ್ಕೆ ಕಟ್ಟುಬಿದ್ದು ಆರಂಭಿಸಿದ ಎಡಗೈ ಚಿತ್ರರಚನೆಯ ಪ್ರಯೋಗವು ಆರಂಭದಲ್ಲಿ ದೈಹಿಕ ನೋವು, ಮಾನಸಿಕ ಆತಂಕಗಳನ್ನು ನೀಗಲು ಇದ್ದ ಕಿರುಹಾದಿಯಾಗಿತ್ತು. ಇದೇ ಬರುಬರುತ್ತ ಹೊಸ ಕಾಲ್ದಾರಿಯಾದ ಬಗೆಯನ್ನು ಅವರು ಹೇಳಿಕೊಳ್ಳುತ್ತಾ ಹೋದರು.

'ಪೆಟ್ಟಾದ ಬಲಗೈಗೆ ಮತ್ತೆ ಕಸುವು ಬರಬಹುದು ಅಥವಾ ಬಾರದೆಯೂ ಇರಬಹುದು ಎಂದು ವೈದ್ಯರು ಹೇಳಿದಾಗ, ಅಲ್ಲಿಯವರೆಗೆ ರೇಖೆಗಳನ್ನು ನಂಬಿಕೊಂಡು ಬದುಕುತ್ತಿದ್ದ ನನಗೆ ಆತಂಕ ಶುರುವಾಯಿತು. ಚಿಕ್ಕಮಕ್ಕಳು, ಸಂಸಾರ ಇವೆಲ್ಲವನ್ನೂ ನಿಭಾಯಿಸುವುದು ಹೇಗೆ ಎನ್ನುವ ಪ್ರಶ್ನೆಯಲ್ಲಿಯೇ ಎಡಗೈಯಲ್ಲಿ ಪೆನ್ನು ಹಿಡಿದು ರೇಖೆ ಬಿಡಿಸಲು ಆರಂಭಿಸಿದೆ. ಬಲಗೈಗೆ ಮೊದಲಿನಿಂದಲೂ ತರಬೇತಿ ಸಿಕ್ಕಿರುತ್ತದೆ. ಜತೆಗೆ ಮಿದುಳಿನ ಮಾರ್ಗದರ್ಶನವಿರುತ್ತದೆ. ಎಡಗೈ ಹಾಗಲ್ಲ. ಆರಂಭದಲ್ಲಿ ಮೂರು ವಾರ ರೇಖೆಗಳು ರಚ್ಚೆ ಹಿಡಿದ ಮಗುವಿನಂತೆ ಅಡ್ಡಾದಿಡ್ಡಿ ಓಡುತ್ತಿದ್ದವು. ಆಗ ಮೂಡುತ್ತಿದ್ದ ರೇಖೆಗಳು ಬೇರೆ ಏನನ್ನೋ ಹೇಳುತ್ತಿವೆ ಎನಿಸಿತು'.



ಪ.ಸ.ಕುಮಾರ್

'1998ರ ಸಮಯದಲ್ಲಿ ಎಡಗೈನಲ್ಲಿಯೇ ಪೂರ್ಣವಾಗಿ 'ಆ್ಯಕ್ಸಿಡೆಂಟ್' ಎನ್ನುವ ಕಲಾಕೃತಿ ಮೂಡಿಬಂತು. ನಡೆದ ಘಟನೆಯನ್ನು ಯಥಾವತ್ತಾಗಿ ಚಿತ್ರಿಸಲು ಬಯಸಿದ್ದೆ. ಆಮೇಲೆ ಸಾವು, ಅದರೆಡೆಗಿರುವ ಅವ್ಯಕ್ತ ಭಯ ತೀವ್ರವಾಗಿ ಕಾಡಿತು. ಇದು 'ಬೆಕ್ಕು ಹಾಗೂ ಅಲೆಗಳ ಹಾವು, ಅದರ ಬಾಯಿಯಲ್ಲಿ ಹೋಗುತ್ತಿರುವ ಮನುಷ್ಯ' ಕಲಾಕೃತಿಗಳನ್ನು ರಚಿಸುವಂತೆ ಪ್ರೇರೇಪಿಸಿದವು.'


'ಎಡಗೈಗಿರುವ ರಚನಾ ಶಕ್ತಿಯ ಕುರಿತು ತುಸು ಅರಿವು ಮೂಡುತ್ತಿದ್ದಂತೆ ಬಲಗೈ ಸರಿಹೋಯಿತು. ಆದರೆ, ರಚನೆಯಲ್ಲಿ ಎಡಗೈಗೆ ಇರುವ ವಿಶಿಷ್ಟ ಗುಣ ಬಲಗೈಗೆ ಬರುವುದಿಲ್ಲ. ಎಡಗೈ ಅಂಕೆಯಲ್ಲಿ ಇರುವುದಿಲ್ಲ, ನಿಜ. ರೇಖೆ ಬಿಡಿಸುವಾಗ ಅಳತೆ–ಅನುಪಾತಗಳನ್ನು ಮೀರಿ ಹೋಗಿರುತ್ತದೆ. ಆದರೆ, ಎಡಗೈನಲ್ಲಿ ಮೂಡುವ ರೇಖೆಗಳು ತಮ್ಮನ್ನು ತಾವೇ ರೂಪಿಸಿಕೊಳ್ಳುವ ಪರಿಗೆ ಬೆರಗಾದೆ. ಈ ರೇಖೆಗಳಲ್ಲಿ ಅನಾಟಮಿ ಹುಡುಕಲಾಗದು; ಅವುಗಳಿಗೆ ಸ್ವಂತಿಕೆ ಇದೆ. ಈ ವಿಚಾರ ನನ್ನನ್ನು ಹಿಡಿದಿಟ್ಟಿತು. ಈ ಕೌಶಲವನ್ನು ಜೋಪಾನ ಮಾಡಬೇಕು ಅನಿಸಿತು.'

ಕನಸುಗಳ ಗಮ್ಮತ್ತು, ಹುಂಜದ ಗತ್ತು

ಪ.ಸ.ಕುಮಾರ್ ಅವರ 'ಕ್ಯಾಚ್ ದ ಮೂನ್' ಸರಣಿ ಕಲಾಕೃತಿಗಳಲ್ಲಿರುವ ಚಂದ್ರಮ ಮಧ್ಯವರ್ಗದ ಜನರು ಕಾಣುವ ಕನಸಿನ ರೂಪಕ. ಮಿತಿಗಳ ನಡುವೆ ಹಲವು ಕನಸು ಕಾಣುತ್ತ ಭೃಂಗದ ಬೆನ್ನೇರಿ ಹೊರಟವರ ರೂಪಕಗಳಂತಿವೆ ಈ ಕಲಾಕೃತಿಗಳು. ಇನ್ನು ಇದೇ ಸರಣಿಯಲ್ಲಿ 'ಮೂನ್ ಸೆಲ್ಲರ್' ಎನ್ನುವ ಪಾತ್ರವೊಂದನ್ನು ಕಾಣಬಹುದು. ಕನಸುಗಳನ್ನು ಮಾರುವ ಮೋಡಿಗಾರನೇ ಈ ಮೂನ್ ಸೆಲ್ಲರ್. ಸಾಧನೆಗಳಿಗೆ ಕನಸುಗಳೇ ಪ್ರೇರಣೆಯಲ್ಲವೇ. ಕನಸು ಮಾರಲು ಒಬ್ಬ ಮೋಡಿಗಾರನಿದ್ದರೆ ಎನ್ನುವ ಪರಿಕಲ್ಪನೆಯಲ್ಲಿ ಈ ಮೂನ್ ಸೆಲ್ಲರ್ ಸೃಷ್ಟಿಯಾಗಿದ್ದಾನೆ.

ಈ ಸಂಗ್ರಹದ ಕಲಾಕೃತಿಗಳಲ್ಲಿ ಹುಂಜ ಹಾಗೂ ನಾಯಿಯನ್ನು ಸಾಮಾನ್ಯವಾಗಿ ನೋಡಬಹುದು. ಇದಕ್ಕೆ ಅವರು ನೀಡುವ ವಿಶ್ಲೇಷಣೆ ಹೀಗಿದೆ: 'ಹುಂಜಕ್ಕಿರುವ ಗತ್ತು, ಗೈರತ್ತೇ ಬೇರೆ. ಅದು ನಿಂತುಕೊಳ್ಳುವ ಭಂಗಿಯಲ್ಲಿ ಅಹಂ ಇರುತ್ತದೆ. ಆ ಭಂಗಿಯೇ ನನ್ನನ್ನು ಆಕರ್ಷಿಸುತ್ತದೆ. ಯಾವಾಗಲೂ ಅದು ಆಕ್ರಮಣಶೀಲ ವಾಗಿರುತ್ತದೆ. ಹಣ್ಣು ಮಾರುವವರು, ನಾಯಿ, ಹುಂಜ ಇವೆಲ್ಲವೂ ಶ್ರೀಸಾಮಾನ್ಯರ ಬದುಕಿನ ಚಿತ್ರಣವನ್ನು ವಿಶಿಷ್ಟವಾಗಿ ಕಟ್ಟಿಕೊಡುತ್ತವೆ'.

ಬರಿಯ ರೇಖಾಚಿತ್ರಗಳೇ ಮೂಡಿದವಲ್ಲ ಅನಿಸಿದಾಗ ಅಕ್ರಿಲಿಕ್ ಕಡೆಗೂ ಹೊರಳಿದ್ದಾರೆ. ರೇಖೆಗಳ ನಡುವೆ ಗಾಢ ಕಪ್ಪು ಬಣ್ಣವನ್ನು ಬಳಸಿ ಏಕತಾನತೆಯನ್ನು ಮುರಿದಿದ್ದಾರೆ. ತೆಳು ರೇಖೆಗೆ ಸಂವಾದಿಯಾಗಿ ಗಾಢ ಕಪ್ಪು ಬೆರೆಸಿ ಹೊಸ ಕಲಾಸೂಕ್ಷ್ಮವೊಂದನ್ನು ತೆರೆದಿಟ್ಟಿದ್ದಾರೆ.




ಕನಸು ಮಾರುವ ಮೋಡಿಗಾರ 'ಮೂನ್ ಸೆಲ್ಲರ್'

> **27ರವರೆಗೆ ಪ್ರದರ್ಶನ**
>
> ಕಲಾವಿದ ಪ.ಸ. ಕುಮಾರ್ ಅವರು ಎಡಗೈಯಲ್ಲಿ ಚಿತ್ರಕಲೆ ಬಿಡಿಸಲು ದೊಡ್ಡ ಕಾರಣವೊಂದಿದೆ. ಹಾಗೆ ಅವರು ಕ್ಯಾನ್ವಾಸ್ ಮೇಲೆ ಅಕ್ರಿಲಿಕ್ ಬಳಸಿ ಮಾಡಿದ ನಾಲ್ಕು ಕಲಾಕೃತಿಗಳೂ ಸೇರಿ ಒಟ್ಟು 85 ಕಲಾಕೃತಿಗಳು ಪ್ರದರ್ಶಿತವಾಗುತ್ತಿವೆ. ಬೆಂಗಳೂರಿನ ವಸಂತನಗರದ ಆರ್ಟ್‌ಹೌಸ್‌ನಲ್ಲಿ ಈ ಕಲಾಪ್ರದರ್ಶನ ನವೆಂಬರ್ 27ರವರೆಗೆ ಇರಲಿದೆ.

ಪೋರ್ಟ್ರೇಟ್‌ಗಳ ವಿಚಾರದಲ್ಲಿಯೂ ಚೌಕಟ್ಟು ಮುರಿದಿದ್ದಾರೆ. ಇಲ್ಲಿಯೂ ಎಡಗೈಗಿರುವ ಅನೂಹ್ಯ ಕಲಾಶಕ್ತಿಯನ್ನು ಬಳಸಿಕೊಂಡಿರುವುದು ವಿಶೇಷ.

ಸತತ ಅಭ್ಯಾಸದಿಂದಾಗಿ ಎಡಗೈಯೂ ಬಲಗೈನಂತೆ ಪಳಗಿಬಿಟ್ಟರೆ ಎಂಬ ಭಯ ಪ.ಸ. ಕುಮಾರ್ ಅವರಿಗೆ ಇದ್ದೇ ಇದೆ. ಅದು ಪಳಗಿಬಿಟ್ಟರೆ ತನ್ನ ವಿಶಿಷ್ಟತೆಯನ್ನು ಕಳೆದುಕೊಂಡು ಬಿಡುತ್ತದೆ. ಪಳಗಿತು ಎನಿಸಿದಾಗೆಲ್ಲ ಮೂರು–ನಾಲ್ಕು ತಿಂಗಳು ಎಡಗೈಗೆ ವಿರಾಮ ಕೊಡುತ್ತೇನೆ ಎನ್ನುವ ಅವರು, 'ಎಡಗೈಯಲ್ಲಿ ಚಿತ್ರ ರಚನೆ ಎಂಬುದು ಕಸರತ್ತಲ್ಲ. ಅದರ ವಿಶೇಷ ಗುಣದ ಕಾರಣಕ್ಕಾಗಿ ಎಡಗೈಯಲ್ಲಿ ಚಿತ್ರ ಬರೆಯುವುದನ್ನು ಪ್ರೀತಿಸುತ್ತೇನೆ' ಎಂದು ಕೈಗಳ ಕಲಾವಂತಿಕೆಯ ಸೂಕ್ಷ್ಮಗಳನ್ನು ಹಂಚಿಕೊಂಡರು.

ಮರಣ ಮೃದಂಗ



ಮೈಸೂರು–ವಿರಾಜಪೇಟೆ ರಸ್ತೆಯಲ್ಲಿ ಅತಿವೇಗವಾಗಿ ಸಾಗಿದ ಬಸ್ ಗುದ್ದಿದ್ದರಿಂದ ತೀವ್ರವಾಗಿ ಗಾಯಗೊಂಡಿದ್ದ ರಂಗ ಎಂಬ ಆನೆ 2018ರಲ್ಲಿ ಮೃತಪಟ್ಟಿತ್ತು. –ಪ್ರಜಾವಾಣಿ ಚಿತ್ರ

12ನೇ ಪುಟದಿಂದ...

ರೈಲು ಕಂಬಿಯ 'ಬೇಲಿ'

ಇತ್ತೀಚಿನ ದಿನಗಳಲ್ಲಿ ರೈಲು ಕಂಬಿಗಳನ್ನು ಅರಣ್ಯದ ಸುತ್ತ ಹಾಕುವುದರ ಮೂಲಕ ಆನೆಗಳನ್ನು ನಿಯಂತ್ರಿಸುವ ಪ್ರಯತ್ನ ನಡೆದಿದೆ. ಇತ್ತೀಚಿನ ಅಂಕಿಅಂಶಗಳ ಪ್ರಕಾರ ಭಾರತದಲ್ಲಿ ಹುಲಿ ಮತ್ತು ಆನೆಗಳ ಸಂತತಿ ವೃದ್ಧಿಸಿದೆ. ಕೇವಲ ಅಂಕಿಅಂಶವನ್ನು ಪ್ರಕಟಿಸಿ ಹೆಮ್ಮೆ ಪಟ್ಟುಕೊಳ್ಳುವುದಕ್ಕಿಂತ ಅವುಗಳಿಗೆ ಬದಲಾದ ಹವಾಮಾನದಲ್ಲಿ ಅರಣ್ಯದಲ್ಲಿ ಯಥೇಚ್ಛವಾದ ಆಹಾರ ಮತ್ತು ನೀರು ಇದೆಯಾ? ಎಂದು ಅರಣ್ಯಾಧಿಕಾರಿಗಳು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಿದೆ.

ಬಿಳಿಗಿರಿರಂಗನ ಬೆಟ್ಟ, ಮಹಾದೇಶ್ವರಬೆಟ್ಟ ಮತ್ತು ಬಂಡಿಪುರ ಅಭಯಾರಣ್ಯಗಳಲ್ಲಿ ವ್ಯಾಪಕವಾಗಿ ಹಬ್ಬುತ್ತಿರುವ ಲಂಟಾನ ಗಿಡದಿಂದಾಗಿ ಅರಣ್ಯದಲ್ಲಿ ಇತರೆ ಗಿಡಮರಗಳು ಇರಲಿ, ಹಸಿರು ಹುಲ್ಲು ಕೂಡ ಬೆಳೆಯುತ್ತಿಲ್ಲ. ಪ್ರತಿ ಬೇಸಿಗೆಯಲ್ಲಿ ಕಾಡ್ಗಿಚ್ಚು ಸಾಮಾನ್ಯ ಸಂಗತಿಯಾಗಿದೆ. ಕೇರಳದ ತ್ರಿಶ್ಶೂರು ಜಿಲ್ಲೆಯಲ್ಲಿರುವ ಅರಣ್ಯ ಸಂಶೋಧನಾ ಕೇಂದ್ರದ ಇ.ಎ. ಜಯ್ಸನ್ ಎಂಬುವರು 2018ರಲ್ಲಿ ಮಲ್ಲಪುರಂ ಜಿಲ್ಲೆಯಲ್ಲಿ ನಡೆಸಿದ ಸಂಶೋಧನೆಯ ಫಲವಾಗಿ ವಾರ್ಷಿಕವಾಗಿ ರೈತರು ಪ್ರತಿ ಹೆಕ್ಟೇರ್ ಕೃಷಿ ಭೂಮಿಯಲ್ಲಿ ಹದಿನೈದು ಸಾವಿರ ಮೌಲ್ಯದ ಫಸಲನ್ನು ವನ್ಯ ಜೀವಿಗಳ ಹಾವಳಿಯಿಂದ ಕಳೆದುಕೊಳ್ಳುತ್ತಿದ್ದಾರೆ ಎಂಬುದು ದೃಢಪಟ್ಟಿದೆ. ಕರ್ನಾಟಕದ ಚಿಕ್ಕಮಗಳೂರು, ಸಕಲೇಶಪುರ ಮತ್ತು ಆಲ್ದೂರು, ಕೊಡಗಿನ ವಿರಾಜಪೇಟೆ ಮತ್ತು ನಾಗರಹೊಳೆಯ ಸುತ್ತಮುತ್ತಲಿನ ಗ್ರಾಮಗಳ ರೈತರು ಕಾಫಿ, ಬಾಳೆ ಹಾಗೂ ವಿವಿಧ ತರಕಾರಿಗಳ ನಷ್ಟವನ್ನು ನಿರಂತರವಾಗಿ ಅನುಭವಿಸುತ್ತಿದ್ದಾರೆ. ಈ ಕಾರಣದಿಂದ ತಂತಿ ಬೇಲಿಗೆ ವಿದ್ಯುತ್ ಹಾಯಿಸುವುದರ ಮೂಲಕ, ಆನೆ, ಚಿರತೆ, ಮಂಗ, ಜಿಂಕೆಗಳ ಸಾವಿಗೆ ಪರೋಕ್ಷವಾಗಿ ಕಾರಣರಾಗುತ್ತಿದ್ದಾರೆ.

ಕಳೆದ ಅಕ್ಟೋಬರ್ 12ರಂದು ಕರ್ನಾಟಕ ಸರ್ಕಾರದ ಅರಣ್ಯ ಸಚಿವರು 'ಅಭಯಾರಣ್ಯಗಳ ವ್ಯಾಪ್ತಿ ಪ್ರದೇಶದ ಒಂದು ಕಿಲೋಮೀಟರ್ ದೂರದಲ್ಲಿ ರೆಸಾರ್ಟ್, ಫಾರ್ಮ್‌ಹೌಸ್, ಹಾಗೂ ಕ್ಲಬ್‌ಗಳಿಗೆ ಅನುಮತಿ ನೀಡಲಾಗುವುದು ಹಾಗೂ ನಾಗರಹೊಳೆಯ ಆರು ವಲಯಗಳ ವ್ಯಾಪ್ತಿಯಲ್ಲಿ ನೀಡುವ ಕುರಿತು ಪರಿಶೀಲಿಸಲಾಗುವುದು' ಎಂದು ಹೇಳಿರುವ ಮಾತು ವನ್ಯಜೀವಿಗಳ ಮಾರಣಹೋಮಕ್ಕೆ ಬರೆಯಲಾದ ಮುನ್ನುಡಿ ಎಂಬಂತಿದೆ. ಅರಣ್ಯ ರಕ್ಷಣೆ ಎಂದರೆ ವಿದೇಶಿ ತಳಿಗಳ ಕೃತಕ ಮರಗಳನ್ನು ಬೆಳೆಸಿ ಹಸಿರನ್ನು ಪ್ರತಿಬಿಂಬಿಸುವ ಕ್ರಿಯೆಯಲ್ಲ; ಅರಣ್ಯವೆಂಬುದು ಇರುವೆಯಿಂದ ಹಿಡಿದು, ಅಳಿಲು, ಮಂಗಗಳು, ಸರೀಸೃಪಗಳು, ಪಕ್ಷಿ ಸಂಕುಲ ಸೇರಿದಂತೆ ನೂರಾರು ಜೀವಿಗಳ ಆವಾಸಸ್ಥಾನ. ಅವುಗಳಿಗೆ ಬೇಕಾದ ಹಣ್ಣಿನ ಮರಗಳು, ಆನೆಗಳ ಮುಖ್ಯ ಆಹಾರವಾದ ಬಿದಿರು ಬೆಳೆಸುವುದರ ಜೊತೆಗೆ ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ಹೊಂಡಗಳ ನಿರ್ಮಾಣ ಇವೆಲ್ಲವೂ ತುರ್ತಾಗಿ ಆಗಬೇಕಿದೆ.

ಮುನ್ನೋಟ 19-11-2023 ರಿಂದ 25-11-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಅತಿಯಾದ ಗೌರವವನ್ನು ಎಲ್ಲರಿಂದ ನಿರೀಕ್ಷೆ ಮಾಡುವಿರಿ. ವಿದ್ಯಾರ್ಥಿಗಳಿಗೆ ಮಧ್ಯಮ ಮಟ್ಟದ ಫಲಿತಾಂಶವಿರುತ್ತದೆ. ನ್ಯಾಯಾಧೀಶರಿಗೆ ಉತ್ತಮ ನ್ಯಾಯ ನೀಡಿದ ಸಂತೋಷವಿರುತ್ತದೆ. ಗರ್ಭಿಣಿ ಹೆಂಗಸರು ಸ್ವಲ್ಪ ಎಚ್ಚರ ವಹಿಸುವುದು ಒಳ್ಳೆಯದು. ಹೆಂಡತಿಯ ಸಂತೋಷಕ್ಕಾಗಿ ಹೆಚ್ಚು ಹಣ ಖರ್ಚು ಮಾಡಬೇಕಾಗಬಹುದು. ಹಣದ ನಿರ್ವಹಣೆಯನ್ನು ಸರಿಯಾಗಿ ಮಾಡದಿದ್ದಲ್ಲಿ ಸಾಲಕ್ಕೆ ಬೀಳಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಪಾಲುದಾರಿಕೆಯ ವ್ಯವಹಾರಗಳಲ್ಲಿ ಸಾಕಷ್ಟು ಲಾಭವಿರುತ್ತದೆ. ಸಂಗಾತಿಯು ಸ್ಥಿರಾಸ್ತಿ ಕೊಳ್ಳಲು ಸಾಕಷ್ಟು ಸಹಕಾರ ನೀಡುವರು. ದೀರ್ಘಕಾಲಿನ ಕಾಯಿಲೆಯಿಂದ ಬಳಲುತ್ತಿರುವವರು ಚೇತರಿಕೆ ಕಾಣುತ್ತಾರೆ. ಸರ್ಕಾರಿ ಉದ್ಯೋಗಿಗಳಿಗೆ ಸ್ಥಾನಮಾನದ ಸೂಚನೆ ಇದೆ. ಅನಿರೀಕ್ಷಿತ ಖರ್ಚುಗಳು ಎದುರಾಗುವ ಸಾಧ್ಯತೆಗಳಿವೆ. ಕುಟುಂಬ ಸಮೇತರಾಗಿ ತೀರ್ಥಯಾತ್ರೆ ಮಾಡುವ ಯೋಗವಿದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಸರ್ಕಾರಿ ಸಂಸ್ಥೆಗಳ ಜೊತೆ ವ್ಯವಹಾರ ಮಾಡುವಾಗ ಒಪ್ಪಂದಗಳ ಬಗ್ಗೆ ಸರಿಯಾಗಿ ಗಮನಿಸಿ. ಮಾತನಾಡುವಾಗ ಎಚ್ಚರವಿರಲಿ, ಅಸಂಬದ್ಧ ಮಾತುಗಳನ್ನಾಡಿ ಸಿಕ್ಕಿ ಬೀಳುವ ಸಾಧ್ಯತೆಯಿದೆ. ಬಂಧುಗಳಿಂದ ನಿಮ್ಮ ಬಗ್ಗೆ ದ್ವೇಷ ಭುಗಿಲೆದ್ದರೂ ನಂತರ ಸರಿಯಾಗುತ್ತದೆ. ಸಂಗಾತಿ ಮಾಡುವ ದುಂದು ವೆಚ್ಚಗಳಿಂದ ಸ್ವಲ್ಪ ತಲೆಬಿಸಿಯಾಗಬಹುದು. ವ್ಯಾಪಾರ ವ್ಯವಹಾರಗಳಲ್ಲಿ ನಿಮ್ಮ ಎಚ್ಚರಿಕೆ ಇರಲಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ವಾರದ ಆರಂಭ ಸಂತೋಷದಾಯಕವಾಗಿರುತ್ತದೆ. ನಿಮ್ಮ ಮಾತಿಗೆ ಹೆಚ್ಚು ಬೆಲೆ ಬರುತ್ತದೆ. ನಿಮ್ಮ ಕೆಲಸಕಾರ್ಯಗಳಿಗೆ ಸೋದರಿಯರಿಂದ ಅಡ್ಡಿ ಬರಬಹುದು. ನಿರೀಕ್ಷಿತ ಆಸ್ತಿಯನ್ನು ಕೊಳ್ಳಲು ಸೂಕ್ತ ಸಾಲಸೌಲಭ್ಯಗಳು ದೊರೆಯುತ್ತವೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಗಿಂತ ಹೆಚ್ಚಿನ ಯಶಸ್ಸು ದೊರೆಯುತ್ತದೆ. ನಿಮ್ಮ ಮಕ್ಕಳಿಂದ ನಿಮಗೆ ಬೇಕಾದ ಸೌಲಭ್ಯಗಳು ದೊರೆಯುತ್ತವೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ನಿಮ್ಮ ಸ್ವ ಪ್ರಯತ್ನ ಹೆಚ್ಚಾದಲ್ಲಿ ಮಾತ್ರ ಕೆಲಸ ಕಾರ್ಯಗಳು ಮುಂದುವರೆಯುತ್ತವೆ. ಧನ ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಲೇವಾದೇವಿ ವ್ಯವಹಾರವನ್ನು ಖಂಡಿತ ಮಾಡುವುದು ಒಳಿತಲ್ಲ. ಕ್ರೀಡಾಪಟುಗಳಿಗೆ ಉತ್ತಮ ಯಶಸ್ಸು ಸಿಗುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ದೊರೆಯುತ್ತದೆ. ವಿದೇಶಕ್ಕೆ ಹೋಗಬೇಕೆನ್ನುವವರಿಗೆ ಕಾನೂನಿನ ತೊಡಕುಗಳು ಎದುರಾಗುವ ಸಾಧ್ಯತೆಗಳಿವೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಸ್ವಲ್ಪ ಆಲಸಿತನ ನಿಮ್ಮಲ್ಲಿ ಮನೆ ಮಾಡಿರುತ್ತದೆ. ನಿಮ್ಮ ಸ್ವಂತ ನಡವಳಿಕೆಯಿಂದ ಬಂಧುಗಳು ಶತ್ರುಗಳಾಗುವರು. ಆಸ್ತಿ ವಿಚಾರಗಳಲ್ಲಿ ಹಣ ಕಳೆದುಕೊಳ್ಳುವ ಸಾಧ್ಯತೆಯಿದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಸಾಲ ಕೊಟ್ಟವರು ಬಂದು ಕಾಡಬಹುದು. ರಾಜಕೀಯ ನಾಯಕರು ಜನಾಕರ್ಷಣೆಗಾಗಿ ಹೊಸ ತಂತ್ರಗಳನ್ನು ಮಾಡುವರು. ಸಂಗಾತಿಯ ವಿಲಾಸಿ ಜೀವನ ಸ್ವಲ್ಪ ಗಾಬರಿ ಹುಟ್ಟಿಸುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖ 1,2,3

ಗೌರವಕ್ಕಾಗಿ ಹೋರಾಟ ನಡೆಸುವಿರಿ. ನಿಮ್ಮೆಲ್ಲ ಕೆಲಸಗಳಿಗೆ ಹಿರಿಯರ ಹಾಗೂ ಸಂಗಾತಿ ಕಡೆಯವರ ಸಹಕಾರ ದೊರೆಯುತ್ತದೆ. ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಹೆಚ್ಚು ಲಾಭವಿರುತ್ತದೆ. ಸಂಗೀತ ಕಲಿಯುತ್ತಿರುವವರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ಹೈನುಗಾರಿಕೆ ಮಾಡುತ್ತಿರುವವರಿಗೆ ಆದಾಯ ಏರಿಕೆ ಸೂಚನೆ ಇದೆ. ಆಸ್ತಿಕೊಳ್ಳಲು ಸರ್ಕಾರಿ ಸಾಲ ಸೌಲಭ್ಯ ದೊರೆಯುತ್ತದೆ.

ವೃಶ್ಚಿಕ — ವಿಶಾಖ 4 ಅನೂರಾಧ, ಜ್ಯೇಷ್ಠ

ಅತಿಯಾದ ಆತ್ಮಾಭಿಮಾನ ನಿಮ್ಮನ್ನು ಆವರಿಸಬಹುದು. ಅನಿರೀಕ್ಷಿತ ಖರ್ಚುಗಳು ಬರಬಹುದು. ನಿಮ್ಮ ನಡವಳಿಕೆಯಲ್ಲಿ ಚುರುಕುತನವನ್ನು ಕಾಣಬಹುದು. ಕೃಷಿಯಿಂದ ಲಾಭವಿರುತ್ತದೆ. ಮಾನವ ಸಂಪನ್ಮೂಲವನ್ನು ಒದಗಿಸುವ ಸಂಸ್ಥೆಗಳಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಆದಿರು ಮಾರಾಟಗಾರರಿಗೆ ಇದ್ದ ತೊಡಕುಗಳು ನಿವಾರಣೆಯಾಗುತ್ತವೆ. ತಾಯಿಯು ನಿಮ್ಮನ್ನು ಉಪೇಕ್ಷಿಸಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ದೃಢ ಮನಸ್ಸಿನಿಂದ ಮುನ್ನುಗ್ಗುವ ಚೈತನ್ಯ ನಿಮ್ಮಲ್ಲಿ ಇರುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯನ್ನು ತಲುಪುವ ಸಾಧ್ಯತೆಗಳಿವೆ. ಸಂಗೀತಗಾರರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಮಹಿಳೆಯರು ಮಾಡುವ ವ್ಯವಹಾರಗಳಲ್ಲಿ ಹೆಚ್ಚಿನ ಲಾಭವಿರುತ್ತದೆ. ಶತ್ರುಗಳನ್ನು ಮಟ್ಟಹಾಕಲು ನೀವು ಬಳಸುವ ತಂತ್ರಗಳು ಬಹಳ ಪರಿಣಾಮಕಾರಿ ಆಗಿರುತ್ತವೆ. ನಿಮ್ಮ ಬುದ್ಧಿವಂತಿಕೆ ಕೆಲವೊಮ್ಮೆ ಕೈ ಕೊಡುವ ಸಾಧ್ಯತೆಗಳಿವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಆಸಕ್ತಿ ಹೆಚ್ಚುತ್ತದೆ. ಆಸ್ತಿಯನ್ನು ಕೊಳ್ಳುವ ವಿಚಾರಕ್ಕೆ ಸಂಬಂಧಿಸಿದಂತೆ ಹೊಸ ಮೂಲಗಳು ಗೋಚರಿಸುತ್ತವೆ. ಫ್ಯಾಶನ್ ಡಿಸೈನ್ ಮಾಡುವವರಿಗೆ ಹೆಚ್ಚಿನ ಮಾರುಕಟ್ಟೆ ದೊರೆಯುತ್ತದೆ. ಒಟ್ಟು ಕುಟುಂಬದ ವ್ಯವಹಾರಗಳಲ್ಲಿ ನಿಮಗೆ ಹೆಚ್ಚಿನ ಲಾಭವಿರುತ್ತದೆ. ವೃತ್ತಿಯಲ್ಲಿ ಹೊಸ ರೀತಿಯ ಅಭಿವೃದ್ಧಿಯನ್ನು ಕಾಣಬಹುದು. ಲೋಹ ತಜ್ಞರಿಗೆ ಹೆಚ್ಚಿನ ಬೇಡಿಕೆ ಬರುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಎಲ್ಲರನ್ನೂ ಎದುರಿಸುವ ಛಲ ನಿಮ್ಮಲ್ಲಿ ಇರುತ್ತದೆ. ಹಣದ ಒಳಹರಿವು ಕಡಿಮೆಯಾಗಬಹುದು. ಹಿರಿಯರು ಎಲ್ಲರನ್ನೂ ಒಗ್ಗೂಡಿಸುವ ಪ್ರಯತ್ನಕ್ಕೆ ಕೈ ಹಾಕುವರು. ಸರ್ಕಾರಿ ಕೆಲಸದಲ್ಲಿರುವವರಿಗೆ ಸೌಲಭ್ಯಗಳು ಹೆಚ್ಚಾಗುತ್ತವೆ. ಕ್ರೀಡಾಪಟುಗಳಿಗೆ ಸರ್ಕಾರದಿಂದ ಪ್ರೋತ್ಸಾಹ ಧನ ದೊರೆಯುವ ಸಾಧ್ಯತೆಗಳಿವೆ. ಕೆಲವರಿಗೆ ಕಾಲು ನೋವು ಕಾಣಿಸಬಹುದು. ಮನೆ ಪಾಠ ಮಾಡುವವರ ಆದಾಯ ಹೆಚ್ಚುವ ಸಾಧ್ಯತೆ ಇದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನಿಮ್ಮ ನಡವಳಿಕೆ ಹಾಗೂ ಮಾತಿನಲ್ಲಿ ಕಾಠಿಣ್ಯವನ್ನು ಕಾಣಬಹುದು. ಹಣದ ಒಳಹರಿವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಉಪನ್ಯಾಸಕಾರರಿಗೆ ಹೆಚ್ಚಿನ ಅವಕಾಶಗಳು ದೊರೆತು ಹೆಸರು ಗಳಿಸಬಹುದು. ಸಂಗಾತಿಯು ನಿಮ್ಮನ್ನು ಸದಾ ಪರೀಕ್ಷಾರ್ಥವಾಗಿ ಗಮನಿಸುತ್ತಿರುತ್ತಾರೆ. ಕೊಳ್ಳಲು ಯತ್ನಿಸುತ್ತಿದ್ದ ಆಸ್ತಿಯನ್ನು ಪಡೆದುಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ದೊರೆಯುತ್ತದೆ.

ಪದಬಂಧ 2816



ಮೇಲಿನಿಂದ ಕೆಳಕ್ಕೆ

1. ದಿನಬೆಳಗಾದರೆ ಮೂಡುವ ರಂಗೇರಿದ ಮಾಲಾಧರ 3
2. ಹೊಸದೆಂದರೆ ಸಾಲದು, ಇದು ಹೊಸದರಲ್ಲಿ ಹೊಸತು 5
3. ರಾಮಾನುಜಾಚಾರ್ಯರ ಏಕತೆಯ ವಿಶೇಷ ವಾದ 5
4. ಸಮರಸದ ಜೀವನದಲ್ಲಿ ದ್ರವವಾಗಿ ಬೆರೆತ ಸರಳ ಸಲ್ಲಾಪ ಮತ್ತು ಕೋಪದ ಜಗಳ 6
7. ಏಳೇಳು ಸಮುದ್ರದಾಚೆ ಅಡಗಿರುವ ಅಗೋಚರ ಕಡಲು 5
10. ರಂಗಭೂಮಿ ಕ್ಷೇತ್ರದಲ್ಲಿ ಹೆಸರು ಪಡೆದ ನೀಲಕಂಠೇಶ್ವರ ನಾಟ್ಯ ಸೇವಾ ಸಂಘದ ಪ್ರಚಲಿತ ನಾಮ 3
11. ಭೂಮಿಯನ್ನು ಕಕ್ಷೆಯಲ್ಲಿ ನಿಲ್ಲಿಸಿದ ಸೂಕರ ಅವತಾರ 5
12. ತಾವರೆಯನ್ನು ಹೋಲುವ ಮುಖ 6
15. ನೆತ್ತರ ವರ್ಣದ ಶ್ರೀಗಂಧ 5
16. ಮೈಲಿಗೆಯ ಎದುರು ಪರಿಶುದ್ಧತೆಯ ಆಚಾರ ಇದು ಸಾಹಿತ್ಯದಲ್ಲಿ ಸಲ್ಲದು ಎಂಬುದು ಹಲವರ ವಾದ 5
18. ಮನೆಯಲ್ಲಿ ಹಿರಿಯನ ಸ್ಥಾನ ಪಡೆದವ 3

ಎಡದಿಂದ ಬಲಕ್ಕೆ

1. ಇನ್ನೊಬ್ಬರಿಗೆ ದೃಷ್ಟಿ ಕರುಣಿಸುವ ಮಹಾ ಕೊಡುಗೆ 4
3. ವಿಶಿಷ್ಟವಾದ ಪ್ರಗತಿ ಬೆಳವಣಿಗೆ 3
5. ಹೇರಳವಾಗಿ ಒಟ್ಟಾಗಿ ಬೆಳೆದ ಕಾಡು 4
6. ಅಸಹಾಯಕ ಸ್ಥಿತಿಯಲ್ಲಿ ಕಾಪಾಡು ಎಂದು ಬೇಡು 3
8. ಕಾಯಿ, ಬೆಲ್ಲ, ಬಾಳೆಹಣ್ಣು ಬೆರೆತ ಸವಿ ಮಿಶ್ರಣ 4
9. ಹೊಸದಾಗಿ ತೆಗೆದ ಬೆಣ್ಣೆ ಕದ್ದ ಕಳ್ಳ ಕೃಷ್ಣ ಈ ಹೆಸರು ಪಡೆದ 6
11. ವ್ಯಾಪಾರಿಗೊಂದು ಪರ್ಯಾಯ 3
13. ಸಲಿಗೆಯಲ್ಲಿ ಸೇರಿರಬಹುದಾದ ಬೆಲೆ 3
14. ಜೇನಿನ ಸವಿಯಂತೆ ಹೃದಯಗಳ ಕೂಡಲು 6
17. ಪೀಳಿಗೆಯಿಂದ ಪೀಳಿಗೆಗೆ ಹೊರೆಯನ್ನು ಸಾಗಿಸುವ ಜೀವಾಣು 4
19. ಮುಖ ಕಾಣಬಾರದೆಂದು ಹಾಕಿಕೊಳ್ಳುವ ತೆರೆ 3
20. ನಳಪಾಕದ ರುಚಿ ಕಂಡವಳು 4
21. ಕುಣಿಯುವವನ ವೃತ್ತಿ 3
22. ಅಡುಗೆ ಹದವಾಗದಿದ್ದಾಗ ಹೀಗೆನ್ನಬಹುದೆ? 4

ಪದಬಂಧ ಉತ್ತರ -2815

ಮೇಲಿಂದ ಕೆಳಕ್ಕೆ

1.ಬಲಿದಾನ 2.ಮಿತವ್ಯಯ 3.ಪದಕ 4.ಕಿರುನಾಟಕ 6.ಪರಂಪರಾಗತ 8.ಯದುಕುಲ 9.ನರಚಕ್ರವರ್ತಿ 11.ಪಾಳೇಗಾರ 13.ಕಾಲನಿಗ್ರಹ 14.ಪ್ರಾಸಕವಿ 15.ಜೆಮಸೆಹ 16.ಕಾಮಿತೆ

ಎಡದಿಂದ ಬಲಕ್ಕೆ

1.ಬಲಿಪಾಡ್ಯಮಿ 3.ಪಟಾಕಿ 5.ವ್ಯವಸ್ಥಾಪಕ 7.ನಯವಿನಯ 10. ಪರಿಪಾಕ 12.ಚರಿತ್ರಕಾರಾ 13.ಕಾಲಚಕ್ರ 14.ಪ್ರಾತಸ್ಮರಣೆ 16.ಕಾರ್ತಿಕಮಾಸ 17.ಹಣತೆ 18.ವಿಜಯೋತ್ಸಾಹ

ಆಧ್ಯಾತ್ಮಿಕ ಗ್ರಂಥಾಲಯಕ್ಕೆ ಡಿಜಿಟಲ್ ಸ್ಪರ್ಶ

ಸುಮಾರು ಸಾವಿರ ವರ್ಷಗಳಷ್ಟು ಹಳೆಯ ಗ್ರಂಥಗಳು ಕೂಡ ಬದಾಮಿಯ ಶಿವಯೋಗಿಮಂದಿರದ ಗ್ರಂಥಾಲಯದಲ್ಲಿ ಇವೆ. ಹಾನಗಲ್ ಕುಮಾರಸ್ವಾಮಿಗಳು ಒಂದು ಕಾಲದಲ್ಲಿ ಸಂಚರಿಸಿ, ಗ್ರಂಥಗಳನ್ನು ಇಲ್ಲಿಗೆ ತಂದಿದ್ದರು. ಅವೆಲ್ಲವೂ ಈಗ ಡಿಜಿಟಲೀಕರಣದ ಬೆಳಕು ಕಾಣುತ್ತಿವೆ.

ಚಿತ್ರ-ಲೇಖನ: ಕಿಶನರಾವ್ ಕುಲಕರ್ಣಿ

ಬಾಗಲಕೋಟೆ ಜಿಲ್ಲೆ ಬದಾಮಿ ತಾಲ್ಲೂಕಿನ ಶಿವಯೋಗಮಂದಿರ ಕ್ಷೇತ್ರ ಮಲಪ್ರಭಾ ನದಿಯ ದಂಡೆಯ ಮೇಲಿರುವ ನಿಸರ್ಗ ರಮಣೀಯ ಸ್ಥಳ. ಈ ದೇವಾಲಯದ ಸಮುಚ್ಚಯದಲ್ಲಿರುವ ವಿಜಯಮಹಾಂತೇಶ್ವರ ಪ್ರಾಚೀನ ಗ್ರಂಥಾಲಯಕ್ಕೆ ಬರೋಬ್ಬರಿ ನೂರಾ ಹನ್ನೆರಡು ವರ್ಷಗಳ ಇತಿಹಾಸವಿದೆ. ಅದರಲ್ಲಿರುವ ಪುಸ್ತಕಗಳ ಭಂಡಾರ ಸುಮಾರು ಸಾವಿರ ವರ್ಷಗಳಷ್ಟು ಹಳೆಯದಾದ ಗ್ರಂಥಗಳನ್ನು ಹೊಂದಿರುವ ನಾಡಿನ ಅಪರೂಪದ ಗ್ರಂಥಾಲಯವಾಗಿದೆ. ಅನೇಕ ವಿಶ್ವವಿದ್ಯಾಲಯಗಳ ಸಂಶೋಧಕರು, ವಿದ್ಯಾರ್ಥಿಗಳು, ಉಪನ್ಯಾಸಕರು ಭೇಟಿ ನೀಡಿ ತಮ್ಮ ಸಾಹಿತ್ಯ ರಚನೆಗೆ ಪೂರಕ ಮಾಹಿತಿ ಪಡೆದುಕೊಂಡು ಹೋಗುತ್ತಾರೆ.

2019ರಲ್ಲಿ ಅತಿವೃಷ್ಟಿ ಸಂಭವಿಸಿ ಶಿವಯೋಗಮಂದಿರದ ಬಳಿಯ ಮಲಪ್ರಭೆ ಉಕ್ಕಿ ಹರಿದ ಕಾರಣವಾಗಿ, ಶಿವಯೋಗ ಮಂದಿರ ಜಲಾವೃತವಾಗಿತ್ತು. ನದಿಯ ದಂಡೆಯ ಮೇಲಿರುವ ದೇವಾಲಯಗಳೂ ಸೇರಿ ಆವರಣದಲ್ಲಿರುವ ಈ ಹಳೆಯ ಗ್ರಂಥಾಲಯ ನೀರಿನಲ್ಲಿ ತೇಲುವಂತಾಗಿತ್ತು. ಇಂತಹ ಸಂದರ್ಭದಲ್ಲಿ ಗ್ರಂಥಾಲಯದಲ್ಲಿನ ಅಪರೂಪದ ಗ್ರಂಥಗಳು, ತಾಳೆಗರಿಯ ಸಾಹಿತ್ಯ, ಕೋರೆಕಾಗದಗಳು ಬಹುತೇಕ ಪ್ರಮಾಣದಲ್ಲಿ ನೀರಿಗೆ ಆಪೋಶನವಾಗುವ ಹಂತದಲ್ಲಿದ್ದವು. ಇಂತಹ ಪರಿಸ್ಥಿತಿಯಲ್ಲಿಯೇ ಅಲ್ಲಿನ ಸಿಬ್ಬಂದಿ ಹಾಗೂ ಭಕ್ತರು ನೀರಿನಲ್ಲಿಯೇ ಗ್ರಂಥಾಲಯ ಪ್ರವೇಶಿಸಿ ಅಲ್ಲಿನ ಅಮೂಲ್ಯ ಗ್ರಂಥ ರಾಶಿಯನ್ನು ರಕ್ಷಿಸಿದ್ದು ಒಂದು ಸಾಹಸವೇ ಸರಿ.



ಶಿವಯೋಗಮಂದಿರದ ಕಲಿಕಾನಿರತ ವಟುಗಳು

ಇದರ ಪರಿಣಾಮವಾಗಿ ಮುಂದೆ ಎಂತಹದ್ದೇ ತೊಂದರೆ ಎದುರಾದರೂ ಗ್ರಂಥಾಲಯದಲ್ಲಿನ ಸಾಹಿತ್ಯ ಶಾಶ್ವತವಾಗಿರಲಿ ಎಂಬ ಉದ್ದೇಶದಿಂದ ಗ್ರಂಥಾಲಯದ ವಿನ್ಯಾಸವನ್ನೇ ಬದಲಾಯಿಸಲಾಯಿತು. ಅಷ್ಟೆ ಅಲ್ಲ, ಈ ಗ್ರಂಥಾಲಯಕ್ಕೆ ಆಧುನಿಕತೆಯ ಸ್ಪರ್ಶವನ್ನೂ ನೀಡಲಾಗಿದೆ. ಡಿಜಿಟಲೀಕರಣವನ್ನೂ ಹೊಂದಿದೆ. ಕೈಬೆರಳ ತುದಿಯಲ್ಲಿ ಇಲ್ಲಿನ ಪುಸ್ತಕಗಳ ಪ್ರತಿ ಪುಟ ದೊರೆಯುವಂತೆ ಮಾಡುವ ಕೆಲಸ ನಡೆದಿದೆ. ಈಗಾಗಲೇ ಬಹುತೇಕ ಪುಸ್ತಕಗಳು ಸ್ಕ್ಯಾನ್ ಆಗಿದ್ದು, ಇನ್ನು ಕೆಲ ವರ್ಷಗಳಲ್ಲಿ ಈ ಕಾರ್ಯ ಪೂರ್ಣಗೊಳ್ಳಲಿದೆ ಎನ್ನುತ್ತಾರೆ ಶಿವಯೋಗಮಂದಿರದ ಕ್ಷೇತ್ರದ ಮೇಲ್ವಿಚಾರಕರಾದ ರೇಣುಕಾಮಠ. ಸದ್ಯ ಗ್ರಂಥಾಲಯದ ಪೂರ್ಣ ನೋಟ ಬದಲಾಗಿದ್ದು, ಕುಳಿತು ಓದಲು ಕುರ್ಚಿ, ಸುಲಭವಾಗಿ ದೊರಕುವ ಪುಸ್ತಕಗಳ ಮಾಹಿತಿ, ಗಾಳಿ, ಬೆಳಕಿನ ವ್ಯವಸ್ಥೆ,



ಶಿವಯೋಗಮಂದಿರದ ಗ್ರಂಥಾಲಯದ ಗ್ರಂಥಭಂಡಾರ

ಗಣಕಯಂತ್ರ ಹೀಗೆಲ್ಲ ಆಧುನಿಕತೆಯನ್ನು ಅಳವಡಿಸಲಾಗಿದೆ. ಇದರ ಪರಿಣಾಮವಾಗಿಯೇ ಶತಮಾನ ಕಂಡ ಈ ಗ್ರಂಥಾಲಯ ಮತ್ತಷ್ಟು ಚೈತನ್ಯ ಹೊಂದಲು ಕಾರಣವಾಗಿದೆ.

ಬದಾಮಿಯಿಂದ 14 ಕಿ.ಮೀ ದೂರದಲ್ಲಿರುವ ಈ ಸ್ಥಳ 1909ರ ಸಮಯದಲ್ಲಿ ದಟ್ಟ ಅರಣ್ಯವಾಗಿತ್ತು. ಶೈಕ್ಷಣಿಕ ಹಾಗೂ ಆಧ್ಯಾತ್ಮಿಕ ಕೇಂದ್ರ ತೆರೆಯುವ ಉದ್ದೇಶದಿಂದ ಸ್ಥಳ ಹುಡುಕಾಟದ ಸಮದಲ್ಲಿ ಇಳಕಲ್‌ನ ಶ್ರೀ ವಿಜಯಮಹಾಂತ ಶಿವಯೋಗಿಗಳ ಮಠದಲ್ಲಿದ್ದ ಆಕಳೊಂದು ಈ ಸ್ಥಳ ತೋರಿದ ಕಾರಣ ಈ ತಾಣವನ್ನು ಶಿವಯೋಗ ಮಂದಿರ ಎಂಬ ಹೆಸರಿನಿಂದ ಕರೆಯಲಾಯಿತು ಎನ್ನುವುದು ಪ್ರತೀತಿ. ಸುಮಾರು 84 ಎಕರೆ ಪ್ರದೇಶದಲ್ಲಿರುವ ಈ ಧಾಮ 111 ವರ್ಷಗಳಿಂದಲೂ ಆಧ್ಯಾತ್ಮಿಕ ಕೇಂದ್ರವಾಗಿದ್ದು, ಧರ್ಮ ಸಾಧನೆಗಾಗಿ ಹಾಗೂ ಧ್ಯಾನಾಸಕ್ತರ ನೆಮ್ಮದಿಯ ತಾಣವಾಗಿದೆ.

ಇಲ್ಲಿ ಶ್ರೀ ಕುಮಾರೇಶ್ವರರ ಗದ್ದುಗೆ ಇರುವುದರಿಂದ ನಿತ್ಯ ಸಾವಿರಾರು ಭಕ್ತರು ಬಂದು ದರ್ಶನ ಪಡೆಯುತ್ತಾರೆ. ಜೊತೆಗೆ ವಟುಗಳಿಗೆ ಯೋಗ, ಶಿವಯೋಗ(ಪೂಜೆ), ಧರ್ಮ, ತತ್ವಜ್ಞಾನ, ಸಾಹಿತ್ಯ, ಸಂಸ್ಕೃತ ಭಾಷೆ, ಸಂಸ್ಕೃತಿ, ಸಂಸ್ಕಾರ ಕಲಿಸಿಕೊಡುವ ಗುರುಕುಲವಾಗಿದೆ. ಅದಕ್ಕೆಂದೆ ಇದನ್ನು ಗುರುವಿರಕ್ತ ಪೀಠಗಳಿಗೆ ಯೋಗ್ಯ ಮೂರ್ತಿಗಳನ್ನು ತಯಾರಿಸುವ ಟಂಕಸಾಲೆ ಎಂತಲೂ ಚಿಂತಕರು ಕರೆಯುತ್ತಾರೆ. ವಿಜಯ ಮಹಾಂತೇಶ ಗ್ರಂಥಾಲಯದ ಜೊತೆಗೆ ರೇವಣಸಿದ್ದೇಶ್ವರ ವಾಚನಾಲಯ, ಸದಾಶಿವ ಮುದ್ರಣಾಲಯ, ಹಾಲಕೇರಿ ಅಜ್ಜಿನಗವಿ, ಮೇಲ್ಮಠ, ಹಳೆಗನ್ನಡ ಶಾಲೆ, ಕೊಟ್ಟೂರ ಬಸವೇಶ್ವರ ಮಂದಿರ, ಧ್ಯಾನಮಂದಿರ, ವ್ಯಾಕರಣಾಳ ಗದ್ದುಗೆ, ಕುಮಾರವನ, ಲತಾಮಂಟಪ, ಸಂಗೀತ ಪಾಠಶಾಲೆ, ಗೋಶಾಲೆ ಇಲ್ಲಿ ಓದಿಗೆ ಅನುಕೂಲ ಮಾಡಿಕೊಟ್ಟಿವೆ.

ಐತಿಹಾಸಿಕ ಗ್ರಂಥಾಲಯ

ಶಿವಯೋಗ ಮಂದಿರದಲ್ಲಿನ ವಟುಗಳಿಗೆ ಹದಿನೈದು ವರ್ಷಗಳ ಸಂಪೂರ್ಣ ಶಿಕ್ಷಣ ಒದಗಿಸಲಾಗುತ್ತದೆ. ಶಿಕ್ಷಣ ಪೂರ್ಣಗೊಂಡ ನಂತರ ಕಲಿತವರೇ ವಿರಕ್ತ ಮಠಕ್ಕೆ ಮಠಾಧೀಶರಾಗುತ್ತಾರೆ. ಇಲ್ಲವೇ ಯೋಗ್ಯರೆನಿಸಿದ ಜಂಗಮರಿಂದ ಪ್ರಸಾದಿ ಸ್ಥಳವನ್ನು ಪಡೆದು ದೇಶಿಕರೆನಿಸಿಕೊಳ್ಳುತ್ತಾರೆ. ವಿರಕ್ತಮಠಕ್ಕೆ ಶ್ರೀಗಳಾಗಿ ಶ್ರೀಮದ್ ನಿರಂಜನ ಪ್ರಣವಸ್ವರೂಪಿಯಾಗಿ ಅಥವಾ ಗುರುಮಠಕ್ಕೆ ಅಧಿಕಾರಿಯಾಗಿ ಶ್ರೀಮದ್ ಘನಲಿಂಗ ಚಕ್ರವರ್ತಿ ಶಿವಾಚಾರ್ಯರೂ ಆಗುತ್ತಾರೆ.
ಇಂತಹ ಸ್ಥಳದಲ್ಲಿ ಭಾರತೀಯ ಪರಂಪರೆ ಅರಿಯುವುದಕ್ಕಾಗಿ, ಉಳಿಸುವುದಕ್ಕಾಗಿ ವಟುಗಳಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗಲೆಂದು ಹಾನಗಲ್ಲದ ಕುಮಾರಸ್ವಾಮಿಗಳು 1910ರಲ್ಲಿಯೇ ಪುಸ್ತಕ ಜೋಳಿಗೆ ಮೂಲಕ ಇಲ್ಲಿ ಗ್ರಂಥಾಲಯ ಸ್ಥಾಪಿಸಿದರು. ಅವರು ನಾಡಿನ ವಿವಿಧ ಭಾಗಗಳಲ್ಲಿ ಪುಸ್ತಕ ಜೋಳಿಗೆ ಮಾಡಿದ ಕಾರಣ ಸಾವಿರಾರು ವರ್ಷಗಳ ಇತಿಹಾಸ ಹೊಂದಿದ ಪುಸ್ತಕಗಳು ಇಲ್ಲಿಗೆ ಹರಿದುಬಂದವು. ಪ್ರಾಚೀನ ಭಾರತದ ಪರಂಪರೆ, ಅಧ್ಯಾತ್ಮ, ಸಾಹಿತ್ಯ, ವಚನಶಾಸ್ತ್ರ, ಧರ್ಮದ ಬಗ್ಗೆ ಮಾಹಿತಿ ದೊರೆಯಲು ಕಾರಣವಾಯಿತು ಎಂದು ಗ್ರಂಥಾಲಯದ ಕಾರ್ಯದರ್ಶಿ ಕುಮಾರಸ್ವಾಮಿ ಹೇಳುತ್ತಾರೆ.

ಈ ವಿಜಯಮಹಾಂತೇಶ್ವರ ಗ್ರಂಥಾಲಯವನ್ನು ಅವಲೋಕಿಸಿದಾಗ ಅಲ್ಲಿಯ ಸಾಹಿತ್ಯ ಭಂಡಾರದ ಸಾಲು ಸಾಲು ಕಪಾಟುಗಳು ಆಶ್ಚರ್ಯ ಮೂಡಿಸುತ್ತವೆ. ವ್ಯಾಸೋಕ್ತ 18 ಪುರಾಣಗಳು, ವೇದಗಳು, ಉಪನಿಷತ್ತುಗಳು, ಸಂಸ್ಕೃತದ ವಾಚಸ್ಪತ್ಯ, ವಚನಶಾಸ್ತ್ರ, ಮಾತಾಚಾರ್ಯರ ಭಾಷ್ಯಗಳಂತಹ ಹಲವಾರು ಇತಿಹಾಸ ಹಾಗೂ ಧಾರ್ಮಿಕ, ಸಮಾಜಕ್ಕೆ ಸಂಬಂಧಿಸಿದ ಅಖಂಡ ಸಾಹಿತ್ಯ ಅಲ್ಲಿ ಕಂಡುಬರುತ್ತದೆ. ಸಾವಿರಾರು ತಾಳೆಗರಿ ಹಾಗೂ ಹಸ್ತಪ್ರತಿಗಳ ಕಟ್ಟುಗಳಿವೆ. ಈ ಎಲ್ಲ ಹಳೆಯ ಸಾಹಿತ್ಯದ ಮಾಹಿತಿಯನ್ನು ವಟು, ಸಾಧಕರು ತಮ್ಮ ಬಿಡುವಿನ ವೇಳೆಯಲ್ಲಿ ಅರಿತುಕೊಳ್ಳುತ್ತಾರೆ.


ಪುಸ್ತಕ ದಾನಿಗಳ ಮಹಾಪೂರ

1910ರಲ್ಲಿ ಹಾನಗಲ್ಲ ಕುಮಾರಸ್ವಾಮಿಗಳು, ಪಂಡಿತ ಉಮಾಪತಿಶಾಸ್ತ್ರಿಗಳು ಅನೇಕ ಗ್ರಾಮಗಳನ್ನು ಸುತ್ತಾಡಿ ಹಳೆಯ ಗ್ರಂಥಗಳನ್ನು ಸಂಗ್ರಹಿಸಿದರು. ಅಲ್ಲದೆ ಆಧುನಿಕ ಗ್ರಂಥಗಳನ್ನು ಖರೀದಿಸಿ ಈ ಗ್ರಂಥಾಲಯವನ್ನು ಶ್ರೀಮಂತಗೊಳಿಸಿದ್ದರು. ಸೊಲ್ಲಾಪುರದ ಮಲ್ಲಪ್ಪನವರು, ಸಿರಸಂಗಿಯ ಲಿಂಗರಾಜರು ಹಾಗೂ ಇತರರು ಕೊಡಮಾಡಿದ ಹಳೆಯ ಗ್ರಂಥಗಳ ಜೊತೆಗೆ ತಾಳೆಗರಿಯ ಓಲೆಗಳು ಹಾಗೂ ಕೋರೆ ಕಾಗದಗಳ ಕಟ್ಟುಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಆ ಸಂದರ್ಭದಲ್ಲಿ ಈ ಸ್ಥಳದಲ್ಲಿ ಸದಾಶಿವ ಮುದ್ರಣಾಲಯವೂ ಇದ್ದು, ಇಲ್ಲಿಂದಲೇ ಕೆಲ ಪತ್ರಿಕೆಗಳು ಮುದ್ರಣಗೊಳ್ಳುತ್ತಿದ್ದವು.

ಮೊದಲ ಓದು

ಕರಾವಳಿಯ ಸ್ವಾತಂತ್ರ್ಯ ಹೋರಾಟಗಾರರ ಕತೆ


ನಮ್ಮ ನಾಡಿನ ಸಾಹಿತ್ಯ ಲೋಕದಲ್ಲಿ ದಾಖಲಾದ ಕರಾವಳಿ ಭಾಗದ ಸ್ವಾತಂತ್ರ್ಯ ಹೋರಾಟಗಾರರ ಕತೆಗಳನ್ನು ಒಂದೇ ಕೃತಿಯಲ್ಲಿ ನೀಡುವ ಭಿನ್ನ ಯತ್ನವೇ 'ಓಬೀರಾಯನ ಕಾಲದ ಕತೆಗಳಲ್ಲಿ ಸ್ವಾತಂತ್ರ್ಯದ ತೆರೆಗಳು'. 'ಓಬೀರಾಯನ ಕಾಲ' ಅಂದರೆ 'ಓಲ್ಡ್ ಬ್ರಿಟಿಷ್ ರಾಯನ ಕಾಲ' ಎಂದರ್ಥ ಎಂದು ಕೃತಿಯ ಸಂಪಾದಕರಾದ ಬಿ.ಜನಾರ್ದನ ಭಟ್ಟರು ಪ್ರಾರಂಭದಲ್ಲಿಯೇ ಹೇಳುತ್ತಾರೆ. ಆ ಕಾಲದಲ್ಲಿನ ಸ್ವಾತಂತ್ರ್ಯ ಹೋರಾಟಗಾರರನ್ನು ಅನೇಕ ಲೇಖಕರು, ಕವಿಗಳು ತಮ್ಮ ಗದ್ಯ, ಪದ್ಯಗಳಲ್ಲಿ ಸ್ಮರಿಸಿದ್ದಾರೆ. ಅಂತಹ ಎಲ್ಲ ಸಾಹಿತ್ಯವನ್ನು ಸಣ್ಣ ಕಥೆಗಳ ರೂಪದಲ್ಲಿ ಈ ಕೃತಿಯಲ್ಲಿ ನೀಡಲಾಗಿದೆ. ಕೃತಿಯಲ್ಲಿ ಒಟ್ಟು ಏಳು ಭಾಗಗಳಿವೆ. ಯಸ್.ವೆಂಕಟರಾಜ, ಬೇಕಲ ರಾಮನಾಯಕ, ಕಡೆಂಗೋಡ್ಲು ಶಂಕರಭಟ್ಟ, ಪಾ.ವೆಂ.ಆಚಾರ್ಯರಿಂದ ಹಿಡಿದು ನಾಡಿನ ಅನೇಕ ಜನಪ್ರಿಯ ಸಾಹಿತಿಗಳು ಬರೆದ ಸ್ವಾತಂತ್ರ್ಯ ಹೋರಾಟಗಾರರ ಕತೆಗಳು ಇಲ್ಲಿವೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿಯೇ, ಅದನ್ನು ಕಂಡವರು, ಆ ಕಾಲದಲ್ಲಿ ಇದ್ದವರೇ ಬರೆದ ಒಂದಷ್ಟು ಕತೆಗಳಿವೆ. ಸ್ವಾತಂತ್ರ್ಯದ ನಂತರ ಬಂದ ಕತೆಗಳನ್ನು ದಾಖಲಿಸಲಾಗಿದೆ. ಒಟ್ಟಾರೆಯಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಕರಾವಳಿ ಭಾಗದವರು ನೀಡಿದ ಕೊಡುಗೆಯನ್ನು ಸ್ಮರಿಸುವ ಅಧ್ಯಯನಯೋಗ್ಯ ಕೃತಿ ಇದು. ನಮ್ಮ ನಾಡಿನ ಹೋರಾಟದ ಇತಿಹಾಸ ದರ್ಶನ ಮಾಡಿಸುವ ಕೃತಿಯೂ ಹೌದು.



ಪು: 624 ₹650

ಓಬೀರಾಯನ ಕಾಲದ ಕತೆಗಳಲ್ಲಿ ಸ್ವಾತಂತ್ರ್ಯದ ತೆರೆಗಳು
ಸಂ:ಬಿ.ಜನಾರ್ದನ ಭಟ್
ಪ್ರ:ಶ್ರೀರಾಮ ಪ್ರಿಂಟರ್ಸ್&ಪಬ್ಲಿಷರ್
ಸಂ:9448930173

ಚಿತ್ರಸಂಪುಟದೊಳಗೆ ಕಿತ್ತೂರ ಸ್ಮೃತಿ



ಪು: 372 ₹999

ವೀರ ಸೌದಾಮಿನಿ ಕಿತ್ತೂರು ರಾಣಿ ಚನ್ನಮ್ಮ
ಲೇ: ಸಂತೋಷ ಹಾನಗಲ್ಲ
ಪ್ರ: ರಾಜಗುರು ಅಧ್ಯಯನ ಸಂಸ್ಥೆ, ಕಲ್ಮಠ
ಸಂ: 9535725499

'ಕಿತ್ತೂರು' ಎಂಬ ಹೆಸರು ಕೇಳಿದಾಕ್ಷಣ ಹಲವು ಘಟನೆಗಳ ಸ್ಮೃತಿ ಹಾದುಹೋಗುತ್ತದೆ. ಸ್ವಾತಂತ್ರ್ಯದ ಹೊಸಕಲ್ಪನೆ ಸೃಷ್ಟಿಸಿದ ಭೂಮಿ ಎಂದು ಕರೆಯಲಾಗುವ ಕಿತ್ತೂರಿನ ಚಿತ್ರಸಂಪುಟವೇ ಈ ಕೃತಿ. ಕನ್ನಡ, ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಇದು ರಚನೆಯಾಗಿದೆ.

ಚನ್ನಮ್ಮನ ಕುರಿತು ಸಾಹಿತ್ಯರೂಪದ ಹಲವು ಕೃತಿಗಳ ಪಟ್ಟಿಗೆ ಹೊಸ ಮಾದರಿಯ ಸೇರ್ಪಡೆ ಈ ಕೃತಿ. ಕಿತ್ತೂರು ಸಂಸ್ಥಾನದ ಚಾರಿತ್ರಿಕ ದೃಶ್ಯ ವಿವರಗಳ ಭಂಡಾರವಿದು. ಕಿತ್ತೂರು ಸಂಸ್ಥಾನದ ಇತಿಹಾಸವನ್ನು ಮೆಲುಕು ಹಾಕುತ್ತಾ ಚನ್ನಮ್ಮನ ಜೀವನಗಾಥೆಯನ್ನು ಚಿತ್ರಗಳ ಮೂಲಕ ಇಲ್ಲಿ ಹರಡಿದ್ದಾರೆ ಲೇಖಕರು.

ಚಿತ್ರಗಳಿಗೇ ಇಲ್ಲಿ ಆದ್ಯತೆ. ಚಿತ್ರಸಂಪುಟದ ಕೆಲ ಪುಟಗಳಲ್ಲಿ ಕ್ಯೂಆರ್ ಕೋಡ್‌ಗಳನ್ನೂ ನೀಡಲಾಗಿದ್ದು, ಇವನ್ನು ಮೊಬೈಲ್ ಮೂಲಕ ಸ್ಕ್ಯಾನ್ ಮಾಡಿದರೆ, ಲೇಖಕರು ಉಲ್ಲೇಖಿಸುವ ವಿಷಯದ ವಿಡಿಯೊಗಳು ಲಭ್ಯವಾಗುತ್ತವೆ. ಉದಾಹರಣೆಗೆ: ಕಿತ್ತೂರು ಅರಮನೆಯ ವಿವರಣೆಯನ್ನೊಳಗೊಂಡ ಅಧ್ಯಾಯದಲ್ಲಿ ನೀಡಿರುವ ಕ್ಯೂಆರ್‌ಕೋಡ್‌ನಲ್ಲಿ ಅರಮನೆಯ ವಿಡಿಯೊ ವಿವರಣೆ ಇದೆ. ಜೊತೆಗೆ ನಕ್ಷೆಯ ಸಹಿತ ಅರಮನೆಯ ವಿವರಣೆ ನೀಡಿರುವುದು ಮಾಹಿತಿ ಗ್ರಹಿಕೆಗೆ ಅನುಕೂಲಕರವಾಗಿದೆ. ಕಿತ್ತೂರಿಗೆ ಇಲ್ಲಿಯವರೆಗೂ ಭೇಟಿ ನೀಡದೇ ಇರುವವರಿಗೆ ಈ ಕೃತಿ ಒಂದು ರೀತಿಯಲ್ಲಿ 'ಗೈಡ್'. ಶಿವಶಂಕರ ಬಣಗಾರ ಅವರ ಚಿತ್ರಗಳೇ ಈ ಕೃತಿಯ ಜೀವಾಳ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಪುಷ್ಪ ನೀರಾಜನ

ದೇವರ ಮುಂದೆ ಆರತಿಯನ್ನು ಬೆಳಗುವಾಗ ತಟ್ಟೆಯಲ್ಲಿಡುವ ದೀಪಾರತಿಯೇ ನೀರಾಜನ. ಅದನ್ನು ನೀಲಾಂಜನ ಎಂದೂ ಕರೆಯುವರು. ಕುವೆಂಪು ಅವರು ಮಧುಮಾಸ ಚೈತ್ರವನ್ನು ಹಲವು ಬಗೆಯಲ್ಲಿ ವರ್ಣಿಸಿದ್ದಾರೆ. ಅದರ ಮಧುರಯಾತ್ರೆಯು ಪಕ್ಷಿಗಳ ಕೂಜನದ ಮಧುರ ವಾದನದಲ್ಲಿ ಮತ್ತು ಪುಷ್ಪನೀರಾಜನ (ಹೂವಿನ ಆರತಿ)ದ ಬೆಳಕಿನಲ್ಲಿ ಸಾಗುತ್ತಿದೆ ಎಂದು ಬಣ್ಣಿಸಿದ್ದಾರೆ. 'ಪುಷ್ಪ ನೀರಾಜನ' ನಿಸರ್ಗ ಪ್ರತಿಮೆ ವಿಶಿಷ್ಟವಾಗಿದೆ.
ಕುವೆಂಪು ಅವರು ಆ ಮಧುರ ವಸಂತ ಋತುವಿನಲ್ಲಿ ಪುಷ್ಪಗಳು ಅರಳಿ ಸೌಂದರ್ಯ ಹಾಗು ಪರಿಮಳದಿಂದ ವಾತಾವರಣವನ್ನು ಬೆಳಕಾಗಿಸುವುದನ್ನು ಅನುಭಾವಿಸಿಕೊಂಡು 'ಪುಷ್ಪನೀರಾಂಜನ' ಪದ ಸೃಷ್ಟಿಸಿ, ಅದರ ಬೆಳಕನ್ನು ನಮಗೆ ನೀಡಿದ್ದಾರೆ.
'ಪಕ್ಷಿಗಳ ಕೂಜನದಿ ಪುಷ್ಪ ನೀರಾಜನದಿ
ಸಾಗುತಿದೆ ಮಧು ಚೈತ್ರ ಮಧುರ ಯಾತ್ರೆ'.
(ನಿನ್ನ ವಾಣಿ – ಕಲಾಸುಂದರಿ)

ಪ್ರತಿಕ್ರಿಯೆ

ಕುವೆಂಪು ಕಾವ್ಯಾಧ್ಯಯನ ಕ್ಷೇತ್ರದಲ್ಲಿ ಜಿ.ಕೃಷ್ಣಪ್ಪ ಹೊಸ ಅಧ್ಯಾಯ ಪ್ರಾರಂಭಿಸಿದ್ದಾರೆ. ಇದಕ್ಕೆ ಎಡೆ ನೀಡಿರುವ 'ಪ್ರಜಾವಾಣಿ'ಗೆ ಪ್ರಶಂಸೆಗಳು ಸಲ್ಲುತ್ತವೆ. 'ಹೊನ್ನಾರು' ಮಾತನ್ನು ಕೃಷ್ಣಪ್ಪ ತಮ್ಮ ಲೇಖನದಲ್ಲಿ (29.10.23ರ ಸಂಚಿಕೆಯಲ್ಲಿ) ಬಳಸಿದ್ದಾರೆ. ಈ ಬಗ್ಗೆ ಸ್ವಲ್ಪ ವಿವರ ಬೇಕಿದೆ. ಅದು 'ಹೊನ್ನು + ಆರು = ಹೊನ್ನಾರು'. ಅಂದರೆ ಚಿನ್ನದ ನೇಗಿಲು. ಎಲ್ಲಿ ಸಿಗಬಹುದೆಂದು ಹುಡುಕಿದೆ. ಜನಕ ಮಹಾರಾಜ ಉಳುಮೆ ಮಾಡುವಾಗ ಸೀತೆಗೆ ಸಿಕ್ಕಿದ್ದು ಎಂಬ ಕತೆ ಇದೆ. ಅಲ್ಲೇನಾದರೂ ಚಿನ್ನದ ನೇಗಿಲು ಇದೆಯೆ? ಎಂದು ವಾಲ್ಮೀಕಿ ರಾಮಾಯಣ ನೋಡಿದೆ. ಅಲ್ಲಿರುವುದು 'ಲಾಂಗಲ'(ಬಾಲಕಾಂಡ, ಪರ್ವ 66 ಶ್ಲೋಕ 13). ಸಾಧಾರಣ ನೇಗಿಲು, ಚಿನ್ನದ ನೇಗಿಲಲ್ಲ.

ಕೆ.ಎಸ್.ಭಗವಾನ್

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಪ್ರಜಾವಾಣಿ ದೀಪಾವಳಿ ಸ್ಪರ್ಧೆ 2023ರಲ್ಲಿ ತೀರ್ಪುಗಾರರ ಮೆಚ್ಚುಗೆ ಪಡೆದ ಕಥೆ, ಕವನ
ಕಥೆ
ಎನ್.ಸಿ ಮಹೇಶ್ ಅವರ
ಸಂವಿಧಾನ ಅಂದದ್ದೇ ಕಾರಣವಾಗಿ...
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story
ಕವನ
ಕಾತ್ಯಾಯಿನಿ ಕುಂಜಿಬೆಟ್ಟು ಅವರ
ಅದು
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಛಂದೋರೂಪದ ಚೆಂದದ ಅನುವಾದ

ಎಸ್. ದಿವಾಕರ್

ವಿಮರ್ಶೆ

ಜಗತ್ತಿನ ನಾಲ್ವರು ಮಹಾನ್ ದುರಂತ ನಾಟಕಕಾರರಲ್ಲಿ ಮೂವರು ಗ್ರೀಕರು: ಈಸ್ಕಿಲಸ್, ಸೊಫೊಕ್ಲೀಸ್ ಮತ್ತು ಯೂರಿಪಿಡೀಸ್; ನಾಲ್ಕನೆಯವನು ಶೇಕ್ಸ್‌ಪಿಯರ್. ಜಗತ್ತನ್ನು ಸ್ಪಷ್ಟವಾಗಿ, ಅಷ್ಟೇ ಸುಂದರವಾಗಿ ಗ್ರಹಿಸಿ, ದುರಂತವನ್ನು ಮೊಟ್ಟಮೊದಲು ಪರಿಗಣಿಸಿ, ಅದನ್ನು ಉನ್ನತ ಕಲೆಯನ್ನಾಗಿ ಮಾರ್ಪಡಿಸಿದವರು ಗ್ರೀಕರು. ದುರಂತ ನಾಟಕ ಅವರ ವಿಶಿಷ್ಟ ಸಾಧನೆ.

ಈಸ್ಕಿಲಸ್ ಮತ್ತು ಸೊಫೊಕ್ಲೀಸ್‌ರ ನಾಟಕಗಳಲ್ಲಿ ದೂರ ಸಂಬಂಧದ ಇಂಗಿತವಿರುವಂತೆಯೇ ಅಭಿಜಾತ ಕೃತಿಯ ಭವ್ಯತೆಯೂ ಇದೆ. ಅವುಗಳಲ್ಲಿ ಅತ್ಯಂತ ಗಾಢವಾದ ವಿಚಾರಗಳಿದ್ದರೂ ಅವು ಸಾಮಾನ್ಯ ಅನುಭವಕ್ಕೆ ಸ್ವಲ್ಪಮಟ್ಟಿಗೆ ಅತೀತವಾಗಿರುತ್ತವೆ. ಮತ್ತೆ ಅವುಗಳ ಭಾಷೆ ಭಾವಗೀತಾತ್ಮಕವಾಗಿರುವಂತೆಯೇ ಭವ್ಯವೂ ಆಗಿದ್ದು ಸಾಮಾನ್ಯರ ಭಾಷೆಗಿಂತ ತೀರ ಭಿನ್ನವಾಗಿರುತ್ತದೆ. ಆದರೆ ಯೂರಿಪಿಡೀಸ್ ಪ್ರಜಾಪ್ರಭುತ್ವದ ಮೊದಲ ನಾಟಕಕಾರ; ಅಥೆನ್ಸಿನ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ಕುರಿತು ತೀವ್ರ ವಿಡಂಬನೆಯಿಂದ, ವಿಶಿಷ್ಟ ಒಳನೋಟಗಳಿಂದ ಬರೆದವನು. ಸ್ತ್ರೀ ಮನೋವ್ಯಾಪಾರದಲ್ಲೂ ಅವನಿಗೆ ಆಸಕ್ತಿಯಿತ್ತು.

ಕ್ರಿ.ಪೂ. 485ರಲ್ಲಿ ಹುಟ್ಟಿದ ಈತ 92 ನಾಟಕಗಳನ್ನು ಬರೆದನಂತೆ. ಸಿಕ್ಕಿರುವುದು 18 ಮಾತ್ರ. ನಾಟಕಗಳಲ್ಲಿ ಜಜ್ಜಾರ ಹೀರೋಗಳನ್ನೂ ಅನೈತಿಕ ಮಹಿಳೆಯರನ್ನೂ ಪರಿಚಯಿಸಿದನೆಂದು ಅವನನ್ನು ಅವನ ಕಾಲದ ಸಂಪ್ರದಾಯಸ್ಥರು ಖಂಡಿಸಿದ್ದುಂಟು. ಅವರ ದೃಷ್ಟಿಯಲ್ಲಿ ಪರಿಶುದ್ಧವೂ ಆಢ್ಯವೂ ಆದ ದುರಂತ ನಾಟಕಕ್ಕೆ ಅಂಥವರ ಪ್ರವೇಶದಿಂದ ಕಳಂಕವಾಗುತ್ತಿತ್ತು. ಆದರೆ ಪ್ರೇಕ್ಷಕರ ಪಾಲಿಗೆ ಅವನ ನಾಟಕಗಳು ಚಿತ್ತಾಕರ್ಷಕವಾಗಿದ್ದವು. ಅವನ ನಿಧನಾನಂತರ ಅವನ ಜನಪ್ರಿಯತೆ ಇತರ ನಾಟಕಕಾರರಿಗಿಂತ ಮಿಗಿಲಾಯಿತು.

ಹೊಸತರ ಹರಿಕಾರನೆನಿಸಿದ ಯೂರಿಪಿಡೀಸನ ನಾಟಕಗಳ ಕೇಂದ್ರದಲ್ಲಿ ಮಹಾನ್ ವ್ಯಕ್ತಿಗಳಿದ್ದು, ಅವರು ದುರ್ವಿಧಿಯ ಜೊತೆ ಸೆಣಸಾಡದೆ ತಮ್ಮೊಳಗಿನ 'ಭೂತ'ಗಳ ಜೊತೆಗೇ ಹೋರಾಡುತ್ತಾರೆ. ಮೇಳದವರು ಕಥಾಸಂವಿಧಾನದ ಒಂದು ಅನನ್ಯ ಭಾಗವಾಗುವುದಕ್ಕೆ ಬದಲಾಗಿ ತಾವೇ ವ್ಯಾಖ್ಯಾನಕಾರರಾಗಿ ರಂಗಕ್ಕೆ ಬರುತ್ತಾರೆ. ಪ್ರಾಚೀನ ದಂತಕತೆಗಳ ಹಾಗೂ ಮಿಥಕಗಳ ಪ್ರಸಿದ್ಧ ಪಾತ್ರಗಳು ನಿಜ ಜೀವನದ ಪಾತ್ರಗಳಾಗಿ ಪುನರೂಪಗೊಂಡು ಮಾನವೀಯ ಸಮಸ್ಯೆಗಳನ್ನು ಸಮಕಾಲೀನ ಭಾಷೆಯಲ್ಲಿ ಚರ್ಚಿಸುತ್ತವೆ.



ಪು: 184 ₹235

ಯೂರಿಪಿಡೀಸ್ ಮೂರು ನಾಟಕಗಳು
ಕನ್ನಡಕ್ಕೆ: ಮಾಧವ ಚಿಪ್ಪಳಿ
ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು
ಸಂ: 94802 80401

ಪ್ರಸ್ತುತ ಕೃತಿಯಲ್ಲಿ ಯೂರಿಪಿಡೀಸನ 'ಅಲ್ಸೆಸ್ಟಿಸ್', 'ಔಲಿಸ್‌ನಲ್ಲಿ ಇಫಿಜೀನಿಯಾ' ಮತ್ತು 'ಮೀಡಿಯಾ' ನಾಟಕಗಳಿವೆ. ಇವುಗಳನ್ನು ಅನುವಾದಿಸಿರುವ ಮಾಧವ ಚಿಪ್ಪಳಿ ತಮ್ಮ ಸುದೀರ್ಘ ಪ್ರಸ್ತಾವನೆಯಲ್ಲಿ ಯೂರಿಪಿಡೀಸ್‌ನ ಕಾಲ, ಅವನ ನಾಟಕಗಳ ವೈಶಿಷ್ಟ್ಯ, ಇಲ್ಲಿನ ಮೂರು ನಾಟಕಗಳ ವಸ್ತು, ಸ್ವರೂಪ ಮೊದಲಾದವುಗಳನ್ನು ಚರ್ಚಿಸಿದ್ದಾರೆ ಮತ್ತು ತಮ್ಮ ಅನುವಾದವಿಧಾನದ ಬಗೆಗೂ ನಾಲ್ಕು ಮಾತು ಹೇಳಿದ್ದಾರೆ. ಶಬ್ದಮಿತಿಯಲ್ಲಿ ಇಂಥ ಕೃತಿಯನ್ನು ವಿವರವಾಗಿ ಚರ್ಚಿಸುವುದಂತೂ ಸಾಧ್ಯವೇ ಇಲ್ಲ. ಹಾಗಾಗಿ ಇಲ್ಲಿನ ಅನುವಾದದ ಬಗ್ಗೆ ಒಂದೆರಡು ಮಾತು: ಮೋಸೆಸ್ ಹಡಾಸ್ ಮತ್ತು ಜಾನ್ ಮೆಕ್ಲೀನ್ ಅವರ ಇಂಗ್ಲಿಷ್ ಅನುವಾದಗಳನ್ನು ಇಟ್ಟುಕೊಂಡು ಈ ಕನ್ನಡಾನುವಾದಗಳನ್ನು ಸ್ಥೂಲವಾಗಿ ಪರಿಶೀಲಿಸಿರುವ ನಾನು ಯೂರಿಪಿಡೀಸನ ರಚನೆಯ ನೆಲೆಗಟ್ಟಷ್ಟೇ ಅಲ್ಲ, ಅವನ ಆಶಯವೂ, ಅದರ ಧ್ವನಿಯೂ ಲಾಲಿತ್ಯವೂ ಇಲ್ಲಿವೆಯೆಂದು ಧಾರಾಳವಾಗಿ ಹೇಳಬಲ್ಲೆ.

ವಿಮರ್ಶಕ ಜಾರ್ಜ್ ಸ್ಟೈನರ್‌ನ ಪ್ರಕಾರ ಕಾವ್ಯರೂಪದ ಅನುವಾದವು ಅನುವಾದಕನ ಭಾಷೆಯೊಳಗೇ ಒಂದು ಅಪೂರ್ವ ಪಾತ್ರವನ್ನು ನಿರ್ವಹಿಸುತ್ತ ಅವನನ್ನು ಒಳಮುಖವಾಗಿ ನೋಡುವಂತೆ ಮಾಡುತ್ತದೆ. ಒಂದು ಕವನವನ್ನು ಅನುವಾದಿಸುವ ಅಥವಾ ಅನುವಾದಿಸಲು ಪ್ರಯತ್ನಿಸುವ ಯಾರೇ ಆಗಲಿ, ಅವನು ತನ್ನ ಭಾಷೆಯ ಅನನ್ಯತೆಗೆ, ಅದರ ರಾಚನಿಕ ಲಕ್ಷಣಕ್ಕೆ ಹಾಗೂ ಅದರ ಮಿತಿಗೆ ಮುಖಾಮುಖಿಯಾಗುತ್ತಾನೆ. ಯಾಕೆಂದರೆ ಅವನಿಗೆ ಅವನ ಭಾಷೆಯೇ ಒಂದು ನಿರಂತರ ಆಡುಂಬೊಲವಾಗಿರುತ್ತದೆ. ಅನುವಾದ ನಮ್ಮದೇ ಸಂಪನ್ಮೂಲಗಳ ತಃಖ್ತೆ ಮಾಡುವಂತೆ ನಮ್ಮನ್ನು ಪ್ರೇರೇಪಿಸುವುದಲ್ಲದೆ ನಮಗೆ ಲಭ್ಯವಿರದ ಕಚ್ಚಾಪದಾರ್ಥಗಳಿವೆಯೆಂದೂ ಭಾವನೆ, ಅಭಿವ್ಯಕ್ತಿಗಳ ವಿಧಾನವಿದೆಯೆಂದೂ, ನಮ್ಮ ಭಾಷೆಗೆ ಸೇರಿರದ ಅಥವಾ ಅದು ಬಳಸಿಕೊಂಡಿರದ ಒಂದು ಸ್ರೋತವಿದೆಯೆಂದೂ ನಮಗೆ ತಿಳಿಸಿಕೊಡುತ್ತದೆ.

ಮಾಧವ ಚಿಪ್ಪಳಿ ತಮ್ಮ ಅನುವಾದದ ಬಗ್ಗೆ ಹೇಳುತ್ತಾ, 'ಈ ಮೂರೂ ನಾಟಕಗಳಲ್ಲಿ ಮೇಳದ ಮಾತುಗಳನ್ನು ನಾನು ಮಾತ್ರಾಲಯದಲ್ಲಿ ಅನುವಾದಿಸಿದ್ದೇನೆ. ಲಯದ ನಿರ್ಬಂಧವೆನ್ನುವುದು ನನಗೆ ಎಲ್ಲಿಯೂ ಮಿತಿಯಾಗಿ ಕಾಣಿಸಲಿಲ್ಲ. ಬದಲಿಗೆ ಬಂಧದೊಳಗೆ ಕಾವ್ಯವನ್ನು ಕಟ್ಟುವಾಗ ಭಾಷೆಯೇ ಹೊಸ ಸಾಧ್ಯತೆಗಳನ್ನು ತೆರೆದು ತೋರಿಸುತ್ತದೆ. ಗದ್ಯರೂಪದಲ್ಲಿ ಅನುವಾದಿಸತೊಡಗಿದರೆ ನಮಗೆ ಸಾಧ್ಯವಾಗದ ಸ್ವಾತಂತ್ರ್ಯವನ್ನು ಪದ್ಯ ಕೇಳದೆಯೇ ಕೊಟ್ಟುಬಿಡುತ್ತದೆ. ಮೇಳದ ಮಾತುಗಳಲ್ಲಿ ಪದ್ಯವು ತಂದುಕೊಡುವ ಮುಕ್ತತೆಯು ಗದ್ಯದಲ್ಲಿ ಮಾತುಗಳನ್ನು ಅನುವಾದಿಸುವಾಗಲೂ ನಮಗೆ ಅಂಟಿಕೊಂಡಿರುತ್ತದೆ' ಎಂದಿದ್ದಾರೆ. ಛಂದೋಬದ್ಧ ಕವನಗಳನ್ನು ಅನುವಾದಿಸುವವರಿಗೆ, ಅವರು ಸ್ವತಃ ಕವಿಗಳಲ್ಲದಿದ್ದರೂ, ಕನ್ನಡ ಕಾವ್ಯದಲ್ಲಿ ಈಗಾಗಲೇ ಇರುವ ವಿವಿಧ ಛಂದೋರೂಪಗಳ ಆಳವಾದ ಪರಿಚಯ ಇದ್ದರೆ ಒಳ್ಳೆಯದಷ್ಟೆ. 'ಮೀಡಿಯಾ' ನಾಟಕದಲ್ಲಿ 'ಮತ್ತೆ ಕೇಳಿತು ಉಕ್ಕಿ ಬರುತಿಹ ಎದೆಯ ನೋವಿನ ಸ್ಫೋಟವು/ ಕರುಳ ಕೊಯ್ಯುವ ಕೊರಗಿನಿಂದಲಿ ಮುಗಿಯೆ ಮದುವೆಯ ಆಟವು' ಎಂಬ ಸಾಲುಗಳಿವೆ. ಇವು ಕುವೆಂಪು ಅವರ 'ದೋಣಿ ಸಾಗಲಿ' ಅಥವಾ ಅಡಿಗರ 'ಮೋಹನ ಮುರಲಿ' ಕವನಗಳ ಧಾಟಿಯಲ್ಲಿರುವುದು ಸ್ಪಷ್ಟ. 'ಸಿಟ್ಟನೆಲ್ಲ ಬಿಟ್ಟು ಅವಳ ಎದೆಯು ಹಗುರವಾಗಲಿ/ ಒಳಗೆ ಉರಿಯುತ್ತಿರುವ ಬೆಂಕಿ ಆರಿ ತಣ್ಣಗಾಗಲಿ' ಎಂಬ ಸಾಲುಗಳಾಗಲೀ 'ಹೆದರದಿರು ಮೀಡಿಯಾ ನಮ್ಮ ತುಟಿ ಹೊಲಿದಿಹುದು/ ಗಂಡನೆಸಗಿದ ಪಾಪ ಸಣ್ಣದಲ್ಲ / ಇಂಥ ಸಂಕಟದಲ್ಲಿ ನಿನ್ನ ಎದೆ ಕುದಿದಿಹುದು/ ಹಾಗಾಗದಿರುವುದೇ ಸಹಜವಲ್ಲ' ಎಂಬ ಸಾಲುಗಳಾಗಲೀ ಆಧುನಿಕ ಕನ್ನಡ ಕಾವ್ಯದ ಛಂದೋರೂಪಗಳಲ್ಲಿವೆ; ಪ್ರಾಸಬದ್ಧವಾಗಿಯೂ ಇವೆ. ಕೆ.ವಿ. ಅಕ್ಷರ ಅವರು ಸರಿಯಾಗಿಯೇ ಗುರುತಿಸಿರುವಂತೆ 'ಪ್ರಸ್ತುತ ಭಾಷಾಂತರವು ಅಲ್ಲಲ್ಲಿ ಛಂದೋಬದ್ಧ ಲಯಗಳನ್ನು ಬಳಸುವ ಪ್ರಯೋಗ ಮಾಡಿದೆ; ಆಡುಮಾತಿಗೆ ಹತ್ತಿರವಿರುವ ಹೊಸಗನ್ನಡದೊಳಗೂ ಕಾವ್ಯದ ಧ್ವನಿಯನ್ನು ಕಟ್ಟಲು ಪ್ರಯತ್ನಿಸಿದೆ.'

ಸರ್ವಾಂತರ್ಯಾಮಿ...

12ನೇ ಪುಟದಿಂದ...

ಇಂತಹ ಅಪರಾಧಿಗಳು ಯಾವುದೇ ದೇಶದಲ್ಲಿದ್ದರೂ ಪತ್ತೆ ಮಾಡಿ, ಬಂಧಿಸಿ, ನ್ಯಾಯಾಲಯದ ಮೂಲಕ ಶಿಕ್ಷೆಯಾಗುವಂತೆ ಮಾಡುವ ಕೆಲಸ ನಿರಂತರವಾಗಿ ನಡೆದಿದೆ.

ಯಾವುದು ಡೀಪ್‌ಫೇಕ್ ಎಂದು ಜನಸಾಮಾನ್ಯರು ಸುಲಭವಾಗಿ ಗುರುತಿಸಲು ಸಾಧ್ಯವಾಗುವಂತಹ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಹಲವು ತಂತ್ರಜ್ಞಾನ ಸಂಸ್ಥೆಗಳು ಮುಂದಾಗಿವೆ. ಈ ಸೌಲಭ್ಯಗಳು ಇಂಗ್ಲಿಷ್‌ನಲ್ಲಿ ಮಾತ್ರ ಲಭ್ಯವಿರದೆ, ಕನ್ನಡ ಭಾಷೆ ಹಾಗೂ ಇತರೆ ಭಾಷೆಗಳಲ್ಲಿಯೂ ಜನಸಾಮಾನ್ಯರಿಗೆ ದೊರೆಯಬೇಕು. ಆಗ ಡೀಪ್‌ಫೇಕ್ ವಿರುದ್ಧ ಹೋರಾಟದಲ್ಲಿ ಜನಸಾಮಾನ್ಯರಿಗೂ ಕೈಜೋಡಿಸಲು ಸಾಧ್ಯವಾಗುತ್ತದೆ. ಜನಸಾಮಾನ್ಯರಲ್ಲಿ ಡೀಪ್‌ಫೇಕ್‌ನಂತಹ ಗಂಭೀರ ಸ್ವರೂಪದ ಸೈಬರ್ ಅಪರಾಧ ಕುರಿತು ಜಾಗೃತಿ ಮೂಡಿಸುವ ಕೆಲಸವನ್ನು ಮಾಧ್ಯಮಗಳು ಮತ್ತು ಸೈಬರ್ ಪೊಲೀಸರು ಮಾಡಬೇಕಾಗಿದೆ.

ಡೀಪ್‌ಫೇಕ್ ಅಪರಾಧಗಳು ಅದರಲ್ಲೂ ವಿಶೇಷವಾಗಿ ದೇಶದ ಭದ್ರತೆಗೆ ಮಾರಕವಾಗುವಂತೆ ಡೀಪ್‌ಫೇಕ್ ಬಳಸುತ್ತಿರುವ ಭಯೋತ್ಪಾದಕರ ವಿರುದ್ಧ ಕಠಿಣ ಕಾನೂನು ಮತ್ತು ವಿಶೇಷ ನ್ಯಾಯಾಲಯಗಳ ಸ್ಥಾಪನೆಯಾದರೆ, ಹೆಚ್ಚು ಜನ ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಮಾಡಲು ಸಾಧ್ಯವಿದೆ. ಡೀಪ್ ಲರ್ನಿಂಗ್ ಬಹೂಪಯೋಗಿ ತಂತ್ರಜ್ಞಾನವಾಗಿದೆ. ದುರದೃಷ್ಟವಶಾತ್ ಅದನ್ನು ದುರ್ಬಳಕೆ ಮಾಡಿಕೊಂಡು ಡೀಪ್‌ಫೇಕ್ ಸೃಷ್ಟಿಸಲಾಗುತ್ತಿದೆ.

ಲೇಖಕರು ಅಂತರರಾಷ್ಟ್ರೀಯ ಸೈಬರ್ ಸುರಕ್ಷತೆ ತಜ್ಞ

ತರಗತಿ ಕೊಠಡಿಯಲ್ಲಿ...

12ನೇ ಪುಟದಿಂದ...

ಸದ್ಯ ನಾಟ್ಯ ಪ್ರಧಾನ

ಯಕ್ಷ ಶಿಕ್ಷಣ ಯೋಜನೆಯಲ್ಲಿ ಸದ್ಯ ನಾಟ್ಯವನ್ನು ಮಾತ್ರ ಕಲಿಸಲಾಗುತ್ತಿದೆ. ಮುಂದಿನ ವರ್ಷ ಪರಿಷ್ಕೃತ, ಹೊಸ ಪಠ್ಯ ಕ್ರಮ ಅಳವಡಿಸಲು ಈಗಲೇ ಪ್ರಯತ್ನ ನಡೆಯುತ್ತಿದೆ. ಮುಂದಿನ ಬಾರಿ ಶೈಕ್ಷಣಿಕ ವರ್ಷ ಆರಂಭವಾಗುವಾಗಲೇ ಯಕ್ಷಗಾನ ತರಗತಿಗಳು ಕೂಡ ಆರಂಭಗೊಳ್ಳಲಿರುವ ಕಾರಣ ನಾಟ್ಯದ ಜೊತೆಯಲ್ಲೇ ಪ್ರಸಾಧನ, ವೇಷಭೂಷಣ, ಹಿಮ್ಮೇಳ, ಚೌಕಿ, ರಂಗಸ್ಥಳ, ಬಣ್ಣಗಾರಿಕೆ ಮತ್ತು ಇತರ ಅಂಗಗಳ ಪ್ರಾಥಮಿಕ ಪರಿಚಯವನ್ನೂ ಮಾಡಿಸುವುದು ಟ್ರಸ್ಟ್‌ನ ಉದ್ದೇಶ.

ತರಗತಿ ಹೀಗೆ ನಡೆಯುತ್ತದೆ...

ಶಿಕ್ಷಣ ಇಲಾಖೆಯ ಅನುಮತಿಯೊಂದಿಗೆ ಯಕ್ಷಗಾನ ತರಗತಿಗಳನ್ನು ನಡೆಸಲಾಗುತ್ತದೆ. ಪ್ರತಿ ಶಾಲೆಯಲ್ಲಿ ವಾರದಲ್ಲಿ ಕನಿಷ್ಠ ಎರಡು ತರಗತಿಗಳು ಇರುತ್ತವೆ. ವೃತ್ತಿಪರವಾಗಿ ಯಕ್ಷಗಾನ ತರಬೇತಿ ನೀಡುತ್ತಿರುವ ಗುರುಗಳೇ ಇಲ್ಲಿ ಶಿಕ್ಷಕರು. ಆಯಾ ಶಾಲೆಯ ಮುಖ್ಯ ಶಿಕ್ಷಕರು ಯಕ್ಷಗಾನ ತರಗತಿಗೆ ಸಮಯ ನಿಗದಿ ಮಾಡುತ್ತಾರೆ. ಪಠ್ಯೇತರ ಚಟುವಟಿಕೆಯ ಸಮಯವನ್ನು ಯಕ್ಷಗಾನಕ್ಕಾಗಿ ತೆಗೆದಿರಿಸುತ್ತಾರೆ. ಎಲ್ಲ ಶಾಲೆಗಳಲ್ಲಿ ಏಕರೂಪದ ತರಗತಿಗಳನ್ನು ನಡೆಸುವುದಕ್ಕಾಗಿ ಪಠ್ಯಕ್ರಮದ ಕೈಪಿಡಿಯೊಂದನ್ನು ಸಿದ್ಧಗೊಳಿಸಲಾಗಿದೆ. ಇದನ್ನು ಪರಿಷ್ಕರಿಸಿ ಪುಸ್ತಕ ರೂಪ ನೀಡುವ ಪ್ರಕ್ರಿಯೆ ನಡೆಯುತ್ತಿದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಇದು 'ಪಠ್ಯಪುಸ್ತಕ'ವಾಗಿ ಗುರುಗಳ ಕೈ ಸೇರಲಿದೆ.



ದಕ್ಷಿಣ ಕನ್ನಡ ಜಿಲ್ಲೆಯ ದೇರಳಕಟ್ಟೆ ವಿದ್ಯಾರತ್ನ ಶಾಲೆಯಲ್ಲಿ ಯಕ್ಷಗಾನ ಅಭ್ಯಾಸದ ನಡುವೆ –ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

'ಯಕ್ಷಧ್ರುವ ಪಟ್ಲ ಫೌಂಡೇಷನ್‌ನವರು ಯಕ್ಷ ಶಿಕ್ಷಣ ಯೋಜನೆಯ ಮೂಲಕ ಉತ್ತಮ ಕಾರ್ಯ ಮಾಡಿದ್ದಾರೆ. ಸರ್ಕಾರಿ ಶಾಲೆಗಳ ಮಕ್ಕಳು ಯಕ್ಷಗಾನವನ್ನು ಕುತೂಹಲದಿಂದ ಕಲಿಯುತ್ತಿದ್ದು, ಹೇಳಿಕೊಟ್ಟ ವಿಷಯಗಳನ್ನು ಬೇಗನೆ ಕರಗತ ಮಾಡಿಕೊಳ್ಳುತ್ತಿದ್ದಾರೆ. ಯೋಜನೆಯಿಂದ ಯಕ್ಷಗಾನದ ಪ್ರಸಾರಕ್ಕೆ ಹೆಚ್ಚು ಅನುಕೂಲ ಆಗಲಿದೆ' ಎಂಬುದು ಹರೇಕಳ ಶಾಲೆಯ ಯಕ್ಷಗಾನ ಗುರು ಅಶ್ವತ್ಥ್ ಮಂಜನಾಡಿ ಅವರ ಭರವಸೆಯ ನುಡಿ.

'ಯಕ್ಷ ಶಿಕ್ಷಣ ಯೋಜನೆ ಅತ್ಯಪೂರ್ವ ಕಾರ್ಯ. ಮಕ್ಕಳಲ್ಲಿ ಯಕ್ಷಗಾನದ ಆಸಕ್ತಿ ಬೆಳೆಯಲು ಇದು ನೆರವಾಗಲಿದೆ. ಹೆಚ್ಚು ಗಮನ ಸೆಳೆಯದ ಹಿಮ್ಮೇಳದಲ್ಲೂ ಮಕ್ಕಳನ್ನು ಪಳಗಿಸುವ ಕಾರ್ಯಕ್ಕೆ ಈ ಯೋಜನೆಯಲ್ಲಿ ಸಾಧ್ಯತೆ ಇದೆ. ಆದ್ದರಿಂದ ಎಲ್ಲ ಆಯಾಮಗಳಲ್ಲೂ ಯಕ್ಷಗಾನದ ಬೆಳವಣಿಗೆಯ ನಿಟ್ಟಿನಲ್ಲಿ ಈ ಯೋಜನೆ ಶ್ಲಾಘನೀಯ' ಎಂದು ಮೆಚ್ಚುಗೆ ವ್ಯಕ್ತಪಡಿಸಿದವರು ಭಾಗವತರಾದ ಮುರಳಿ ಕೃಷ್ಣ ಶಾಸ್ತ್ರಿ ತೆಂಕಬೈಲು.

ವಸತಿಶಾಲೆಗಳಲ್ಲಿ ಸಂಸ್ಕೃತಿ ವಿನಿಮಯ

ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದ ಅನೇಕ ಮಂದಿ ಈಚೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಬಂದು ನೆಲೆಸಿದ್ದಾರೆ. ಅವರ ಮಕ್ಕಳ ಪೈಕಿ ಹೆಚ್ಚಿನವರು ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ವಸತಿಶಾಲೆಗಳಲ್ಲಿ ಪ್ರವೇಶ ಪಡೆದುಕೊಂಡವರೂ ಇದ್ದಾರೆ. ಅವರಲ್ಲಿ ಅನೇಕರು ಯಕ್ಷಗಾನ ಕಲಿಯುವ ಆಸಕ್ತಿ ತೋರಿಸಿದ್ದಾರೆ. ಹೀಗಾಗಿ ಅಂಥ ಶಾಲೆಗಳಲ್ಲಿ ಈಗ ಸಂಸ್ಕೃತಿ ವಿನಿಮಯ ನಡೆಯುತ್ತಿದೆ.

'ಕೆಲವು ಶಾಲೆಗಳಲ್ಲಿ ಯಕ್ಷಗಾನ ಕಲಿಯಲು ಆಸಕ್ತಿ ತೋರಿಸುವವರ ಸಂಖ್ಯೆ ಹೆಚ್ಚುತ್ತಾ ಸಾಗುತ್ತಿದೆ. ಮಂಗಳೂರಿನ ಉಳಾಯಿಬೆಟ್ಟು ಅಂಬೇಡ್ಕರ್ ವಸತಿಶಾಲೆಯಲ್ಲಿ ಆರಂಭದಲ್ಲಿ 98 ವಿದ್ಯಾರ್ಥಿಗಳು ಮಾತ್ರ ಇದ್ದರು. ಈಗ ಈ ಸಂಖ್ಯೆ 154ಕ್ಕೆ ಏರಿದೆ. ಹೀಗಾಗಿ ಅಲ್ಲಿ ಎರಡು ತಂಡಗಳಲ್ಲಿ ಕಲಿಸಲಾಗುತ್ತದೆ. ವಸತಿಶಾಲೆಗಳ ಶೇಕಡ 90 ಮಂದಿ ಯಕ್ಷಗಾನದ ಬಗ್ಗೆ ಮಾಹಿತಿ ಇಲ್ಲದವರು. ಆದರೂ ಹೆಚ್ಚಿನವರು ಕಲಿಯಲು ಆಸಕ್ತಿ ತೋರಿಸುತ್ತಿದ್ದಾರೆ' ಎಂದು ಯಕ್ಷ ಗುರು ದೀವಿತ್ ಎಸ್.ಕೆ.ಪೆರಾಡಿ ಹೇಳುತ್ತಾರೆ.

ಪ್ಯಾರಿಸ್‌ನ ಮುಕುಟ ಸ್ಯಾಕ್ರೆ ಕೋರ್ ಬೆಸಿಲಿಕಾ


ಸ್ಯಾಕ್ರೆ ಕೋರ್ ಬೆಸಿಲಿಕಾ


ಸೂರ್ಯಾಸ್ತದ ವೇಳೆಗೆ ಪ್ಯಾರಿಸ್ ನಗರ ಬಾನೆತ್ತರದಿಂದ ಹೀಗೆ ಕಾಣುತ್ತದೆ...

ಪ್ಯಾರಿಸ್‌ನಲ್ಲಿನ 'ಸ್ಯಾಕ್ರೆ ಕೋರ್ ಬೆಸಿಲಿಕಾ'ದ ಕಿರಿದಾದ ರಸ್ತೆಗಳಲ್ಲಿ ಜೀವಂತಿಕೆ ಅರಳುತ್ತಿರುತ್ತದೆ. ಪ್ಯಾರಿಸ್ ನಗರದ ವಿಹಂಗಮ ನೋಟವನ್ನು ಕಣ್ತುಂಬಿಕೊಳ್ಳಬಹುದಾದ ಇಲ್ಲಿ ಕಲಾವಿದರ ಕುಂಚದಲ್ಲಿ ತಾವೂ ಚಿತ್ರವಾಗಿ ಮೂಡಿ, ಪ್ರವಾಸಿಗರು ಖುಷಿ ಪಡಬಹುದು.

ಜಿ.ನಾಗೇಂದ್ರ ಕಾವೂರು

ಪ್ರವಾಸ

ಪ್ಯಾರಿಸ್ ನಗರದ ಅತಿ ಎತ್ತರದ ಪ್ರದೇಶ ಬ್ಯೂಟ್ ಮೊಮಾರ್ತ್ರ (Butte Montmartre). ಪ್ಯಾರಿಸ್‌ಗೆ ಬರುವ ಪ್ರವಾಸಿಗರಿಗೆ ಐಫೆಲ್ ಗೋಪುರವನ್ನೊಳಗೊಂಡಂತೆ ಅನೇಕ ಧಾರ್ಮಿಕ, ಐತಿಹಾಸಿಕ ಸ್ಮಾರಕಗಳು ಇಲ್ಲಿ ನೋಡಲು ಇವೆ. ಬೋಟ್ ಮೂಲಕ ತೆರಳಿ ನಗರದ ವೀಕ್ಷಣೆಯ ಮೂಲಕ ಪ್ಯಾರಿಸ್‌ನ ಹಲವಾರು ಸ್ಮಾರಕಗಳನ್ನು ನೋಡಬಹುದು. ವಿಶ್ವದ ಅತಿದೊಡ್ಡ ವಸ್ತು ಸಂಗ್ರಹಾಲಯಗಳಲ್ಲಿ ಒಂದಾದ ಲೂವರ್ ಮ್ಯೂಸಿಯಂ(Loure Museum)ನಲ್ಲಿರುವ ಅಪಾರ ವಸ್ತು ಸಂಗ್ರಹವನ್ನು ಹಾಗೂ ಅತ್ಯಾಕರ್ಷಕ ಮೊಮಾರ್ತ್ರದ 'ಸ್ಯಾಕ್ರೆ ಕೋರ್ ಬೆಸಿಲಿಕಾ'ಗೆ ಭೇಟಿ ನೀಡಿ, ಪ್ಯಾರಿಸ್ ನಗರದ ವಿಹಂಗಮ ನೋಟವನ್ನು ಕಣ್ತುಂಬಿಸಿಕೊಳ್ಳುವುದು ಪ್ರವಾಸಿಗರಿಗೆ ಖುಷಿಯ ವಿಚಾರ.

'ಸ್ಯಾಕ್ರೆ ಕೋರ್ ಬೆಸಿಲಿಕಾ' ಇರುವ ಮೊಮಾರ್ತ್ರಗೆ ಹೋಗಲು ಮುಖ್ಯ ರಸ್ತೆಯಿಂದ ಎರಡು ಮೂರು ಮಾರ್ಗಗಳಿವೆ. ಇಲ್ಲಿ ರಸ್ತೆಗಳ ಅಗಲ ಕಿರಿದಾಗಿದ್ದು, ಸದಾಕಾಲ ಪ್ರವಾಸಿಗರಿಂದ ಕಿಕ್ಕಿರಿದಿರುತ್ತವೆ. ಇಕ್ಕೆಲಗಳಲ್ಲಿರುವ ಅಂಗಡಿಗಳಲ್ಲಿ ಪ್ರಸಾಧನ ಸಾಮಗ್ರಿಗಳು, ಮಹಿಳೆಯರ ಕೈಚೀಲಗಳು ಹಾಗೂ ಆಲಂಕಾರಿಕ ವಸ್ತುಗಳನ್ನು ಮಾರುತ್ತಾರೆ.


ಕಿರಿದಾದ ರಸ್ತೆಗಳಲ್ಲಿ ಅಂಗಡಿಗಳ ನಡುವೆ ಸಾಗುವಾಗ ಪ್ರಪಂಚದ ಹಲವು ದೇಶಗಳ ಪ್ರವಾಸಿಗರು ನಮಗೆ ಎದುರಾಗುತ್ತಾರೆ. ಕೆಲವರು ಮುಗುಳ್ನಗೆ ಚೆಲ್ಲಿದರೆ, ಕೆಲವರು ತಮ್ಮ ಪರಿಚಯ ಮಾಡಿಕೊಂಡು, ಪ್ರವಾಸ ಸಂತಸ ತರಲೆಂದು ಹಾರೈಸುತ್ತಾರೆ.

ಬ್ಯೂಟ್ ಮೊಮಾರ್ತ್ರದ ಶಿಖರದಲ್ಲಿ 'ಸ್ಯಾಕ್ರೆ ಕೋರ್ ಬೆಸಿಲಿಕಾ' ರೋಮನ್ ಕ್ಯಾಥೋಲಿಕ್ ಚರ್ಚ್ ಇದೆ. ಬೆಟ್ಟದ ತಳದಿಂದ ಸುಮಾರು 130 ಮೀಟರ್ ಎತ್ತರದಲ್ಲಿರುವ ಬೆಸಿಲಿಕಾವನ್ನು ತಲುಪಲು ಮೆಟ್ಟಿಲುಗಳನ್ನೇರಿ ಹೋಗಬೇಕು. ಎರಡು ಹಂತಗಳಲ್ಲಿ ಲಾನ್‌ಗಳಿವೆ. ಪ್ಯಾರಿಸ್‌ನಲ್ಲೇ ಅತಿ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಎರಡನೇ ಸ್ಮಾರಕ ಇದಾಗಿದೆ. ಬೆಸಿಲಿಕಾದ ನಿರ್ಮಾಣ ಕಾರ್ಯವು 1875ರಲ್ಲಿ ಪ್ರಾರಂಭವಾಗಿ 1914ರಲ್ಲಿ ಪೂರ್ಣಗೊಂಡಿತು. ಸ್ಯಾಕ್ರೆ ಕೋರ್ ಅನ್ನು ಟ್ರಾವರ್ಟೈನ್ (travertine-ಒಂದು ಬಗೆಯ ತಿಳಿ ಬಣ್ಣದ ಕಲ್ಲು)ನಿಂದ ನಿರ್ಮಿಸಲಾಗಿದ್ದು, ಬೆಸಿಲಿಕಾದ ನಿರ್ಮಾಣಕ್ಕೆ ಅಂದಿನ ಕಾಲದಲ್ಲಿ ತಗುಲಿದ ಒಟ್ಟು ವೆಚ್ಚ 70 ಲಕ್ಷ ಫ್ರೆಂಚ್ ಫ್ರಾಂಕ್‌ಗಳೆಂದು ಅಂದಾಜಿಸಲಾಗಿದ್ದು, ವೆಚ್ಚವನ್ನು ಸಂಪೂರ್ಣವಾಗಿ ಖಾಸಗಿ ದೇಣಿಗೆಗಳಿಂದ ಸಂಗ್ರಹಿಸಲಾಯಿತಂತೆ.

ಬೆಸಿಲಿಕಾ ಹಲವು ವೈಶಿಷ್ಟ್ಯಗಳಿಂದ ಕೂಡಿದೆ. ಲುಕ್-ಒಲಿವಿಯರ್ ಮರ್ಸನ್, ಎಚ್. ಮ್ಯಾಗ್ನೆ ಮತ್ತು ಆರ್. ಮಾರ್ಟಿನ್ ರಚಿಸಿರುವ 'ಕ್ರೈಸ್ಟ್ ಇನ್ ಮೆಜೆಸ್ಟಿ' ಎಂಬ ಶೀರ್ಷಿಕೆಯ ಮೊಸಾಯಿಕ್ ಕಲಾಕೃತಿಯು 475 ಚದರ ಮೀಟರ್ ವಿಸ್ತೀರ್ಣವಿದ್ದು, ವಿಶ್ವದ ಅತಿದೊಡ್ಡ ಮೊಸಾಯಿಕ್‌ಗಳಲ್ಲಿ ಒಂದೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಿಂತಿರುವ ಭಂಗಿಯಲ್ಲಿರುವ ಯೇಸುಕ್ರಿಸ್ತ ಬಿಳಿ ನಿಲುವಂಗಿಯನ್ನು ಧರಿಸಿದ್ದು, ತನ್ನ ಎರಡೂ ಕೈಗಳನ್ನು ಚಾಚಿದ್ದಾನೆ. ಮೊಸಾಯಿಕ್‌ನ ತಳಭಾಗದಲ್ಲಿ ಲ್ಯಾಟಿನ್ ಭಾಷೆಯ ಶಾಸನವಿದೆ.

10 ಕಿ.ಮೀ. ದೂರ ತಲುಪುವ ಘಂಟೆಯ ಸದ್ದು

ಬೆಸಿಲಿಕಾದ ಒಳ ಮತ್ತು ಹೊರ ಆವರಣಗಳು ಅತ್ಯಂತ ಆಕರ್ಷಕವಾಗಿವೆ. ಬೆಸಿಲಿಕಾದ ಬೆಲ್ಫ್ರಿ (ಘಂಟೆ ಗೋಪುರ)ಯಲ್ಲಿ ಒಟ್ಟು ಐದು ಘಂಟೆಗಳಿವೆ. ಘಂಟೆಗಳ ಗಾತ್ರವನ್ನು ಅನುಸರಿಸಿ ಅವರೋಹಣ ಕ್ರಮದಲ್ಲಿ ಫೆಸಿಲಿಟ್, ಲೂತಿಸ್, ನಿಕೋಲ್ ಮತ್ತು ಎಲಿಜಬೆತ್ ಎಂದು ಹೆಸರಿಸಲಾಗಿದೆ. ಈ ನಾಲಕ್ಕೂ ಘಂಟೆಗಳು ಮೂಲತಃ ಸಂತ ರೋಚ್ ಚರ್ಚ್‌ನ ಘಂಟೆಗಳಾಗಿದ್ದು, 1969ರಲ್ಲಿ ಬೆಸಿಲಿಕಾಗೆ ಸ್ಥಳಾಂತರಿಸಲಾಯಿತು. ಇವುಗಳ ಕೆಳಗೆ 'ದಿ ಸವೊಯಾರ್ಡೆ' ಎಂಬ ಮತ್ತೊಂದು ದೊಡ್ಡ ಘಂಟೆ ಇದೆ. ಫ್ರಾನ್ಸ್‌ನ ಅತಿದೊಡ್ಡ ಘಂಟೆ ಹಾಗೂ ಯುರೋಪ್‌ನ ಐದನೇ ಅತಿದೊಡ್ಡ ಘಂಟೆ ಇದು. ಈ ಘಂಟೆಯ ತೂಕ 18,835 ಕೆ.ಜಿ. ಮತ್ತು ಹೊರಮೈನ ಸುತ್ತಳತೆ 9.6 ಮೀ. ಸವೊಯಾರ್ಡೆಯನ್ನು ಪ್ರಮುಖ ಧಾರ್ಮಿಕ ರಜಾದಿನಗಳಂದು ಮಾತ್ರ ಬಾರಿಸಲಾಗುತ್ತದೆ. ಇದರ ಶಬ್ದ ಸುಮಾರು 10 ಕಿ.ಮೀ. ದೂರದವರೆಗೂ ಕೇಳಿಸುತ್ತದಂತೆ. ಬೆಸಿಲಿಕಾದ ಗುಮ್ಮಟದ ಸುತ್ತಲೂ ಪ್ರವಾಸಿಗರು ನಿಂತು 360 ಡಿಗ್ರಿಯಲ್ಲಿ ಪ್ಯಾರಿಸ್ ನಗರದ ಸೊಬಗನ್ನು ಕಣ್ತುಂಬಿಕೊಳ್ಳಬಹುದು.


475 ಚದರ ಮೀಟರ್ ವಿಸ್ತೀರ್ಣದ 'ಕ್ರೈಸ್ಟ್ ಇನ್ ಮೆಜೆಸ್ಟಿ' ಕಲಾಕೃತಿ

ಬೆಸಿಲಿಕಾದ ಒಳಭಾಗದಿಂದ ಗುಮ್ಮಟವನ್ನು ತಲುಪಲು ಮೆಟ್ಟಿಲುಗಳ ವ್ಯವಸ್ಥೆಯಿದೆ. ಸ್ಯಾಕ್ರೆ ಕೋರ್ ಬೆಸಿಲಿಕಾಗೆ ಭೇಟಿಯಿತ್ತ ಸವಿನೆನಪಿಗಾಗಿ, ಬೆಸಿಲಿಕಾದ ಚಿತ್ರವಿರುವ ಸ್ಮರಣಾರ್ಥ ನಾಣ್ಯಗಳನ್ನು ಇಲ್ಲಿ ಮಾರುತ್ತಾರೆ.

ಬೆಸಿಲಿಕಾ ಮುಂಭಾಗದಿಂದ ಪ್ಯಾರಿಸ್ ನಗರದ ನೋಟ ಅತ್ಯಂತ ಸುಂದರವಾಗಿ ಕಾಣುತ್ತದೆ. 'ಮೊಮಾರ್ತ್ರ' ಪ್ರದೇಶವು ಸುಂದರವಾಗಿದ್ದು, ಬೆಟ್ಟದ ಇಳಿಜಾರಿನಲ್ಲಿ ನಿರ್ಮಿಸಲಾಗಿರುವ ತಿಳಿ ಬಣ್ಣದ ಕಟ್ಟಡಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ನಾಲ್ಕೈದು ಅಂತಸ್ತುಗಳ ಪ್ರತಿಯೊಂದು ಮನೆಯೂ ಪ್ರತ್ಯೇಕ ಬಾಲ್ಕನಿಯನ್ನು ಹೊಂದಿದೆ. ಅಲ್ಲಿ ಹೂ ಬುಟ್ಟಿಗಳನ್ನು ತೂಗು ಹಾಕಲಾಗಿದ್ದು, ಮನೆಯ ಅಂದವನ್ನು ಅವು ಹೆಚ್ಚಿಸಿವೆ. ಮೊಮಾರ್ತ್ರದಲ್ಲಿ ಪುಟಾಣಿ ರೈಲಿನ ವ್ಯವಸ್ಥೆ ಇದ್ದು, ಕಡಿಮೆ ವೇಗದಲ್ಲಿ ಚಲಿಸುವ ಈ ರೈಲಿನಲ್ಲಿ ಕುಳಿತು ಪ್ಯಾರಿಸ್ ನಗರದ ಹಾಗೂ ಮೊಮಾರ್ತ್ರದ ಸೌಂದರ್ಯವನ್ನು ಸವಿಯಬಹುದು.

ಓಣಿಗಳಲ್ಲಿ ಕಲಾವಿದರ ಬೋಣಿ

ಇಲ್ಲಿನ ರಸ್ತೆಗಳಲ್ಲಿ ಓಡಾಡುವಾಗ ಎಲ್ಲಿ ನೋಡಿದರೂ ಚಿತ್ರಗಳನ್ನು ರಚಿಸುತ್ತಿರುವ ಕಲಾವಿದರು ಕಾಣಸಿಗುತ್ತಾರೆ ಹಾಗೂ ಪ್ರವಾಸಿಗರು 10-15 ಯೂರೋಗಳನ್ನು ನೀಡಿ ಪ್ಯಾರಿಸ್ ನಗರಕ್ಕೆ ಭೇಟಿ ನೀಡಿದ ನೆನಪಿಗಾಗಿ ತಮ್ಮ ಚಿತ್ರಗಳನ್ನು ಬರೆಸಿಕೊಳ್ಳುತ್ತಾರೆ. 'ಉದರ ನಿಮಿತ್ತಂ ಬಹುಕೃತ ವೇಷಂ' ಎನ್ನುವ ಹಾಗೆ, ಹೊಟ್ಟೆಪಾಡಿಗಾಗಿ ಪ್ಯಾರಿಸ್‌ನಲ್ಲೂ ವಿವಿಧ ವೇಷಗಳನ್ನು ಧರಿಸಿ ಪ್ರವಾಸಿಗರ ಗಮನ ಸೆಳೆಯುವ, ಮೈಗೆ ಸಂಪೂರ್ಣವಾಗಿ ಕಪ್ಪು ಬಣ್ಣವನ್ನು ಬಳಿದುಕೊಂಡು ಅಲುಗಾಡದೆ ನಿಂತಿರುವ ಕಲಾವಿದರು ಕಾಣಸಿಗುತ್ತಾರೆ. ಪಕ್ಕದಲ್ಲೇ ಇರಿಸಲಾಗಿರುವ ಟೊಪ್ಪಿಯಲ್ಲಿ ಪ್ರವಾಸಿಗರು ಹಾಕುವ ಚಿಲ್ಲರೆ ನಾಣ್ಯಗಳೇ ಇವರಿಗೆ ಜೀವನಾಧಾರ. ರಸ್ತೆಯ ಇಕ್ಕೆಗಳಲ್ಲಿರುವ ಅಂಗಡಿಗಳಲ್ಲಿ 19ನೇ ಮತ್ತು 20ನೇ ಶತಮಾನದ ಪ್ಯಾರಿಸ್‌ನ ಬೊಹಿಮಿಯನ್ ಕಲೆಯ ವರ್ಣಚಿತ್ರಗಳನ್ನು ಮಾರಾಟಕ್ಕಿಟ್ಟಿರುತ್ತಾರೆ. ವರ್ಣರಂಜಿತ ಚಿತ್ರಗಳು ನಮ್ಮನ್ನು ಬೇರೆಂದು ಲೋಕಕ್ಕೆ ಕರೆದೊಯ್ಯುತ್ತವೆ.

ಪ್ಯಾರಿಸ್ ನಗರದ ಸೌಂದರ್ಯವನ್ನು ಸೆರೆಹಿಡಿದಿರುವ ವಿವಿಧ ಗಾತ್ರಗಳ ತೈಲವರ್ಣಚಿತ್ರಗಳನ್ನು ಮಾರಾಟಕ್ಕಿಟ್ಟಿದ್ದಾರೆ. ಹೆನ್ರಿ ಟೌಲೌಸ್-ಲೌಟ್ರೆಕ್, ವಿನ್ಸೆಂಟ್ ವ್ಯಾನ್ ಗಾಗ್, ಪ್ಯಾಬ್ಲೊ ಪಿಕಾಸೊ, ಹೆನ್ರಿ ಮ್ಯಾಟಿಸ್ಸೆ ಸೇರಿ ಅನೇಕ ವರ್ಣಚಿತ್ರಕಲಾವಿದರು ಪ್ಯಾರಿಸ್ ನಗರದ ಮೇಲೆ ಪ್ರಭಾವ ಬೀರಿದ್ದರು. ಪ್ಯಾರಿಸ್ ನಗರ ಸೌಂದರ್ಯವನ್ನು ಸಂಪೂರ್ಣವಾಗಿ ಕಣ್ತುಂಬಿಕೊಳ್ಳಲು, ಬಹುತೇಕ ಎಲ್ಲಾ ಸ್ಮಾರಕಗಳನ್ನು ವೀಕ್ಷಿಸಲು ಕಡಿಮೆಯೆಂದರೆ, 3-4 ದಿನಗಳ ಸಮಯ ಬೇಕಾಗುತ್ತದೆ.

ಸ್ಯಾಕ್ರೆ ಕೋರ್ ಬೆಸಿಲಿಕಾ ಚಿತ್ರ: ಲೇಖಕರವು
ಪ್ಯಾರಿಸ್ ನಗರದ ನೋಟ ಹಾಗೂ ಮೊಸಾಯಿಕ್ ಚಿತ್ರಗಳು: ಸ್ಟಾಕ್ ಫೋಟೊ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಜ್ಜು ಚಕ್ಕು ಕೀಕ್ರಿಷ್ಟು ಕಥೆಯ — ಶಾರ್ಕ್ ಸರ್ಫ್

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

1



ಗುಂಡ ಸರ್ಫಿಂಗ್ ಮಾಡಲೆಂದು ಸಮುದ್ರ ತೀರಕ್ಕೆ ಹೋಗಿದ್ದ. ಸರ್ಫ್ ಬೋರ್ಡ್ ಅನ್ನು ನೀರಿನಲ್ಲಿ ತೇಲಿಬಿಟ್ಟು ಅದರ ಮೇಲೆ ಹತ್ತಿ ಆಡತೊಡಗಿದ. ಸರ್ಫಿಂಗ್ ಮಾಡುತ್ತಾ, ಬೋರ್ಡ್ ಮೇಲೆ ನಾನಾ ಬಗೆಯ ಸರ್ಕಸ್ ಮಾಡತೊಡಗಿದ ಗುಂಡ.

2



ಹೀಗೆ ಖುಷಿಯಲ್ಲೇ ಗುಂಡ ಸರ್ಫಿಂಗ್ ಮುಂದುವರಿಸಿದ್ದ. ಇದ್ದಕ್ಕಿದ್ದಂತೆಯೇ ನೀರಿನೊಳಗೆ ದೊಡ್ಡ ಮೀನೊಂದು ಚಲಿಸಿದ ಅನುಭವ ಗುಂಡನಿಗಾಯಿತು. ಅದೇನೆಂದು ಸೂಕ್ಷ್ಮವಾಗಿ ಗಮನಿಸಬೇಕು ಎನ್ನುವಷ್ಟರಲ್ಲೇ ಶಾರ್ಕ್ ಮೀನು ಬಾಯ್ದೆರೆದು ಗುಂಡನೆದುರಿಗೆ ನಿಂತಿತ್ತು. ಇದನ್ನು ಕಂಡ ಗುಂಡ ಒಂದು ಕ್ಷಣ ಅವಾಕ್ಕಾದ!

3




4




ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಶ್ರೇಯಾ
ಮೈಸೂರು


ನವೀನ್
ಗಬ್ಬೂರು


ಬಸುರಾಜ್ ಟಿ.
ನರಗುಂದ


ಕನಕಲಕ್ಷ್ಮಿ ಮಾಲತೇಶ ಚಳಗೇರಿ, ಬ್ಯಾಡಗಿ


ಪ್ರಬುದ್ಧ ಮಹಿಷನೂರು
ಇಲವಾಲ


ಸುಚೇತ್ ಪ್ರಕಾಶ್
ಬೆಂಗಳೂರು

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಎರಡಕ್ಷರಗಳಿಗೆ ಹಿಂದೆ ಒಂದಕ್ಷರವನ್ನೂ ಅಕ್ಷರ ಪಟ್ಟಿಯಿಂದ ಆಯ್ದು ತುಂಬಿ ಮೂರಕ್ಷರಗಳ ಅರ್ಥಬದ್ಧ ಪದ ರಚಿಸಿ.

ಅಕ್ಷರ ಪಟ್ಟಿ

1	ಚ
2	ಹೆ
3	ಕೆ
4	ಗ
5	ಕೆ
6	ನೆ
7	ಒ
8	ಕೊ
9	ಪ
10	ಮೊ

1		ಸ	ರು
2		ಸ	ರು
3		ಸ	ರು
4		ಸ	ರು
5		ಸ	ರು
6		ದ	ರು
7		ದ	ರು
8		ದ	ರು
9		ದ	ರು
10		ದ	ರು

ಮೋ G ನ ENGLISH

ಇಲ್ಲಿ ಕೊಟ್ಟಿರುವ EA ಅಕ್ಷರಗಳಿಗೆ ಅಕ್ಷರ ಪಟ್ಟಿಯಿಂದ ಆಯ್ದು ಹಿಂದೊಂದು ಮತ್ತು ಮುಂದೊಂದು ಅಕ್ಷರ ತುಂಬಿ ಅರ್ಥಬದ್ಧ ಪದ ಮಾಡಿ.

ಅಕ್ಷರ ಪಟ್ಟಿ	
D	D
N	R
M	T
R	R
S	L
W	N
M	R
S	T
Y	L
L	R

	E	A	
	E	A	
	E	A	
	E	A	
	E	A	
	E	A	
	E	A	
	E	A	
	E	A	
	E	A	


ಪದ–ಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಟು–ಇನ್–ಒನ್

ಗಮ | ಕುಮ | ಮರ
ದುಡು | ಕಾರ | ಭಾರ

ಅಕ್ಷರ ಪಟ್ಟಿ: ಗು, ಕುಂ, ಉ, ಣ, ನ, ನೇ, ಚಾ, ಅ, ಮು, ಕು, ತ, ಟಾ




ಗಣಿತದಲ್ಲಿ ಗರ್ದಿಗಮ್ಮತ್ತು

ಚಕ್ರೀಯ ಸಂಖ್ಯೆ: 142857

ಇದೊಂದು ಚಕ್ರೀಯ ಸಂಖ್ಯೆ. ಅಂದರೆ ಈ ಸಂಖ್ಯೆಗೆ 2ರಿಂದ 6ರವರೆಗಿನ ಯಾವುದೇ ಅಂಕಿಯಿಂದ ಗುಣಿಸಿದರೂ ಗುಣ್ಯದಲ್ಲಿನ ಅಂಕಿಗಳೇ ಚಕ್ರೀಯವಾಗಿ ಮತ್ತೆ ಮತ್ತೆ ಬರುತ್ತವೆ.

ಉದಾ: 1 142857 x 2 = 285714



ಇದರ ಇನ್ನೂ ಒಂದು ಸ್ವಾರಸ್ಯವೆಂದರೆ ಈ ಸಂಖ್ಯೆಯನ್ನು 7ರಿಂದ ಗುಣಿಸಿದರೆ ಎಲ್ಲ ಅಂಕಿಗಳೂ 9 ಆಗಿರುತ್ತವೆ.

ಉದಾ: 2 142857 x 7 = 999999

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಅಂಕೋಲಾಟ 2.ಚಿಕಣಿವೆ 3.ತೊಗರಿಮೆ 4.ವಿವರಸೆ 5.ಕಾತುಕಡಿ 6.ಗೌತಮಟೆ

ಜಾಣಪದ ಆಟ: 1. ಮೂದಲಿಕೆ 2.ಕದಲಿಕೆ 3.ಸಮರಸ 4.ಸತ್ಯವತಿ 5.ಪನಿವಾರ(ಪರಿವಾರ) 6.ಸಬಕಾರ(ಸರಕಾರ) 7.ಅಡಿಪಾಯ 8.ಉಡದಾರ 9.ಆಚರಣೆ(ಆದರಣೆ) 10.ಆದರಿಸು (ಆಧರಿಸು)

ಪಕ್ಷಿನೋಟ: 1. ಟರ್ಕಿ 2.ಮರಕುಟಿಕ 3.ರಣಹದ್ದು

ಗಣಿತದಲ್ಲಿ ಗರ್ದಿಗಮ್ಮತ್ತು



ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

‘ದೇಶದ ಜನರ ನಿರೀಕ್ಷೆಯ ಅರಿವು ಇದೆ, ಚೆನ್ನಾಗಿ ಆಡಲು ಬದ್ಧರಾಗಿದ್ದೇವೆ’

ರೋಹಿತ್ ಶಾಂತಚಿತ್ತದ ಮಾತು...

ಪ್ರಜಾವಾಣಿ ವಾರ್ತೆ



ರೋಹಿತ್ ಶರ್ಮಾ –ಎಎಫ್‌ಪಿ ಚಿತ್ರ

ಅಹಮದಾಬಾದ್: ದೇಶ, ವಿದೇಶಗಳ ಮಾಧ್ಯಮಗಳ ಅಪಾರ ಸಂಖ್ಯೆಯ ಪ್ರತಿನಿಧಿಗಳ ಮುಂದೆ ಶನಿವಾರ ಸಂಜೆ ಬಂದು ಕುಳಿತಿದ್ದ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಎಂದಿನಂತೆ ಮಂದಹಾಸದೊಂದಿಗೆ ಮಾತನಾಡಿದರು.

ಮುಂಬೈ ಶೈಲಿಯ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಟ್ಟರು. ಅವರ ಸ್ಫೋಟಕ ಶೈಲಿಯ ಬ್ಯಾಟಿಂಗ್‌ಗೆ ತದ್ವಿರುದ್ಧವಾದ ಮಾತುಕತೆಯ ಶೈಲಿ ಅವರದ್ದು. ಪತ್ರಿಕಾಗೋಷ್ಠಿಯಲ್ಲಿ ವಿದ್ಯುತ್ ಸಂಪರ್ಕ ಕಡಿತವಾಗಿ ಕೆಲಕ್ಷಣ ಸ್ಥಗಿತಗೊಂಡಾಗ ಮತ್ತು ಗೋಷ್ಠಿಯ ನಡುವೆ ಕೆಲವರ ಮೊಬೈಲ್ ಫೋನ್‌ಗಳು ಕಿರುಗುಟ್ಟಿದಾಗಲೂ ಅವರು ಸಹನೆ ಕಳೆದುಕೊಳ್ಳಲಿಲ್ಲ.

ಸುಮಾರು ಅರ್ಧಗಂಟೆ ಮಾತನಾಡಿದರು. ಶಾಂತಚಿತ್ತ ಮತ್ತು ಸಮಾಧಾನದ ನಡವಳಿಕೆಗಳಿಂದಲೇ ತಾವು ಹಾಗೂ ತಮ್ಮ ತಂಡ ಇಲ್ಲಿಯವರೆಗೂ ಬಂದಿರುವುದು ಎಂದು ಪದೇ ಪದೇ ಒತ್ತಿ ಹೇಳಿದರು.

‘ದೇಶದ ಜನರ ನಿರೀಕ್ಷೆಯ ಬಗ್ಗೆ ನನಗೆ ಚೆನ್ನಾಗಿ ಅರಿವು ಇದೆ. ಇದೊಂದೇ ವಿಶ್ವಕಪ್ ಅಲ್ಲ. ನಾವು ಪ್ರತಿಬಾರಿ ಯಾವುದೇ ಪಂದ್ಯ ಆಡಿದರೂ ಅಭಿಮಾನಿಗಳ ನಿರೀಕ್ಷೆ ಇದೇ ರೀತಿಯಾಗಿರುತ್ತದೆ. ಬಸ್ ನಿಲ್ದಾಣ, ರೈಲುಗಳಲ್ಲಿ, ವಿಮಾನ ನಿಲ್ದಾಣಗಳಲ್ಲಿ, ಹೋಟೆಲ್‌ಗಳಲ್ಲಿ ಎಲ್ಲಿಯೇ ನಮ್ಮನ್ನು ನೋಡಿದರೂ ಗೆಲ್ಲಬೇಕು ನೀವು ಎನ್ನುತ್ತಾರೆ. ಶತಕ, ದ್ವಿಶತಕ, ಸಿಕ್ಸರ್, ಬೌಂಡರಿ ಬೇಡಿಕೆಯನ್ನು ಕೂಗುತ್ತಾರೆ. ಬೌಲರ್‌ಗಳು ಐದು ವಿಕೆಟ್ ಪಡೆಯಬೇಕು ಎಂದು ಯಾವಾಗಲೂ ಬಯಸುತ್ತಾರೆ. ಅವರೆಲ್ಲರ ಮಾತುಗಳು ನಮ್ಮ ಕಿವಿಯಲ್ಲಿ ಸದಾ ಗುಂಯ್‌ಗುಡುತ್ತಿರುತ್ತವೆ. ಅವರಿಗಾಗಿ ನಾವು ಚೆನ್ನಾಗಿ ಆಡಲು ಬದ್ಧರಾಗಿದ್ದೇವೆ’ ಎಂದು ಮುಂಬೈಕರ್ ಹೇಳಿದರು.

ಮೊಹಮ್ಮದ್ ಶಮಿಗೆ ಮೊದಲ ನಾಲ್ಕು ಪಂದ್ಯಗಳಲ್ಲಿ ಅವಕಾಶ ನೀಡದ ಕುರಿತು ಕೇಳಿದ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.



‘ಶಮಿ ಅತ್ಯಂತ ದೃಢಚಿತ್ತ ಮತ್ತು ಗಟ್ಟಿ ಮನೋಬಲದ ವ್ಯಕ್ತಿ. ಅವರು ಆರಂಭಿಕ ಹಂತದಲ್ಲಿ ಆಡಲು ಫಿಟ್‌ನೆಸ್ ಜೊತೆ ನೀಡದಿರುವ ಸಾಧ್ಯತೆ ಇತ್ತು. ಅಲ್ಲದೇ ತಂಡದ ಸಂಯೋಜನೆ ಮತ್ತು ತಂತ್ರಗಾರಿಕೆಗೆ ತಕ್ಕಂತೆ ಆಟಗಾರರನ್ನು ಆಯ್ಕೆ ಮಾಡಲಾಗಿತ್ತು. ಆದರೆ ಶಮಿ ಪ್ರತಿದಿನವೂ ತಮ್ಮನ್ನು ತಾವು ಗಟ್ಟಿಗೊಳಿಸಿಕೊಂಡು ಸಿದ್ಧವಾದರು. ಅವಕಾಶ ಸಿಕ್ಕ ಮೇಲೆ ಅವರು ವಿಜೃಂಭಿಸುತ್ತಿರುವುದನ್ನು ನೀವೇ ನೋಡುತ್ತಿದ್ದೀರಿ. ಅವರಷ್ಟೇ ಅಲ್ಲ. ತಂಡದಲ್ಲಿ ಎಲ್ಲರ ಮನೋಬಲವೂ ಇದೇ ರೀತಿಯಾಗಿದೆ. ಯಾರಿಗೆ ಎಲ್ಲಿ, ಯಾವಾಗ ಅವಕಾಶ ಸಿಗುವುದೋ ಗೊತ್ತಿಲ್ಲ. ಸಿಕ್ಕಾಗ ಸಮರ್ಥವಾಗಿ ನಿಭಾಯಿಸಲು ಸಿದ್ಧರಾಗಿರಬೇಕು. ಅಂತಹ ಮನೋಭಾವ ನಮ್ಮಲ್ಲಿ ಎಲ್ಲರಿಗೂ ಇದೆ’ ಎಂದರು.

‘ಫೈನಲ್ ಪಂದ್ಯದಲ್ಲಿ ಕಣಕ್ಕಿಳಿಯುವ ಹನ್ನೊಂದರ ಬಳಗದ ಬದಲಾವಣೆ ಬಗ್ಗೆ ಈಗಲೇ ನಿರ್ಧಾರ ಮಾಡಿಲ್ಲ. ಇರುವ 15 ಆಟಗಾರರಲ್ಲಿ ಯಾರಿಗೆ ಬೇಕಾದರೂ ಅವಕಾಶ ದೊರೆಯಬಹುದು. ಭಾನುವಾರ ಪಿಚ್ ಪರಿಶೀಲಿಸಿದ ನಂತರ ನಿರ್ಧಾರ ತೆಗೆದುಕೊಳ್ಳುತ್ತೇವೆ’ ಎಂದರು.

ವಿಶ್ವಕಪ್ ಸುದ್ದಿಗಳು 11

‘ದ್ರಾವಿಡ್ ಕಾಣಿಕೆ ಅಪಾರ’

‘ತಂಡವು ಬಲಿಷ್ಠವಾಗಿ ರೂಪುಗೊಳ್ಳುವಲ್ಲಿ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರ ಕಾಣಿಕೆಯು ಅಪಾರವಾಗಿದೆ’ ಎಂದು ರೋಹಿತ್ ಶರ್ಮಾ ಹೇಳಿದರು.

’ಭಾರತ ತಂಡದ ಆಟಗಾರನಾಗಿ ಅವರು ನೀಡಿರುವ ಮಹತ್ವದ ಕಾಣಿಕೆಗಳು ಅಪಾರ. ಇದೀಗ ಅವರು ಕೋಚ್ ಆಗಿ ತಂಡವನ್ನು ಹುರಿದುಂಬಿಸುತ್ತಿರುವ ರೀತಿ ಅಸಾಧಾರಣವಾದದ್ದು. ತಂಡದಲ್ಲಿರುವ ಪ್ರತಿಯೊಬ್ಬರಿಗೂ ಅವರವರ ಹೊಣೆಯ ಅರಿವು ಮೂಡಿಸುವ ಅವರ ಉಪಾಯವು ಫಲ ನೀಡಿದೆ. ಎಲ್ಲರೂ ತಮ್ಮ ಹೊಣೆಗಾರಿಕೆಯನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಿದ್ದಾರೆ. ಜೊತೆಗೆ ತಂಡದ ಎಲ್ಲರ ನಡುವೆಯೂ ಉತ್ತಮ ಬಾಂಧವ್ಯ ಮೂಡಿದೆ. ನಾನು ಮತ್ತು ಅವರು (ರಾಹುಲ್) ಸೇರಿ ಮಾಡುವ ತಂತ್ರಗಾರಿಕೆ ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಎಲ್ಲರೂ ಕೈಜೋಡಿಸಿದ್ದಾರೆ. ಅವುಗಳನ್ನು ಯಶಸ್ವಿಯೂಗೊಳಿಸಿದ್ದಾರೆ’ ಎಂದರು.

ಪಿಚ್ ಫೋಟೊ ತೆಗೆದ ಕಮಿನ್ಸ್!



ಅಭ್ಯಾಸದ ವೇಳೆ ವಿಶ್ರಾಂತಿ ಪಡೆದ ಟ್ರಾವಿಸ್ ಹೆಡ್ –ಪಿಟಿಐ ಚಿತ್ರ

ಅಹಮದಾಬಾದ್ (ಪಿಟಿಐ): ಪಂದ್ಯಕ್ಕೆ ಮುನ್ನ ತಂಡಗಳ ನಾಯಕರು ಪಿಚ್ ಪರಿಶೀಲನೆ ನಡೆಸುವುದು ಸಂಪ್ರದಾಯ. ಆದರೆ ಡ್ರೆಸಿಂಗ್ ರೂಮ್‌ನಲ್ಲಿ ಚರ್ಚೆ ಹಾಗೂ ಕಾರ್ಯತಂತ್ರ ರೂಪಿಸುವ ಉದ್ದೇಶದಿಂದೇನೊ, ಪಿಚ್‌ನ ಚಿತ್ರ ಸೆರೆಹಿಡಿಯುವುದು ವಿರಳ. ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ನಾಯಕ ಪ್ಯಾಟ್ ಕಮಿನ್ಸ್ ಅಂಥ ಕೆಲಸ ಮಾಡಿದ್ದಾರೆ.

ಭಾನುವಾರದ ಫೈನಲ್ ಪಂದ್ಯ ನಡೆಯುವ ಪಿಚ್‌ನ ಚಿತ್ರವನ್ನು ಅವರು ಶನಿವಾರ ಬೆಳಿಗ್ಗೆ ತೆಗೆದಿದ್ದಾರೆ. ಬಹುಶಃ ಪಂದ್ಯಕ್ಕಿಂತ ಮೊದಲು ಪಿಚ್ ಹೇಗೆ ವರ್ತಿಸಬಹುದೆಂಬ ಯೋಚನೆ ಆಸ್ಟ್ರೇಲಿಯಾವನ್ನು ಕಾಡಿರಲು ಸಾಕು.

ಫೈನಲ್‌ಗೆ ಸಿದ್ಧಪಡಿಸಿರುವ ಪಿಚ್‌ನ ವಿಶ್ಲೇಷಣೆಯ ಬಗ್ಗೆ ಪ್ರತಿಕ್ರಿಯೆ ಕೇಳಿದಾಗ ಕಮಿನ್ಸ್ ಗುಟ್ಟು ಬಿಚ್ಚಿಡಲಿಲ್ಲ. ಭಾರತ–ಪಾಕ್ ಪಂದ್ಯವನ್ನು ಇದೇ ಪಿಚ್ ಬಳಸಲಾಗಿತ್ತು.

‘ಬರೇ ನೋಟ ಹರಿಸಿದ್ದೆ’ ಎಂದಷ್ಟೇ ಆಸ್ಟ್ರೇಲಿಯಾ ನಾಯಕ ಪ್ರತಿಕ್ರಿಯಿಸಿದರು. ಅದರಿಂದ (ತೆಗೆದ ಪಿಚ್ ಫೋಟೊ) ಏನು ಮಾಡುತ್ತೀರಿ ಎಂದು ಕೆದಕಿದಾಗ ಅವರು ‘ನಾನು ಪಿಚ್‌ನ ಮರ್ಮವನ್ನು ಚೆನ್ನಾಗಿ ಅರಿತವನಲ್ಲ. ಆದಕ್ಕೆ ನೀರುಣಿಸಲಾಗಿದೆ. ಉತ್ತಮ ವಿಕೆಟ್‌ನಂತೆ ಕಾಣುತ್ತಿದೆ’ ಎಂದು ಪ್ರತಿಕ್ರಿಯಿಸಿದರು. ಆಸ್ಟ್ರೇಲಿಯಾ ತಂಡದ ಅಭ್ಯಾಸ ಮಧ್ಯಾಹ್ನ ನಡೆದರೂ, ಕಮಿನ್ಸ್ ಬೆಳಿಗ್ಗೆ 9.30ರ ಹೊತ್ತಿಗೆ ನರೇಂದ್ರ ಮೋದಿ ಕ್ರೀಡಾಂಗಣಕ್ಕೆ ಬಂದಿದ್ದರು. ಅವರು ಪಿಚ್ ಬಳಿ ತೆರಳಿ ಫೋಟೊಗಳನ್ನು ತೆಗೆದುಕೊಂಡರು. ಶನಿವಾರ ಮತ್ತು ಭಾನುವಾರ ಎಷ್ಟು ಬದಲಾವಣೆ ಆಗಬಹುದೆಂಬುದನ್ನು ತಿಳಿಯುವ ಅವರ ಉದ್ದೇಶ ಇರಬಹುದು ಎನ್ನಲಾಗುತ್ತಿದೆ.

ಆಸ್ಟ್ರೇಲಿಯಾ ತಂಡದ ತಾಲೀಮು ನಡೆಯುವ ಮೊದಲು ಸ್ಟೀವ್ ಸ್ಮಿತ್, ಟ್ರಾವಿಸ್ ಹೆಡ್ ಮತ್ತು ಹೆಡ್ ಕೋಚ್ ಆ್ಯಂಡ್ರೂ ಮೆಕ್‌ಡೊನಾಲ್ಡ್ ಕೂಡ ಪಿಚ್ ಅವಲೋಕನ ನಡೆಸಿದರು.

ಮದ್ದು ಸೇವನೆ ಪರೀಕ್ಷೆಯಲ್ಲಿ ಸಿಲುಕಿದ ಚಿನ್ನ ವಿಜೇತ ಪ್ಯಾರಾ ಅಥ್ಲೀಟ್

ನವದೆಹಲಿ: ಭಾರತದ ಪ್ಯಾರಾ ಅಥ್ಲೀಟ್ ನೀರಜ್ ಯಾದವ್ ಅವರು, ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಘಟಕವು (ನಾಡಾ) ನಡೆಸಿದ ಪರೀಕ್ಷೆಯಲ್ಲಿ ಉದ್ದೀಪನಮದ್ದು ಸೇವನೆ ಮಾಡಿರುವುದು ಖಚಿತವಾಗಿರುವ ಕಾರಣ ಭಾರತ ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿ ಗೆದ್ದ ಎರಡು ಚಿನ್ನದ ಪದಕಗಳನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ.

ಕಳೆದ ತಿಂಗಳ ಕೊನೆಯಲ್ಲಿ (ಅ. 22ರಿಂದ 28) ಹಾಂಗ್‌ಝೌನಲ್ಲಿ ನಡೆದ ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿ ಅವರು ಎರಡು ಚಿನ್ನ ಗೆದ್ದಿದ್ದರು. ಎಫ್‌55 ಜಾವೆಲಿನ್ ಮತ್ತು ಡಿಸ್ಕಸ್ ಥ್ರೊ ಸ್ಪರ್ಧೆಗಳಲ್ಲಿ ಅಗ್ರಸ್ಥಾನ ಪಡೆದಿದ್ದರು.‘ನಾಡಾ’ ಸಮಿತಿಯಿಂದ ಅವರು ತಪ್ಪು ಎಸಗಿರುವುದು ಖಚಿತವಾದಲ್ಲಿ ಈ ಪದಕಗಳನ್ನು ಕಳೆದುಕೊಳ್ಳಲಿದ್ದಾರೆ. ಇದರಿಂದ, ಭಾರತವು ಪದಕ ಪಟ್ಟಿಯಲ್ಲಿ ಈಗಿನ ಐದನೇ ಸ್ಥಾನದಿಂದ ಆರನೇ ಸ್ಥಾನಕ್ಕೆ ಇಳಿಯಲಿದೆ. ಭಾರತ ಗೆದ್ದ ಚಿನ್ನಗಳ ಸಂಖ್ಯೆ 29 ರಿಂದ 27ಕ್ಕೆ ಇಳಿಯಲಿದೆ. ಇಂಡೊನೇಷ್ಯಾ 29 ಚಿನ್ನ, 30 ಬೆಳ್ಳಿ ಗೆದ್ದಿತ್ತು. ಭಾರತ 31 ಬೆಳ್ಳಿ ಗೆದ್ದಿತ್ತು.

ಚೀನಾಕ್ಕೆ ತೆರಳುವ ಆರು ದಿನಗಳ ಮೊದಲು, ಬೆಂಗಳೂರಿನಲ್ಲಿ ಈ ಪರೀಕ್ಷೆ ನಡೆಸಲಾಗಿತ್ತು. ‘ಸ್ಪರ್ಧೆಯಿಲ್ಲದ ವೇಳೆ’ ನಡೆಸಿದ್ದ ಈ ಪರೀಕ್ಷೆಯಲ್ಲಿ ಅವರು ಅನಬಾಲಿಕ್ ಸ್ಟಿರಾಯ್ಡ್ ಸೇವಿಸಿರುವುದು ಪತ್ತೆಯಾಗಿದೆ ಎಂದು ತಿಳಿದುಬಂದಿದೆ.

ಸಂಕ್ಷಿಪ್ತ ಸುದ್ದಿ

ಸೆಮಿಯಲ್ಲಿ ಸೋತ ಬೋಪಣ್ಣ–ಎಬ್ಡೆನ್

ಟ್ಯೂರಿನ್ (ಇಟಲಿ): ಮೂರನೇ ಶ್ರೇಯಾಂಕದ ರೋಹನ್ ಬೋಪಣ್ಣ (ಭಾರತ)–ಮ್ಯಾಥ್ಯೂ ಎಬ್ಡೆನ್ (ಆಸ್ಟ್ರೇಲಿಯಾ) ಜೋಡಿ ಎಟಿಪಿ ಟೆನಿಸ್ ಫೈನಲ್ಸ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಮುಗ್ಗರಿಸಿತು. ಶನಿವಾರ ನಡೆದ ಪಂದ್ಯದಲ್ಲಿ ಐದನೇ ಶ್ರೇಯಾಂಕದ ಮಾರ್ಸೆಲ್ ಗ್ರಾನೊಲರ್ಸ್ (ಸ್ಪೇನ್)–ಹೊರೇಷಿಯೊ ಝೆಬೊಲ್ಲಾಸ್ (ಅರ್ಜೆಂಟೀನಾ) ಜೋಡಿ 7–5, 6–4 ರಿಂದ ಬೋಪಣ್ಣ– ಎಬ್ಡೆನ್ ಜೋಡಿಯನ್ನು ಸೋಲಿಸಿತು.

ಬಾಂಗ್ಲಾ ತಂಡಕ್ಕೆ ನಜ್ಮುಲ್ ನಾಯಕ

ಢಾಕಾ (ಪಿಟಿಐ): ಪ್ರವಾಸಿ ನ್ಯೂಜಿಲೆಂಡ್ ವಿರುದ್ಧ ನವೆಂಬರ್ 28ರಂದು ಆರಂಭವಾಗುವ ಎರಡು ಟೆಸ್ಟ್‌ಗಳ ಸರಣಿಗೆ ಬಾಂಗ್ಲಾದೇಶ ಕ್ರಿಕೆಟ್ ತಂಡದ ನಾಯಕರನ್ನಾಗಿ ನಜ್ಮುಲ್ ಹುಸೇನ್ ಶಾಂತೊ ಅವರನ್ನು ಶನಿವಾರ ನೇಮಕ ಮಾಡಲಾಗಿದೆ.

ಅಫ್ಗಾನಿಸ್ತಾನ ತಂಡದ ವಿರುದ್ಧ ಏಕೈಕ ಟೆಸ್ಟ್ ಪಂದ್ಯದ ವೇಳೆ ನಾಯಕರಾಗಿದ್ದ ಲಿಟ್ಟನ್ ದಾಸ್ ಅವರು ಒಂದು ತಿಂಗಳ ಪಿತೃತ್ವ ರಜೆಯಲ್ಲಿದ್ದಾರೆ. ತಂಡವನ್ನು ಈ ಹಿಂದೆ ಮುನ್ನಡೆಸಿದ್ದ ಶಕೀಬ್ ಅಲ್ ಹಸನ್ ಹಾಲಿ ವಿಶ್ವಕಪ್ ಪಂದ್ಯದ ವೇಳೆ ಗಾಯಗೊಂಡಿದ್ದರು.

25 ವರ್ಷದ ನಜ್ಮುಲ್ ಹುಸೇನ್, 23 ಟೆಸ್ಟ್ ಪಂದ್ಯಗಳನ್ನು ಆಡಿದ್‌ಉದ, ನಾಲ್ಕು ಶತಕಗಳನ್ನು ಬಾರಿಸಿದ್ದಾರೆ. ಅವರ ಬ್ಯಾಟಿಂಗ್ ಸರಾಸರಿ 29.83. ಮೊದಲ ಬಾರಿ ಟೆಸ್ಟ್‌ನಲ್ಲಿ ತಂಡ ಮುನ್ನಡೆಸುತ್ತಿದ್ದಾರೆ.

ವಿಶ್ವಕಪ್ ವೇಳೆ ಎರಡು ಬಾರಿ ಶಕೀಬ್ ಅಲಭ್ಯರಾದಾಗ ಅವರ ಸ್ಥಾನದಲ್ಲಿ ನಜ್ಮುಲ್ ತಂಡಕ್ಕೆ ನಾಯಕರಾಗಿದ್ದರು.

ಕ್ರಿಕೆಟ್: ಕರ್ನಾಟಕ ಬಾಲಕಿಯರಿಗೆ ನಿರಾಸೆ

ಬೆಂಗಳೂರು: ಕರ್ನಾಟಕ ಬಾಲಕಿಯರ ತಂಡದವರು ಬಿಸಿಸಿಐ 15 ವರ್ಷ ವಯಸ್ಸಿನೊಳಗಿನ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ದೆಹಲಿ ತಂಡದ ಎದುರು 93 ರನ್‌ಗಳಿಂದ ಮಣಿದರು.

ಕೋಲ್ಕತ್ತದ ಜೆಯು ಕ್ಯಾಂಪಸ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ದೆಹಲಿ ತಂಡ ನಿಗದಿತ 35 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 196 ರನ್ ಗಳಿಸಿತು. ನಿಶಿಕಾ ಸಿಂಗ್ (65) ಮತ್ತು ಸೋನಾಕ್ಷಿ (ಅಜೇಯ 81) ಅವರು ಗಮನ ಸೆಳೆದರು. ಗುರಿ ಬೆನ್ನಟ್ಟಿದ ಕರ್ನಾಟಕ ತಂಡ 29.3 ಓವರ್‌ಗಳಲ್ಲಿ 103 ರನ್‌ಗಳಿಗೆ ಆಲೌಟಾಯಿತು.

ಐಟಿಎಫ್ ಮಹಿಳಾ ಟೂರ್ನಿ ಇಂದಿನಿಂದ

ಬೆಂಗಳೂರು: ಭಾರತ ಸೇರಿದಂತೆ ಹತ್ತು ರಾಷ್ಟ್ರಗಳ ಆಟಗಾರ್ತಿಯರು, ಇದೇ 19 ರಿಂದ 26ರವರೆಗೆ ನಡೆಯಲಿರುವ ಬೌರಿಂಗ್ ಇನ್‌ಸ್ಟಿಟ್ಯೂಟ್ ಐಟಿಎಫ್ ವಿಶ್ವ ಮಹಿಳಾ ಟೂರ್ ಟೂರ್ನಿಯಲ್ಲಿ ಭಾಗವಹಿಸಲಿದ್ದಾರೆ.

ಪ್ರಧಾನ ಸುತ್ತಿನ 32 ಆಟಗಾರ್ತಿಯರ ಪೈಕಿ ಭಾರತದ ಆರು ಮಂದಿ ಸೇರಿದಂತೆ 20 ಆಟಗಾರ್ತಿಯರು ₹20.80 ಲಕ್ಷ ಬಹುಮಾನದ ಈ ಟೂರ್ನಿಗೆ ನೇರ ಪ್ರವೇಶ ಪಡೆದಿದ್ದಾರೆ. ಎಂಟು ಮಂದಿ ಅರ್ಹತಾ ಸುತ್ತು ತೇರ್ಗಡೆಯಾಗಿ ಪ್ರಧಾನ ಡ್ರಾಕ್ಕೆ ಅರ್ಹತೆ ಪಡೆಯುತ್ತಾರೆ. ನಾಲ್ಕು ಮಂದಿ ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದಾರೆ.

ದೇಶದ ಅಗ್ರ ಆಟಗಾರ್ತಿಯರಾದ ರುತುಜಾ ಭೋಸಲೆ, ವೈದೇಹಿ ಚೌಧರಿ, ಪ್ರಾಂಜಲಾ ಯಡ್ಲಪಳ್ಳಿ, ಝೀಲ್ ದೇಸಾಯಿ ನೇರ ಪ್ರವೇಶ ಪಡೆದವರಲ್ಲಿ ಒಳಗೊಂಡಿದ್ದಾರೆ. ಕರ್ನಾಟಕದ ಅಗ್ರ ಆಟಗಾರ್ತಿ ಶರ್ಮದಾ ಬಾಲು, ಉದಯೋನ್ಮುಖ ಆಟಗಾರ್ತಿ ಸುಹಿತಾ ಮರೂರಿ ಜೊತೆಗೆ ಅಂಜಲಿ ರಾಥಿ ಮತ್ತು ಸಾಹಿರಾ ಸಿಂಗ್ ಅವರು ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದಾರೆ ಎಂದು ಟೂರ್ನಿಯ ನಿರ್ದೇಶಕ ಹಾಗೂ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆ ಗೌರವ ಜಂಟಿ ಕಾರ್ಯದರ್ಶಿ ಸುನೀಲ್ ಯಜಮಾನ್ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಭಾನುವಾರ ಮತ್ತು ಸೋಮವಾರ ಅರ್ಹತಾ ಸುತ್ತು ನಡೆಯಲಿದ್ದು, ಮಂಗಳವಾರ ಪ್ರಧಾನ ಸುತ್ತಿನ ಪಂದ್ಯಗಳು ಆರಂಭವಾಗುತ್ತವೆ.

ವಿಶ್ವ ಕ್ರಮಾಂಕದಲ್ಲಿ 209ನೇ ಸ್ಥಾನದಲ್ಲಿರುವ ಉಜ್ಬೇಕಿಸ್ತಾನದ ನಿಗಿನಾ ಅಬ್ದುರೈಮೋವಾ ಅವರು ಅಗ್ರ ಶ್ರೇಯಾಂಕ ಪಡೆದಿದ್ದಾರೆ. 233ನೇ ಸ್ಥಾನದಲ್ಲಿರುವ ಥಾಯ್ಲೆಂಡ್‌ನ ಲನ್ಲನಾ ತರಾರುದಿ ಎರಡನೇ ಶ್ರೇಯಾಂಕ ಪಡೆದಿದ್ದಾರೆ.

ಭಾರತದ ರುತುಜಾ ಭೋಸಲೆ (341ನೇ ಸ್ಥಾನ) ಮೂರನೇ ಮತ್ತು ವೈದೇಹಿ ಚೌಧರಿ (495) ನಾಲ್ಕನೇ ಶ್ರೇಯಾಂಕ ಗಳಿಸಿದ್ದಾರೆ. ಇಟಲಿಯ ಡಿಲೆಟ್ಟಾ ಚೆರುಬಿನಿ ಐದನೇ ಶ್ರೇಯಾಂಕ ಪಡೆದಿದ್ದಾರೆ.









